

ಭಾವನಾ

ಸುಮಧುರ ಮಾಸಿಕ

ಮೊದಲ ಸಂಚಿಕೆ

ಏಪ್ರಿಲ್ 2000 ರೂ 6

ಭಾವನಾ



ಪೋರ್‌ಬಂದರಿನ ನೆರೆಯಲ್ಲಿ
ತನ್ನ ಕಾಯಕದ ಹೊಲಿಗೆಯಂತ್ರವನ್ನು
ಬಚಾವು ಮಾಡಿಕೊಂಡು ಸಾಗುತ್ತಿರುವ
ಈ ಅಜ್ಜನ ಮೊಗದ ನಗೆಯ ಬೆಳಕು
ನಮಗೆ ಸದಾ ಸ್ಫೂರ್ತಿಯಾಗಲಿ.



''ಈ ಜಗದಲ್ಲಿ ಒಂದೇ ಕತೆ ಹಲವು ರೂಪ ತಾಳಿ ಆಟವಾಡುತ್ತದೆ. ಈ ಎಲ್ಲ ಕತೆಗಳ ಹಿಂದೆ ಒಂದು ಕತೆ ಇದೆ. ಅದು ಮಾಯಾ-ಕತೆ. ಅದರ ರೂಪಗಳು ಅನಂತ!''

- ಅಂಬಿಕಾತನಯದತ್ತ


ಹೌದು, ಬದುಕೇ ಮೂಲಕತೆ... ನಾವು ಕಂಡಿದ್ದು, ಕೇಳಿದ್ದು ಆಡಿದ್ದು, ಮಾಡಿದ್ದು ಎಲ್ಲ ಉಪಕತೆಗಳೇ. ಪ್ರತಿಯೊಂದು ಜೀವದ್ದೂ ಒಂದು ಅರೆಬರೆ ಕತೆ. ಹಸಿಬಿಸಿ ಅಪೂರ್ಣ ಮನುಷ್ಯರನ್ನು ಸನಿಹಕ್ಕೆ ಸೆಳೆದು, ಒಂದು ವಿಶಾಲ ಸಾರ್ಥಕ ಮಾನವೀಯ ವಿನ್ಯಾಸದಲ್ಲಿ ಪಾಲ್ಗೊಳ್ಳುವಂತೆ ಮಾಡುತ್ತವೆ ಸಾಹಿತ್ಯ, ಸಂಗೀತ, ಕಲೆ, ಭಕ್ತಿ, ನರ್ತನ ಎಲ್ಲ. ನೀರಿನಲ್ಲಿ ಕದಡಿದ ಚಂದ್ರಬಿಂಬದ ಸಹಸ್ರ ಚೂರುಗಳು ಮೆಲ್ಲಗೆ ಒಂದಕ್ಕೊಂದು ತಾಕಿ ಒಂದಾಗುವಂತೆ.

ಜಾಣನಾದಷ್ಟೂ ಮನುಷ್ಯ ಭಾವಕೇಂದ್ರದಿಂದ ದೂರವಾಗುತ್ತಿದ್ದಾನೆ. ಮಹತ್ವಾಕಾಂಕ್ಷೆ, ಯಶಸ್ಸುಗಳ ಗೋಪುರ ಸರಸರ ಏರಿ, ತುತ್ತತುದಿಯಲ್ಲಿ ಹಠಾತ್ತನೆ ಏಕಾಕಿಯಾಗಿ ವಿಭ್ರಾಂತನಾಗಿದ್ದಾನೆ. ಬೌದ್ಧಿಕ ಬುಡಬುಡಿಕೆಯ ದುರ್ಗಮ ಕರ್ಕಶ ಹೆದ್ದಾರಿಗಳಿಗಿಂತ, ಅಂತಃಕರಣದ ಪುಟ್ಟ, ಹಸಿ, ಪ್ರಶಾಂತ ಕಾಲ್ದಾರಿಗಳಲ್ಲೇ ಹಕ್ಕಿಗಳ ಚಿಲಿಪಿಲಿ, ಗುಣುಗುಣಿಸುವ ಜೋಗುಳ ಕೇಳಲಾರೆವೆ? ಸಹಬಾಳ್ವೆಯ ಬೆಚ್ಚನೆ ಅಭಯವನ್ನು ಮನಗಾಣಲಾರೆವೆ?

'ಭಾವನಾ'ದ ಹುಟ್ಟಿನ ಹಿಂದೆ ಇಂತಹದ್ದೊಂದು ಅಭೀಪ್ಸೆ ಇದೆ. ಭಾವಶೂನ್ಯವಾಗುತ್ತಿರುವ ಜಗತ್ತಿನಲ್ಲೊಂದು ಹೊಸ ಹಸಿರೆಲೆ ಮೂಡಿಸುವ ಹಂಬಲ. ನೋವು ನಲಿವುಗಳ, ನೆಳಲು ಬೆಳಕಿನ, ವಿಭಿನ್ನ ವಿನ್ಯಾಸಗಳ, ವಿಶಿಷ್ಟ ಕಥೆಗಳ ಗುಚ್ಛ ಹಿಡಿದು ಪ್ರತಿ ತಿಂಗಳು ನಿಮ್ಮ ಎದೆಯ ಕದ ತಟ್ಟಲಿದ್ದೇವೆ. ಅವು ಹೊಮ್ಮಿಸುವ ಸಹಜ ಭಾವದ, ಸರಳ ಎಳೆಗಳ ಕಿರಣ ಹಿಡಿದು ದೈನಿಕದ ಕಂದಕಗಳನ್ನು ಹಗುರಾಗಿ ದಾಟೋಣ. ಈ ಸಾಹಿತ್ಯಯಾತ್ರೆಗೆ ನಿಮ್ಮ ಸಹಯೋಗವೇ ಸ್ಫೂರ್ತಿ. ನಿಮ್ಮ ಸಲಹೆ, ಸೂಚನೆಗಳಿಂದಲೇ ನಮ್ಮ ಮಾರ್ಗ ಸುಗಮ.

ನಿಮಗೂ, ನಿಮ್ಮ ನಲುಮೆಯ ಎಲ್ಲರಿಗೂ ಯುಗಾದಿಯ ಶುಭಾಶಯಗಳು.

ಸಂಪಾದಕ




ಭಾವ ಲೋಕ

ಕತೆಗಳು

ಶತಮಾನದ ಮೆಲುಕು

ವಿಶ್ವ ಭಾರತಿ





ಭಾವನಾ

ಮೊದಲ ಸಂಚಿಕೆ

ಏಪ್ರಿಲ್ 2000

ಪ್ರಕಾಶಕರು, ಮುದ್ರಕರು, ಮಾಲಿಕರು
ವಿಜಯ ಸಂಕೇಶ್ವರ
ಆನಂದ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್

ಪ್ರಧಾನ ಸಂಪಾದಕರು
ಸಂತೋಷಕುಮಾರ ಗುಲ್ವಾಡಿ

ಸಂಪಾದಕ
ಜಯಂತ ಕಾಯ್ಕಿಣಿ

ಮುಖಪುಟ ತೈಲಚಿತ್ರ: ಜಾನ್ ಫರ್ನಾಂಡಿಸ್

ಸಂಚಿಕೆಯ ಕಲಾವಿದರು: ಇಕ್ಬಾಲ್ ಅಹ್ಮದ್, ಸೃಜನ್, ವಿಜಯ ಸಿಂಧೂರ್, ದೇವದಾಸ್, ಶಂಕರ್ ಪಾಟೀಲ್, ಮಹೇಂದ್ರ, ಚೆನ್ನಕೇಶವ, ರಾಮಕೃಷ್ಣ, ಸಂಗು.

ಹಿಂಪುಟ ಪಾರದರ್ಶಿಕೆ: ಶ್ರೀಧರಮೂರ್ತಿ

ಸಂಪಾದಕೀಯ ಕಾರ್ಯಾಲಯ
ನಂ. 32, 2ನೆಯ ಮುಖ್ಯರಸ್ತೆ, ವೈಯಾಳಿಕಾವಲ್
ಬೆಂಗಳೂರು - 560 003
ದೂರವಾಣಿ : 3365312, 3365313
ಫ್ಯಾಕ್ಸ್: 080-3340311

ಪ್ರಧಾನ ಕಚೇರಿ
ಗಿರಿರಾಜ ಅನೆಕ್ಸ್
ಸರ್ಕ್ಯೂಟ್ ಹೌಸ್ ರಸ್ತೆ, ಹುಬ್ಬಳ್ಳಿ
ದೂರವಾಣಿ: 0836-253656, 253657
ಫ್ಯಾಕ್ಸ್: 0836-253630



ಬಿದರಹಳ್ಳಿ ನರಸಿಂಹಮೂರ್ತಿ


ಮಣ್ಣು ನೀನಲ್ಲ ಕಣೆ



ನಾಂದಿ

ತೀರ್ಥ ಮತ್ತು ಭೂಮಿ ಪ್ರೀತಿಸಿ ಮದುವೆಯಾದದ್ದು ಈಗ ಹಳೆಕತೆ. ಅವಳನ್ನು ಊರ ಹೊರಗೆ ವಾಕಿಂಗ್ ಕರೆದುಕೊಂಡು ಹೋದಾಗಲೂ ಅವಳ ಸೀರೆ ಚುಂಗನ್ನೂ ಮುಟ್ಟಿರಲಿಲ್ಲ ಅವನು. ಯಾವ ಪ್ರೇಮ ಸಲ್ಲಾಪವನ್ನೂ ಮಾಡಿರಲಿಲ್ಲ. ತನ್ನ ಬಡತನ, ಮನೆಯ ಜವಾಬ್ದಾರಿಗಳನ್ನು ಬಿಚ್ಚಿಟ್ಟಿದ್ದ. ತನ್ನನ್ನು ಕಟ್ಟಿಕೊಂಡರೆ ಕೆಳಮಧ್ಯಮ ವರ್ಗದ ಬದುಕಿನಲ್ಲೇ ಕೈಕಾಲು ಬಡಿಯಬೇಕಾಗುತ್ತದೆ ಎಂದು ವಾರ್ನಿಂಗ್ ಕೊಟ್ಟಿದ್ದ. ಆದರೂ ಅವಳು ತನ್ನನ್ನೆ ಮದುವೆಯಾಗುವುದಾಗಿ ಪಟ್ಟುಹಿಡಿದಾಗ ಪರಮಾ[illegible] ತನಗೇ ಹೇಳಿಮಾಡಿಸಿದ ದಡ್ಡಿ ಎಂದು ಖುಷಿಯಾಗಿದ್ದ.

ತೀರ್ಥನ ಪತ್ರಗಳನ್ನೆ ಮಹಾಕಾವ್ಯಗಳಂತೆ ಮೆಚ್ಚುವಾಗ ಭೂಮಿ ತಮ್ಮಮ್ಮನ ಲಟ್ಟಣಿಗೆ ಪೆಟ್ಟುಗಳನ್ನೂ ಜೊತೆಗೆ ನೆಂಚಿಕೊಳ್ಳಬೇಕಾಗುತ್ತಿತ್ತು. ಅಮ್ಮನ ಕಟ್ಟುಕಟ್ಟಳೆ, ಆಣೆಭಾಷೆ ಮಿತಿಮೀರಿದಾಗ ಭೂಮಿ ಸಂತೆಯ



ನೆಪದಲ್ಲಿ ಹೊರಟು, ಬಸ್ಸು ಹತ್ತಿ ತೀರ್ಥನ ಮನೆಗೆ ಬಂದುಬಿಟ್ಟಳು. ತೀರ್ಥ ಊರಲ್ಲಿರಲಿಲ್ಲ. ಆದರೂ ಅವನ ಅಪ್ಪ, ಅಮ್ಮ ಅವಳನ್ನು ತಮ್ಮ ಕಣ್ಣೊಳಗೆ ಮುಚ್ಚಿಟ್ಟುಕೊಂಡು ಕಾಪಾಡಿದರು. ಇದರಿಂದಾಗಿ ತೀರ್ಥನ ಕ್ರಾಂತಿ ಪ್ರಜ್ಞೆ ಅನಾಮತ್ತಾಗಿ ಕರಗಿ ಕೃತಜ್ಞತೆಯಾಯಿತು. ತಿಂಗಳೊಪ್ಪತ್ತಿನಲ್ಲಿ ಎರಡೂ ಕಡೆಯವರು ರಾಜಿಯಾಗಿ ಮದುವೆ ಮಾಡಿಮುಗಿಸಿದರು.

ನೌಕರಿಯ ದೆಸೆಯಿಂದ ಅವರ ಬದುಕು ಆಗುಂಬೆಯಲ್ಲಿ ಅರಳಿತು. ಇಬ್ಬರೂ ಹಚ್ಚ ಹಸುರಿನ ಹುಚ್ಚಹುಚ್ಚಿಯರಾದರು. ಅವನಿಗಾಗಿ ಸರ್ವಸ್ವವನ್ನೂ ಬಿಟ್ಟುಬಂದಿದ್ದಳು ಅವಳು. ಅವಳಲ್ಲಿ ಬೆರೆತು ಜಗತ್ತನ್ನೆ ಮರೆತುಬಿಟ್ಟಿದ್ದ ಅವನು. ಮೆಲ್ಲಗೆ ಮಕ್ಕಳು ಅವತರಿಸಿ ಜೀವ, ಜೀವನ ವಿಕಸನಗೊಂಡವು. ಸಂಸಾರದ ಜವಾಬ್ದಾರಿ ಹೆಚ್ಚಿದರೂ ಅವರ ಹುಡುಗಾಟ ಕಡಿಮೆಯಾಗಲಿಲ್ಲ. ಸ್ವರ್ಗಕ್ಕೆ ಅವರು ಹಚ್ಚಿದ ಕಿಚ್ಚು ಯಾರಯಾರ ಕಣ್ಣುಗಳಲ್ಲೊ ಉರಿಯಿತು. ಅವಳ, ಅವನ ನಡುವೆ ಅಡ್ಡಗಾಲು ಹಾಕಲೂ ಹೊಂಚಿದರು. ಆದರೆ ಕಾಲದೇವಿ ಬನದವ್ವ ಅವರ ಪ್ರೀತಿಯ ತಾಯಿಬೇರಾಗಿ ಕಾದಳು. ಅವಳು ಹರಸಿಟ್ಟ ಹಸಿರು ಠೇವಣಿ ಸದಾ ಜೀವಂತವಾಗಿದ್ದು ಅವಿವೇಕದ ಅಡವಿಯನ್ನು ದಾಟಿಸಿತು. ಕಷ್ಟದ ಬೆಟ್ಟಗಳನ್ನು ಹತ್ತಿಳಿಸಿತು. ದುಃಖದ ತಡಸಲನ್ನು ತಡಾಯಿಸಿತು.

ಸೋತು ಗೆಲ್ಲುವ ಗುಟ್ಟು ತಿಳಿದ ಭೂಮಿ ಗಂಡನನ್ನು ಹೊಗಳಿ ತನ್ನನ್ನು ಜರಿದುಕೊಳ್ಳುತ್ತ ''ನಾನು ಬಿಡಿ, ಮಣ್ಣಿನ ಮಗಳು, ನಿಮ್ಮಷ್ಟು ಜಾಣೆಯಲ್ಲ'' ಅಂದಾಗಲೆಲ್ಲ ತೀರ್ಥ ಒಳಗೇ ತಿಳಿಗಟ್ಟುತ್ತ ''ನೀನು ಮಣ್ಣಲ್ಲ ಕಣೆ, ನನ್ನ ಜೀವದ ಕಣ್ಣು'' ಎನ್ನುತ್ತಿದ್ದ. ಅವಳ ಸಹವಾಸದಲ್ಲಿ ಅವನ ಪ್ರತಿಭಾ ಪ್ರವಾಹ ಉಕ್ಕಿಹರಿಯಿತು. ಅವನೊಬ್ಬ ಕತೆಗಾರನಾಗಿ ಪ್ರಖ್ಯಾತನಾದ. ಅವನ ಬರವಣಿಗೆ ಆರೋಗ್ಯಪೂರ್ಣವಾಗಿರುವಂತೆ ಸಹಕರಿಸಿತು ಅವಳ ಪ್ರೀತಿ.

ನೆನಪುಗಳೆ ಹಾಗೆ

ಆಕಾಶವಾಣಿಯವರು ಕತೆ ಓದಲು ಕರೆದಿದ್ದರು. ಅವರು ಕೊಡುವ ಹತ್ತು ನಿಮಿಷದಲ್ಲಿ ಓದಬಹುದಾದ ಕತೆ ಬರೆಯುವುದು ಕಷ್ಟ. ಕ್ಷಮಿಸಿ ಎಂದು ವಿಷಾದಪತ್ರ ಬರೆಯುತ್ತಿದ್ದೆ. ಒಮ್ಮೆಲೆ 'ಅಣ್ಣಾ' ಎಂದು ಕಿರುಚಿದ ಮಗಳ ದನಿಗೆ ಗಾಬರಿಯಾದೆ. ಒಳಕೋಣೆಗೆ ಓಡಿದೆ. ಪುಟ್ಟ ಮಗಳು ಬೀರು ಬಾಗಿಲು ಹಾರುಹೊಡೆದು ನಮ್ಮ ಭಂಡಾರವನ್ನೆಲ್ಲ ಲೂಟಿ ಮಾಡುತ್ತಿದ್ದಳು. ವಿದೇಶಿ ಗೆಳೆಯ ಕಳಿಸಿದ್ದ ಹೊಳೆವ ನಾಣ್ಯಗಳನ್ನು ತನ್ನ ಮಾಟವಾದ ಅಂಗೈಯಲ್ಲಿ ತೋರಿಸುತ್ತ ''ಅಲ್ನೋಡಣಾ'' ಎಂದು ಕಣ್ಣರಳಿಸಿದಳು. ಪ್ರೇಮಪತ್ರಗಳ ಕಟ್ಟು, ಫೋಟೋ ಆಲ್ಬಂ, ಅಂಚೆಚೀಟಿ ಆಲ್ಬಂ, ಹಳೆನಾಣ್ಯಗಳ ಪೆಟ್ಟಿಗೆ, ಗ್ರೀಟಿಂಗ್‌ಕಾರ್ಡ್ಸ್ ಎಲ್ಲ ಚೆಲ್ಲಾಪಿಲ್ಲಿಯಾಗಿದ್ದವು. ಯಾವುದನ್ನು ನೋಡಲಿ ಎಂದು ಗಲಿಬಿಲಿಗೊಂಡೆ.

ಭೂಮಿ ಅಡಿಗೆಮನೆಯಿಂದ ಬಂದವಳೆ ಕಣ್ಣುಬಿಟ್ಟು ಹಲ್ಲುಕಡಿದಳು. ''ಏಳೇ ಮೇಲೆ'' ಎಂದು ಕವಕ್ಕನೆ ಹರಿಹಾಯ್ದಳು. ಪ್ರೇಮಪತ್ರಗಳ ಕಟ್ಟನ್ನೆತ್ತಿ ಲಾಕರಿನಲ್ಲಿಟ್ಟಳು. ಮಗಳ ಕೈಯಲ್ಲಿ ಮಿನುಗುತ್ತಿದ್ದ ನಾಣ್ಯಗಳನ್ನು ಕಸಿದುಕೊಂಡು ಬಾಕ್ಸಿಗೆ ಹಾಕಿ ರಪ್ಪೆಂದು ಮುಚ್ಚಳ ಮುಚ್ಚಿದಳು. ಭಯಭೀತಳಾದ ಮಗಳು ತುಟಿ ಬಿರುಕಿಸುತ್ತ ನನ್ನ ಕಡೆ ಆರ್ತಳಾಗಿ ಕೈಚಾಚಿದಳು. ಆಲಾಪ ಶುರುಮಾಡಿದರೆ ಭೂಮಿ ಅವಳನ್ನು ಚಚ್ಚುವುದು ಗ್ಯಾರಂಟಿ ಎನ್ನಿಸಿ, ಎತ್ತಿಕೊಳ್ಳಲೆಂದು ಬಾಗಿದಾಗ ಬೀರುವಿನ ಕೆಳಗೆ ಬಿದ್ದಿದ್ದ ನನ್ನ ಕಾಲೇಜು ದಿನಗಳ ಆಟೋಗ್ರಾಫ್ ಕಣ್ಣಿಗೆ ಬಿತ್ತು. ಅದನ್ನು ಎತ್ತಿಕೊಂಡು, ಮಗಳನ್ನೂ ಅವಚಿಕೊಂಡು ಅಂಗಳಕ್ಕೆ ಬಂದೆ. ಹೂಸುರಿದ ಮಾವಿನ ಮರದ ಕೆಳಗೆ

ಕಾಯುತ್ತಿದ್ದ ಬೆತ್ತದ ಕುರ್ಚಿಯಲ್ಲಿ ಒರಗಿ ಕಳೆದುಹೋದ ದಿನಗಳಿಗೆ ಇಳಿಯತೊಡಗಿದೆ.

ಬೆರಳು ಆಟೋಗ್ರಾಫಿನ ಪುಟ ತಿರುವುತ್ತ ಹೋದಂತೆ ಹಳೆಯ ನೆನಪುಗಳು ಬಣ್ಣಬಣ್ಣದ ಗಾಳಿಪಟಗಳಾಗಿ ಹಾರತೊಡಗಿದವು. ಮೊದಲ ಪುಟದಲ್ಲೇ ನರೇಂದ್ರನ ನಾಕು ಸಾಲಿನ ಚುಟುಕ ಕಚಗುಳಿಯಿಟ್ಟಿತು.

ನಮ್ಮ ಸ್ನೇಹ, ಸಖಿ, ಭಾವಗೀತೆ
ಅವ್ಯಕ್ತ ನಾ ವ್ಯಕ್ತ ನೀನು
ಬರೆವೆ ನೀನು ಕವಿ, ನಿನ್ನ ಪಂಕ್ತಿಗಳ
ಭಾವ ನಾ, ಗೀತೆ ನೀನು.

ಇದರ ಧ್ವನಿಶಕ್ತಿ, ವಾಗರ್ಥ ಇವತ್ತಿಗೂ ಕಾಡುತ್ತಲೆ ಇವೆ. ಎಲ್ಲವನ್ನೂ ಒಳಗೇ ಅನುಭವಿಸಿ ಅಂತರ್ಮುಖಿಯಾಗಿ ಸುಖಿಸುವುದು ನರೇಂದ್ರನ ಸ್ವಭಾವ. ಎಷ್ಟೋ ಜನರಿಗೆ ಅವನು ಮುಚ್ಚಿದ ಬಾಗಿಲು. ಆದರೆ ನನಗೆ ಅವನು ಸದಾ ತೆರೆದ ಬಾಗಿಲಾಗೇ ಇದ್ದ. ಅವನ ಚಿಂತನಶೀಲತೆ ನನ್ನನ್ನು ಪ್ರಭಾವಿಸಿತು. ನನ್ನ ಭಾವಸಾಂದ್ರತೆಗೆ ಅವನು ಬೆರಗಾದ. ನನ್ನ ಸಾಹಿತ್ಯಕ್ಕೆ ಸ್ನೇಹದ ನೀರೆರೆದ. ನನ್ನ ಕೈಗೂಡಿರುವ ಹಾಗೂ ಕೈಗೂಡದೆ ಹೋದ ಎರಡು ಪ್ರೇಮ ಪ್ರಕರಣಗಳಲ್ಲೂ ಅವನೆ ಅಂಬಿಗ. ದಡ ಸೇರಿಸಿದ್ದಕ್ಕಾಗಿ ನಾನು ಅವನಿಗೆ ಎಂದೆಂದಿಗೂ ಋಣಿಯಾಗಿರುವೆ.

ನರೇಂದ್ರನಿಗೆ ನಮ್ಮ ಕ್ಲಾಸ್ಮೇಟ್ ಸೀತಾ ಮೋಡಿ ಮಾಡಿದ್ದಳು. ಅವಳ ಮಾಟವಾದ ನಿಲುವು, ಜೋಡಿಜಡೆ, ಬಟ್ಟಲಗಣ್ಣು ಅವನನ್ನು ಕಾಡುತ್ತಿದ್ದವು. ಅವಳನ್ನ ಕಂಡರೆ ಅವನಿಗೆ War and peace ಸಿನೆಮಾದ ತುಂಟ ಹುಡುಗಿ ನಟಾಶಾ ನೆನಪಾಗುತ್ತಿದ್ದಳು. ಆಶಾ ಭೌಂಸ್ಲೆಯ ಹಳೆ ಹಿಂದಿ ಹಾಡುಗಳನ್ನು ಸೀತಾ ಭಾವಾರ್ದ್ರವಾಗಿ ಹಾಡುತ್ತಿದ್ದಳು. ನರೇಂದ್ರ ನವಿರೇಳುತ್ತಿದ್ದ.

ಇಬ್ಬರ ಮನೆಯವರಿಗೂ ಈ ಪ್ರೀತಿಯ ಸುಳಿವು ಸಿಕ್ಕಿತ್ತು ಎನಿಸುತ್ತದೆ. ಅದಕ್ಕೆ ಯಾರ ತಕರಾರೂ ಇದ್ದಂತಿರಲಿಲ್ಲ. ಆದರೂ ಅವರು ಒಂದುಗೂಡಲೇ ಇಲ್ಲ. ಇದೆಂಥ ವಿಚಿತ್ರ.

ಡಿಗ್ರಿ ನಂತರ ನಾನು, ಅವನು ಸ್ನಾತಕೋತ್ತರ ಪದವಿಗಾಗಿ ಮೈಸೂರಿಗೆ ಹೋದೆವು. ಸೀತಾಳ ಮನೆಯವರೆಲ್ಲ ಬೆಂಗಳೂರಿಗೆ ಸ್ಥಳಾಂತರ ಗೊಂಡರು. ಎರಡು ಮೂರು ವರ್ಷ ಭೇಟಿ ಆಗಲೇ ಇಲ್ಲ. ಅವನನ್ನು ಕರೆದುಕೊಂಡು ಬಾ ಎಂದು ಸೀತಾ ನನಗೆ ಬರೆಯುತ್ತಲೇ ಇದ್ದಳು. ಅಂತೂ ಒಮ್ಮೆ ಕರೆದೊಯ್ದೆ. ಆದರೆ ಫಲಕಾರಿಯಾಗಲಿಲ್ಲ. ಆ ಕೊನೆ ಭೇಟಿಯ ಚಿತ್ರ ಇನ್ನೂ ನನ್ನ ಕಣ್ಣಮುಂದಿದೆ. ಸೀತಾ ಬಾಡಿಹೋಗಿದ್ದಳು. ಅವಳ ಬಟ್ಟಲುಗಣ್ಣುಗಳನ್ನು ಕನ್ನಡಕ ಬಂಧಿಸಿತ್ತು. ಅವಳ ತಂದೆ ನಿವೃತ್ತರಾಗಿದ್ದರು. ಅವಳ ಅಣ್ಣ ಅಪಘಾತಕ್ಕೊಳಗಾಗಿದ್ದ. ತಂಗಿ ಚೆಲುವಾಗಿ ಬೆಳೆದು ಮದುವೆಗೆ ಬಂದು ನಿಂತಿದ್ದಳು. ಮನೆಯ ಜವಾಬ್ದಾರಿಯನ್ನೆಲ್ಲ ಹೊತ್ತರೂ ಅಧೀರಳಾಗದ ಆತ್ಮಸಂಯಮವಿತ್ತು ಸೀತಾಳಲ್ಲಿ. ಅವಳೊಬ್ಬ ಹೊಸ ವ್ಯಕ್ತಿಯಾಗಿ ಮಾರ್ಪಟ್ಟಿದ್ದಳು. ನರೇಂದ್ರ ಎಷ್ಟು ಪ್ರಯತ್ನಪಟ್ಟರೂ ಹಿಂದಿನಂತೆ ಅವಳಿಗೆ ಸಹಜವಾಗಿ ಸ್ಪಂದಿಸಲು ಸಾಧ್ಯವಾಗಲಿಲ್ಲ. ಅವನ ಚಿಂತನಶೀಲತೆ, ತಾತ್ವಿಕತೆ, ಮುಗ್ಧಪ್ರೇಮದ ಹುಚ್ಚುಹೊಳೆಯನ್ನು ದಾಟಿಸಿ ಅವನನ್ನು ಅಲಿಪ್ತತೆಗೆ ಕರೆದೊಯ್ದುಬಿಟ್ಟಿದ್ದವೆ? ಹೊಸ ಸೀತಾಳಲ್ಲಿ ಆ ಹಳೆಯ ತುಂಟಹುಡುಗಿ ಕಾಣಿಸದೆ ಹೋದಳೆ? ಅಥವಾ ಮನೆಯವರೆಲ್ಲರ ಮುಂದೆ ನಡೆದ ಆ ಭೇಟಿಯಲ್ಲಿ ಅಂತರಂಗಗಳನ್ನು ಬಿಚ್ಚಿಕೊಳ್ಳುವ ಅವಕಾಶ ಸಿಗದಾಯಿತೆ? ಇಬ್ಬರೂ ನಿಸ್ಪೃಹರೆ. ಆದರೂ ಯಾಕೆ ಹೀಗೆ ಕೊಂಡಿ ಕಳಚಿತು? ಇಂದಿಗೂ ತಿಳಿಯುತ್ತಿಲ್ಲ. ಮನುಷ್ಯ ಮನಸ್ಸು ಎಷ್ಟು ಸೂಕ್ಷ್ಮ. ಬದುಕು ಎಂತೆಂಥ ತಿರುವುಗಳನ್ನು ತಂದು ಒಡ್ಡುತ್ತದಲ್ಲ. ವಿಧಿ, ಅದೃಷ್ಟ, ಬದುಕಿನ ವ್ಯಂಗ್ಯ ಅನ್ನುತ್ತೇವಲ್ಲ ಅದು ಅವರಿಬ್ಬರ ನಡುವೆ

ನಿರಸನದ ಅಡ್ಡಪರದೆ ಹಿಡಿದು ಅವರು ಒಂದುಗೂಡದಂತೆ ಮಾಡಿ ಚಪ್ಪಾಳೆ ತಟ್ಟಿತೆ?

ಮಂಗಳೂರಿಗೆ ಕೆಲಸದ ಇಂಟರ್‌ವ್ಯೂಗೆ ಹೋದಾಗ, ಬೀಚಿನಲ್ಲಿ ಎಲ್ಲರೂ ಅವರವರಿಗೆ ಪ್ರಿಯವಾದ ಹೆಸರನ್ನು ಮರಳಲ್ಲಿ ಬರೆದರಂತೆ. ನರೇಂದ್ರ ಸೀತಾಳ ಹೆಸರು ಬರೆದಿದ್ದನಂತೆ. ಆದರೂ ಹೀಗಾಯಿತು ಯಾಕೆ? ಆಟೋಗ್ರಾಫಿನಲ್ಲಿ ಸೀತಾ ಬರೆದಿದ್ದಾಳೆ Forget-me-not ಎಂದು. ಮರೆಯುವುದು ಹೇಗೆ? ಮರೆಯುವುದನ್ನು ಯಾರು ಹೇಳಿಕೊಡಬಲ್ಲರು?

ಆಟೋಗ್ರಾಫ್‌ನ ಆಕಾಶನೀಲಿ ಹಾಳೆಯಲ್ಲಿ ವಿಕ್ರಂನ ಸುಂದರ ಅಕ್ಷರಗಳ ಸಾಲು ಮುಗುಳ್ನಕ್ಕಿತು: ''ಸ್ನೇಹಿತ'' ಎಂದರೆ ಮತ್ತೊಬ್ಬ ''ನಾನು.'' ನೆನಪಿನ ಬಾನಿನಲ್ಲಿ ನಿರ್ಮಲ ಸ್ನೇಹದ ಬೆಳ್ಳಕ್ಕಿಗಳು ಹಾರತೊಡಗಿದವು. ಹಿಂಪುಟದಲ್ಲಿ "Be Smiling... wide... wide...still wide so that I can see all your thirty plus two teeth'' ಎಂದು ಬರೆದು ಸಹಿಹಾಕಿದ್ದಾನೆ. ಜೀವಕ್ಕೆ ಹಾಯೆನಿಸಿ ನಸ್ನಷ್ಟಕ್ಕೆ ಮುಗುಳುನಕ್ಕೆ. ಮುದ್ದುಮಗಳು ಆಗಲೇ ತಪ್ಪಿಸಿಕೊಂಡು ಬೇಲಿಯ ಚಿಟ್ಟೆಗಳು, ಹೊನ್ನಾವರಿಕೆ ಹೂಗಳೊಡನೆ ಸಲ್ಲಾಪಿಸುತ್ತಿದ್ದಳು.

ವಿಕ್ರಂ ತುಂಬ ಗಳಾಬಿಳಿ ಗೆಳೆಯ. ಉತ್ಸಾಹದ ಚಿಲುಮೆ. ನರೇಂದ್ರ ಅಂತರ್ಮುಖಿಯಾದರೆ ವಿಕ್ರಂ ಬಹಿರ್ಮುಖಿ. ಅಪರಿಚಿತರನ್ನು, ಮರಗಿಡ ಹಕ್ಕಿ ಹೂವುಗಳನ್ನು, ನಾಯಿ ಬೆಕ್ಕುಗಳನ್ನು, ಕಡೆಗೆ ಕಾಡುಬೆಟ್ಟ ಸಮುದ್ರ ಆಕಾಶಗಳನ್ನೂ ಸಲೀಸಾಗಿ ಮಾತಾಡಿಸಿಬಿಡಬಲ್ಲ ನಿಸ್ಸೀಮ. ಗಂಗೋತ್ರಿ ಕ್ಯಾಂಪಸ್ ಬಿಟ್ಟು ಬರುವ ದಿನ ''ಈ ಜಾಗ ಬಿಟ್ಟು ಹೋಗ್ಲಿಕ್ಕೆ ಇಷ್ಟಾನೆ ಆಗ್ತಾ ಇಲ್ವಲ್ರೋ'' ಎಂದು ಅಲ್ಲಿನ ಹುಲ್ಲುಹಾಸಿನ ಮೇಲೆಲ್ಲ ಹೊರಳಾಡಿದ್ದ ಹುಚ್ಚ.

ವಿಕ್ರಂ-ಪದ್ಮ, ಶಿವಪ್ಪ-ಶಶಿ ಜೋಡಿಗಳನ್ನು ಗಂಗೋತ್ರಿ ಅಧ್ಯಾಪಕರು, ವಿದ್ಯಾರ್ಥಿಗಳು ಎಲ್ಲರೂ ಮೆಚ್ಚಿಕೊಂಡಿದ್ದರು. ಆ ಹಳೆ ಆಲದ ಮರದ ಬಿಳಲುಗಳ ನಡುವೆ ಅವರು ಹರಟುತ್ತಿದ್ದುದನ್ನೊ, ಗಾಢವಾದ ಚರ್ಚೆಯಲ್ಲಿ ಮುಳುಗಿ ರಸ್ತೆಯಂಚಿನಲ್ಲಿ ನಿಧಾನವಾಗಿ ನಡೆಯುತ್ತಿದ್ದುದನ್ನೊ, ಪರಸ್ಪರಿಗೆ ಕಾಯುತ್ತ ಚಡಪಡಿಸುತ್ತಿದ್ದುದನ್ನೊ ನೋಡುವುದೇ ಒಂದು ಚೆಂದ. ಅವರ ಪ್ರೇಮ ಕಟುವಾದದ್ದಲ್ಲ, ನಿರಾಳವಾದದ್ದು, ಸಹಜರೀತಿಯದು. ದೈಹಿಕ ಆಕರ್ಷಣೆಗಿಂತ ಆತ್ಮೀಯತೆ, ವಿಲಾಸ ಲಾಲಸೆಗಿಂತ, ಸರಳ ಭಾವನಾತ್ಮಕ ಬೆಸುಗೆ ಅವರಲ್ಲಿ ಎದ್ದು ಕಾಣುತ್ತಿದ್ದವು. ಎಲ್ಲರೂ ಅವರನ್ನ ಒಗ್ಗೂಡಿಸಬೇಕು ಅನ್ನುತ್ತಿದ್ದರೇ ವಿನಾ ಯಾರೂ ಅವರನ್ನಗಲಿಸಲು ಪ್ರಯತ್ನಿಸುತ್ತಿರಲಿಲ್ಲ.

ವಿಕ್ರಂ ಅಭಿಜಾತ ಹಾಡುಗಾರ. ಸೈಗಲ್, ಹೇಮಂತಕುಮಾರ್, ಪಂಕಜ್ ಮಲ್ಲಿಕ್‌ರ ಹಾಡುಗಳನ್ನ ಹಾಡಿದ ಅಂದರೆ ಎಲ್ಲರ ಮನಸ್ಸುಗಳೂ ಯಾವುದೊ ಭಾವಲೋಕ ಹೊಕ್ಕುಬಿಡುತ್ತಿದ್ದವು. ಪ್ರೊ॥ ಸೋಲಂಕಿ ಪಾಠಬಿಟ್ಟು ಕ್ಲಾಸಿನಲ್ಲೆ ಅವನನ್ನು ಹಾಡಿಸುತ್ತಿದ್ದರು. ಒಮ್ಮೊಮ್ಮೆ ಅವನ ಗಂಟಲಿಂದ ಉಕ್ಕುತ್ತಿದ್ದ ಹಾಡುಗಳ ಸಮ್ಮೋಹನಾಸ್ತ್ರಕ್ಕೆ ಬಲಿಯಾಗದವರೆ ಇರಲಿಲ್ಲ. ಪ್ರತಿಯಾಗಿ ಅವನಿಗೆ ಎಲ್ಲರ ಪ್ರೀತಿಯ ಮಹಾಪೂರವೇ ದಕ್ಕಿತ್ತು. ಪದ್ಮ ಅವನಿಗೆ ಮರಳಾದದ್ದೂ ಅವನ ಹಾಡುಗಳಿಂದಾಗಿಯೆ. ಗಂಗೋತ್ರಿ ಡೇ ಸಮಾರಂಭದಲ್ಲಿ ವಿಕ್ರಂ ''ಜಾದೂ ಹೈ... ಜಾದು ಹೈ... ಮೈ ಕ್ಯಾ ಜಾನೂ... ಕ್ಯಾsss... ಇನ್ ದೋ ಮತವಾಲೆ ನೈನೋಮೇ...'' ಎಂದು ಸುಶ್ರಾವ್ಯವಾಗಿ ಹಾಡಿದಾಗ ಇಡಿ ಶ್ರೋತೃಗಣ ಪದ್ಮಳ ಕಡೆಗೆ ತಿರುಗಿತ್ತು. ನಾಚಿಕೆ, ಸಂತಸ, ಸಂಭ್ರಮಗಳಲ್ಲಿ ಅವಳು ಮುಖವನ್ನು ಬೊಗಸೆಯಲ್ಲಿ ಮುಚ್ಚಿಟ್ಟುಕೊಂಡಿದ್ದಳು.

ಪದ್ಮ ಹೆಜ್ಜೆ ಇಟ್ಟಲ್ಲೆಲ್ಲ ಮುತ್ತಿಡುತ್ತ ಹೋಗುತ್ತಿದ್ದ ಹುಚ್ಚ. ರಾತ್ರಿ ಇಡಿ ಅವಳನ್ನೆ ಧ್ಯಾನಿಸುತ್ತ ಕವಿತೆ ಕಟ್ಟುತ್ತಿದ್ದ. ''ಬೆಳಗಿನ ಜಾವ

ಒಂದು ಕನಸು ಬಿತ್ತು ಕಣೋ. ನಕ್ಷತ್ರಗಳ ಗೊಂಚಲಿಗೆ ಕೈ ಹಾಕಿ ಕಿತ್ತುಕೊಂಡೆ. ಅವು ಕೋರೈಸುತ್ತಿದ್ದರೂ ತಂಪಾಗಿದ್ದವು. ತಂದವನೆ ಅವಳ ಮುಡಿಗೆ ಮುಡಿಸಿಬಿಟ್ಟೆ. ಅವಳ ಮುಖ... ಆಹಾ!...'' ಎಂದು ಖಾಸಗಿಯಾಗಿ ನನಗೊಬ್ಬನಿಗೇ ಹೇಳಿದ್ದ. ಕವಿ, ಪ್ರೇಮಿ, ಹುಚ್ಚ ಒಂದೇ ಜಾತಿಯವರು ಅನ್ನುತ್ತಾನಲ್ಲ ಶೇಕ್ಸ್‌ಪಿಯರ್, ಅವರಲ್ಲಿ ಇವ ಯಾರು? ಅಥವಾ ಇವನು ತ್ರೀ-ಇನ್-ಒನ್ ಇರಬೇಕು ಅನಿಸುತ್ತಿತ್ತು.

ಪದ್ಮ-ವಿಕ್ರಂ ಅದೃಷ್ಟವಂತರು. ಅವರ ಪ್ರೀತಿಯ ಗಿಡ ಹೂಬಿಟ್ಟು ಹೆಮ್ಮರವಾಗಿ ಬೆಳೆಯಿತು. ಪದ್ಮ ಮನೆಯವರನ್ನೆಲ್ಲ ಧಿಕ್ಕರಿಸಿ ಬಂದಳು. ಅವನೂ ಅಪ್ಪ ಅಮ್ಮಗೆ ತಿಳಿಸದೆ, ಆರ್ಯ ಸಮಾಜದಲ್ಲಿ ಅವಳ ಕೊರಳಿಗೆ ಅರಿಶಿನಬೇರು ಕಟ್ಟಿ ಮದುವೆಯಾದ. ಹಾಜರಿದ್ದ ಮೂವರು ಗೆಳೆಯರದೇ ದಿಬ್ಬಣ. ಅವರಲ್ಲೊಬ್ಬ ಕೊಟ್ಟ ಐದುರುಪಾಯಿ ನೋಟೆ ವರದಕ್ಷಿಣೆ. ವಿಕ್ರಂನ ಅಪ್ಪ, ಅಮ್ಮ ದೊಡ್ಡಮನಸ್ಸಿನವರು. ಸುದ್ದಿ ತಿಳಿದಕೂಡಲೆ ಟೆಲಿಗ್ರಾಂ ಕೊಟ್ಟು ಮಗ-ಸೊಸೆಯನ್ನು ಬರಮಾಡಿಕೊಂಡು ಹರಸಿದರು. ಅವರದೇನು ಸ್ಥಿತಿವಂತ ಕುಟುಂಬವಲ್ಲ. ಸರಿಯಾದ ಪರ್ಮನೆಂಟ್ ಕೆಲಸ ಸಿಗುವವರೆಗೆ ವಿಕ್ರಂ-ಪದ್ಮ 'ನಾನು ಬಡವಿ, ಆತ ಬಡವ ಒಲವೆ ನಮ್ಮ ಬದುಕು' ಎಂದು ಬಡತನವನ್ನೆ ಬಡಿಸಿಕೊಂಡು ಉಂಡರು. ಮಗುವಾದ ಮೇಲೆ ಅವರ ಪ್ರೀತಿ ಮತ್ತೂ ಗಾಢವಾಯಿತು.

ನಮ್ಮ ಮಗುವಿಗೆ
ನಾನೊಂದು ರೆಪ್ಪೆ ನೀನೊಂದು ರೆಪ್ಪೆ
ಅದಕ್ಕೇ ಮಗು ಕಣ್ಣು ಮುಚ್ಚಿದಾಗ
ನಾವು ಕೂಡುತ್ತೇವೆ-

ಎಂಬ ವಿಕ್ರಂನ ತುಂಟು ಚುಟುಕ ಗೆಳೆಯರ ವಲಯದಲ್ಲಿ ಇವತ್ತಿಗು ಕಚಗುಳಿ ಇಡುತ್ತ ಚಲಾವಣೆಯಲ್ಲಿದೆ.




ಪುಟ್ಟ ಮಕ್ಕಳ ತಂದೆತಾಯಿ ಆಗಿಯೂ ವಿಕ್ರಂ-ಪದ್ಮ ಜೀವನಪ್ರೇಮವನ್ನು ಮೆರೆದರು ಎನ್ನಬೇಕು. ಅವರನ್ನು ಸಾಕಷ್ಟು ಮುಕ್ತವಾಗಿ, ಪ್ರೀತಿ ಮತ್ತು ಎಚ್ಚರಿಕೆಯ ಹದದಲ್ಲಿ ಬೆಳೆಸಿದರು. ಮಕ್ಕಳಿಬ್ಬರಿಗೂ ಸ್ನಾನ ಮಾಡಿಸುತ್ತಿದ್ದಾಗ ನಡೆದ ಪ್ರಸಂಗವನ್ನು ವಿಕ್ರಂ ನನಗೆ ಹೇಳಿದ್ದ. ಮಗ, ತನ್ನ ಮತ್ತು ತಂಗಿಯ 'ಕುಮ್ಮಣ್ಣಿ' ಯಾಕೆ ಬೇರೆ ಥರ ಇದೆ ಅಂತ ವಿಕ್ರಂನನ್ನ ಕೇಳಿದ. ''ಅದು ಉಚ್ಚೆ ಹೊಯ್ಯೋಕೆ ಇರೋದು ಅಷ್ಟೆ. ಗಂಡಸರಿಗೆ ಹಿಂಗಿರುತ್ತೆ, ಹೆಂಗಸರಿಗೆ ಹಂಗಿರುತ್ತೆ. ದೊಡ್ಡವರಾದಮೇಲೆ ಇದರ ಬಗ್ಗೆ ಹೆಚ್ಚಿಗೆ ತಿಳಕೊಬಹುದು'' ಎಂದು ಸರಳವಾಗಿ ಉತ್ತರಿಸಿದ ಈ ಬಹದ್ದೂರ. ''ಅಪ್ಪ ಅಮ್ಮನೆ ಮಕ್ಕಳಿಗೆ 'ಆರೋಗ್ಯಶಾಸ್ತ್ರ' ಹೇಳಿಕೊಡಬೇಕು. ಅದು ಬಿಟ್ಟು ಶಾಲೆಯಲ್ಲಿ 'ಲೈಂಗಿಕ ಶಿಕ್ಷಣ'ದ ಪಾಠ ಹೇಳಿಕೊಟ್ಟರೆ ಮಕ್ಕಳು ಮರೆಯಲ್ಲಿ ಪ್ರಾಕ್ಟಿಕಲ್ಸ್ ಶುರುಮಾಡಿಬಿಡುತ್ತವೆ'' ಎಂದು ನಕ್ಕಿದ್ದ.

ಪದ್ಮ-ಭೂಮಿ ಗೆಳತಿಯರಾಗಿದ್ದಾರೆ. ಇದು ನಮ್ಮ ಸ್ನೇಹಪರ್ವತದ ತುರಾಯಿ. ಪುಸ್ತಕ, ಸಂಗೀತ, ಟ್ರೆಕಿಂಗ್, ಸಾಹಿತ್ಯ, ನಾಟಕ ಇವು ನನ್ನ, ವಿಕ್ರಂನ ಸ್ನೇಹವನ್ನು ಹಿಡಿದಿಟ್ಟಿವೆ. ಖುಷಿ ಹಂಚಿಕೊಳ್ಳುತ್ತ, ನೋವು ನೆಂಚಿಕೊಳ್ಳುತ್ತ ನಮ್ಮ ಸ್ನೇಹ ಕಾಲುಶತಮಾನ ದಾಟಿದೆ.

ಕೆನೆಬಣ್ಣದ ಪುಟದಲ್ಲಿ ಶಿವಪ್ಪನ ಸಾಲುಗಳು: ''ಮೂರ್ತಿಯ ಅಸ್ತಿತ್ವ ಮಹತ್ವದ್ದಾಗಿರಬೇಕು, ಇಲ್ಲವೆ ವಾಸ್ತುಶಿಲ್ಪ ಆಕರ್ಷಣೀಯವಾಗಿರಬೇಕು. ಜನ ಮೆಚ್ಚುವುದು ಈ ಎರಡು ಕಾರಣಗಳಿಗಾಗಿ. ನನಗೆ ಕಾರಣಗಳಿಲ್ಲದೆ ಬದುಕನ್ನು ಪ್ರೀತಿಸುತ್ತಾ ಹೋಗುವುದೇ ಮುಖ್ಯ.''

ಶಿವಪ್ಪ ಅರೆಮಲೆನಾಡಿನ ರೈತಾಪಿ ಯುವಕ. ಶಶಿಯ ಬುದ್ಧಿವಂತಿಕೆ, ಮಾತುಗಾರಿಕೆ, ಕಾವ್ಯಶಕ್ತಿ ಅವನನ್ನು ಸೂಜಿಗಲ್ಲಿನಂತೆ ಸೆಳೆದಿದ್ದವು. ಅವರ ಪ್ರೇಮ ಬಹುಮಟ್ಟಿಗೆ ಪ್ರಜ್ಞಾಪೂರ್ವಕ ಆಯ್ಕೆಯದು. ಶಶಿ, ಶಿವಪ್ಪನ ರೈತಾಪಿ ವ್ಯಕ್ತಿತ್ವ, ಗ್ರಾಮೀಣ ಗಡಸುತನ, ಸಹಜಪ್ರವೃತ್ತಿಶೀಲತೆ ಇವನ್ನು ಮೆಚ್ಚಿದ್ದಳು. ಅವರ ಜೋಡಿಯಂತು ಹೇಳಿಮಾಡಿಸಿದಂತಿದೆ. ಅವರು ಒಬ್ಬೊಬ್ಬರೇ ಕಾಣುತ್ತಿರಲೇ ಇಲ್ಲ. ಸದಾ ಜೋಡಿಯಾಗಿಯೆ ತಿರುಗಾಡುತ್ತಿದ್ದರು. ಒಟ್ಟಿಗೆ ಅಧ್ಯಯನ ಮಾಡುತ್ತಿದ್ದರು. ಒಟ್ಟಿಗೆ ಕ್ಯಾಂಟೀನಿನಲ್ಲಿ ತಿಂಡಿ ತಿನ್ನುತ್ತಿದ್ದರು. ಇದನ್ನೆಲ್ಲ ನೋಡಿದ ಪ್ರೊಫೆಸರರು ವಾರ್ನಿಂಗ್ ಕೊಟ್ಟರು. ಆದರೆ ಅವರು ಸೊಪ್ಪು ಹಾಕಲಿಲ್ಲ. ತಮ್ಮದೇನೂ ತಪ್ಪಿಲ್ಲ ಎಂಬಂತಿದ್ದರು.

''ಅಪ್ಲೈ ಅಪ್ಲೈ ನೋ ರಿಪ್ಲೈ' ಎಂದು ನೌಕರಿಗಾಗಿ ಇಬ್ಬರೂ ಅಲೆದಲೆದು ಹಣ್ಣಾದರು. ಸ್ವಾಮೀಜಿ ಇಬ್ಬರನ್ನೂ ಕರೆದು ನೌಕರಿ ನೀಡಿದ್ದಲ್ಲದೆ, ಮದುವೆಯನ್ನೂ ಮಾಡಿಸಿದರು. ಅಂತರ್ಜಾತಿ ವಿವಾಹಕ್ಕೆ ಮಠದ ಒಪ್ಪಿಗೆ ಮುದ್ರೆ ಸಿಕ್ಕು ಬೇರೆಯವರ ತಕರಾರುಗಳು ಬಿದ್ದುಹೋದವು. ಶಶಿ ವಿವಾಹವೇದಿಕೆಯಲ್ಲಿ ''ಹೂವ ತರುವರ ಮನೆಗೆ ಮರಳಿ ಹೂವನ್ನೆ ತರುವೆನಲ್ಲದೆ ಹುಲ್ಲನೆಂದೂ ತಾರೆನು'' ಎಂದು ನುಡಿದದ್ದು ತುಂಬ ಧ್ವನಿಪೂರ್ಣವಾಗಿತ್ತು. ಇವರು ವಿಚಾರವಾದಿ ದಂಪತಿಗಳೆಂದು ಪ್ರಸಿದ್ಧರಾದರು.



ಆಗದವರು ಸ್ವಾಮೀಜಿಯವರಿಗೆ ಚಾಡಿ ಹೇಳಿ ಇವರನ್ನು ಬೇರೆ ಬೇರೆ ಊರಿಗೆ ವರ್ಗ ಮಾಡಿಸಿದರು. ಜಿಮ್ಮನಸಿಯಾಗಿದ್ದ ಶಶಿ ತುಂಬ ನೊಂದುಕೊಂಡಳು. ಶಿವಪ್ಪ ಒಳಗೇ ಸಿಗರೇಟು ಉರಿದಂತೆ ಉರಿದ. ಅಷ್ಟರಲ್ಲಿ ಸ್ವಾಮೀಜಿಯವರಿಗೆ ವಸ್ತುಸ್ಥಿತಿ ಅರ್ಥವಾಯಿತು. ಮತ್ತೆ ಅವರಿಬ್ಬರೂ ಒಂದೇ ಕಡೆ ದುಡಿಯುವಂತೆ ಅನುವು ಮಾಡಿಕೊಟ್ಟರು. ಮಕ್ಕಳು ಡಾಕ್ಟರ್, ಎಂಜಿನಿಯರ್‌ಗಳಾಗಿ ವಿದೇಶಗಳಲ್ಲಿ ನೆಲೆಸಿದ್ದಾರೆ. ಮೊನ್ನೆತಾನೆ ಅಪ್ಪ, ಅಮ್ಮನ ಮದುವೆಯ ರಜತೋತ್ಸವವನ್ನು ಆಚರಿಸಲೆಂದು ಭಾರತಕ್ಕೆ ಬಂದುಹೋದರು.

ಗುಲಾಬಿ ದಳಗಳಂಥ ಈ ಜೋಡಿಪುಟ ತೆರೆದಾಗೆಲ್ಲ ಜೀವಕ್ಕೆ ನೋವಾಗುತ್ತದೆ. ನೆನಪಿನಾಳಕ್ಕೆ ಪಾತಾಳಗರಡಿ ಹಾಕಿದಂತಾಗುತ್ತದೆ. ಎಡಗಡೆ ಅಂಟಿಸಿರುವ ಮಿನಿಯೇಚರ್ ಪೇಂಟಿಂಗ್ ಜನ್ಮಾಂತರದ ಸ್ಮೃತಿಯಂತಿದೆ. ಕಪ್ಪು-ಬಿಳಿ ಎರಡೆ ಬಣ್ಣದಲ್ಲಿ ಎಷ್ಟೆಲ್ಲ ಜೀವತಳೆದಿವೆ ಇಲ್ಲಿ. ಮೋಡಗಳ ರೆಪ್ಪೆ ನಡುವೆ ಕಣ್ಣಾಲಿಯಂತಿರುವ ತುಂಬುಚಂದ್ರ, ನಮ್ರ ಕುಚಗಳಂಥ ಜೋಡಿಗುಡ್ಡ, ದಂಪತಿಗಳಂತೆ ನಿಂತ ತೆಂಗಿನ ಮರಗಳು, ಬೆಳದಿಂಗಳಲ್ಲಿ ಮಿರುಗುತ್ತ, ಹರಿಯುವುದನ್ನೆ ಮರೆತಂತೆ ಕಂಡರೂ ಒಳಗೇ ಹರಿಯುತ್ತಿರುವ ನದಿ, ಕನಸು ಕಾಣುತ್ತಿರುವ ಕಲ್ಲು, ಗರಿ ಕೆದರಿಕೊಂಡ ಜಲಸಸ್ಯ, ಅರ್ಧ ಇಣುಕುತ್ತಿರುವ ಒಂಟಿಮರ; ಮೇಲೆ ಅರೆಗತ್ತಲ ಆಕಾಶ. ಕೆಳಗೆ ಹಂಸಾಕೃತಿಯಲ್ಲಿ ಹಂಸಾಳ ಸಹಿ. ಇವೆಲ್ಲ ಏನನ್ನೋ ಹೇಳುತ್ತಿವೆ. ಇವತ್ತಿಗು ಸ್ಪಷ್ಟವಾಗಿ ಅರ್ಥವಾಗಿಲ್ಲ. ಚಿತ್ರ ಶಕುನ ನುಡಿಯುತ್ತಿದೆಯೆ? ಈಡೇರದ ಆಸೆಗಳ ರೂಪಕವೆ ಇದು? ನೋವನ್ನು ನಿಗೂಢ ಚಿತ್ರವಾಗಿಸಿ ಎದೆಭಾರ ಕಡಿಮೆಮಾಡಿಕೊಳ್ಳುವುದು ಕಲಾವಿದರ ಕೆಲಸವೆ? ತಾರುಣ್ಯಶಿಖರದ ಭಾವಪುಷ್ಪಗಳಿಗೆ ಮುಪ್ಪು ತಗಲದಂತೆ, ವಿಕಾರ ಅಂಟದಂತೆ ಅಮರಗೊಳಿಸುವ ತಂತ್ರವೆ ಇದು?

ಚೂರಲ್ಲೆ ಚರಾಚರವನ್ನೂ ತೋರಿಸುವ ಚೈನೀಸ್ ಮಿನಿಯೇಚರ್ ಲ್ಯಾಂಡ್‌ಸ್ಕೇಪಿನಂತೆ ನೋಡಿದಂತೆಲ್ಲ ಆಳವಾಗಿ ಕಾಡುತ್ತಿದೆ ಈ ಚಿತ್ರ. ತನ್ನ ಒಳಮರ್ಮ ನನ್ನ ಅರಿವಿನ ಪಾತಳಿಗೆ ಇಳಿಯದಂತೆ ಮಾಡಿ ಸತಾಯಿಸುತ್ತಿದೆ. 'ಅರಿಯದು ಅಳವು ತಿಳಿಯದು ಮನವು ಕಾಣದೋ ಬಣ್ಣಾ' ಎನ್ನುವಂತಾಗಿದೆ. ಆಯುಷ್ಯದುದ್ದಕ್ಕು ತನ್ನೆಡೆಗೆ ಸೆಳೆಯುತ್ತಿರುವ ನನ್ನ ಆತ್ಯಂತಿಕ ತಾಣ ಈ ಚಿತ್ರದಲ್ಲಿ ಅಡಗಿದೆಯೆ? ಈ ನಿಸರ್ಗಚಿತ್ರದಲ್ಲಿ ಅವಿತಿರುವ ಕುಲದೇವಿ ಬನದವ್ವ ಯಾವುದೊ ಒಗಟು ಹಾಕಿ ಏನನ್ನೊ ಹೇಳುತ್ತಿದ್ದಾಳೆ.

ಬಲಪುಟದಲ್ಲಿ ಹಂಸಾ ಮಂತ್ರದಂಥ ಮಾತು ಬರೆದಿದ್ದಾಳೆ: AN AUTOGRAPH IS A PHOTOGRAPH OF THE SOUL. ಕೆಳಗೆ ಮತ್ತೊಮ್ಮೆ ಸಹಿಮಾಡಿದ್ದಾಳೆ. ಹೌದು ನಾವು ಪ್ರೀತಿಸಿದ್ದು ಪರಸ್ಪರರ ಆತ್ಮಗಳನ್ನೆ ಹೊರತು ದೇಹಗಳನ್ನಲ್ಲ. ಕಾಮದ ಹಂಗಿರದ ನಿರಭ್ರ ಪ್ರೇಮದ ಗುಂಗು ಅದು. ಅವಳು ಮಾರುಹೋದದ್ದು ನನ್ನೊಳಗಿನ ಕವಿಗೆ; ನಾನು ಅವಳೊಳಗಿನ ಚಿತ್ರಕಾರ್ತಿಗೆ. ಉಳಿದ ಸಂಗತಿಗಳೆಲ್ಲ ನಗಣ್ಯವೆನಿಸಿದ್ದವು. ಸಿನಿಮೀಯ ಸಲ್ಲಾಪ ನಮಗೆ ಒಗ್ಗುತ್ತಿರಲಿಲ್ಲ. ನಮ್ಮ ಮಾತುಕತೆಯೆಲ್ಲ ಕಲೆಯ ಬಗ್ಗೆ ಇರುತ್ತಿತ್ತು. ಅಂಥ ಹೊತ್ತಿನಲ್ಲಿ ನಮ್ಮ ಕಣ್ಣುಗಳು ಒಂದು ಬಗೆಯ ದೈವಿಕ ಚೆಲುವಿನಿಂದ ಅರಳುತ್ತಿದ್ದವು. ಬಿಯತ್ರಿಸ್‌ಳ ಕಣ್ಣುಗಳು ದಾಂತೆಯನ್ನು ಸೆಳೆಯುತ್ತಿದ್ದವಲ್ಲ, ಹಾಗೆ ಹಂಸಾಳ ಕಣ್ಣುಗಳು ಅರಿವಿನ ಜೋಡಿದೀಪದಂತೆ ನನ್ನನ್ನು ಸೆಳೆಯುತ್ತಿದ್ದವು. ಆಗ ನಾವು ಯಾವುದೊ ಅನೂಹ್ಯವಾದ ಅನುಭಾವಿಕ ಬೆಳಕಿನ ಗುಮ್ಮಟದಲ್ಲಿರುವಂತೆ ಭಾಸವಾಗುತ್ತಿತ್ತು. ಲೈಂಗಿಕ ಮಿಲನದ ಶಾರೀರಿಕ ಕ್ರಿಯಾವಿಧಿ ಈ ಗುಮ್ಮಟವನ್ನು ಒಡೆದುಹಾಕುತ್ತಿತ್ತೊ ಏನೊ. ಅದಕ್ಕೇ ನಮ್ಮ ಪ್ರೀತಿಯೆಂಬ ಹಂಸಪಕ್ಷಿ ಸಾಂಸಾರಿಕ ಪಂಜರಕ್ಕೆ ಸಿಕ್ಕಿಬೀಳದೆ ಅಲೌಕಿಕ ವಲಯಕ್ಕೆ ಹಾರಿಹೋದದ್ದು.

ನಮ್ಮ ಮನೆಗು ಅವಳ ಮನೆಗೂ ನಡುವೆ ಇದ್ದ ಸೀತಾಳ ಮನೆ ನಮ್ಮ ಭೇಟಿಯ ತಾಣವಾಗಿತ್ತು. ಅವಳ ಮನೆಯ ಭಯಮಿಶ್ರಿತ ನಿಯಂತ್ರಿತ ವಾತಾವರಣದಿಂದಾಗಿ, ಹಂಸಾ ಒಳಗೆ ಹೂವಿನಷ್ಟು ಮೃದುವಾದ ಮನಸ್ಸಿನವಳಾಗಿದ್ದರೂ ಹೊರಹೊರಗೆ touch-me-not ಎಂಬಂತಿದ್ದಳು. ಇದು ಆಗಾಗ ಕಿರಿಕಿರಿಗೆ

ಕಾರಣವಾಗುತ್ತಿತ್ತು. ಇದು ಅವಳ ಸಹಜ ಸ್ವಭಾವಕ್ಕೇ ವ್ಯತಿರಿಕ್ತವಾಗಿ ಹದೆಯಾಡಿಸುತ್ತಿತ್ತು. ಕಡೆಯ ಭೇಟಿಯಲ್ಲಿ ನಾನು ಮೈಸೂರಿಂದ ತಂದಿದ್ದ ಮಲ್ಲಿಗೆ ಹೂವನ್ನು ಅವಳು ಇಸ್ಕೊಳ್ಳಲಿಲ್ಲ. ನಮ್ಮ ಭೇಟಿಗಳು ಕಟ್ಟಾದವು. ಮುಂದೊಂದು ದಿನ ಅವರ ಜಾತಿಯಲ್ಲೆ ಅವಳ ಮದುವೆ ಆಯಿತು. ಅವಳ ನೆನಪಿನ ಪರ್ಣ ಶಾಲೆಗೆ ಬೀಗಹಾಕಿ ಬೈರಾಗಿಯಂತೆ ಅಂಡಲೆದೆ.


ಆದರೂ ಹಂಸಾ ತನ್ನ ಜೀವರಸದಲ್ಲಿ ಕುಂಚವನ್ನದ್ದಿ ಬರೆದಿರುವ ಈ ಚಿತ್ರ, ಈ ಮಾತು ಆಗಾಗ ಆಳವಾಗಿ ಕಾಡುತ್ತಲೆ ಇದ್ದವು. ಎಲ್ಲ ಯುಗಗಳ, ಎಲ್ಲ ಖಂಡಗಳ ಚಿರವಿರಹಿಗಳ ಹಣೆಬರಹದಂತೆ ಕಾಣುತ್ತಿದ್ದವು. ಒಮ್ಮೊಮ್ಮೆ ಬದುಕು ಸವೆಸವೆದು ಸಾವಿನಲ್ಲಿ ಕರಗಿ ಹೋಗುತ್ತದೆ. ಕೈಗೂಡಿದ ಪ್ರೀತಿ ಎಲ್ಲೊ ಕೊನೆ ಗೊಂಡುಬಿಡಬಹುದು. ಆದರೆ ಕೈಗೂಡದ ಪ್ರೀತಿ ಅಮರತಾರುಣ್ಯದ ನಿರಂತರ ಪ್ರವಾಹ ದಂತೆ ಹರಿಯುತ್ತಲೆ ಇರುತ್ತದೆ. ಪ್ರತಿಭೆಗೆ ಸ್ಫೂರ್ತಿ ಸೆಲೆಯಾಗುತ್ತದೆ. ಹಂಸಾಳ ಚಿತ್ರ ಇದನ್ನೆ ಹೇಳುತ್ತಿದೆಯೆ?

ಭೂಮಿ ಕಾಫಿ ಹಿಡಿದು ಎದುರಿಗೆ ಪ್ರತ್ಯಕ್ಷ ವಾದಳು. ಮಗಳು ಅಮ್ಮನನ್ನು ಪುಸಲಾಯಿಸಿ ಪುಟ್ಟ ಬಟ್ಟಲಲ್ಲಿ 'ಪಕಾಟ' ಗಿಟ್ಟಿಸಿಕೊಂಡು ಒಂದೊಂದೆ ಚೂರು ತಿನ್ನುತ್ತ ಬಂದಳು. ನಾನು ಆಟೋಗ್ರಾಫಿನ ಲಹರಿಯಿಂದ ಇಳಿದುಬಂದು ಕಾಫಿ ಹೀರತೊಡಗಿದೆ. ಭೂಮಿ ನನ್ನ ಅಂತ ರಂಗದ ಫೋಟೊ ತೆಗೆಯುವ ಹಾಗೆ ತೀಕ್ಷ್ಣವಾಗಿ ನೋಡಿದಳು. ನಾನು ಸಿಕ್ಕಿಬಿದ್ದ ಖೈದಿಯಂತಾದೆ.

ಮಧ್ಯಂತರ

ತೀರ್ಥ ಕತೆಯಲ್ಲಿ ಹೇಳಿರುವುದು ತಮಾಶೆಗೆ ಅಷ್ಟೆ. ವಾಸ್ತವವಾಗಿ ಅವನು ಖೈದಿಯೂ ಅಲ್ಲ, ಭೂಮಿ ಪತ್ತೇದಾರಿಣಿಯೂ ಅಲ್ಲ. ತೀರ್ಥ ಮತ್ತು ಹಂಸಾರ ಪ್ಲೆಟೋನಿಕ್ ಪ್ರೇಮ, ಅದರಿಂದಾದ ನಿರಾಸೆ ಎಲ್ಲವನ್ನೂ ಭೂಮಿ, ನರೇಂದ್ರ ಹಾಗೂ ಸೀತಾರಿಂದ ಕೇಳಿ ತಿಳಿದುಕೊಂಡಿದ್ದಳು. ಅಷ್ಟೆಲ್ಲ ಗೊತ್ತಿದ್ದೂ ತನ್ನನ್ನು ಇಷ್ಟಪಟ್ಟಿದ್ದಾಳಲ್ಲ ಎಂದು ತೀರ್ಥ ಅವಳನ್ನು ಅಚ್ಚರಿಯಿಂದ ಭಯ ಗೌರವಗಳಿಂದ ಕಂಡ. ಅಪ್ರತಿಮ ಚೆಲುವೆಯೂ ಗುಣವಂತಿಯೂ ಆದ ಭೂಮಿ ತೀರ್ಥನಂಥ ಸರ್ವೇಸಾಧಾರಣ ಯುವಕನಿಗೆ ಒಲಿದದ್ದಕ್ಕೆ ಎಲ್ಲರೂ ಮೂಗು ಮುರಿದರು. ಕಡೆಗೆ love is blind ಎಂದು ತೆಪ್ಪಗಾದರು. ಭೂಮಿ ಮಾತ್ರ ತೀರ್ಥನನ್ನು ಗಾಢವಾಗಿ ಪ್ರೀತಿಸಿದಳು. ಅಷ್ಟೇ ಅಲ್ಲ, ಅನ್ಯಮನಸ್ಕನಾಗಿ ಅಲೆಯುತ್ತಿದ್ದ ಅವನನ್ನು ಒಲಿಸಿಕೊಳ್ಳಲೆಂದು ಅವನ ಎಲ್ಲ ಅಭಿರುಚಿ ಗಳಲ್ಲು ಅವನೊಡನೆ ಸಪ್ತಪದಿ ಸುತ್ತಿದಳು. ಅವಳ ಸಹವಾಸದಲ್ಲಿ ಅವನು ಹೊಸ ಕನಸು ಕಟ್ಟುತ್ತ ಹೋದ. ಅವಳ ಪ್ರೇಮನಿಷ್ಠೆಯಿಂದಾಗಿ ಅವೆಲ್ಲ ನನಸಾದವು. ಇಂಥ ಜೀವಸಖಿಗೆ ಇನ್ನೇನು ಕೊಡಲಿ ಎಂದು ತನ್ನನ್ನೆ ಇಡಿಯಾಗಿ ಕೊಟ್ಟುಬಿಟ್ಟ. ಇಬ್ಬರೂ ಪ್ರೇಮಪೂರ್ಣಿಮೆ ಕಡೆ ಹೆಜ್ಜೆ ಹಾಕಿದರು.

ಕತೆ ಆಕಾಶವಾಣಿಯಲ್ಲಿ ಪ್ರಸಾರವಾದ ರಾತ್ರಿ ಪುಟ್ಟ ಮಗಳು ಸೃಷ್ಟಿ ಕಾಮ್ರೇಡ್ ಸೂರಿಯ ಮನೆಯಲ್ಲಿದ್ದಳು. ಸೂರಿಯ ಹೆಂಡತಿ ಸುಜಯ ಸೃಷ್ಟಿಯನ್ನು ತುಂಬ ಹಚ್ಚಿಕೊಂಡಿದ್ದಳು. ಮದುವೆ ಯಾಗಿ ಬಹಳ ವರ್ಷಗಳ ಮೇಲೆ ಅವಳು ಇದೀಗ ಚೊಚ್ಚಲು ಬಸಿರಿಯಾಗಿದ್ದಳು. ರೇಡಿ ಯೋದಲ್ಲಿ ಅಪ್ಪನ ಮುಖ ಕಾಣದೆ ಬರಿ ಧ್ವನಿ ಮಾತ್ರ ಕೇಳಿದಾಗ ಮಗಳು ಗಾಬರಿಯಾಗಿ 'ಅಪ್ಪ



ಬೇಕು ಅಪ್ಪ' ಎಂದು ಅಳತೊಡಗಿದಳು. ಸರಿ, ಸೂರಿ ಸೈಕಲ್ ಮೇಲೆ ಕೂರಿಸಿಕೊಂಡು ಅವಳನ್ನು ಮನೆಗೆ ತಂದುಬಿಟ್ಟ. ತೀರ್ಥನನ್ನು ಕಂಡವನೆ ''ಕತೆ ಕೇಳಿದೆ. ಕೆಟ್ಟದಾಗಿತ್ತು''ಎಂದು ಕಟ್ಟಾಗಿ ಕಾಮೆಂಟ್ ಮಾಡಿದ. ಸಿಟ್ಟು ಬಂದ ತೀರ್ಥ ಕತೆಯನ್ನು ಮೂಲೆಗೆ ಎಸೆದ. ಸುಮಾರು ಒಂದು ತಲೆಮಾರಿನಷ್ಟು ಕಾಲ ಅದು ಅಲ್ಲೆ ಬಿದ್ದು ಮಾಸಲಾಗಿ, ಧೂಳಿಡಿದು, ಲಡ್ಡಾಗಿಹೋಯಿತು. ''ಇದೀಗ ಮತ್ತೆ ಸಿಕ್ಕಿದೆ, ಮತ್ತೆ ಜೀವ ಕೊಡುವೆಯಾ'' ಎಂದು ಕೇಳುತ್ತಿದೆ ಎಂದು ತೀರ್ಥ ಹೇಳಿದಾಗ ನಂಬಬೇಕೊ ಬಿಡಬೇಕೊ ಗೊತ್ತಾಗಲಿಲ್ಲ. ಈ ಕತೆಗಾರರು ಯಾವಾಗ ಸುಳ್ಳು ಹೇಳುತ್ತಾರೆ, ಯಾವಾಗ ಸತ್ಯಹೇಳುತ್ತಾರೆ ಎಂಬುದೆ ಅರ್ಥವಾಗುವುದಿಲ್ಲ.

ಇದೆಲ್ಲ ಇರಲಿ. ವಿಕ್ರಂನ ತಾಯಿ, ಕತೆ ಕೇಳಿ ಆಕಾಶವಾಣಿಗೆ ಪ್ರತಿಕ್ರಿಯೆ ಬರೆದಿದ್ದರಂತೆ. ತಮ್ಮ ಮಗನ ಮದುವೆಯ ವಿವರಗಳು ತಮಗೇ ಗೊತ್ತಿರಲಿಲ್ಲ, ತಿಳಿಸಿದ್ದಕ್ಕಾಗಿ ಧನ್ಯವಾದಗಳು ಅಂತ. ಇದು ಕತೆಯ ಹೊಗಳಿಕೆ ಅಥವಾ ತೆಗಳಿಕೆ ಇರಲಿಕ್ಕಿಲ್ಲ. ತಮ್ಮ ಮಗ-ಸೊಸೆ ಬಗ್ಗೆ ತಗಾದೆ ಇರಬಹುದು. ಅಥವಾ ಅಮೂರ್ತ ಆಕಾಶವಾಣಿಗೆ ಎಲ್ಲಾ ಗೊತ್ತಿರುತ್ತದಲ್ಲ ಎಂಬ ಅಚ್ಚರಿ ಇದ್ದರೂ ಇರಬಹುದು.

ಭಾನುವಾರ ಭೂಮಿ, ಸೃಷ್ಟಿಯರೊಡನೆ ತೀರ್ಥ 'ಕಾಬೂಲೀವಾಲಾ' ಸಿನಿಮಾ ನೋಡಲು ಹೋದ. ಟಿಕೆಟ್ಟಿನ ಕ್ಯೂನಲ್ಲಿ ಹಂಸಾಳ ತಂದೆ ಭೇಟಿಯಾದರು. ಅವರು ಕತೆ ಕೇಳಿದ್ದಂತೆ ಕಾಣಲಿಲ್ಲ ಸದ್ಯ. ಅವರು ಮಾಸಲು ಕೋಟು, ಪೊದೆಮೀಸೆಯಲ್ಲಿ ಕಾಬೂಲಿವಾಲಾನ ಪಾತ್ರಧಾರಿ ಬಲರಾಜ್ ಸಾಹ್ನಿಯ ಅಣ್ಣನಂತೆ ಕಂಡರು. ಸಿನಿಮಾದಲ್ಲಿ ಪುಟಾಣಿ ಮಿನಿಗೆ ಕಾಬೂಲಿವಾಲಾ, ಪುಟ್ಟ ಅಂಗೈಮುದ್ರೆಗಳಿದ್ದ ವಸ್ತ್ರ ತೋರಿಸಿ ''ಇವು ನನ್ನ ಮಗಳ ಕೈಗುರುತು'' ಎನ್ನುವಾಗ ಹಂಸಾಳ ತಂದೆ ಕರವಸ್ತ್ರದಿಂದ ಕಣ್ಣೊರೆಸಿಕೊಂಡರು. ಇಂಟರ್‌ವೆಲ್‌ನಲ್ಲಿ ಸೃಷ್ಟಿಯನ್ನು ಎತ್ತಿಕೊಂಡು ಹೋಗಿ ಚಾಕ್ಲೆಟ್ ಕೊಡಿಸಿಕೊಂಡು ಬಂದರು. ಅವರು ಮಗಳ ಅಭಿರುಚಿ, ಅಭಿಪ್ರಾಯಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. ಆದರೆ ಹಂಸಾಳ ಅಮ್ಮ ಹಾಗೂ ಅಣ್ಣಂದಿರು ಅವಳನ್ನು ತಮ್ಮ ಹದ್ದುಬಸ್ತಿನಲ್ಲಿ ಇಡುವ ಪಣತೊಟ್ಟಿದ್ದರು ಎನಿಸುತ್ತದೆ. ಸಿನಿಮಾದ ಕೊನೆಯಲ್ಲಿ ಮಿನಿಯ ಮದುವೆ ದಿನ ಜೈಲಿನಿಂದ ಬಿಡುಗಡೆಯಾಗಿ ಬಂದ ಕಾಬೂಲೀವಾಲಾ ತನ್ನ

ಗುರ್ತು ಮರೆತ ಮಿನಿಯನ್ನು ಕಂಡು, ತನ್ನ ಮಗಳನ್ನು ನೆನೆಸಿಕೊಂಡು ಬಿಕ್ಕಿ ಬಿಕ್ಕಿ ಅಳುವ ವೃದ್ಧ ಹಂಸಾಳ ತಂದೆಗೆ ತಡೆಯಲಾಗಲಿಲ್ಲ. ಎದ್ದು ಥೇಟರ್ ಹೊರಗೆ ನಡೆದರು. ತೀರ್ಥ ಅವರನ್ನು ಹಿಂಬಾಲಿಸಿದ. "ಹನ್ಸಾ ಕಾಬೂಲಲ್ಲೇ ಇರೋದು. ಅವಳ ಗಂಡ ದ್ರಾಕ್ಷಿ ತೋಟದ ಮಾಲಿಕ. ಇಬ್ಬರು ಗಂಡುಮಕ್ಕಳು. ಮೂರೊರ್ಷಕ್ಕೊಂದ್ಸಲ ಬಂದು ಮುಖಾ ತೋರಿಸ್ತಾರೆ..." ಎಂದರು. ತೀರ್ಥ ಏನೊ ಹೇಳಲು ಹೋದ. ಅಷ್ಟರಲ್ಲಿ "ಬರ್ತೀನಿ" ಅಂತ ಕೈಬೀಸಿ ಹೊರಟೇಬಿಟ್ಟರು. ಸೃಷ್ಟಿ, ಭೂಮಿ ಕಾತುರರಾಗಿ ಥೇಟರಿನಿಂದ ಹೊರಬಂದರು. ಸಿನಿಮಾ ಬಿಟ್ಟಿತು. ಜನಜಂಗುಳಿ ಹೊರಗಿನ ವಾಸ್ತವಕ್ಕೆ ಕಾಲಿಟ್ಟರೂ ಸಿನಿಮಾ ಕತೆಯಲ್ಲಿ ಮುಳುಗಿಹೋದಂತೆ ಚಲಿಸತೊಡಗಿತು. ತೀರ್ಥ ಎಡಗೈಯಲ್ಲಿ ಸೃಷ್ಟಿಯನ್ನೆತ್ತಿಕೊಂಡು ಬಲಗೈಯಲ್ಲಿ ಭೂಮಿಯ ಬೆಚ್ಚಗಿನ ಕೈಹಿಡಿದು ಜಂಗುಳಿ ದಾಟಿದ.

ಕನಸುಗಳೇ ಹೀಗೆ

ಅನಾರೋಗ್ಯದ ನಿಮಿತ್ತ ಕೆಲಸಕ್ಕೆ ರಜೆ ಹಾಕಿದ್ದ ತೀರ್ಥ ಡೈರಿ ಬರೆಯುತ್ತ ಕೂತಿದ್ದ: "ಬದುಕು ಐರಸಿಗಳ ರೈಲುಗಾಡಿ. ಹಿನ್ನೋಟದ ನೆನಪಿನ ಬೋಗಿಗಳು, ಮುನ್ನೋಟದ ಕನಸಿನ ಬೋಗಿಗಳ ನಡುವೆ ನಮ್ಮ ವರ್ತಮಾನುಭವದ ಬೋಗಿ ಇರುತ್ತದೆ. ಕಾಲದ ಹಳಿಯ ಮೇಲೆ ಸಾಗುವ ಈ ಬದುಕಿನ ರೈಲುಗಾಡಿಯ ತೆರೆದ ಕಿಟಕಿಗಳು ಹೊಸಹೊಸ ಚಿತ್ರ ಕಾಣಿಸುತ್ತವೆ, ಹೊಸ ಹೊಸ ಅರ್ಥ ಹೊಳೆಸುತ್ತವೆ. ಆಗಾಗ ಅರಿವಿನ ಇಂಜಿನ್ನು ನಿಗೂಢ ಇಂಗಿತಗಳ ಸಿಳ್ಳು ಹಾಕುತ್ತಿರುತ್ತದೆ. ಹೊತ್ತು ಹೊತ್ತಿನ ಅನುಭವದ ತುತ್ತುಗಳಲ್ಲಿ ಪಚನವಾದದ್ದು ರಕ್ತಗತವಾಗುತ್ತದೆ. ಪಚನವಾಗದೆ ಇದ್ದದ್ದು ಪ್ರಮಿತ ಕಟಿಸುತ್ತದೆ. ನೋವಿನ ಡಿಕಾಕ್ಷನ್ನಿಗೆ ನಲಿವಿನ ಹಾಲು, ಪ್ರೀತಿಯ ಸಕ್ಕರೆ ಬೆರೆತು ಬದುಕಿನ ಗಾಡಿಯ ನಿರಂತರ ಪ್ರಯಾಣಿಕರ ನಿತ್ಯಪಾನೀಯ ಸಿದ್ಧ..."

"ಪೋಸ್ಟ್" ಎಂಬ ಕೂಗು ತೀರ್ಥನ ತಲ್ಲೀನತೆಯನ್ನು ತುಂಡರಿಸಿತು. ಎದ್ದು ಹೋಗಿ ದಪ್ಪನೆ ಲಕೋಟೆ ಇಸ್ಕೊಂಡ. ಒಡೆದರೆ ಒಗಟಿನಂಥಾ ಪತ್ರ. ಸೀತಾ ಬರೆದದ್ದು. ರಸಪೂರಿ ಮಾವಿನ ಮರದ ಕೆಳಗೆ ಕೂತು ಓದತೊಡಗಿದ:

"ಡಿಯರ್ ತೀರ್ಥ,

ಈ ಕಾಗದ ನೋಡಿ ನಿನಗೆ ಆಶ್ಚರ್ಯವಾಗಬಹುದು. ನೀನು, ಭೂಮಿ, ಸೃಷ್ಟಿ ಎಲ್ಲರೂ ಆಗುಂಬೆಯ ಹಸಿರು ಪರಿಸರದಲ್ಲಿ ಸುಖವಾಗಿ ಇದ್ದೀರೆಂದು ಭಾವಿಸುತ್ತೇನೆ. ನಾವೆಲ್ಲಾ ಆರೋಗ್ಯ. 'ಆಕಾಶವಾಣಿ'ಯಲ್ಲಿ ನಿನ್ನ ಕತೆ ಕೇಳಿದೆ. ನಿನ್ನ ಹತ್ತು ನಿಮಿಷದ ಕತೆ ನನ್ನನ್ನು ಹತ್ತು ವರ್ಷ ಹಿಂದಕ್ಕೆ ಒಯ್ದು ಉದ್ದಕ್ಕೂ ಏನೇನಾಯಿತು ಎಂದೆಲ್ಲಾ ತಿಳಿಸಿ, ತಿರುಗಿ ಈ ರಾತ್ರಿಗೆ ತಂದು ನಿಲ್ಲಿಸಿದೆ. ನಾನು ಇದುವರೆಗೂ ಅಜ್ಞಾತವಾಸಿಯಾಗಿದ್ದೆನೆ? ತೆರೆ-ಸರಿಸಿ ನನ್ನ ಪೂರ್ಣದರ್ಶನ ಮಾಡಿಸಿದಂತಾಯಿತು. ಅರಿಯದ ಕಥಾಭಾಗವನ್ನು ಬಿಚ್ಚಿಟ್ಟಂತಾಯಿತು. ಹತ್ತು ವರ್ಷದ ದುಃಖದ ಕೋಡಿ ಒಡೆದು ಹೋಯಿತು. ಕಣ್ಣು ಮಳೆಗರೆದವು.....

ಮಧ್ಯರಾತ್ರಿ, ಸ್ವಲ್ಪ ಹೊತ್ತು ಮಾತ್ರ ನಿದ್ದೆ ಹತ್ತಿತು. ಬೆಳಗಿನ ಜಾವ ಮತ್ತೆ ಎದ್ದು ಬರೆಯುತ್ತಿದ್ದೇನೆ. ತೀರ್ಥ, ನಿನ್ನ ಮತ್ತು ಹಂಸಾಳ ಕತೆ ನನಗೆ ಹೆಚ್ಚೇನೂ ತಿಳಿಯದು. ನಾನು ನಿಮ್ಮೆಲ್ಲರನ್ನೂ ಆ ಸುಂದರ ಶಹರದಲ್ಲಿ ಬಿಟ್ಟು ಬಂದಾಗ ನಿಮ್ಮ ಕತೆ ಆಗಷ್ಟೆ ಪ್ರಾರಂಭವಾಗಿತ್ತು. ನೀವಿಬ್ಬರೂ ನಮ್ಮನೆಯಲ್ಲಿ ಭೇಟಿಯಾಗಿ ಮೆಲುದನಿಯಲ್ಲಿ ಮಾತಾಡುತ್ತಿದ್ದುದು ನೆನಪಿದೆ. ಡಿಸ್ಟರ್ಬ್ ಆಗದಿರಲೆಂದು ನಾನು ಒಳಗೇ ಇರುತ್ತಿದ್ದೆ. ಅವಳ ಮೇಲೆ ನೀನು ಕಟ್ಟಿರುವ ಹಾಡು ನನಗೆ ಕಂಠಪಾಠವಾಗಿತ್ತು. ಇದಕ್ಕಿಂತ ಹೆಚ್ಚು ನಾನೇನು ಬಲ್ಲೆ? ನಾವು ಇಲ್ಲಿಗೆ

ಶಿಫ್ಟ್ ಆದಮೇಲೆ ನೀವಿಬ್ಬರೂ ಅವಳ ಮನೆಯಲ್ಲಿ ಭೇಟಿಯಾಗುತ್ತಿದ್ದಿರಿ ಎಂದು ಅವಳ ಪತ್ರಗಳಿಂದ ತಿಳಿದುಬಂತು. ಪರವಾಗಿಲ್ಲ ನೀವಿಬ್ಬರೂ ಒಂದಾಗಬಹುದು ಎಂದು ಎಣಿಸಿದ್ದೆ. ಅವಳೂ ''ತುಂಬ ಹೊಸಬಳಾಗಿಬಿಟ್ಟಿದೀನಿ ಕಣೆ. ಯಾರ ಹತ್ತಿರವೂ ಇಷ್ಟು ಸಲಿಗೆಯಿಂದ ಮಾತಾಡಿರಲೆ ಇಲ್ಲ'' ಎಂದು ಉತ್ಸಾಹದಿಂದ ಬರೆದಿದ್ದಳು. ಅದರ ನಂತರ ಬಹಳ ದಿನ ಪತ್ರ ಬರೆಯಲೇ ಇಲ್ಲ. ಸುಮಾರು ಐದಾರು ತಿಂಗಳ ನಂತರ ನಾನೆ ವಿಚಾರಿಸಿ ಬರೆದಾಗ ತಟ್ಟನೆ 'ನೀನು, ನರೇಂದ್ರ, ತೀರ್ಥ ಎಲ್ಲ ಸೇರಿ ನನಗೆ ಅನ್ಯಾಯ ಮಾಡಿದಿರಿ' ಎಂದು ಬರೆದುಬಿಟ್ಟಳು. ನಾನು ಕಕ್ಕಾವಿಕ್ಕಿಯಾಗಿ ವಿವರ ಕೇಳಿದೆ. ಅವಳು ಉತ್ತರ ಕೊಡಲೇ ಇಲ್ಲ. 'ಅರಿಯದೆ ನಮ್ಮಿಂದ ಅಪಚಾರವಾಗಿದ್ದರೆ ಕ್ಷಮಿಸು' ಎಂದು ಅಂಗಲಾಚಿ ಬರೆದೆ. ಅದಕ್ಕೂ ಉತ್ತರ ಕೊಡಲಿಲ್ಲ. ನಮ್ಮ ಮನೆಯ ನೂರೆಂಟು ಕಷ್ಟಗಳು, ತಾಪತ್ರಯ, ಅಣ್ಣನ ಅಪಘಾತ ಇವುಗಳ ಮಧ್ಯೆ ಅದನ್ನೆ ಮನಸ್ಸಿಗೆ ಹಚ್ಚಿಕೊಂಡು ಕೂರಲು ಸಾಧ್ಯವಿರಲಿಲ್ಲ. ಅಷ್ಟರಲ್ಲಿ ಅವಳ ಮದುವೆಯ ಕರೆಯೋಲೆ ಬಂದಿತು. ಬಹುಶಃ ಜಾತಿ ಸಮಸ್ಯೆಯಿಂದಾಗಿ ನೀವಿಬ್ಬರೂ ಬೇರೆಯಾಗ ಬೇಕಾಯಿತೇನೊ ಎಂದುಕೊಂಡು ಸುಮ್ಮನಾದೆ. ವಿಧಿ ನಿಮ್ಮಿಬ್ಬರನ್ನೂ ಬೇರೆ ಬೇರೆ ದಡಕ್ಕೆ ಸೇರಿಸಿದೆ. ಬದುಕಿಗೆ ಹೊಸ ತಿರುವು ಸಿಕ್ಕಿದೆ, ಅಲ್ಲವೆ?

ತೀರ್ಥ, ನೀನು ಓದಿದಿ 'ನರೇಂದ್ರ ಹಿಂದಿನಂತೆ ಅವಳಿಗೆ ಸ್ಪಂದಿಸಲು ಸಾಧ್ಯ ವಾಗಲೇ ಇಲ್ಲ' ಎಂದು. ಯಾಕೆ? ಯಾಕೆ? ಯಾಕೆ? ಎಂದು ನಾನು ಕೇಳಿಕೊಳ್ಳುತ್ತಲೇ ಇದ್ದೇನೆ. ನಮ್ಮ ಪ್ರೇಮಕ್ಕೆ ಯಾವ ಅಡ್ಡಿಯೂ ಇರಲಿಲ್ಲ. ಎರಡು ಮನೆಗಳಿಗೂ ಸೂಕ್ಷ್ಮ ಗೊತ್ತಾಗಿತ್ತು. ಒಬ್ಬರಿಗೊಬ್ಬರು ನೊಂದು ಕೊಂಡೇವೆಂದು ಎಷ್ಟೆಷ್ಟೊ ಅನುಸರಿಸಿ ನಡೆದವರು ನಾವು. ಆದರೂ ನಮ್ಮಿಬ್ಬರ ನಡುವೆ ಈ ಗೋಡೆ ಹೇಗೆ ಎದ್ದಿತು? ಹೇಗೆ ಈ ಬಿರುಕು ಉಂಟಾಯಿತು? ಇದಕ್ಕೆಲ್ಲಾ ಉತ್ತರ ನನಗೆ ಸಿಗಲೇ ಇಲ್ಲ. ನನ್ನಿಂದ ಯಾವ ಅಪಚಾರ ವಾಯಿತು? ನನ್ನ ಯಾವ ನಡೆನುಡಿಯಿಂದ ನರೇಂದ್ರ ಘಾಸಿಗೊಂಡ? ನನ್ನ ವರ್ತನೆಯನ್ನು ನೆನೆನೆನೆದು ವಿಮರ್ಶಿಸಿಕೊಳ್ಳುತ್ತಿದ್ದೆ. ನನ್ನಿಂದಲೆ ಆಗಲಿ, ನಮ್ಮ ಮನೆಯ ಇತರರಿಂದಲೇ ಆಗಲಿ ಅವನಿಗೆ ನೋವಾಯಿತೆ? ಅಷ್ಟು ಆಳವಾಗಿ ಬೇರೂರಿದ್ದ ನಮ್ಮ ಪ್ರೇಮವನ್ನು ಬುಡಸಮೇತ ಅಲುಗಾಡಿಸಿ ಕೊನೆಗಾಣಿಸಿದ ಶಕ್ತಿ ಯಾವುದು? ದೇವರು ಸರ್ವಶಕ್ತ ಅನ್ನುತ್ತಾರೆ. ಆದರೆ ಅವನು ಮುಗ್ಧ ನಿಷ್ಕಲ್ಮಶಪ್ರೇಮಿಗಳಿಗೆ ಯಾಕಿಷ್ಟು ದುಃಖ ಕೊಡುತ್ತಾನೆ ನಿಷ್ಕಪಟಿಗಳಿಗೆ ಸಹಾಯಮಾಡದೆ, ಕಷ್ಟಕೊಡುವುದೇ ಅವನ ದೊಡ್ಡಸ್ತಿಕೆಯೆ?

ನಮ್ಮ ನಡುವೆ ಸಂಪರ್ಕ ಕಡಿದುಹೋಗ ಬಾರದೆಂದು ಪತ್ರ ಬರೆಯುತ್ತಲೆ ಇದ್ದೆ. ಎಲ್ಲ ವಿಫಲವಾದವು. ಇದೆಲ್ಲ ಇನ್ನು ಸಾಕು, ಅಲ್ಲವೆ? ಬದುಕಿನಲ್ಲಿ ಹೊಸ ಹಾದಿ ಹಿಡಿದಿರುವ ನರೇಂದ್ರನಿಗೆ ಈ ಪತ್ರ ತೋರಿಸಬೇಡ. ನನ್ನ ದುಃಖದ ಕಾವು ಅವನಿಗೆ ತಾಗದಂತೆ ನೋಡಿಕೊ. ಘಾಸಿಗೊಂಡ ಅವನ ಮನಸ್ಸು ಮತ್ತೆ ಕೆದಕಿದಂತಾಗಿ ನೋವು ತಿನ್ನದಿರಲಿ. ಬದುಕಿನಲ್ಲಿ ಮುಂದೆ ಸಾಗಿದವರು ಹಿಂತಿರುಗಿ ಯಾಕೆ ನೋಡಬೇಕು? ನಾನು ಹಿಂದೆ ಹಾಡು ತ್ತಿದ್ದೆನಲ್ಲ- ''ಜಾಯಿಯೇ ಆಪ್ ಕಹಾಂ ಜಾಯೇಂಗೇ..... ಏ ನಜರ್ ಲೌಟಕೆ ಫಿರ್ ಆಯೇಂಗೇ'' ಎಂದು. ಈಗ ನಾನು ಖಂಡಿತಾ ಹಾಗೆ ಹಾಡಬಾರದು. ಅದು ನ್ಯಾಯವಲ್ಲ. ತೀರ್ಥ, ಈ ಹಾಡು ಹಂಸಾಗೂ ಎಷ್ಟೊಂದು ಇಷ್ಟವಾಗಿತ್ತು ಗೊತ್ತಾ?

ನಮ್ಮ ದುಃಖ, ನಿರಾಸೆ, ಸಂಕಟಗಳನ್ನು ನಾವೇ ತಾಳಿಕೊಳ್ಳಬೇಕಲ್ಲವಾ? ಇದೆಲ್ಲಾ ಹಳೆ ಕತೆ ಇರಲಿ. ವರ್ತಮಾನಕ್ಕೆ ಇಳಿಯೋಣ. ನೀವೆಲ್ಲ ಚೆನ್ನಾಗಿದ್ದೀರಿ ತಾನೆ? ನನಗೆ ನಿಮ್ಮನ್ನೆಲ್ಲ

ನೋಡಬೇಕೆಂದು ಆಸೆಯಾಗುತ್ತೆ. ಬೇಡ. ಕೆಲವು ಆಸೆಗಳು ಅಪ್ರಕಟಿತವಾಗಿದ್ದರೇನೆ ಕ್ಷೇಮ. ಅಪ್ರಕಟಿತ ಆಸೆಗಳು ಚಿರಂತನವಾಗಿ, ನಿರಂತರವಾಗಿ ಮನಸ್ಸಿನಲ್ಲಿರುತ್ತವೆ. ಅದೇ ತಾನೆ ಕೀಟ್ಸ್‌ನ ಫಿಲಾಸಫಿ. ಅಷ್ಟು ಚಿಕ್ಕ ವಯಸ್ಸಿನಲ್ಲೆ ಎಷ್ಟೆಲ್ಲಾ ಅನುಭವಿಸಿದ್ದ ಅವನು. ನಾವು ಕೀಟ್ಸ್‌ನನ್ನು ಎಸ್ಕೇಪಿಸ್ಟ್ ಎನ್ನುತ್ತಿದ್ದೆವು. ಅವನೊಬ್ಬನೇ ಅಲ್ಲ. ನಾವೆಲ್ಲರೂ ಒಂದೊಂದು ರೀತಿಯಲ್ಲಿ ಎಸ್ಕೇಪಿಸ್ಟ್‌ಗಳೆ ಎನ್ನಿಸುತ್ತದೆ.

ಒಟ್ಟಿನಲ್ಲಿ ಎಲ್ಲರೂ ಇದ್ದುದರಲ್ಲೆ ನೆಮ್ಮದಿಯಾಗಿದ್ದರೆ ಸಾಕು. ನರೇಂದ್ರ ತನ್ನ ಶ್ರೀಮತಿಯೊಂದಿಗೆ ನೆಮ್ಮದಿಯಿಂದ ಇದ್ದಾನೆಂದು ತಿಳಿದು ಬಂದರೆ ನನಗೂ ನೆಮ್ಮದಿಯಾಗುತ್ತದೆ. ಇನ್ನೇನು? ''ಯುಗಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ'' ನಿಮ್ಮೆಲ್ಲರಿಗು ನನ್ನ ಶುಭಾಶಯಗಳು.

ಇತಿ ನಿಮ್ಮ ತಂಗಿ
ಸೀತಾ

ಪತ್ರ ಓದಿ ನಿರ್ವಿಣ್ಣನಾದ ತೀರ್ಥ ಕೂತು ಕೂತಲ್ಲೆ ಕಳೆದು ಹೋದ. ಅವನ ದೃಷ್ಟಿ ಕಾಣುತ್ತಿರುವ ಎಲ್ಲ ವಸ್ತುಗಳಾಚೆಗಿನ ಶೂನ್ಯದಲ್ಲಿ ನೆಟ್ಟಿತ್ತು. ಅವನ ಗಂಭೀರ ಮೌನವನ್ನು ಗಮನಿಸಿದ ಭೂಮಿ ಹತ್ತಿರ ಬಂದು ಅವನ ಕೈಯಿಂದ ಪತ್ರವನ್ನು ತೆಗೆದುಕೊಂಡರೂ ಅವನಿಗೆ ಪರಿವೆಯೆ ಇರಲಿಲ್ಲ. ಇಡೀ ದಿನ ನೆನಪಿನಲೆಗಳ ಕಡಲು ಅಲ್ಲೋಲಕಲ್ಲೋಲಗೊಂಡಿತ್ತು.

ರಾತ್ರಿ ಎಷ್ಟೋಹೊತ್ತು ನಿದ್ದೆ ಬರಲಿಲ್ಲ. ''ಅವಳಿಗೊಂದು ಒಳ್ಳೇಕಡೆ ಮದುವೆಯಾದರೆ ಎಲ್ಲ ಸರಿಹೋಗುತ್ತೆ'' ಅಂದಳು ಭೂಮಿ. ಹೌದು ಅವಳಿಗೆ ಒಳ್ಳೆ ಹುಡುಗ ಸಿಗಲಿ ಎಂದು ಒಳಗೇ ಹಾರೈಸಿದ. ನರೇಂದ್ರ ಯಾಕೆ ಅವಳಿಗೆ ಸ್ಪಂದಿಸಲಿಲ್ಲ ಎಂಬ ಪ್ರಶ್ನೆ ಚಿದಂಬರ ರಹಸ್ಯದಂತೆ ಕಾಡಿತು. ಅದೇ ಗುಂಗಿನಲ್ಲಿ ನಿದ್ದೆ ಹತ್ತಿದ್ದಕ್ಕೋ ಏನೊ ಕನಸಿನಲ್ಲಿ ನರೇಂದ್ರ ಬಂದ. ''ನನಗೂ ಅರ್ಥವಾಗುತ್ತಿಲ್ಲ.... ನನ್ನೊಳಗೆ ಪ್ರೀತಿ ಬತ್ತಿ ಹೋಗಿದ್ದಂಥ ಭಯಾನಕ ಭಾವನೆ ಬಂದದ್ದಂತೂ ನಿಜ.... ಇಡೀ ಜೀವಮಾನ ಇಲ್ಲದ ಪ್ರೀತಿಯನ್ನು ಇದೆಯೆಂದು ನಟಿಸುವುದು ಸಾಧ್ಯವೇ ಎಂಬ ನೈತಿಕ ಪ್ರಶ್ನೆ ಕಾಡಿತು...... ನಾವೆಲ್ಲಾ ಪ್ರೀತಿಗೆ ಎರವಾಗುತ್ತಿರುವ ಯಾಂತ್ರಿಕ ಯುಗದ ಬಲಿಪಶುಗಳೇ ಸರಿ....'' ಇನ್ನೂ ಏನೋ ಹೇಳುವುದರಲ್ಲಿದ್ದ, ಅಷ್ಟರಲ್ಲಿ ಕನಸು ಕಡಿದುಹೋಯಿತು. ತೀರ್ಥ ಬೆವೆತುಹೋಗಿದ್ದ. ಭೂಮಿಯ ಕೈ ಅವನ ಎದೆಯ ಮೇಲಿತ್ತು. ಸೃಷ್ಟಿ ಅವರಿಬ್ಬರ ನಡುವೆ ಮುದುರಿ ಬೆಚ್ಚಗೆ ಮಲಗಿದ್ದಳು. ಅವನ ಮನಃಪಟಲದಲ್ಲಿ ಪದ್ಮ, ಶಶಿ, ಸೀತಾ, ಹಂಸಾ ಎಲ್ಲರೂ ನೆರೆದರು. ಜೀವಮಾನಕ್ಕಂಟಿದ ಭೂಮಿ, ಹೊಕ್ಕುಳ ಕುಡಿ ಸೃಷ್ಟಿ, ಹಡೆದ ತಾಯಿ ತುಂಗಾಬಾಯಿ ಕೂಡ ಅಲ್ಲಿ ಕಾಣಸಿಕೊಂಡರು. ತೀರ್ಥನ ಜೀವ ಒಳಗೇ ಮಿಡಿದು ನುಡಿಯಿತು: ''ನೀವಲ್ಲ ಕಣ್ರೆ ಮಣ್ಣು, ನಾವು- ಪುರುಷಮೃಗಗಳು.''

ಮಂಗಳ

ಇಷ್ಟೆಲ್ಲ ನಡೆದು ಕಾಲು ಶತಮಾನವೆ ಕಳೆದಿದೆ. ಹೊನ್ನಾಳಿಯ ಸೇತುವೆ ಕಣ್ಣುಗಳಲ್ಲಿ ಸಾಕಷ್ಟು ನೆನಪಿನ ನೀರು ಹರಿದುಹೋಗಿದೆ. ಇಲ್ಲಿನ ಬಹುತೇಕ ವ್ಯಕ್ತಿಗಳು ಅರ್ಧ ಆಯುಷ್ಯ ಕಳೆದಿದ್ದಾರೆ. ತೀರ್ಥ-ಭೂಮಿ ಹೊಳೆದಂಡೆ ಹೊಲದಲ್ಲಿ ನೆಲೆನಿಂತಿದ್ದಾರೆ. ಸಹಜಕೃಷಿ ಸಾಧನೆ ಮಾಡುತ್ತ ಹಣ್ಣಿನ ಗಿಡಗಳು, ಔಷಧಿ ಸಸ್ಯಗಳ ಆರೈಕೆ ಮಾಡುತ್ತಿದ್ದಾರೆ.

ಭೂಮಿ ಹುಣ್ಣಿಮೆಯ ಮುಂಜಾನೆ ಅವರ ತೋಟಕ್ಕೆ ಹೋದೆ. ಬೆಳೆಯುತ್ತಿದ್ದ ಪೈರಿನ ನಡುವೆಯೆ ಮುಂದಿನ ಬೆಳೆಯ ಬೀಜಗಳನ್ನು ಉಗ್ಗುತ್ತ ನಿಂತಿದ್ದ ತೀರ್ಥ. ಅದೆ ಅವನ ಬಿತ್ತನೆ ರೀತಿ. ಎಳೆಬಿಸಿಲಿನಲ್ಲಿ ಲಾವಂಚದ ಪೊದೆಯ ಗುಣಿಸೋಸುತ್ತಿದ್ದಳು ಭೂಮಿ.

''ಹೊಸ ಪತ್ರಿಕೆ ಮಾಡುತ್ತಿದ್ದೇನೆ. ನಿನ್ನ ಕತೆ ಬೇಕೆ ಬೇಕು'' ಅಂದೆ. ತೀರ್ಥ ದೊಡ್ಡದಾಗಿ ನಕ್ಕು ''ಕತೆಗಳೆಲ್ಲ ಕೈಬಿಟ್ಟು ಹೋಗಿದ್ದಾವೆ'' ಎಂದ. ತಟ್ಟನೆ ಗಂಭೀರನಾಗಿ ಹಸಿರು ಗುಡಿಸಲ ಒಳಹೋಗಿ ಒಂದು ಮಾಸಲಾದ ದೊಡ್ಡ ಗಾತ್ರದ ಲಕ್ಕೋಟೆ ತಂದು ನನ್ನ ಕೈಗಿಟ್ಟ. ಅಷ್ಟರಲ್ಲಿ ಕಾರು, ಜೀಪು ಬಂದದ್ದು ನೋಡಿ ''ಇಲ್ಲಿ ಏನೂ ತೆಗೆಯಬೇಡ. ಮನೆಗೆ ಹೋಗಿ ನೋಡು'' ಅಂದುಬಿಟ್ಟ. ನಾನು ಗಕ್ಕನೆ ಅದನ್ನು ಬ್ಯಾಗಿಗೆ ಸೇರಿಸಿದೆ. ಇಬ್ಬರೂ ಕಾರಿನ ಕಡೆ ನಡೆದೆವು.

ಸೃಷ್ಟಿ, ಅವಳ ಗಂಡ ಅಲ್ಲಾರಖಾ, ಅವಳ ತಂಗಿ ಸಹನಾ, ವಿಕ್ರಂ-ಪದ್ಮಾ, ಶಿವಪ್ಪ-ಶಶಿ, ನರೇಂದ್ರ, ಅವನ ಹೆಂಡತಿ ಭಾಗ್ಯ ಎಲ್ಲ ಒಬ್ಬೊಬ್ಬರೆ ಇಳಿದದ್ದು ನೋಡಿ 'ಎಲಾ ಇವನಾ' ಎಂದು ಅಚ್ಚರಿಗೊಂಡ. ಹಳೆ ಸಹಪಾಠಿಗಳನ್ನು ಕಂಡು ಹೃದಯದಲ್ಲಿ ಹೊಸ ಉತ್ಸಾಹ ಉಕ್ಕಿತು. ನಗುನಗುತ್ತ ನೆನಪಿನ ಹೊಳೆಯಲ್ಲಿ ಈಸತೊಡಗಿದೆವು.

ತೆಂಗಿನ ಮರಗಳಡಿ ಹದವಾಗಿ ತೊಯ್ದು ಬಿಸಿಲಿಗೆ ಮಿರುಗುತ್ತಿದ್ದ ಸಾಫು ಕೆಂಪು ಮಣ್ಣು ನೋಡಿದ್ದೆ ವಿಕ್ರಂ ಪುಳಕಿತನಾದ. ''ಈ ಮಣ್ಣು ಒಳ್ಳೆ ಮೈಸೂರ್‌ಪಾಕ್ ಇದ್ದಂಗಿದೆಯಲ್ರೋ'' ಎನ್ನುತ್ತ ಬೊಗಸೆ ತುಂಬ ಮಣ್ಣನ್ನು ಎತ್ತಿಕೊಂಡು ಹಾಗೇ ತಿಂದುಬಿಡುವಂತೆ ನೋಡಿದ. ''ಬರಿ ಮಣ್ಣಲ್ಲಣ್ಣಾ ಇದು. ನಮ್ಮೆಲ್ಲರ ಬದುಕಿನ ಕಣ್ಣು'' ಎಂದು ಮಣ್ಣನ್ನು ಕಣ್ಣಿಗೆ ಒತ್ತಿಕೊಂಡು ಅದರ ತಣಪಿಗೆ ''ಆಹಾ'' ಎಂದು ಮುಲುಕಿದ ಅವನ ನಿಸರ್ಗಾನುಭಾವ ಸಾಂಕ್ರಾಮಿಕವಾಗಿ ಎಲ್ಲರನ್ನೂ ಆವರಿಸಿತು. ಹಕ್ಕಿಗಳು ಹೂಂಗುಟ್ಟಿದವು. ಬದುಗಳ ಮೇಲೆ ಸಾಲಾಗಿ ಬೆಳೆಸಿದ ಹೊನ್ನಾವರಿಕೆ ಗಿಡಗಳಲ್ಲಿ ಹಳದಿ ಹೂಗಳು ಮುಗುಳುನಕ್ಕವು.


ಶಿವಪ್ಪ ಶಶಿಗೆ ಹೊನ್ನಾವರಿಕೆಗಳನ್ನು ಸವರಿ ತೋರಿಸುತ್ತ, ''ನೋಡು. ಇವಕ್ಕೆ ಕ್ಯಾಸಿಯಾ ಆರಿಕ್ಯುಲೇಟಾ ಅನ್ನುತ್ತಾರೆ. ಇವನ್ನ ಬೆಳೆಸಿಬಿಟ್ಟರೆ ಪಾರ್ಥೇನಿಯಂ ಕಳೆ ನಿರ್ನಾಮವಾಗುತ್ತೆ'' ಅಂದ. ಭೂಮಿ ತಾನು ಬೆಳೆಸುತ್ತಿರುವ ಆರೋಮ್ಯಾಟಿಕ್ ಪ್ಲಾಂಟ್‌ಗಳನ್ನ ಪರಿಚಯ ಮಾಡಿಕೊಟ್ಟಳು. ಸೃಷ್ಟಿ ಕಿತ್ತಿಕೊಟ್ಟ ಬ್ರಾಹ್ಮಿ ಎಲೆ ತಿಂದ ಅಲ್ಲಾರಖಾ ಅದರ ರುಚಿ ಮೆಚ್ಚಿ ಕಣ್ಣರಳಿಸಿದ.

ಹೊಳೆಯಲ್ಲಿ ನೀರಾಟ, ತೋಟ ಸುತ್ತಾಟ, ಸರಳವಾದ ಊಟ, ಉತ್ಸಾಹದ ಹರಟೆಗಳಲ್ಲಿ ದಿನ ಕಳೆದದ್ದೆ ಗೊತ್ತಾಗಲಿಲ್ಲ. ಲಕ್ಕೋಟೆಯ ರಹಸ್ಯ ನನ್ನನ್ನು ಕಾಡುತ್ತಲೆ ಇತ್ತು. ಗೆಳೆಯರ ಕೈಕುಲುಕಿ ಹೊರಟೆ. ಹೆಂಗಸರೆಲ್ಲ ಸಪೋಟ ಮರಗಳ ಕಡೆಗೆ ಹೋಗಿದ್ದರು. ಅವರಿಗೆ ಹೇಳಿ ಹೊರಡೋಣವೆಂದು ಅತ್ತ ಕಾಲುಹಾಕಿದೆ. ನಾನು ಹಿಂದಿನಿಂದ ಬರುತ್ತಿದ್ದುದನ್ನು ಗಮನಿಸದೆ ಅವರದ್ದೆ ಆದ ಸಲ್ಲಾಪದಲ್ಲಿದ್ದರು. ನಾನು ಮೆತ್ತಗೆ ಸದ್ದು ಮಾಡದೆ ನಡೆಯುತ್ತ ಅವರ ಮಾತುಗಳನ್ನು ಕದ್ದು ಕೇಳಿಸಿಕೊಂಡೆ.

ಸೃಷ್ಟಿ ಕಿಲಕಿಲ ನಗುತ್ತ ''ಪ್ರೀತಿ ಅಂದ್ರೆ ಒಂಥರಾ ವಿದ್ಯುತ್. ಅದರ ಸ್ವರೂಪ ಸೂಕ್ಷ್ಮ. ಅದರ ಸ್ವಭಾವ ನಿಗೂಢ. ಪ್ರಭಾವ ಮಾತ್ರ ಅದ್ಭುತ'' ಎಂದಾಗ ಎಲ್ಲರೂ ನಕ್ಕರು. ಭಾಗ್ಯ ''ಕೆಲವರು ಪ್ರೀತಿಸಿ ಒಂದಾದರೆ ಇನ್ನು ಕೆಲವರು ಒಂದಾದ ಮೇಲೆ ಪ್ರೀತಿಸ್ತಾರೆ'' ಅಂದಳು. ''ಹೌದೌದು'' ಅಂದರು. ''ಒಂದಾಗದೆ ಗತೀನೆ ಇಲ್ಲ. ಉಭಯವಳಿದರೆ ಮಾತ್ರ ಅಭಯ ನೀಡುತ್ತೆ ಪ್ರೀತಿ'' ಅಂದಳು ಶಶಿ. ''ಹೌದು. ಪ್ರತ್ಯೇಕತಾವಾದಿಗಳಿಗೆ ಪ್ರೀತಿ ದಕ್ಕೋದಿಲ್ಲ'' ಅಂದಳು ಪದ್ಮ. ಮತ್ತೆಲ್ಲರು ನಕ್ಕರು. ಸಂಜೆಯ ಬಂಗಾರಬಿಸಿಲಿಗೆ ಅವರ ಮುಖಗಳು ಹೊಳೆ

ಯುತ್ತಿದ್ದವು. ಭೂಮಿ ಶಾಂತವಾಗಿ ''ಪ್ರೀತಿ ಉಕ್ಕೋವಾಗ ಎಷ್ಟೇ ಸ್ವಚ್ಛಂದವಾಗಿರಲಿ, ಅದರ ನಿಭಾವಣೆಗೆ ಕೆಲವು ಕಟ್ಟುಪಾಡುಗಳು ಬೇಕೇ ಬೇಕು'' ಅಂದು ಮಗಳ ಕಡೆ ನೋಡಿದಳು. ಸಹನಾ ಅಕ್ಕನನ್ನು ಹಿತವಾಗಿ ತಿವಿದಳು. ಮತ್ತೆ ಅಮ್ಮನ ಕಡೆಗೆ ತಿರುಗಿ ''ಅಲ್ಲಮ್ಮಾ, ಸಹಜವಾಗಿ ಕೈಗೂಡಿದ ಪ್ರೀತಿಗೆ ಉಘೇ ಅನ್ನೋಣ. ಆದರೆ ಕೈಗೂಡದ ಪ್ರೀತಿ ಆತ್ಮಹಿಂಸೆಗೆ, ಪರಹಿಂಸೆಗೆ ಕಾರಣವಾಗದೆ ಇರಲಿ ಅಂತ ಹಾರೈಸೋಣ'' ಅಂದಳು. ಈಗ ಅಕ್ಕ ತಂಗಿಯನ್ನು ಪ್ರೀತಿಯಿಂದ ತಿವಿದಳು. ಅಷ್ಟರಲ್ಲಿ ಸೆರಗು ಸರಿಪಡಿಸಿಕೊಳ್ಳುತ್ತ ಹಿಂತಿರುಗಿದ ಸೃಷ್ಟಿಯ ಕಣ್ಣಿಗೆ ನಾನು ಬಿದ್ದುಬಿಟ್ಟೆ. ''ಮಾಮಾ ಕದ್ದು ಕೇಳಿಸ್ಕೋತಾ ಇದೀರಾ?'' ಅಂದಳು. ನಾನು ಮೆಟ್ಟಬಿದ್ದೆ. ಎಲ್ಲರೂ ಹಿಂತಿರುಗಿ ಮೂಕರಾಗಿ ನಿಂತರು. ನಾನು ಅವಸರವಸರವಾಗಿ ವಿದಾಯ ಹೇಳಿ ಜಾರಿಕೊಂಡುಬಿಟ್ಟೆ.

ಮನೆಗೆ ಬಂದವನೆ ಲಕ್ಕೋಟೆಯ ನಿಗೂಢ ನಿಧಿಯನ್ನು ಹೊರಗೆ ತೆಗೆದೆ. ಲಪ್ಪಾದ ಹಾಳೆಗಳ 'ನೆನಪುಗಳೇ ಹಾಗೆ' ಕತೆ, ಸೀತಾಳ ಮಾಸಲಾದ ಸುದೀರ್ಘ ಪತ್ರ, ಆಟೋಗ್ರಾಫ್ ಹಾಗೂ ಆ ವರ್ಷದ ತೀರ್ಥನ ಡೈರಿ. ಕತೆಯಲ್ಲಿ ಅವನು ಸೇರಿಸಿದ ಸಾಲುಗಳು, ಮಾತುಗಳು ಆಟೋಗ್ರಾಫಿನಲ್ಲಿದ್ದವು. ಹಂಸಾಳ ಆ ಚಿತ್ರ, ಸೀತಾಳ ಆ ಪತ್ರ ಎಲ್ಲ ಅಷ್ಟು ಹಳೆಯದಾದರೂ ಹೃದಯದಲ್ಲಿ ಹೊಚ್ಚಹೊಸ ಬೆಚ್ಚಗಿನ ಗೌರವಭಾವವನ್ನು ಹುಟ್ಟುಹಾಕಿದವು. ಎಲ್ಲ ಪಾತ್ರಗಳೂ ಸಾಮಾನ್ಯತೆಯಿಂದ ಅಸಾಮಾನ್ಯತೆಯ ಬೆಟ್ಟ ಹತ್ತಿನಿಂತು ನಗುತ್ತಿರುವಂತೆ ಭಾಸವಾಯಿತು. ಇಂಥವರೆಲ್ಲರ ಸಹವಾಸ ಸಿಕ್ಕಿದ ನಾನೆ ಪುಣ್ಯವಂತ ಎನಿಸಿತು. ಅವುಗಳನ್ನೆಲ್ಲ ನನಗೆ ತಿಳಿದಂತೆ ಜೋಡಿಸಿಟ್ಟಾಗ ನೀವು ಓದುತ್ತಿರುವ ಈ ಕತೆಯಾಯಿತು. ನಿಮಗೆ ಇಷ್ಟವಾದರೆ ಅಷ್ಟೆ ಸಾಕು.



ಸೂರ್ಯನೆಡೆ ಹಾರುತ್ತಿರುವ ಹಕ್ಕಿ, ಕೈಚಾಚಿ ನೆಗೆಯುತ್ತಿರುವ ಮನುಷ್ಯ, ತಲ್ಲೀನ ನರ್ತಕಿ, ತೆರೆದಿಟ್ಟ ಪುಸ್ತಕ, ಗುಡ್ಡದಾಚೆ ಉದಯಿಸುತ್ತಿರುವ ಸೂರ್ಯ. ಇವೆಲ್ಲವೂ ಆಗಿ ತೋರುವ ನಮ್ಮ 'ಚಿಹ್ನೆ'ಯ ಮೂಲ ಆಶಯ - ನೆಗೆತ! (Flight).
ಇತಿ ಮಿತಿಗಳಿದ್ದೂ ಅವುಗಳನ್ನು ಮೀರುವ, ಹೊಸ ಕಿರಣಗಳೆಡೆ, ವಸಂತಗಳೆಡೆ ಟೊಂಗೆ ಚಾಚಿ ಪಲ್ಲವಿಸುವ ಮನುಷ್ಯನ ಚೇತನ. ಮಾನವೀಯ ಸ್ಫೂರ್ತಿ.



ತಮ್ಮ ಸರಳ ಕುಂಚದಲ್ಲಿ ಇದನ್ನು ಹಿಡಿದುಕೊಟ್ಟವರು ಬೆಂಗಳೂರಿನಲ್ಲಿ ಕಲೆಯ ಹೆಜ್ಜೆಗಳನೂರುತ್ತಿರುವ ಕಾಸರಗೋಡಿನ ತರುಣ ಪ್ರವೀಣ್ ಜಿ.ಎಸ್. ಹಳ್ಳಿಯ, ಅದರಲ್ಲೂ ಮುಖ್ಯವಾಗಿ ಅನಕ್ಷರಸ್ಥ ನವಸಾಕ್ಷರ ಜನರಿಗಾಗಿ ಸುಲಭವಾಗಿ ಅರ್ಥವಾಗುವಂತೆ ಚಿತ್ರಬಿಡಿಸುವುದರಲ್ಲಿ, ಸಂಬಂಧಿತ ಸಾಹಿತ್ಯಕ್ಕೆ ವಿನ್ಯಾಸ ಮಾಡುವುದರಲ್ಲಿ ಪ್ರವೀಣರಿಗೆ ವಿಶೇಷ ಆಸಕ್ತಿ. ಸಲ್ವಡಾರ್ ಡಾಲಿ ಇಷ್ಟದ ಕಲಾವಿದ.



ಭಾವನಾ ಶೀರ್ಷಿಕೆಯನ್ನು ತಮ್ಮ ಅಪ್ಪಟ ಶೈಲಿಯಲ್ಲಿ ಬರೆದುಕೊಟ್ಟವರು, ಕನ್ನಡ ಪತ್ರಿಕೋದ್ಯಮದ ಆದ್ಯ ಕಲಾವಿದ ಎಸ್. ರಮೇಶ್. ಇವರ ಕುರಿತ ವಿಶೇಷ ಲೇಖ ಈ ಸಂಚಿಕೆಯ 132ನೆಯ ಪುಟದಲ್ಲಿದೆ.

ಕತೆಗಳಿಗಾಗಿ ವಿನಂತಿ

ಒಳ್ಳೆಯ ಕಥಾಸಾಹಿತ್ಯಕ್ಕೆಂದೇ ಮೀಸಲಾದ ಸುಮಧುರ ಮಾಸಿಕ 'ಭಾವನಾ'ಕ್ಕೆ ಕತೆಗಳನ್ನು ಆಹ್ವಾನಿಸುತ್ತಿದ್ದೇವೆ. ನಿಮ್ಮ ಶೈಲಿ ಸಹಜವಾಗಿರಲಿ. ಬರೆದವರಿಗೇ ಹಿತ ನೀಡದ ಕತೆಯಿಂದ ಯಾರಿಗೂ ಹಿತವಿಲ್ಲ. ಪ್ರಾಮಾಣಿಕವಾಗಿ ನಿಮಗೆ ಸಮಾಧಾನ ತರದ ಕತೆಗಳು, ಪಟ್ಟುಹಿಡಿದು, ಕ್ಲಿಷ್ಟವಾಗಿಸಿ ಬರೆದ ಕತೆಗಳು ದಯವಿಟ್ಟು ಬೇಡ. ಅನ್ಯಭಾಷೆಯಿಂದ ಅನುವಾದಿತ, ಸಂವೇದಿತ ಕತೆಗಳಿಗೂ ಸ್ವಾಗತ. ಆದರೆ ಅವು ಕನ್ನಡದಲ್ಲಿ ಚೆನ್ನಾಗಿ ಮೂಡಿಬರುವುದು ಮುಖ್ಯ. ಹಾಳೆಯ ಒಂದೇ ಮಗ್ಗುಲಲ್ಲಿ ಸ್ಫುಟವಾದ ಅಕ್ಷರಗಳಲ್ಲಿ ಬರೆದು /ಬೆರಳಚ್ಚು ಮಾಡಿಸಿ ಕಳಿಸಿಕೊಡಿ. ಸ್ವೀಕೃತ ಕತೆಗಳ ಕುರಿತು ತಿಳಿಸಲಾಗುವುದು.



ನಾ ಪ್ರೀತಿಸಿದ ಜೀವದಾಗ ಪ್ರೀತಿಗೆ ಇಷ್ಟು ಬರಾನಾ?

ಪ್ರಿಯ ಸಂಜು,

ನನಗ ಆಕೀನ ಬಗ್ಗೆ ಹಿಡದ ಹುಚ್ಚು ಹೇಳಿಕೊಳ್ಳೂಣಂತ ಇದನ್ನ ಬರಿಯಾಕ ಹತ್ತೀನಿ. 'ಜನುಮದ ಜೋಡಿ'ಯೊಳಗ ಕನಕಗ ಹಿಡದ ಕೃಷ್ಣನ ಹುಚ್ಚು ನಿಜ್ಜಳಾಗೋದು, ಅವರ ಊರಿನ ಮುಂದಿನ ಜಾತ್ರಿಯೊಳಗ... ಕೃಷ್ಣ ಒಮ್ಮೆಲೆ ಪ್ರತ್ಯಕ್ಷ ಆಗಿ ಕನಕನ್ನ ಎತ್ತಿನಗಾಡಿ ಬಾಯೊಳಗಿಂದ ಉಳಿಸಿಕೊಂಡ ಮ್ಯಾಲೆ; ನೋಡಿದ್ಯಲ್ಲ. ಅಂದ್ರ ಯಾರಿಂದ ಹುಚ್ಚು ಹಿಡಿದಿತ್ತೋ, ಅದು ನಿಜ್ಜಳಾಗಾಕೂ ಅವರು ಬೇಕಾತು. ನಾನು ಪನ್ನಾಲಾಲ ಪಟೇಲರ ಮೂಲ ಗುಜರಾತಿ ಕಾದಂಬರಿ 'ಮಳೆಲಾ ಜೀವ'ದ ಕೃಷ್ಣಕುಮಾರ ಕಲ್ಲೂರ ಮಾಡಿದ ಕನ್ನಡ ಭಾವಾನುವಾದಾನೂ ಓದೀನಿ. ಅಲ್ಲೀ ಹಂಗs ಐತಿ.


ಆಕೀ ತನ್ನ ನಿರ್ಣಯ ಏನs ಹೇಳಲಿ, ಆದ್ರ ನನ್ನ ಪ್ರೀತೀ ಹುಚ್ಚು ಕೇಳಂದ್ರ, ಕೇಳಲಿಲ್ಲ. ಅದನ್ನ ಹೇಳದ ಹೆಂಗಿರಲಿ? ಆಕೀ ತಾನು ಹೇಳೂದನ್ನ... ಇಷ್ಟೆಲ್ಲಾ ಕೇಳಿ ಹೇಳಲಿ. ನಾನು ಪ್ರೀತಿಸಿದ ಹೃದಯದಾಗ ಇಷ್ಟೂ ಪ್ರೀತಿ ಇಲ್ಲೇನ? ಇಲ್ಲ , ನನ್ನ ಹುಡುಗಿ ಹಾಂತಾಕಿ ಅಲ್ಲ. ಆಕೀ ಹತ್ರ ಪ್ರೀತೀ ಸೆಲೀನs ಐತಿ. ಪ್ರೀತೀಲೇ ಹೇಳೇ ಹೇಳ್ತಾಳ ಅನ್ನೋ ನಂಬಿಕೀ ನಾ ಬಿಟ್ಟಿಲ್ಲ; ಬಿಡೂದಿಲ್ಲ. ಪ್ರೀತೀಲೇ ಏನs ಹೇಳಿದ್ರೂ ಕೇಳ್ತೀನಿ.

ಮತ್ತ, ನನ್ನ ಹೃದಯಾನ ಕಳಕೊಂಡಲ್ಲೇ ಕಣ್ಣಾಗ ಕಣ್ಣಿಟ್ಟು ಹುಡಕತೀನಿ. ಪೂರಾ ಆಯುಷ್ಯನ ಹೋಗವಲ್ಲದಾಕ. ಅದಲ್ಲದ ನನಗ ಬ್ಯಾರೆ ದಾರಿ ಏನೈತಿ? ಕಳಕೊಂಡಲ್ಲ್ಯ ಬಿಟ್ಟು ಬ್ಯಾರೆ ಕಡೆ ಹೆಂಗ

ಹುಡುಕ್ಲಿ? ಹುಡುಕೀದ್ರ, ಸಿಕ್ಕೀತ? ನೀನಽ ಹೇಳು. ನಾನು ಅಕೀ ಸಲುವಾಗಿ ಯಾವಾಗ್ಲೂ ಕಾಯ್ತಿರ್ತೀನಿ. ಅಕೀನ ಯಾವದಽ ಕಂಡೀಶನ್‌ಗೂ ರೆಡಿ ಅದೀನಿ. ಆರೋಗ್ಯ ಸುಧಾರಿಸಿಕೊಂತೀನಿ, ಪರ್ಸನಾಲಿಟಿ ಬೆಳಸಕೊಂತೀನಿ. ನೌಕರಿ ಸಿಕ್ಕ ಮ್ಯಾಲ ಮಾತ್ರ ಮದುವಿ. ಅದಕ್ಕ 'ಹೂಂ' ಅಂದು ನನಗೊಂದಿಷ್ಟು ಟೈಂ ಕೊಡು ಅನ್ನು.

ದಿನದ ಇಪ್ಪತ್ನಾಲ್ಕ ತಾಸು, ಪ್ರತಿ ನಿಮಿಷ, ಪ್ರತಿಕ್ಷಣ ನನಗ ಅಕೀದ ಧ್ಯಾನ. ನನ್ನ ಬದುಕು, ಕನಸು, ಕನವರಿಕಿ ಎಲ್ಲಾ ಅಕೀನ ಆಗ್ಯಾಳ. ಅಕೀನ ಪ್ರೀತೀ ಸಾಕ್ಷಾತ್ಕಾರ ಮಾಡಿಕೊಳ್ಳೂದಕ್ಕ ಧ್ಯಾನ, ಮೌನ, ಗೀತಾಪಠಣ ಮಾಡಕೊಂಡವ ನಾನ, ಖರೆ. ಆದ್ರ, ಮನುಷ್ಯ ಸಂಬಂಧದೊಳಗ ಇದಕ್ಕ, ಅಕೀ ಎಷ್ಟೂ ಕಾರಣ ಇಲ್ಲೇನ? ಅಕೀ ಸಲುವಾಗಿ ಹೋದ ವರ್ಷ ಅಗಷ್ಟದಿಂದಽನ Law practice ಬಿಟ್ಟೆ; ಅಕೀಗೆ

ಕಾಗದದ ದೋಣಿ



ಗೆಳೆಯನೊಬ್ಬ ಎಷ್ಟೋ ವರ್ಷಗಳ ಹಿಂದೆ ಬರೀ ಹತ್ತು ರೂಪಾಯಿಯ ವಿಷಯದಲ್ಲಿ ತೀರ ಸಣ್ಣದಾಗಿ ನಡೆದುಕೊಂಡ ಅಂತನಿಸಿತು ನಿಮಗೆ. ಮನಸ್ಸು ಕಹಿಯಾಯಿತು. ಅವನನ್ನು ಉಪೇಕ್ಷಿಸಿದಿರಿ. ನಂತರ ಎಷ್ಟೆಲ್ಲಾ ವಸಂತಗಳು ಬಂದು ಹೋದವು. ನೀವೀಗ ಅನುಭವದಿಂದ ಮಾಗಿರುವವರು. ಅವನ ನೆನಪು ಆಗಾಗ ಕಾಡುತ್ತದೆ. ಅವನ ಅಂದಿನ ರೀತಿ ಸರಿಯಿತ್ತು ಎಂದು ಹಠಾತ್ತನೆ ಹೊಳೆಯುತ್ತದೆ. ಅವನ ಕುರಿತು ಮಮಕಾರ ಉಕ್ಕಿ ಮನಬಿಚ್ಚಿ ಮಾತಾಡಬೇಕು, ಆದ ತಪ್ಪು ಸರಿಪಡಿಸಬೇಕು ಎಂದು ತೀವ್ರವಾಗಿ ಅನ್ನಿಸಲಾರಂಭಿಸುತ್ತದೆ. ಆದರೆ ಅವನೆಲ್ಲಿದ್ದಾನೋ ಈಗ?... ಅಥವಾ ಇದ್ದಾನೋ, ಇಲ್ಲವೋ?... ನಿಮ್ಮ ಮನದಳಲು ತೊಡೆದುಕೊಳ್ಳಲು ಅವನಿಗೊಂದು 'ಬಹಿರಂಗ ಪತ್ರ' ಬರೆಯಿರಿ! ನಿಮ್ಮ ಮರುಕಳಿಸಿದ ಅಕ್ಕರೆಯನ್ನು 'ಕಾಗದದ ದೋಣಿ'ಯಲ್ಲಿ ತೇಲಿಬಿಡಿ!

ಗೆಳೆಯನೊಂದಿಗಷ್ಟೇ ಅಲ್ಲ ಹೆಂಡತಿ, ಗೆಳತಿ, ಅಕ್ಕ, ತಂಗಿ, ಸಹೋದರ, ಸಹಪ್ರವಾಸಿ, ಉಪಾಧ್ಯಾಯರು, ಹಿತಶತ್ರುಗಳು, ಸಹಾಯಕರು, ವರಿಷ್ಠರು, ಹೆಸರೂ ಕೂಡ ಪತ್ತೆಯಾಗದೆ ಹೋದ 'ಅನಾಮಿಕ' ಆಪ್ತರು. ಈ ಎಲ್ಲರೊಂದಿಗೆ ನೀವು ಆಡದೇ ಉಳಿದ ಮಾತುಗಳು ಅದಿನ್ನೆಷ್ಟೋ?...

ತ್ವರೆಮಾಡಿ, ಪೆನ್ನು ಕಾಗದ ತೆಗೆದುಕೊಳ್ಳಿ. 'ಕಾಗದದ ದೋಣಿ' ತೇಲಿಬಿಡಿ. ಯಾರನ್ನೂ ನೋಯಿಸದ ನಿಮ್ಮ ಈ ಖಾಸಗಿ ದೋಣಿ ಎಷ್ಟೊಂದು ಸಮಾನಸಂವೇದಿಗಳ ಮನದ ತೀರವನ್ನು ಮುಟ್ಟಬಹುದಲ್ಲವೇ? ಆ ರೋಮಾಂಚನ ಅನುಭವಿಸಿ. ■

ಅದು ಇಷ್ಟ ಆಗಂಗಿಲ್ಲಂತ. ಅದಕೂ ಮುಂಚೆ ಎರಡು ಮೂರು ತಿಂಗಳ 'ಹೆಸರಿಗೆ' ಕೋರ್ಟಿಗೆ ಹೋದೆ. ಎಂ.ಕಾಂ. ಆಗಿಂದ ಆರು ವರ್ಷ ಆದ ಮ್ಯಾಲೆ Commerce ಅಷ್ಟು ದಿವಸ ಏನೂ ಓದದ ಇದ್ರೂ, ಬರೇ ಇಪ್ಪತ್ತು ದಿನದೊಳಗ ಗಟ್ಟಿ ಕೂತು ಓದಿ NET ಪಾಸಾದೆ. ಅದು ಎಷ್ಟು ಕಠಿಣ ಪರೀಕ್ಷಾ ಅಂತ ಆಕೀಗೂ ಗೊತ್ತೈತಿ. ಇದು ಸಾಧ್ಯ ಆದದ್ದೂ ಆಕೀ ಪ್ರೇರಣೆಯಿಂದನ. ಇಲ್ಲಂದ್ರ, ನನಗ ಪಾಸಾಗೂ ಆಸಕ್ತಿ, ನಂಬಿಕೀನ ಇದ್ದಿಲ್ಲ. ಅವತ್ತಿನಿಂದ, ಆಕೀನ ಆರಾಧಿಸ್ತ ಅದೀನಿ. ಆಕೀಗೆ ಇಲ್ಲಿಂದ ಫೋನ ಮಾಡಿದ್ರೂ, ಸ್ವಚ್ಛ ಅರಿವೆ ಹಾಕ್ಕೊಂಡು, ಚಪ್ಪಲ್ ಪಾಲಿಶ್ ಮಾಡಕೊಂಡು ಹೊಕ್ಕಿದ್ದೆ. ಇದನ್ನೆಲ್ಲ ಯಾರ ಎದುರಿಗೆ ಹೇಳಿಕೊಳ್ಳಲಿ?

ನನ್ನಂತ ಹಿಂದುಳಿದ ಜಾತಿಯಂವಗ, ಅಕ್ಷರ ಸಂಸ್ಕಾರದ ಮ್ಯಾಲೆ ಮುಂದ ಬಂದಂವಗ, ಆಕೀ ಹೆಮ್ಮೇ ಹೆಂಡತಿ. ನನ್ನ ಆತ್ಮವಿಶ್ವಾಸ, ಬದುಕಿನ ಕನಸು ಎರಡೂ ನಿಜಾ ಮಾಡಾಕಿ. 'ಜೇ' ನನ್ನ ಗೆಳತಿ, ಬಾಳಸಂಗಾತಿ ಅಷ್ಟೇ ಅಲ್ಲ ; ನನ್ನ ಎಲ್ಲಾ ಮನುಷ್ಯ ಸಂಬಂಧದೊಳಗೂ ಆಕೀನ ಅದಾಳ. ಆಕೀ ನನ್ನ ದೈವಾನೂ ಹೌದು.

ಹದಿನೆಂಟು ತಿಂಗಳದಿಂದ ಒಂದೂ ಒಂದು ಪ್ರೀತೀ ಕಿರುನೋಟಕ್ಕ ಕಾದು ಕುಂತೀನಿ. ನಾನು ಅದಕ್ಕೂ ಅಯೋಗ್ಯನಾ? ಈ ಜಗತ್ತಿನ್ಯಾಗ ಅದೂ, ನಾ ಪ್ರೀತಿಸಿದ ಜೀವದಾಗ ಪ್ರೀತಿಗೆ ಇಷ್ಟು ಬರಾನಾ?

ಆಕೀ ಕನಿಷ್ಠ, ನನ್ನನ್ನ ಕೆಟ್ಟ ಪ್ರೇಮಿ ಅಂತ ಕರೀಲಿ. ಅದು ಬಿಟ್ಟು ನನ್ನನ್ನ, ಅಪ್ಪನ ಹಿಂದ ಬಂದು, ಆಕೀನ ಕುಂದ್ರಿಸಿ ಕನ್ಯಾ ನೋಡಾಕ ಬರೋರ ಜೊತೆ ಹೋಲಿಸಬ್ಯಾಡ ಅನ್ನು. ಹಂಗ ಅಪ್ಪನ ಹಿಂದ ಬಂದು ನಾನೂ ನೋಡಿ 'ಹೂಂ' ಅಂದಾಗ ಆಕೀ ಹಿಂಗೆಲ್ಲ ಮಾಡಿದ್ರ, ನಾನೂ 'ನೀ ಅಲ್ಲ, ನಿನ್ನ... ಸಿಗತಾಳ ಹೋಗ' ಅಂತಿದ್ದೆ. ನನಗೂ ಆತ್ಮಗೌರವ ಐತಿ. ಆದ್ರ, ನನ್ನ ಸ್ವಾಭಿಮಾನ, ಬುದ್ಧಿ, ರ್‍ಯಾಂಕು, ವ್ಯಕ್ತಿತ್ವ... ಇಡೀ ನನ್ನ ಮೂವತ್ತು ವರ್ಷದ ಬದುಕು ಆಕೀನ ಕಾಲ ಕೆಳಗ ಹಾಕೀನಿ. ಯಾಕಂದ್ರ, ನಾ ಆಕೀನ ಪ್ರೀತಿಸ್ತೀನಿ. ಇಲ್ಲಂದ್ರ, ನನ್ನಂಥಂವಗ (ಯಾರಿಗಾದ್ರೂ) ಇಷ್ಟೆಲ್ಲ , ಹಿಂಗೆಲ್ಲ ಮಾಡೂದಕ್ಕ ಸಾಧ್ಯ ಇತ್ತೇನ?

ಆಕೀ ಪ್ರೀತಿಯಿಂದ, 'ಹೌದು ಮನುಷ್ಯರಿಗೆ ಹಿಂಗೆಲ್ಲ ಆಗ್ತೈತಿ. ಅವರ ಭಾವನೆಗಳ ಬಗ್ಗೆ ನನಗೂ ಗೌರವ ಐತಿ. ಆದ್ರ....' ಅಂತ ತನ್ನ ನಿರ್ಧಾರ ಏನು ಹೇಳಲಿ, ಸುಮ್ಮನಿದ್ದು ಬಿಡ್ತೀನಿ. ಇಲ್ಲಂದ್ರ, ಆಕೀ ಜೊತೆ ಭಾಳ ದೂರ ಬಂದ ನಾನು, ಜೀವನಪೂರ್ತಿ ಒಂದು ಕಲ್ಲು ಹೃದಯದ ಹುಡುಗೀನ ಪ್ರೀತಿಸ್ತಿದೀನಿ, ಆಕೀಗಾಗಿ ಇಷ್ಟೆಲ್ಲ ಮಾಡಾಕತ್ತೀನಿ, ಅಂತ ಹಳಹೋಬೇಕಾಗತ್ತೈತಿ; ಕೊರಗಬೇಕಾಗತ್ತೈತಿ. ಆ ಕಿಚ್ಚು ಎದಿಯಾಗ ನನ್ನ ಕೊನಿತನಕ ಸುಡತ್ತೈತಿ.

ಇದನ್ನೆಲ್ಲ ಆಕೀಗೆ ಯಾವಾಗ ಹೇಳಿಕೊಳ್ಳಲಿ? ಹೆಂಗ ಹೇಳಿಕೊಳ್ಳಲಿ!




ನಿನ್ನ
ಶಿವರಾಜ


ಶತಮಾನದ ಮೆಲುಕು




ಒಂದು ಮಾನವೀಯ ಸಂದರ್ಭದಲ್ಲಿ ಮನುಷ್ಯನೊಬ್ಬ ಹೇಗೆ ವರ್ತಿಸುತ್ತಾನೆಂಬುದೇ ಯಾವುದೇ ಕಾಲದ ಉತ್ತಮ ಕಥಾಸಾಹಿತ್ಯದ ಮುಖ್ಯ ತುಡಿತ. ಇದನ್ನು ಹೊಂದಿರುವ ಕಥೆಗಳು ಯಾವತ್ತೂ ನಮ್ಮನ್ನು




ತಟ್ಟುವಂತಹ ಗುಣ ಪಡೆದಿರುತ್ತವೆ. ಕನ್ನಡ ಸಣ್ಣ ಕಥೆಗೆ ನೂರು ವರುಷ ತುಂಬಿದ ಈ ಶುಭ ಸಂದರ್ಭದಲ್ಲಿ ಹಳೆಯ ಸ್ಪಂದನಶೀಲ ಕಥೆಗಳನ್ನು 'ಶತಮಾನದ ಮೆಲುಕು' ಶೀರ್ಷಿಕೆಯಡಿ ನೀಡ ಲಿದ್ದೇವೆ. ತಮ್ಮ ಸಾಮಯಿಕ, ಸಾಹಿತ್ಯಿಕ. ಪರಿಮಿತಿಗಳನ್ನು ದಾಟಿ ಈಗಲೂ ಈ ಕಥೆಗಳು ಎಷ್ಟೊಂದು ಪ್ರಸ್ತುತವಾಗಿವೆ ಎಂಬುದನ್ನು ನೀವೇ ಓದಿ ಮನಗಾಣ ಬೇಕು. ನೆನಪಿಡಿ, ಈ ಕಥೆಗಳ ಆಯ್ಕೆ ಯಾವುದೇ ಕಾಲದ ಸಾಹಿತ್ಯದ ಅಥವಾ ಸಾಹಿತಿಯ ಪ್ರಾತಿನಿಧಿಕತೆಯ ನೆಲೆಯಲ್ಲಿಲ್ಲ. ಬರೇ ಒಳ್ಳೆಯ, ಸರಳ, ವಿರಳ ಕಥೆಗಳೆಂಬುದೇ ಅವುಗಳ ಹೆಗ್ಗಳಿಕೆ.



ಶಬ್ದ ಗಾರುಡಿಗ, ಹುಟ್ಟಾಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಕತೆಗಳನ್ನು ಬರೆದಿದ್ದರು ಎನ್ನುವುದು ಎಷ್ಟೋ ಜನರಿಗೆ ಗೊತ್ತೇ ಇಲ್ಲ.




ಈ ಬಾರಿ ಬೇಂದ್ರೆಯವರ 'ಏಕಾಕಿನೀ', ಮತ್ತು ಕುಶಲ ಕಸುಬುದಾರಿಕೆ, ಕಥಾವಸ್ತುವಿನಿಂದ ಇಂದಿಗೂ ಜೀವಂತವೆನಿಸುವ ಶ್ರೀನಿವಾಸ ಐರಣಿ (ಈಗವರು ಸಂಶೋಧಕ ಶ್ರೀನಿವಾಸ ಹಾವನೂರ) ಅವರ 'ಗಂಧ ಮತ್ತು ಕಲ್ಲು' ಕತೆಗಳನ್ನು ನಿಮ್ಮ ಮುಂದಿಡಲು ನಮಗೆ ಹೆಮ್ಮೆಯೆನಿಸುತ್ತದೆ. ■



ದ. ರಾ. ಬೇಂದ್ರೆ

ಏಕಾಕಿನೀ



'ಭಾವನಾ ಏಪ್ರಿಲ್, 2000



ಕಣ್ಣುಮಸುಕು ಇರುವಾಗಲೇ ಅವಳು ಊರ ಹೊರಗಿನ ಬಾವಿಗೆ ನೀರಿಗೆ ಹೋದಳು. ಹಾದಿಯಲ್ಲಿ ಒಂದು ಮನೆಯ ಕಟ್ಟೆಯ ಮೇಲೆ ಒಬ್ಬ ಸಣ್ಣ ಹುಡುಗಿಯು ತನ್ನ ಚಿಕ್ಕ ತಮ್ಮನನ್ನು ಚಂದಪ್ಪನ ಕಡೆಗೆ ಬೊಟ್ಟು ಮಾಡಿ ತೋರಿಸಿ ರಮಿಸುತ್ತಿದ್ದಳು. ಸಂಜೆಯಾದರೂ ತನ್ನ ಹುಡುಗ ಮನೆಗೆ ಬರಲಿಲ್ಲವಲ್ಲ ಎಂದು ಒಬ್ಬ ತಾಯಿ ಓಣಿಯಲ್ಲಿ ಹೋಗಿ, ಹುಡುಕಿ ತನ್ನ ಮಗನನ್ನು ಮನೆಗೆ ಕರೆತರುತ್ತಿದ್ದಳು. ಒಂದು ಮನೆಯ ಮುಂದೆ ಎರಡು ಅಗ್ಗಿಷ್ಟಿಕೆಗಳು ಹೊತ್ತುತ್ತಿದ್ದವು. ಗುಡಿಯ ನೆರೆಮನೆಯಲ್ಲಿ ಅಳುವ ಕಂದನ ಕಿರಿ ಕಿರಿ ಧನಿಯೂ ಅದನ್ನು ಸಂತೈಸಿ ಹಾಡುವ ತಾಯಿಯ ಧನಿಯೂ ಒಂದಕ್ಕೊಂದು ಮೇಲಾಗಿ ಕೇಳಿಬರುತ್ತಿದ್ದವು. ಹುಡುಗರು ಕೆಲವರು ಹಕ್ಕಿಗಳಂತೆ ತಮ್ಮ ಗೂಡಿನ ಕಡೆಗೆ ಹೊರಟಿದ್ದರು. ಎಲ್ಲರಿಗೂ ಜೀವನದಲ್ಲಿ ಒಂದು ಎಳೆತ, ಸೆಳೆತ ಇತ್ತು. ಇದನ್ನೆಲ್ಲ ನೋಡುವ ಅವಳಿಗೆ ಯಾವ ಎಳೆತವಿತ್ತೊ? ಅವಳ ಜೊತೆಗೂ ಯಾರೂ ಇರಲಿಲ್ಲ. ಬಾವಿಗೆ ಹೋದರೆ ನೀರಿನ ಎಳೆತ, ಮನೆಗೆ ತಡಮಾಡಿ ಹೋದರೆ ಬೆನ್ನ ಮೇಲೆ ಸೆಳೆತ, ಇದರ ಪರಿಚಯ ಏಕಾಕಿನಿಗೆ ಇತ್ತು.

ಅವಳ ಕೂದಲದಲ್ಲಿ ಓರಣವಿರಲಿಲ್ಲ. ಕಣ್ಣಿನಲ್ಲಿ ನಿರುದ್ದಿಷ್ಟ ಚಾಂಚಲ್ಯವೂ, ಭಯಾನಕ ಭಣಭಣವೂ ಒಟ್ಟುಗೂಡಿದ್ದವು. ನಡಿಗೆಗೆ ತಾಳವಿರಲಿಲ್ಲ. ನೆಲ ನೋಡಿ ಬೇಸತ್ತು, ಮುಗಿಲ ಕಡೆಗೆ ಮುಖ ಮೇಲಕ್ಕೆತ್ತಿದಾಗ, ಅದರ ಮೇಲೆ ಚಂದ್ರನ ಕಿರಣ ಬಿದ್ದರೂ, ಅವಳ ಕಣ್ಣಲ್ಲಾಗಲಿ, ತುಟಿಯಲ್ಲಾಗಲಿ, ಮುಖದಲ್ಲಾಗಲಿ ಪ್ರತಿಕಿರಣವಾವುದೂ ಸೂಸುತ್ತಿರಲಿಲ್ಲ. ಹಳ್ಳದಲ್ಲಿ ಎಲ್ಲಿಂದಲೊ ಉದುರಿ ಬಿದ್ದ ಒಂದು ಹಳೆಯ ಎಲೆಯಂತೆ ಅವಳ ಬಾಳು ಸಾಗಿತ್ತು. ಕಾಲ ಚಕ್ರದಿಂದ ಸರಿದಷ್ಟೆ ಅವಳ ದಿನ ಚಕ್ರ ತಿರುಗುತ್ತಿತ್ತು. ಗೊತ್ತಾದ ಹತ್ತು, ಹನ್ನೆರಡು ವಾಡಿಕೆಯ ಕೆಲಸಗಳಲ್ಲಿ ಮುಗಿಯುತ್ತಿತ್ತು. ಇಷ್ಟೆ, ಅವಳ ಗಡಿಯಾಳಕ್ಕೆ ಕೊಟ್ಟ ಕೀಲಿ ತೀರಿದ್ದಿಲ್ಲ.

ಒಬ್ಬಳೇ ನೀರಿಗೆ ಹೋದಳು. ಒಬ್ಬಳೇ ಸೇದಿದಳು; ಒಬ್ಬಳೇ ತಿರುಗಿ ಮನೆಗೆ ಹೊರಟಳು. ಅವಳ ಹಿಂದಿನಿಂದ ಬಂದವರೂ, ಅವಳ ಸರಿಗೆ ಬಂದವರೂ, ಕೆಲವರು ಅತ್ತೆಮನೆ ಸೊಸೆಯರು ಮತ್ತು ತವರುಮನೆ ಮಕ್ಕಳು ಅವಳ ಮುಂದೆ ಹೋದರು. 'ಅವರಿಗೆ ಸಂಧ್ಯಾವಂದನೆಗೆ ನೀರಿಡಬೇಕು' ಎಂದು ಕೆಲವರು; 'ನಮ್ಮವನು ಎದ್ದಿದ್ದಾನು, ಇಂದು ಅಡ್ಡಹೊತ್ತಿಗೆ ಮಲಗಿದ್ದ' ಎಂದು ಒಬ್ಬರು; 'ಮುಂಜಾನೆಯೇ ನೀರು ತರಬೇಕಾಗಿತ್ತು, ಸುಳ್ಳೆ ಸಂಜೆಗೆ ಬಂದೆ' ಎಂದು ಮತ್ತೊಬ್ಬರು. ಪ್ರತಿಯೊಬ್ಬರಿಗೂ ಮನೆಗೆ ಆತುರಿಸಿ ಹೋಗಲು ಕಾರಣಗಳಿದ್ದವು. ಅವಳಿಗೆ ಏನು ಕಾರಣವಿತ್ತು? ಮದುವೆಯಾದ ಗಂಡನು ಆದಾದ ಮೇಲೆ ಒಂದೆರಡು ವರ್ಷಗಳಲ್ಲಿಯೇ ಎಲ್ಲಿಯೋ ಯಾತ್ರೆಗೆ ಹೋಗಿದ್ದನು. ಸತ್ತನು ಎಂದು ಕೆಲವರಾಡುತ್ತಿದ್ದರು. ಹುಚ್ಚನಾಗಿದ್ದಾನೆ ಎಂದು ಬಲ್ಲವರಂತೆ ಮತ್ತೆ ಬೇರೆ ಜನರು ಹೇಳುತ್ತಿದ್ದರು.. ಅವಳ ಪಾಲಿಗೆ ಎಲ್ಲವೂ ಸರಿಯಾಗಿತ್ತು. ಅವಳಿಗೆ ಮಕ್ಕಳಿರಲಿಲ್ಲ. ಅವಳಿಗೆ ತವರವರೆಂಬ ಮಮತೆಯವರಾರೂ ಇರಲಿಲ್ಲ. ಇಂಥ ಹತಭಾಗಿನಿಯು ಯಾರಿಗೆ ಬೇಕಾಗಿರಬೇಕು?

ಅವಳು ಇಂದು ಮನೆಮನೆಯ ಮುಂದೆ ನೋಡಿದ ನೋಟವು ಅಷ್ಟೇನೂ ಅಸಾಮಾನ್ಯವಲ್ಲ. ಆದರೂ, ಎಲ್ಲಿಂದಲೋ ಸುಳಿಗಾಳಿ ತಾಕಿ, ಬರಡು ಮರದ ಒಂದೆರಡು ಎಲೆಗಳೂ ಉಲಿಯುವಂತೆ, ಅವಳ ತಲೆಯಲ್ಲಿ ಒಂದೆರಡು ವಿಚಾರಗಳು ಗುಜುಗುಜು ಮಾತನಾಡಹತ್ತಿದವು. ಮಲೆತು ನಿಂತ ನೀರಿನಲ್ಲಿ, ಅದರ ಮೇಲಿಂದ,

ಆಕಾಶದಲ್ಲಿ ಹಾರಿ ಹೋಗುವ ಹಕ್ಕಿಯ ಬಾಯೊಳಗಿಂದ ಬಿದ್ದ ಕಟ್ಟಿಗೆಯ ತುಂಡೊಂದರಿಂದ ತರಂಗಗಳೇಳುವಂತೆ ಅವಳ ಮೈ ಏಕೋಃ ಜುಮ್ ಎಂದಿತು. ಬಾವಿಯಿಂದ ಮನೆಗೆ ಬರುವ ಹಾದಿಯಲ್ಲಿ ಬಲಭೀಮನ ಗುಡಿಯಿತ್ತು. ಅಲ್ಲಿ ಒಬ್ಬ ಬೈರಾಗಿಯು ಬಂದಿರುವನೆಂದೂ, ಅವನು ಸಾಮುದ್ರಿಕ ಹೇಳುವನೆಂದೂ, ಅವಳು ಅಂದೇ ಕೇಳಿದ್ದಳು. ಅಂತೆಯೇ ಅವಳ ಅಲಸ ಗತಿಗೆ ಮತ್ತೊಂದಿಷ್ಟು ಮಂದತೆ ಬಂದಿತ್ತು. ಸ್ವಲ್ಪ ಕತ್ತಲಾದೊಡನೆ ದೇವರಿಗೆ ಹೋದಂತೆ ಮಾಡಿ ಆ ಬೈರಾಗಿಗೆ ತನ್ನ ಕೈ ತೋರಿಸಿದರೆ ಹೇಗೆ? ಎಂಬ ವಿಚಾರವು ಅವಳಿಗೆ ಕಾಲ್ತೊಡಕಾಗಿತ್ತು. ಮಕ್ಕಳಾಗುವವೇ ಎಂದು ಕೇಳಬೇಕೇ? ಅಥವಾ ಹಾಗೇ ತನಗೆ ಸುಖ-ಸೌಭಾಗ್ಯಗಳಿವೆಯೇ ಎಂದು ಕೇಳಬೇಕೇ? ಕೇಳಬೇಕಾದರೂ ಏನು? ಕೇಳಬೇಕೋ ಕೇಳಬಾರದೋ? ಕೇಳದಿದ್ದರೆ ತನ್ನ ಈ ಪ್ರಶ್ನೆಗಳಿಗೆ ಯಾರು, ಎಂದು, ಉತ್ತರ ಕೊಡತಕ್ಕವರು?


ಅವಳು ಗುಡಿಗೆ ಬರುವ ಹೊತ್ತಿಗೆ ಮಬ್ಬುಗತ್ತಲಾಗಿತ್ತು. ಆ ಹಾಳುಗುಡಿಗೆ ಬಹಳ ಜನರು ಬರುತ್ತಿರಲಿಲ್ಲ. ಬರುವ ಒಬ್ಬಿಬ್ಬ ಹಳೆಯ ಭಕ್ತರು ತೀರ ಸಂಜೆಗೆ ಬಂದು ಹೋಗಿದ್ದರು. ಪೂಜಾರಿಯೂ ಸಂಜೆಯ ದೀಪ ಎಣ್ಣೆ ಮಾಡಿ ಹೋಗಿದ್ದನು. ಅವಳು ಗುಡಿ ಹೊಕ್ಕಾಗ ಬೈರಾಗಿಯು ಅವರ ಪದ್ಧತಿಯಂತೆ ಬೆಂಕಿ ಹೊತ್ತಿಸಿ ಕುಳಿತಿದ್ದನು. ಕೊಡವನ್ನು ಕೆಳಗಿರಿಸಿ ಅವಳು ದೇವರಿಗೆ ನಮಸ್ಕಾರ ಮಾಡುವಾಗ ಅವನು ಧ್ಯಾನಸ್ಥನಂತೆ ಕಾಣುತ್ತಿದ್ದನು. ಅವಳು ಅವನಿಗೂ ನಮಸ್ಕಾರ ಮಾಡಿದಾಗ ಅವನು ಏನು ಆಶೀರ್ವಾದವನ್ನೂ ಕೊಡಲಿಲ್ಲ. ಅವಳು ಏನೆಂದು ಮಾತು ಪ್ರಾರಂಭಿಸಬೇಕು? ಮಕ್ಕಳ ಕೂಗು ಅವಳ ಎದೆಮುಂಚಿತ್ತು. ಅವಳು ಅವನೆದುರು ಕುಳಿತುಬಿಟ್ಟಳು. ಬೈರಾಗಿಯು ಕಣ್ತೆರೆದು 'ಇದೇನಿಮ? ಯಾರು ತಾವು?' ಎಂದನು.

ತನ್ನ ಎಡಗೈಯನ್ನು ಒದ್ದೆ ಮಾಡಿ ತೊಡೆಗೆ ಒರೆಸಿಕೊಂಡು ಬೈರಾಗಿಯ ಎದುರು ಹಿಡಿದು 'ನನಗೆ ಮಕ್ಕಳಾಗುವವೇ?' ಎಂದು ಕೇಳಿದಳು. ಬೈರಾಗಿಯು ಕೈ ಹಿಡಿದ. ಅವಳ ಮೈ ಜುಮ್ಮೆಂದಿತು. ತಾನು ಕೈ ತೋರಿಸಿ ಅವಲಕ್ಷಣ ಮಾಡಿಕೊಂಡೆನೆಂದು ಅವಳಿಗೆ ತೋರಿತು; ಕೇಳಿದ ಪ್ರಶ್ನೆಯೇ ತಪ್ಪಾಯಿತೇನೋ ಎನಿಸಿತು. ಅವಳಿಗೆ ಬೈರಾಗಿಯ ಕಡೆಗೆ ನೋಡುವ ಧೈರ್ಯವಾಗಲಿಲ್ಲ. ಕಾಲವು ಸ್ಪ್ರಿಂಗು ಹರಿದ ಗಡಿಯಾರದಂತೆ ಸರ್ರನೆ ತಿರುಗಿದಂತಾಯಿತು. ಕೈ ಕೊಸರಿಕೊಳ್ಳಬೇಕೆಂದರೆ ಅದರಲ್ಲಿ ಜೀವವಿರಲಿಲ್ಲ. ಮೈಗೆ ಜಡತೆ ಬಂದಿತ್ತು. ಕಣ್ಣಿಗೆ ನಿದ್ದಿ ಕವಿದಂತಾಗಿತ್ತು. ದುಃಸ್ವಪ್ನದೊಳಗಿಂದ ದಡಪಡಿಸಿ ಎದ್ದಂತೆ ಅವಳು ಎದ್ದುಬಿಟ್ಟಳು; ಕೊಡವನ್ನೆತ್ತಿ ಹೊರಬಿದ್ದಳು. ಬೈರಾಗಿ ಬೆರಗಾಗಿ, ಬಾಯ್ಬಿಟ್ಟು, ಬಾಗಿಲ ಕಡೆಗೆ ನೋಡುತ್ತ ಹಾಗೆ ಕುಳಿತ.

ಅವಳು ಮನೆಗೆ ಬಂದ ಮೇಲೆ ದಿನಂಪ್ರತಿಯ ಪುಷ್ಪಾಂಜಲಿಗಳಾದವು. ಎಣ್ಣೆ ಕಾಣದ ತನ್ನ ಮುಡಿಯಲ್ಲಿ ಅವುಗಳನ್ನು ಹೂವಿನಂತೆಯೇ ಅವಳು ಧರಿಸಿದಳು. ಊಟ, ಉಡಸಾರಣೆ, ಉಪಕರಣಗಳು, ಉದ್ರಕ್ಕೆ ಸಾಗಿದವು, ಯಥಾಪ್ರಕಾರ ನಿದ್ರೆಯ ಹೊತ್ತು ಬಂತು. ಬಡವರಿಗೂ ಕೂಡ ಎರವಾಗದಿದ್ದ ನಿದ್ದೆ ಇವಳಿಗೂ ಬಂತು. ಬೆಳಗುಜಾವ ಎದ್ದಾಗ, ಬಿಸಿಲಿನಲ್ಲಿ ಬೆವರಿಟ್ಟವನು, ಹೊಳೆ ನೀರಲ್ಲಿ ಮಿಂದೆದ್ದಂತೆ. ಮೈಗೊಂದು ಲಘುತ್ವ, ಮನಕ್ಕೊಂದು ಪ್ರಸನ್ನತೆ ಬಂದಿತ್ತು ಅವಳಿಗೆ. ಯಾವುದೋ ಸುಖಸ್ವಪ್ನದ ರಾಜ್ಯದೊಳಗಿಂದ ಅವಳು ಹಾಯ್ದು ಬಂದಿದ್ದಳು. ಅರೆಮಸಕಾಗಿ ಅದರ ನೆನಪಾಗಹತ್ತಿತು. ನೆನಪಾದಂತೆ ಅವಳಿಗೆ ಅದೆಲ್ಲ ಹಳವಂಡ ಗನಸಿನಂತೆ ತೋರಿತು. ಮತ್ತೆ ಅವಳ ಮುಖಮುದ್ರೆ ಖಿನ್ನವಾಯಿತು. ದಿನದ ರಥವು ಮತ್ತೆ ತನ್ನ ಚಕ್ರಗಳನ್ನು ತಿರುಗಿಸಹತ್ತಿತು. ಅವಳು

ಪರಸಿಗಲ್ಲಾಗಿ ತನ್ನ ಮೈಯನ್ನು ಎಂದಿನಂತೆ ಅದಕ್ಕೆ ಮತ್ತೆ ಒಡ್ಡಿದಳು. ಗಾಣದ ಎತ್ತು ಕಣ್ಣು ಕಟ್ಟಿಕೊಂಡು ತಿರುಗುವಂತೆ ಅವಳು ದಿನಕ್ರಮದಲ್ಲಿ ಕಾಲಿಟ್ಟಳು.

ಅವಳು ಮೈ ತೊಳೆದುಕೊಂಡು ದೇವರ ಪೂಜೆ ಸಾಹಿತ್ಯವನ್ನು ಸರಿಪಡಿಸುವಾಗ 'ರಾಮ ಭಟ್ಟರೆ ಬರ್ರಿ, ಹೊರಗೆ ಬರ್ರಿ, ನಿಮ್ಮ ಮಗ ಬಂದಿದ್ದಾನೆ' ಎಂದು ಯಾರೋ ಕೂಗಿದರು. ಮನೆಯ ಯಜಮಾನತಿ ಅಡ್ಡರಸಿ ಓಡಿ ಬಂದು 'ಅವರು ಮನೆಯಲ್ಲಿಲ್ಲ. ಯಾಕೆ? ಏನು ಬೇಕಾಗಿತ್ತು?' ಎಂದು ಕೇಳಿದಳು. 'ಅಯ್ಯೋ ತಾಯಿ, ನೀವು ಪುಣ್ಯವಂತರು, ನಿಮ್ಮ ಮಗ ಬಂದಿದ್ದಾನೆ. ನಮ್ಮ ಮನೆಯಲ್ಲಿಯೇ ಕುಳಿತಿದ್ದಾನೆ, ಎಲ್ಲಿದ್ದಾರೆ ಭಟ್ಟರು?' ಅವರು ಹೋಗಿದ್ದಾರೆ; ನಾಳೆ ಬರತಾರೆ, ಹೌದು, ಹಳ್ಳಿಗೆ, ಲಕ್ಷ್ಮಣ ಗೌಡರನ್ನು ಕಂಡುಬರಲಿಕ್ಕೆ... ಹೊಟ್ಟೆ ಇದೆಯಲ್ಲ' ಮುದಿಕೆ ಮುತ್ತೈದೆ ಕಣ್ಣೀರು ತೆಗೆದಳು; ಬಂದವರು ಅಂದರು 'ಇನ್ನೇನು ಮಗ ಬಂದ. ಹಡೆದ ಹೊಟ್ಟೆ ತಣ್ಣಗಿರಲಿ. ಬರ್ರಿ, ನಮ್ಮ ಮನೆಗೆ. ಸುಬ್ಬಾಜೋಯಿಸರನ್ನು ಕರೆಕಳಿಸಿದ್ದೇನೆ. ರಾಮದೇವರ ಗುಡಿಯಲ್ಲಿ ಮಗನನ್ನು ಕಂಡು, ಮನೆಗೆ ಮರಳಿ ಬರ್ರಿ, ಹನ್ನೆರಡು ವರ್ಷ ಆದವಲ್ಲವೇ, ಮಗ ದೇಶಾಂತರಕ್ಕೆ ಹೋಗಿ?' ತನ್ನ ತಲೆತುಂಬಾದ ನರೆಗೂದಲು ಸವರುತ್ತ 'ನೂರು ವರ್ಷ' ಎಂದಳು ಮುದುಕಿ. ಬಂದವರು ನಕ್ಕು 'ದುಃಖಕ್ಕೆ ಎಷ್ಟೆಂದರೂ ವರ್ಷ ಕಡಿಮೆ. ಮಗನನ್ನು ಮತ್ತೆ ನೋಡಿದಿರಲ್ಲ? ನೀವು ಪುಣ್ಯವಂತರು!' ಬೇಗ ಬರಲು ಹೇಳಿ, ಬಂದವರು ಮುಂದೆ ಹೋದರು. ಮುದುಕಿ ಕೈಕಾಲು ಮುಖ ಮತ್ತೆ ತೊಳೆದುಕೊಂಡು ದೇವರಿಗೆ ಹೋಗಿ ನಮಸ್ಕಾರ ಮಾಡಿದಳು. ಹಣೆತುಂಬ ಕುಂಕುಮ ತೀಡಿದಳು. 'ಯಾರೋ ಬಂದಿದ್ದಾರಂತೆ, ಏನೋ ನಿನ್ನ ಭಾಗ್ಯ. ನೀರು ಕಾಯಿಸಿ ಇಡು. ಹಣಮಂತರಾಯರ ಮನೆಯ ಹಾಲು ಬಂದಿದೆ. ಅದು ಕಾದಿರಲಿ. ಒಳಗೆ ಒಂದು ಮಣೆ ಹಾಕಿರು. ಅಲ್ಲಿ ಹೊರಗೆ ಒಳಗಿನ ಜಮಖಾನೆ ಹಾಸಿರು. ನಿನ್ನ ಭಾಗ್ಯ' ಇದೇ ಈಗ ಬರುತ್ತೇನೆ ಎಂದಳು ಅತ್ತೆ. ಸೊಸೆಗೆ ಪೂರ್ಣ ಅರ್ಥವಾಗಲಿಲ್ಲ. ಕೆಲಸ ತಿಳಿಯಿತು. ಯಾರೋ ಮನೆಗೆ ಬರುತ್ತಾರೆ ಎಂದು ತೋರಿತು. ಮುದುಕಿ ಹಿತ್ತಲಲ್ಲಿ ಎರಡು ಹೂಗಳನ್ನೂ, ಹತ್ತು ತುಳಸಿಗಳನ್ನೂ ಕೊಯ್ದಳು. ಉಡಿಯಲ್ಲಿ ಅಕ್ಕಿಯನ್ನು



ದ. ರಾ. ಬೇಂದ್ರೆ

ಗಂಡನಿಂದ ತಿರಸ್ಕೃತಳಾಗಿ, ಎಲ್ಲರ ಅವಜ್ಞೆಗೆ ಒಳಗಾಗಿ ದಿನದೂಡುತ್ತಿದ್ದ ಹೆಣ್ಣಿಗೆ ಒಂದೇ ಒಂದು ಬಾರಿ - ತನಗೆ ಮಕ್ಕಳಾಗುತ್ತವೆಯೇ, ಸುಖಸೌಭಾಗ್ಯ ಸಿಗುತ್ತದೆಯೇ? ಎಂದು ಬೈರಾಗಿಯೊಬ್ಬನಿಗೆ ಕೈ ತೋರಿಸಿಕೊಳ್ಳುವ ವಾಂಛೆಯಾಗುತ್ತದೆ. ಆದರೆ ಅದೇ ಹಂಬಲ ಅವಳ ಮತ್ತು ಹಿಂದಿರುಗಿ ಬಂದ ಗಂಡನ ಸಮಾಗಮಕ್ಕೆ ಮುಳುವಾಗಿಬಿಡುವುದು ಸನ್ನಿವೇಶದ ವ್ಯಂಗ್ಯ. ಕಾವ್ಯ ಬರೆಯಲಿ ಅಥವಾ ಗದ್ಯವನ್ನೇ ಬರೆಯಲಿ 'ಭಾವ ವಿಲಾಸ' ಬೇಂದ್ರೆ, ಸಾಹಿತ್ಯದ ಸೊಗಸು. ಈ ಕತೆ ಹತಭಾಗಿನಿಯ ಚರಮ ದುಃಖವನ್ನು ಅತ್ಯಂತ ಸಂಯಮಪೂರ್ಣವಾಗಿ ಹಿಡಿದಿಟ್ಟಿದೆ.

ಬೊಗಸೆ ಬೊಗಸೆ ತುಂಬಿದಳು. ಎರಡು ನೀಲಾಂಜನಕ್ಕೆ ನಾಲ್ಕು ಹೂಬತ್ತಿಗಳನ್ನು ಹಾಕಿ, ತುಂಬ ತುಪ್ಪ ಇಟ್ಟಳು. ಹಳೆಯ ಡಬ್ಬಿಯೊಳಗಿಂದ ನಾಲ್ಕು ದುಡ್ಡು ತೆಗೆದು ಟೊಂಕಕ್ಕೆ ಹಚ್ಚಿದಳು. ಮತ್ತೆ ಸೊಸೆಗೆ ಹೇಳಿದಳು: 'ನೀನೂ ಮೈ ತೊಳೆದುಕೊಂಡು, ನನ್ನ ಸೀರೆ ಉಟ್ಟುಕೊಂಡು ಬಿಡು ಈ ಹೊತ್ತು. ಏನಂದೆ? ಹೊರಗೆ ಜಮಖಾನೆ ಹಾಸಿರು. ದೇವರಿಗೆ ಹೋಗಿಬರುತ್ತೇನೆ. ಎಷ್ಟು ಸುಳ್ಳೋ, ಎಷ್ಟು ಖರೇನೋ, ನಿನ್ನ ಭಾಗ್ಯ' ಎಂದು ಮುದುಕಿ ಮನೆಬಿಟ್ಟು ಹೊರಬಿದ್ದಳು. ಹೊರಡುವಾಗ ಮನೆಯ ಹೊಸ್ತಿಲಕ್ಕೆ ತಳಗೆ, ಮೇಲೆ ಮತ್ತೊಮ್ಮೆ ಅರಿಶಿನ-ಕುಂಕುಮ ಒತ್ತಿದಳು. ತನಗೂ ಇಟ್ಟುಕೊಂಡಳು.


ಭಟ್ಟರ ಮಗ ಬಂದನೆಂದು ಓಣಿಯಲ್ಲಿ ಸುದ್ದಿ ಹರಡಿತ್ತು. ಆ ಮುದುಕಿಯನ್ನು ಕಂಡವರೊಬ್ಬೊಬ್ಬರು 'ಒಳ್ಳೆಯದಾಯ್ತರವ್ವಾ' ಸುಖ ಬರೋದಿತ್ತಂದರ ಹೀಂಗ ಬರ್ತದ' 'ಯಾಕೆ ಭಟ್ಟರು ಎಲ್ಲಿ ಹೋಗ್ಯಾರ? ಅವರಿಗೆ ಹೇಳಿಕಳಿಸಿದರೇನು?' ಹೀಗೆ ಒಂದೊಂದು ಮಾತು ಹೇಳಿದರು. ಮುದುಕಿ ಎಲ್ಲರಿಗೂ ನೀರ್ತುಂಬಿದ ಕಣ್ಣುಗಳಿಂದ ಹೂಂಗುಡುತ್ತ ಮುಂದೆ ಸಾಗಿದಳು.

ಸೊಸೆಯು ಭಾಗ್ಯ ಎಂಬ ಶಬ್ದ ಕೇಳಿ ಬಹಳ ವರ್ಷಗಳಾಗಿದ್ದವು. ಅತ್ತೆಯವರು ಯಾರ ಭಾಗ್ಯ ಅಂದರು? ಆಕೆಗೆ ಏನೂ ತಿಳಿಯಲಿಲ್ಲ. ಆಕೆ ಬೇಗ ಬೇಗ ಮೈ ತೊಳೆದುಕೊಂಡಳು. ತನ್ನ ಹರಕು ಸೀರೆಯನ್ನೇ ಉಟ್ಟಳು; ಅತ್ತೆಯ ಸೀರೆ ಉಡಲು ಧೈರ್ಯವಾಗಲಿಲ್ಲ. ಹಾಲು ಕಾಯುತ್ತಿರುವಾಗ, ನೆರೆಮನೆಯವಳೊಬ್ಬಳು ಅಡಿಗೆ-ಮನೆಯಲ್ಲಿ ಹಣಿಕಿ ಹಾಕಿ 'ಇದ್ದೀರೇನು?' ಎಂದು ಕೇಳಿದಳು. 'ಸಾಯಲಿಕ್ಕೆ ನನಗೇನಾಗ್ಯದ' ಎಂದು ಭಟ್ಟರ ಮನೆಯ ಸೊಸೆ ವಟಗುಟ್ಟಿದಳು. 'ಅಯ್ಯೋ ಇದೇನಸ್ರೀ ಮಾತು' ಎಂದವಳೆ ಬಂದವಳು ಬಂದ ಕಾಲಿನಿಂದ ಹಿಂದೆ ಹೊರಟಳು. 'ಕುಂಕುಮ ಹಚ್ಚಿಕೊಂಡು ಹೋಗರಿ' ಎಂದು ಸೊಸೆ ಕೂಗಿದಳು. ವಾಗ್ತಕ್ಕಾಗಿ ಆಕೆ ತಿರುಗಿ ಬಂದು 'ಗಂಡ ಬಂದ ದಿನಾನಾರೆ ಛಂದ ಮಾತಾಡ್ರಿ' ಎಂದು ಉಪದೇಶ ಮಾಡಿ ಹೊರಟುಹೋದಳು. 'ಏನು ಮಾತು? ಯಾರ ಗಂಡ?' ಏಕಾಕಿನಿಯ ತಲೆಯಲ್ಲಿ ಊಹೆ ನಡೆಯಿತು. ಬಯ್ದಂತೆ ತೋರುವ ಆ ಮಾತು ಅವಳಿಗೆ ಹಿತ ಎನಿಸಿದವು. 'ತನ್ನ ಗಂಡ ಬರುವನೇ? ತಾನು ಇಂದು ಎದ್ದೊಡನೆ ಯಾರ ಮುಖ ನೋಡಿದೆ? ಇಂದು ಯಾವ ವಾರ? ಅತ್ತೆ ಒಳ್ಳೆ ಮಾತನ್ನಾಡಿದರಲ್ಲಾ?' ಬೆಳಗು ಬಿದ್ದ ಸ್ವಪ್ನದ ಮಧುರಸ್ಮೃತಿಯಂತೆ ಎಲ್ಲವೂ ಸವಿಯಾಗಿ ತೋರಿತು. ಅರುಚಿಯೆ ಅಭ್ಯಾಸವಾದ ಬಾಯಿಗೆ ಬೇವೂ ಬೆಲ್ಲಬೆಲ್ಲಸಾಗಿ ಹತ್ತುವಂತೆ ಆಕೆಗೆ ತನಗೇನೋ ಭಾಗ್ಯ ಬರುವುದಿದೆ ಎಂದಷ್ಟೇ ಹೊಳೆಯಿತು. ನಂಬಿಗೆಯಾಗಲೊಲ್ಲದು. ಮೇಲೆ ನೋಡಿದಳು, ಹಂಚಿನ ಚಪ್ಪರದ ತೂತುಗಳೊಳಗಿಂದೆಲ್ಲ ಸೂರ್ಯನ ಬೆಳಕು ನೇರವಾಗಿ ಸುರಿಯುತ್ತಿತ್ತು. ಮನೆಯ ಹೊರಬಾಗಿಲಿಗೆ ಬಂದು ನೋಡಿದಳು. ಓಣಿ ತುಂಬಿ ಬಿಸಿಲು ಹರಿಯುತ್ತಿತ್ತು. ಇದು ಯಾವ ಮಾಸ? ಇದು ಯಾವ ದಿವಸ? ಈಗ ಎಷ್ಟೊತ್ತಾಗಿರಬೇಕು? ಮಧ್ಯಾಹ್ನದ ನಿದ್ದೆಯಿಂದೆದ್ದವರು ದಿಗಿಲು ಗೊಂಡಂತೆ ಅವಳಿಗೆ ಕಾಲಭ್ರಮೆಯಾಯಿತು. ಜಮಖಾನೆ ಹಾಸುವುದು ನೆನಪಾಗಿ ಅವಳು ಪೆಟ್ಟಿಗೆಯಿಂದ ತೆಗೆದು ಅದನ್ನು ಹಾಸಿದಳು. ಎಸರು ಬಂದ ನೀರಿನ ಉರಿ ಕಡಿಮೆ ಮಾಡಿದಳು. ಉಕ್ಕಿತೋದ ಹಾಲನ್ನು ಒಲೆಯಿಂದ ಕೆಳಕ್ಕಿಳಿಸಿ ಒಳಗಿರಿಸಿದಳು. ತನ್ನ ಹರಕು ಸೀರೆ ಬಿಟ್ಟು ಅತ್ತೆಯ ಸೀರೆಯನ್ನುಟ್ಟಳು. ಹಿತ್ತಲ ಎರಡು ಹೂವನ್ನು ತಂದು ದೇವರಿಗೆ ಏರಿಸಿ ತುರುಬಿಗಿಟ್ಟುಕೊಂಡಳು. ಕನ್ನಡಿ ನೋಡಿ ಹೆರಳು ಸರಿಮಾಡಿಕೊಂಡಳು. ಬೈತಲ ಸವರಿದಳು. ಮಂಗಲಸೂತ್ರಕ್ಕೆ ಕೈ ಹಚ್ಚಿ ಸರಿಮಾಡಿದಳು; ನಕ್ಕಳು; ಅತ್ತಳು; ಬೆವತಳು. ತನ್ನನ್ನು ಯಾರೂ ನೋಡುತ್ತಿಲ್ಲವಲ್ಲಾ ಎಂದು ಸುತ್ತೂ ನೋಡಿದಳು.



ಓಣಿಯ ಒಬ್ಬ ಹುಡುಗ ಬಂದು 'ಕೇಶವ ಭಟ್ಟರು ಬಂದರೇ?' ಎಂದು ಕೇಳಿದ. ಏಕಾಕಿನಿಗೆ ಹಿಡಿಸಲಾಗದ ಹಿಗ್ಗು: ಊರಿಗೇ ತನ್ನ ಭ್ರಮೆ ಹಿಡಿಯಿತೇ ಎಂದು ಆಕೆ ಬರಿ ಮುಗುಳುನಗೆ ನಕ್ಕಳು. ತನ್ನ ನಗೆಯೇ ತನಗೆ ಆಭಾಸವೆನಿಸಿತು. ಎಷ್ಟು ದಿವಸದಿಂದ ತಾನು ಹೀಗೆ ನಕ್ಕಿದ್ದು ಎಂದು ನೆನಿಸಹೋದರೆ ಅವಳ ಚಿತ್ತದಲ್ಲಿ ಕತ್ತಲು ಮುಸುಕಿತು. ಬಂದ ಹುಡುಗ 'ಎಲ್ಲಿದ್ದಾರೆ?' ಎಂದು ಕೇಳಿದ. ಅವನು ಚಿಕ್ಕವನಿದ್ದಾಗ ಅವನನ್ನು ಭಟ್ಟರು ಎತ್ತಿ ಆಡಿಸಿದ್ದರೆಂದು ಮನೆಯಲ್ಲಿ ಮಾತ ನಾಡಿದ್ದನ್ನು ಕೇಳಿ ಸಂಭ್ರಮದಲ್ಲಿ ಆ ಹುಡುಗ ಓಡಿಬಂದಿದ್ದ. ಏಕಾಕಿನಿಯು ಒಳಗಿಂದ ದೇವರ ನೈವೇದ್ಯವನ್ನು ತಂದು ಆ ಹುಡುಗನಿಗೆ ಕೊಟ್ಟಳು. 'ಎಲ್ಲಿದ್ದಾರೆ?' ಎಂದು ಅವನು ಮತ್ತೆ ಕೇಳಿದ. 'ಗೊತ್ತಿಲ್ಲ' ಎಂದಳು ಏಕಾಕಿನಿ. ಹುಡುಗ ಹೊರಡುವುದರಲ್ಲಿದ್ದ. ಅಷ್ಟರಲ್ಲಿ ಹತ್ತೆಂಟು ಜನ ಮನೆಗೆ ಬಂದರು. ಅವರಲ್ಲಿ ಹೊಸಬರೇ ಕೇಶವಭಟ್ಟರು ಎಂದು ಊಹಿಸಿ ತನ್ನ ಮನೆಗೆ ಸುದ್ದಿ ಮುಟ್ಟಿಸಲು ಓಡಿಹೋದ.

ರಾಮಭಟ್ಟರ ಹೆಂಡತಿಗೆ ಸಂಭ್ರಮವೋ ಸಂಭ್ರಮ. ಭಟ್ಟರಿಗೆ ಕರೆಯಲೆಂದು ಒಬ್ಬರು ಹಳ್ಳಿಗೆ ಹೋಗುತ್ತೇವೆಂದರು. ರಾಮದೇವರಿಗೆ ಅಭಿಷೇಕ ಮಾಡಲು ಹೊರಟರು. ನೆರೆಮನೆಯವರು ಒಬ್ಬರು ಕಾಯಿಪಲ್ಯ ತಂದು ಇಟ್ಟರು. ಯಾರೋ ಹಾಲು, ಯಾರೋ ಮಜ್ಜಿಗೆ, ಯಾರೋ ಹಣ್ಣು ತಂದುಕೊಟ್ಟರು. ಭಟ್ಟರ ಭಾಗ್ಯ ಊರಿನವರದಾಗಿತ್ತು. ಈ ಸಂಭ್ರಮ ಹೊರಗೆ ನಡೆದಾಗ ಸೊಸೆ ಅಡಿಗೆಮನೆಯಲ್ಲಿ ದೇವರಿದಿರು ಕೈ ಮುಗಿದು ಕುಳಿತಿದ್ದಳು.



ಆ ದಿನ ಹಗಲು ಏಕಾಕಿನಿಗೆ ಅತಿ ವಿಚಿತ್ರವಾಗಿ ಕಳೆದಿತು. ಹುಲಿಯ ಗವಿಯನ್ನು ಹೊಕ್ಕ ಪಾಪಿಯೊಬ್ಬನು, ಕ್ಷಣಕ್ಷಣಕ್ಕೂ ಹುಲಿಯ ಬರವಿಗಾಗಿ ಬೆದರಿ, ಅದರ ಹೆಜ್ಜೆಹೆಜ್ಜೆಗೂ ನಡುನಡುಗಿ, ಕೊನೆಗೆ ನಡುಗಲೂ ಬಲಗುಂದಿ ಸ್ತಂಭಿತನಾಗಿ, ಕಾಣುವುದೂ ಕಾಣದ್ದೂ ಒಂದೇ ಆಗಿ, ಮೂರ್ಛೆ ಹೋಗಲೂ ಬಲ ಸಾಲದೆ, ಹೌಹಾರಿ, ಆದದ್ದಾಗಲಿ ಎಂದು ಬರುವುದರ ಆಗಮನವನ್ನೇ ಎದುರುನೋಡುವಂತೆ ಆಕೆ ವಿಚಾರಮೂಢಳಾದಳು. ತನ್ನ ಯಜಮಾನರ ಸಮಾಗಮವನ್ನು ಚಿತ್ರಿಸಲೂ ಅವಳಿಗೆ ಬುದ್ಧಿ ಸಾಲಲಿಲ್ಲ. ಆಕೆ ಏನೇನೋ ಕೆಲಸದಲ್ಲಿ ತೊಡಗಿಕೊಂಡಳು. ಆಕೆಯನ್ನು ಯಾರೂ ಮಾತನಾಡಿಸಲಿಲ್ಲ. ಆಕೆ ಯಾರೊಡನೆಯೂ ಮಾತನಾಡಲಿಲ್ಲ. ನಿಮಿಷ ನಿಮಿಷಕ್ಕೂ ಉರುಳುವ ಭೂಮಿ ಇತ್ತಿಂದತ್ತ ಹೊರಳಿತು. ನಿರಂತರ ಗತಿಯ ಕಾಲವು ಸೂರ್ಯನನ್ನು ಅಸ್ತಕ್ಕೆ ಎಳೆಯಿತು.


ಕೇಶವಭಟ್ಟರು ರಾತ್ರಿ ತಡಮಾಡಿಯೇ ಬಂದರು. ಊಟ ಉಪಚಾರ ನೆಪಕ್ಕಾಯಿತು. ಆ ಹೊತ್ತಿಗೆ ರಾಮಭಟ್ಟರು ಬಂದರು. ತಂದೆ ಮಕ್ಕಳ ಭೆಟ್ಟಿಯಾಯಿತು. ಮಗ ನಮಸ್ಕಾರ ಮಾಡಿದಾಗ ಭಟ್ಟರು 'ಶ್ರೀಹರೀ' ಎಂದು ಕಣ್ಣೊರಸಿಕೊಂಡರು. ರಾತ್ರಿ ಬಹಳಾಗಿತ್ತು. ಕೇಶವಭಟ್ಟರು ಅತ್ತಿತ್ತ ನೋಡಿ, ತಮಗಾಗಿ ಹಾಸಿದ ಹಾಸಿಗೆಯನ್ನು ಗುರುತಿಸಿ, ಅತ್ತ ಸೇರಿದರು. ರಾಮಭಟ್ಟರ ಫಲಾಹಾರ ನಡೆದಾಗ ಯಜಮಾನಿತಿ ಹಗಲಿನ ಸುದ್ದಿಯನ್ನು ಏನೇನೋ ಹೇಳುತ್ತಿದ್ದಳು. ಸೊಸೆ ಅರೆಬೆದರಿಕೆಯ ಎಚ್ಚರದ ತೂಕಡಿಕೆಯಲ್ಲಿ ಅಡಕಲ ಕೋಣೆಯಲ್ಲಿದ್ದಳು. ಮನೆ ಕೆಲಸವಾಗಿ ಅತ್ತೆ ಫಲಹಾರ ಮಾಡುವಾಗ ಸೊಸೆಯೂ ದಿನದೂಟ ಉಂಡಳು. ಆಕೆ ಕೈತೊಳೆದುಕೊಳ್ಳುತ್ತಿರುವಾಗ 'ಕೇಶವನಿಗೆ ಕುಡಿಯುವ ನೀರಿನ ತಂಬಿಗೆ ಒಯ್ಯಿ, ತಿಳಿಯಿತೇ' ಎಂದು ಹೇಳಿ ಅತ್ತೆ ಒಳಗೆ ಹೋದರು. ಸೊಸೆ ಎಲ್ಲ ಪದಾರ್ಥ ಸಾವರಿಸಿ, ಕಿಟಕಿ ಬಾಗಿಲಗಳನ್ನು ನೋಡಿ, ದೇವರ ದೀಪಕ್ಕೆ ಇನ್ನೆರಡು ಸವಟು ಎಣ್ಣೆ ಹಾಕಿ, ದೀಪ ಸಣ್ಣದು ಮಾಡಿ, ಕುಲದೇವರಿಗೆ ಕೈ ಮುಗಿದು ಕುಳಿತಳು. ಆಕೆ ಎಚ್ಚೆತ್ತಾಗ ಓಣಿಯ ನಾಯಿಯೊಂದು ಬೊಗಳುತ್ತಿತ್ತು. ಎದ್ದವಳೇ ಆಕೆ ಕುಡಿಯುವ ನೀರಿನ ತಂಬಿಗೆ ಥಾಲಿಯನ್ನು ತಕ್ಕೊಂಡು ದಡಪಡಿಸಿ ಹೊರಟಳು. ಗಂಡನ ಗೊರಕೆ ಅವಳನ್ನು ಸ್ವಾಗತಿಸುತ್ತಿತ್ತು. ತಂಬಿಗೆ ಇಟ್ಟು ದೀಪ ದೊಡ್ಡದು ಮಾಡಿ, ಆಕೆ ಮುಸುಕು ಬಿಗಿದು ಮಲಗಿದ ಯಜಮಾನರ ಕಾಲನೊತ್ತಲು ಕುಳಿತಳು.

ಆಕೆ ತೂಕಡಿಕೆಯಲ್ಲಿ ಎಷ್ಟು ಸಲ ಗಂಡನ ಕಾಲಿಗೆ ತಲೆಬಾಗಿಸಿದಳೋ, ಹೆದರಿ ತಲೆಯೆತ್ತಿ ಕಾಲನೊತ್ತಿದಳೊ, ಹಾಗೇ ಮರೆತು ಕಾಲಮೇಲೆ ತಲೆಯಿಟ್ಟು ಎಷ್ಟೊತ್ತು ನಿದ್ದೆಮಾಡಿದಳೊ. ಭಟ್ಟರು ಇನ್ನೊಂದು ಮಗ್ಗಲಿಗೆ ಹೊರಳಿದಾಗ ಆ ಸುಮಂಗಲಿಗೆ ಇನ್ನೊಂದು ಪಾದಸ್ಪರ್ಶವೂ ಆಯಿತು. ಆಕೆ ಅದನ್ನೂ ಒತ್ತಿದಳು. ಆಗೊಂದು ಕತ್ತೆ ನಿರರ್ಗಳವಾಗಿ ದಿಗಂತಗಳನ್ನು ಆಹ್ವಾನಿಸು

ವಂತೆ ಹ್ಯಾಂಕರಿಸುತ್ತಲೆ ಇತ್ತು. ನಿದ್ದೆಯಲ್ಲೊ, ಎಚ್ಚರದಲ್ಲೊ, ಭಟ್ಟರು 'ಮುಟ್ಟಬೇಡ ಸರಿ' ಎಂದರು. ಆಕೆ ಬೆದರಿದಳು. ಮತ್ತೆ ಕಾಲೊತ್ತಲು ಕೈ ಚಾಚಿದಾಗ ಕಾಲು ಮಡಚಿಕೊಂಡವು. ಪಾದಗಳಿಗಾಗಿ ತಡವರಿಸಿದಾಗ, ಅವು ತಪ್ಪಿಸಿ ಆಡಿದವು. ಆಕೆಗೆ ಯಜಮಾನರು ಎದ್ದು ಕುಳಿತಂತೆ ಎನಿಸಿತು. ಬೆಳಕಿಂಡಿಯಿಂದ ಇಳಿದುಬೀಳುತ್ತಿದ್ದ ಬೆಳದಿಂಗಳ ಒಂದು ಬಿಂಬ ಪ್ರಕಾಶದಲ್ಲಿ ಆಕೆ ಕಣ್ಣರಳಿಸಿದಳು. ಕತ್ತಲೆಗೆ ಆಕಾರ ಬರಲಿಲ್ಲ. ಕೈಮುಗಿದು ಆಕೆ ನೆಲಕ್ಕೆ ತಲೆಯಿಟ್ಟಳು.

'ನೀನು ಶುದ್ಧಳೇ?' ಎಂದು ಪಿಸುಮಾತನ್ನೆ ಒತ್ತಿ ನುಡಿಸಿದಂತೆ ಒಂದು ದನಿ ಬಂದಿತು. ಆಕೆ 'ಇಲ್ಲ, ನಾನು ಶುದ್ಧಳು' ಎಂದಾಗ ಗೋಡೆ ನಡುಗಿದವು. 'ನೀನು ಯಾರನ್ನೂ ಮುಟ್ಟಿಲ್ಲವೇ?' ದನಿ ಸಿಡಿದು ಮಿಂಚಿತು. 'ದೇವರಾಣೆ' ಎಂದು ಆಕೆ ನಿಟ್ಟುಸಿರುಬಿಟ್ಟಳು. 'ಒಬ್ಬ ತಿರುಕನಿಗೆ' ಎಂದು ಆ ದನಿಯೆಂದಾಗ 'ಅಯ್ಯೋ, ಏನು ಮಾತಿದು' ಎಂದಿತು ಈ ಸ್ವರ. 'ನಿನ್ನೆ ಹಾಳು ಗುಡಿಯ ಬೈರಾಗಿಗೆ ನೀನು ಕೈಕೊಟ್ಟದ್ದು ನಾನು ನೋಡಿದ್ದೇನೆ' ಎಂದದು ಧಿಃಕರಿಸಿದಾಗ ಕತ್ತಲಲ್ಲಿ ಕರಗಿದಂತೆ ಈ ಸ್ವರ 'ಹಾಂ' ಎಂದಳಿದಿತು. ಆಕೆ ಸಾಷ್ಟಾಂಗ ಬಿದ್ದು ಗಂಡನ ಕಾಲಿಗೆ ಮೈಚಾಚಿದಳು. ಈ ಸವಾರಿ ಎದ್ದಿತು. ಬೈರಾಗಿತನಕ್ಕೆ ಮರುಳಾದವರಿಗೆ ಮನೆಯ ಹೆಂಗಸಿನ ಹಂಗೇ? 'ನಾನು ತಂದೆ ತಾಯಿಯನ್ನು ಕಾಣಲು ಬಂದಿದ್ದೆ. ಈ ಹಾಳು ಮಾರಿಯನ್ನಲ್ಲ' ಎಂದವನನ್ನಲು ಆಕೆ ಗಲ್ಲಗಲ್ಲ ಬಡೆದುಕೊಂಡಳು. ವೇತಾಳ ತನ್ನ ಮಸಣಬಟ್ಟಿಗೆ ಹೊರಟಂತೆ, ಕೇಶವಭಟ್ಟರು ಕಾಲಪ್ಪಳಿಸುತ್ತ ಕೋಣೆಬಿಟ್ಟು, ಮನೆಯ ಬಾಗಿಲ ಹೊರಗೆ ಹೊರಟುಹೋದರು.

ಈಕೆ ಹಾದಿ ನೋಡಿದಳು. ಬುದಿಂಗನೆದ್ದು ಬಾಗಿಲಿಗೆ ಬಂದಳು. ಓಣಿಯನ್ನು ಈ ತುದಿಯಿಂದ ಆ ತುದಿಗೆ ನಿಟ್ಟಿಸಿದಳು. ಎರಡು ಬೀಡಾಡಿ ನಾಯಿಗಳು ಇದಿರು ಬದಿರು ಕುಳಿತು ಚಂದ್ರನನ್ನು ನೋಡಿ ಅವನ ಬೆಳದಿಂಗಳಿನ ವ್ಯರ್ಥ ದುಂದುಗಾರಿಕೆಗಾಗಿಯೋ ಏನೋ ಭೋ ಎಂದು ಗೋಳಿಡುತ್ತಿದ್ದವು. ಈಕೆ ಹೆದರಿ ಕದ ಇಕ್ಕಿಕೊಂಡಳು. ತನ್ನ ಕೋಣೆ ಹೊಕ್ಕಳು. ಬರಿದಾದ ಹಾಸಿಗೆಯನ್ನು ಬೆಳಗಾಗುವವರೆಗೂ ತೊಯ್ಸಿ ತಪ್ಪಡಿ ಮಾಡಿದಳು.



ಮರುದಿನ ಊರೆಲ್ಲವೂ ಏಕಾಕಿನಿಯ ದುರ್ಭಾಗ್ಯಕ್ಕೆ ಹೆಸರಿಟ್ಟಿತು. ಅತ್ತೆ ಸೊಸೆಯನ್ನು ಶಪಿಸಿದಳು. ಮಾವ ಸೊಸೆಯ ನೀರು ಮುಟ್ಟಲಿಲ್ಲ. ತನ್ನ ಹಣೆಬರಹವನ್ನು ತೊಡೆದುಕೊಳ್ಳಲು ಅದನ್ನು ನೂರು ಸಲ ಅಪ್ಪಳಿಸಿಯೋ, ಸಾವಿರ ದೇವರಿಗೆ ನಮಿನಮಿಸಿಯೋ ಅಂದು ಸಂಜೆಗೆ ಏಕಾಕಿನಿಯ ಹಣೆ ಬುಗುಟೆ ಬುಗುಟೆಯಾಗಿ ಗಂಟುಕಟ್ಟಿತ್ತು. ಅವಳ ಸೌಭಾಗ್ಯದ ಕುರುಹಾಗಿ, ಅದಷ್ಟು ಅವಳ ಜೀವಮಾನದುದ್ದಕ್ಕುಳಿಯಿತು.

'ನಿರಾಭರಣ ಸುಂದರಿ' (1940) ಸಂಕಲನದಿಂದ.
ಸೌಜನ್ಯ: ವಾಮನ ಬೇಂದ್ರೆ

ಲತಾ ರಾಜಶೇಖರ್

ಸ್ವಪ್ನ ಸಂಗೀತ



ಇಕ್ಬಾಲ್

ಇಷಾ ತಾವರೆದಂಟಿನಂತಿದ್ದ ತನ್ನ ಕೋಮಲ ಬೆರಳುಗಳಿಂದ ಕಿತ್ತಳೆ ಹಣ್ಣಿನ ಸಿಪ್ಪೆ ಬಿಡಿಸಿದಳು. ಅರೆಬಿರಿದ ಮೊಗ್ಗಿನಂತಿದ್ದ ತೊಳೆಗಳನ್ನು ತಿನ್ನಲು ಮನಸ್ಸಾಗದೆ ಅದನ್ನು ಹಾಗೆಯೇ ತಟ್ಟೆಯಲ್ಲಿ ಇಟ್ಟಳು.

ನೆನಪುಗಳು, ಹೂವಿನ ದಳದಂಥ ನೆನಪುಗಳು ಅರಳಿದವು...

ಕನ್ನಡ ಸಾಹಿತ್ಯದ ವಿದ್ಯಾರ್ಥಿನಿಯಾಗಿದ್ದ ಇಷಾ ಆಗಾಗ ಅಧ್ಯಯನ ಸಂಸ್ಥೆಯಲ್ಲಿ ನಡೆಯುತ್ತಿದ್ದ ಸೆಮಿನಾರುಗಳಿಗೆ ಹೋಗುತ್ತಿದ್ದಳು. ಭಾರತೀಯ ಭಾಷಾ ಸಾಹಿತ್ಯವನ್ನು ಕುರಿತ

ಸಂಕಿರಣ ಆ ದಿನ ನಡೆಯುವುದಿತ್ತು. ಅಂದು ಪ್ರಾರಂಭವಾಗಲಿದ್ದ ವಿಚಾರ ಸಂಕಿರಣ ಮೂರುದಿನಗಳ ಕಾಲ ನಿರಂತರವಾಗಿ ನಡೆಯುವುದಿತ್ತು.

ಮೊದಲ ಎರಡು ದಿನಗಳು ಏಕೋ ನೀರಸವೆನಿಸಿತು. ಅಲ್ಲಿ ಮಾತಾಡಿದ ಯಾವ ಲೇಖಕ ಅಥವಾ ವಿದ್ವಾಂಸರ ವಿಚಾರಧಾರೆಯೇ ತನಗೆ ಹಿಡಿಸಲಿಲ್ಲವೊ ಅಥವಾ ತನ್ನ ಮನಃಸ್ಥಿತಿಯೇ ಸರಿಯಾಗಿಲ್ಲವೋ... ಜೊತೆಗೆ ಭಾಷೆಯ ಅಂತರ... ಒಬ್ಬಿಬ್ಬರು ಮಾತ್ರ ಹಿಂದಿ, ಇಂಗ್ಲಿಷ್‌ನಲ್ಲಿ ಮಾತಾಡಿದರೆ, ಉಳಿದವರೆಲ್ಲ ಅವರವರ ಭಾಷೆಯಲ್ಲಿ ಮಾತಾಡುತ್ತಿದ್ದರು. ಅದೂ ಒಂದು ಕಾರಣವಿರಬೇಕು... ಇಷಾ ಮೂರನೆ ದಿನದ ಸಂಕಿರಣಕ್ಕೆ ಹೋಗುವುದೊ ಬೇಡವೊ ಎಂದು ಯೋಚಿಸಿದಳು. ಆದರೆ ಅಲ್ಲಿಗೆ ಹೋಗುವುದರಿಂದ ಸಾಹಿತ್ಯದ ವಿಚಾರಗಳು ಎಷ್ಟೋ ತಿಳಿಯುತ್ತವೆ, ಜೊತೆಗೆ ನಾಳೆಯ ದಿನ ಕ್ಲಾಸಿನಲ್ಲಿ ಪ್ರಾಧ್ಯಾಪಕರ ಕೈಲಿ ಬಯ್ಯಿಸಿಕೊಳ್ಳುವುದೂ ತಪ್ಪುತ್ತದೆ ಅನ್ನಿಸಿ ಅಲ್ಲಿಗೆ ಹೋದಳು.

ಕೊನೆಯ ದಿನ ಭಾರತದ ಇತರ ಭಾಷೆಗಳ ಕಥಾಸಾಹಿತ್ಯವನ್ನು ಕುರಿತಂತೆ ಐವರು ವಿದ್ವಾಂಸರು ಮಾತನಾಡುವವರಿದ್ದರು. ಸಿಂಧಿ, ಒರಿಯಾ, ಗುಜರಾತಿ, ಬಂಗಾಳಿ ಮತ್ತು ಅಸ್ಸಾಮಿ ಭಾಷೆಯವರು ಒಬ್ಬೊಬ್ಬರಾಗಿ ಮಾತಾಡತೊಡಗಿದರು. ಅವರು ಮಾತಾಡಿದ ನಂತರ ಅದರ ಸಾರವನ್ನು ಸಂಕ್ಷಿಪ್ತವಾಗಿ ಇಂಗ್ಲಿಷ್‌ನಲ್ಲಿ ಒಬ್ಬರು ತಿಳಿಸುತ್ತಿದ್ದರು. ಇದಕ್ಕಿಂತ ನಮ್ಮ ದಕ್ಷಿಣದ ದ್ರಾವಿಡ ಭಾಷೆಗಳೇ ಎಷ್ಟೋ ವಾಸಿ, ಸುಮಾರಾಗಿ ಆದರೂ ಅರ್ಥವಾಗುತ್ತದೆ ಅಂದುಕೊಳ್ಳುತ್ತಾ ಪಕ್ಕದಲ್ಲಿದ್ದ ಗೆಳತಿ ಅರುಣಾಳನ್ನು ನೋಡಿದಳು. ಅವಳು ಗಡಿಯಾರ ನೋಡಿಕೊಳ್ಳುತ್ತಿದ್ದಳು.

ಕೊನೆಯಲ್ಲಿ ಮಾತಾಡಿದವರು ಬಂಗಾಳಿ ಲೇಖಕ ಕಾಲಿಚರಣ್ ಬ್ಯಾನರ್ಜಿ, ಅದೂ ಕನ್ನಡದಲ್ಲಿ! ಅದುವರೆಗೆ ಮಾತಾಡಿದ ಲೇಖಕರೊಂದಿಗೆ ಕುಳಿತಿದ್ದ ಅವರನ್ನು ಅವಳು ಸರಿಯಾಗಿ ಗಮನಿಸಿರಲಿಲ್ಲ. ಆದರೆ ಅವರು ಕನ್ನಡದಲ್ಲಿ ಮಾತನ್ನು ಪ್ರಾರಂಭಿಸಿದ ಕೂಡಲೆ ಅವಳ ಕಿವಿ ನಿಮಿರಿತು. ಮೈಯಲ್ಲಿ ಮಿಂಚಿನ ಸಂಚಾರವಾದಂತಾಗಿ ಚಪ್ಪಾಳೆ ತಟ್ಟಿದಳು. ಉಳಿದವರು ಅವಳ ಜೊತೆ ಕೈತಟ್ಟಿ ಸಂತೋಷ ವ್ಯಕ್ತಪಡಿಸಿದರು. ಒಬ್ಬ ಬಂಗಾಳಿ ಲೇಖಕರು ಕನ್ನಡವನ್ನು ಕಲಿತು, ಅಷ್ಟು ಚೆನ್ನಾಗಿ, ಸ್ಪಷ್ಟವಾಗಿ, ಮನಮುಟ್ಟುವಂತೆ ಮಾತಾಡುವುದೆಂದರೆ! ಅವಳಿಗೆ ಅವರ ಬಗ್ಗೆ ಅಪಾರವಾದ ಅಭಿಮಾನ, ಪ್ರೀತಿ ಉಕ್ಕಿತು.

ಇಷಾ, ಬ್ಯಾನರ್ಜಿಯವರು ಹೊರಗೆ ಬರುವವರೆಗೂ ಕಾದಿದ್ದು, ಅವರ ಆಟೋಗ್ರಾಫ್ ಹಾಕಿಸಿಕೊಂಡಳು.

''ಸರ್, ನೀವು ತುಂಬ ಚೆನ್ನಾಗಿ ಮಾತಾಡಿದಿರಿ, ಅದರಲ್ಲೂ ನೀವು ಕನ್ನಡದಲ್ಲಿ ಮಾತನಾಡಿದ್ದು ಕೇಳಿ ನನಗೆ ಬಹಳ ಸಂತೋಷವಾಯ್ತು''.

''ಥ್ಯಾಂಕ್ಸ್, ನಿಮ್ಮ ಹೆಸರೇನು? ನೀವೇನು ಮಾಡುತ್ತಿದ್ದೀರಿ?...'' ಕಾಲಿಚರಣ ಬ್ಯಾನರ್ಜಿ ಕೇಳಿದರು.

ಅವಳು ತನ್ನ ಪರಿಚಯ ಹೇಳಿಕೊಂಡಳು.

''ಇಷಾ! ವಾಟ್ ಎ ಬ್ಯೂಟಿಫುಲ್ ನೇಮ್!'' ಅವರು ಮೃದುವಾಗಿ ನಕ್ಕರು.

''ಸರ್, ತಾವು ಇಲ್ಲಿ ಎಲ್ಲಿ ಉಳಿದುಕೊಂಡಿದ್ದೀರಿ?'' ಮೆಲ್ಲಗೆ ಕೇಳಿದಳು. ''ಇಲ್ಲೇ ಯೂನಿವರ್ಸಿಟಿ ಗೆಸ್ಟ್‌ಹೌಸಿನಲ್ಲಿ ಇದ್ದೇನೆ. ಇನ್ನೂ ಕೆಲವಾರು ದಿವಸ ಇರ್ತೇನೆ. ಬಿಡುವಾದಾಗ ಬನ್ನಿ'' ಎಂದು ಹೇಳಿ ಅವರು ಬಳಿಯಲ್ಲಿದ್ದ ತಮ್ಮ ಸ್ನೇಹಿತರನ್ನು ಸೇರಿಕೊಂಡರು. ಇಷಾಳಿಗೆ ತಾನು ಸಂತೋಷದ ಶಿಖರದ ತುತ್ತತುದಿಯಲ್ಲಿ ನಿಂತಿದ್ದೇನೆ ಅನ್ನಿಸಿತು.

ಎರಡು ಮೂರು ದಿನಗಳವರೆಗೂ ಅದೇ ನೆನಪಿನಲ್ಲಿದ್ದ ಅವಳಿಗೆ ಅವರನ್ನು ಮತ್ತೆ ನೋಡಬೇಕು, ಮಾತಾಡಿಸಬೇಕು ಅನ್ನಿಸ ತೊಡಗಿತು. ಆ ದಿನ ಕ್ಲಾಸ್ ಮುಗಿಸಿಕೊಂಡು ಬರುತ್ತಿದ್ದಾಗ ಅನಿರೀಕ್ಷಿತವಾಗಿ ಬ್ಯಾನರ್ಜಿ ಎದುರಾಗಿದ್ದರು. ಅದೇ ಎತ್ತರದ ಆಕರ್ಷಕ ವ್ಯಕ್ತಿತ್ವ, ಅದೇ ಮೃದು ಮಂದಹಾಸ. ಅವಳು ಅವರಿಗೆ 'ನಮಸ್ಕಾರ ಸರ್' ಎಂದಳು.

''ಹೊ! ಇಷಾ ಹೌ ಆರ್ ಯೂ?''

ವಿಸ್ಮಯದಿಂದ ನುಡಿದರು ಬ್ಯಾನರ್ಜಿ. ಅವರು ತನ್ನ ಹೆಸರನ್ನು ಹೇಳಿ ಮಾತಾಡಿಸಿದ್ದರಿಂದ ಅವಳಿಗೆ ಬಹಳ ಆನಂದವಾಯಿತು.

''ಫೈನ್ ಸರ್, ತಾವು ಈ ಕಡೆ, ವಾಕಿಂಗ್ ಹೋಗ್ತಿದ್ರಾ ಸರ್?''

''ಹೌದು, ನಿಮ್ಮ ಮನೆ ಎಲ್ಲಿದೆ?''

ಶಾರದಾದೇವಿ ನಗರದಲ್ಲಿ ತಮ್ಮ ಮನೆ ಇರುವುದಾಗಿಯೂ, ತಾನು ಸ್ಕೂಟರ್‌ನಲ್ಲಿ ದಿನಾ ಬರುವುದಾಗಿಯೂ ತಿಳಿಸಿದಳು. ಆದರೆ ಈ ದಿನ ಸ್ಕೂಟರ್‌ನ್ನು ರಿಪೇರಿಗೆ ಕೊಟ್ಟಿರುವುದರಿಂದ ತಾನು ಬಸ್ಸಿಗೆ ಹೋಗುತ್ತೇನೆಂದಳು. ಬಸ್ ಬರಲು ಇನ್ನೂ ಮುಕ್ಕಾಲು ಗಂಟೆ ಇದ್ದುದರಿಂದ ಅವರೊಂದಿಗೆ ನಿಧಾನವಾಗಿ ಮಾತಾಡುತ್ತ ನಿಂತಳು.

''ನಿಮಗೇನೂ ಅಭ್ಯಂತರ ಇಲ್ಲದಿದ್ದರೆ ಬನ್ನಿ ಕುಳಿತು ಮಾತಾಡೋಣ'' ಪಕ್ಕದ ಹುಲ್ಲು ಹಾಸಿನ ಕಡೆ ನೋಡುತ್ತ ಅವರು ಅಂದಾಗ ಇಷಾಳ ಹೃದಯ ಅರಳಿತು.

''ಸರ್, ನೀವು ಎಷ್ಟು ಕೃತಿಗಳನ್ನು ರಚಿಸಿದ್ದೀರಿ?''

''ಒಟ್ಟು ಇಪ್ಪತ್ತೊಂದು ಪುಸ್ತಕಗಳನ್ನು ಬರೆದಿದ್ದೇನೆ. ಅವೆಲ್ಲ ಬಂಗಾಳಿಯಲ್ಲಿವೆ''.

''ನೀವು ಕನ್ನಡದಲ್ಲೂ ಒಂದು ಪುಸ್ತಕ ಏಕೆ ಬರೀಬಾರದು? ತುಂಬ ಪ್ರಬುದ್ಧವಾದ ಕನ್ನಡ ಮಾತಾಡ್ತೀರಿ. ನೀವು ಕನ್ನಡ ಹೇಗೆ ಕಲಿತಿರಿ? ಮೊನ್ನೆ ನನಗಂತೂ ನಿಮ್ಮ ಮಾತು ಕೇಳಿ ಬಹಳ ಆಶ್ಚರ್ಯವಾಯಿತು''.

''ಹೌದು ಆ ದಿಕ್ಕಿನಲ್ಲೂ ಯೋಚನೆ ಮಾಡ್ತಿದೀನಿ'' ಎಂದರು. ಬ್ಯಾನರ್ಜಿ ತಾವು ಚಿಕ್ಕವರಿದ್ದಾಗ ಹತ್ತು ವರ್ಷಗಳ ಕಾಲ ಬೆಂಗಳೂರಲ್ಲಿದ್ದೆವೆಂದು ಹೇಳಿದರು. ಅಲ್ಲಿ ಅವರ ತಂದೆ ಬಿಸಿನೆಸ್ ಮಾಡುತ್ತಿದ್ದರೆಂದೂ ಆ ಸಮಯದಲ್ಲಿ ತಾವು ಚೆನ್ನಾಗಿ ಕನ್ನಡ ಕಲಿತರೆಂದೂ ತಿಳಿಸಿದರು.

''ಆಗ ನಾನು ಕನ್ನಡದ ಕತೆ, ಕಾದಂಬರಿಗಳನ್ನು ಓದ್ತಾ ಇದ್ದೆ, ಕನ್ನಡದ ಬಗ್ಗೆ ಪ್ರೀತಿ ಬೆಳೆಸಿಕೊಂಡೆ, ಅನಂತರ ತಂದೆಗೆ ವ್ಯಾಪಾರದಲ್ಲಿ ಲಾಸ್ ಆಯಿತು. ಆಗ ನಾವು ಮತ್ತೆ ಕಲ್ಕತ್ತಾಗೆ ಹಿಂತಿರುಗಿದೆವು''.

ಇಷಾ ಕಣ್ಣರಳಿಸಿ ಅವರ ಮಾತನ್ನು ಆಲಿಸುತ್ತಿದ್ದಳು.

''ಅಲ್ಲಿ ನಾನು ಎಂ.ಕಾಂ. ಮುಗಿಸಿ ಬ್ಯಾಂಕಿನಲ್ಲಿ ಕೆಲಸಕ್ಕೆ ಸೇರಿದೆ. ಕನ್ನಡ ಸಾಹಿತ್ಯದ ಸ್ನಾತಕೋತ್ತರ ಅಧ್ಯಯನವನ್ನು ಮಾಡುವುದಕ್ಕಾಗಿಯೇ ನಾಲ್ಕು ತಿಂಗಳ ರಜೆಯಮೇಲೆ ಇಲ್ಲಿಗೆ ಬಂದಿದ್ದೇನೆ. ಈಗೊಂದು ಹೊಸ ಕಾದಂಬರಿಯ ರೂಪುರೇಷೆಯನ್ನು ಸಿದ್ಧಪಡಿಸುತ್ತಿದ್ದೇನೆ. ಈ ಸಮಯದಲ್ಲಿ ನಿಮ್ಮ ಪರಿಚಯವಾಗಿದ್ದು ಒಳ್ಳೆಯದೇ ಆಯಿತು'' ಅವರು ಮುಖದಲ್ಲಿ ನಗು ಚೆಲ್ಲಿ ಹೇಳಿದರು.

''ನಿಮ್ಮ ಪರಿಚಯವಾಗಿದ್ದರಿಂದ ನನಗೆ ತುಂಬ ಸಂತೋಷವಾಗಿದೆ ಸರ್'' ಹೃದಯ ತುಂಬಿ ಅಂದಳು.

''ಒಂದು ಮಾತು ಇಷಾ, ಸರ್ ಎಂದೆಲ್ಲ ಹೇಳೋದು ಬೇಡ. ಕಾಲಿಚರಣ್ ಅಥವಾ ಬ್ಯಾನರ್ಜಿ, ನಿನಗಿಷ್ಟವಾದ ಹಾಗೆ ಕರಿ. ಲೆಟ್ ಅಸ್ ಬಿ ಫ್ರೆಂಡ್ಸ್ ಓ. ಕೆ?''

ಇಷಾಳಿಗೆ ತುಂಬ ಸಂಕೋಚವೆನ್ನಿಸಿದರೂ ಅವರ ಆತ್ಮೀಯ ಮಾತು, ನಡವಳಿಕೆ ಬಹಳ ಇಷ್ಟವಾದವು. ಅವರ ಸ್ನೇಹ ವರ್ತುಲದೊಳಗೆ ಮೆಲ್ಲಗೆ ಸೇರಿ ಹೋದಳು ಅವಳು.

ಬ್ಯಾನರ್ಜಿ ಬಂಗಾಳಿ ಸಾಹಿತ್ಯವನ್ನು ಕುರಿತು ಮಾತಾಡುವುದೇ ಒಂದು ಸೊಗಸು. ಅವರ ಮಾತು ಮೃದು. ಹೇಳುವ ರೀತಿಯೂ ತುಂಬ ಆಪ್ಯಾಯಮಾನ.


ಅವರು ಬಂಗಾಳಿಯಲ್ಲಿ ಬಂಕಿಮಚಂದ್ರ ಚಟರ್ಜಿ ಅವರ 'ದುರ್ಗೇಶ ನಂದಿನಿ' ಯಿಂದ ಹೇಗೆ ಕಾದಂಬರಿ ಯುಗ ಆರಂಭವಾಯಿತು, ಅವರ ಗದ್ಯಸಾಹಿತ್ಯದ ಶೈಲಿ ಹೇಗೆ ವಿಜೃಂಭಿಸಿತು ಎನ್ನುವುದನ್ನು ಅವಳಿಗೆ ಸ್ವಾರಸ್ಯಕರವಾಗಿ ತಿಳಿಸಿದರು.

''ಹಾಗಾದರೆ ರವೀಂದ್ರನಾಥ ಟಾಗೂರ್‌ರು ಬಂಕಿಮಚಂದ್ರರ ನಂತರ ಬಂದವರೇನು?'' ಇಷಾ ಕೇಳಿದಳು ಕುತೂಹಲದಿಂದ.

''ಹೌದು, 'ದುರ್ಗೇಶನಂದಿನಿ' ಪ್ರಕಟವಾದಾಗ ರವೀಂದ್ರರಿಗೆ ಕೇವಲ ನಾಲ್ಕು ವರ್ಷ. ಟ್ಯಾಗೋರ್ ಅವರ ಪ್ರಸಿದ್ಧ 'ಗೋರಾ' ಕಾದಂಬರಿಯನ್ನು ಓದಿದ್ದೀಯಾ?''

''ಇಲ್ಲ''

''ಸಾಹಿತ್ಯದ ವಿದ್ಯಾರ್ಥಿ ಅಂದಮೇಲೆ ಎಲ್ಲ ಭಾಷೆಗಳ ಪ್ರಮುಖ ಕೃತಿಗಳನ್ನು ಓದುವುದು ಒಳ್ಳೆಯದು. ಬಂಗಾಳಿಯ ಪ್ರಸಿದ್ಧವಾದ ಹಲವಾರು ಕಾದಂಬರಿಗಳು ಕನ್ನಡಕ್ಕೆ ಅನುವಾದಗೊಂಡಿವೆ. ನೀನು ಅವುಗಳನ್ನು ಓದಬೇಕು''. ಎಂದು ಸಲಹೆ ನೀಡಿದರು. ''ಹೋಗಲಿ ನೀನು ಸತ್ಯಜಿತ್‌ರೇ ಅವರ 'ಪಥೇರ್ ಪಾಂಚಾಲಿ' ಸಿನಿಮಾ ನೋಡಿದ್ದೀಯಾ?''



''ಬಹಳ ಹಿಂದೆ ನೋಡಿದ್ದೆ; ಚಿಕ್ಕವಳಿದ್ದಾಗ''

ಆ ಸಿನಿಮಾ ವಿಭೂತಿಭೂಷಣ ಅವರ 'ಪಥೇರ್ ಪಾಂಚಾಲಿ' ಕಾದಂಬರಿಯನ್ನು ಆಧರಿಸಿದ್ದೆಂದೂ, ಬಂಗಾಳಿಯ ಬೇರೆ ಯಾವ ಲೇಖಕರ ಕೃತಿಗಳೂ ಅನುವಾದಕರಿಂದ ಹಾಗೂ ಸಿನಿಮಾ ನಿರ್ಮಾಪಕರಿಂದ ಅಷ್ಟು ತಿರುಚಲ್ಪಡಲಿಲ್ಲವೆಂದೂ ಹೇಳಿದರು. ಸಮೀಕ್ಷೆಯೊಂದರ ಪ್ರಕಾರ ಇಪ್ಪತ್ತನೇ ಶತಮಾನದಲ್ಲಿ ಭಾರತದ ಅತ್ಯಂತ ಜನಪ್ರಿಯ ಕಾದಂಬರಿಕಾರರೆಂಬ ಹಿರಿಮೆ ಶರಶ್ಚಂದ್ರ ಅವರಿಗೆ ಸಂದಿರುವುದು ತಮಗೆ ತುಂಬ ಅಭಿಮಾನವನ್ನು ಉಂಟುಮಾಡಿದೆಯೆಂದು ತಿಳಿಸಿದರು. ಬ್ಯಾನರ್ಜಿ ಅವರ ಒಂದೊಂದು ಮಾತಿನಲ್ಲೂ ಬಂಗಾಳಿ ಸಾಹಿತ್ಯದ ಬಗೆಗೆ ಅವರಿಗಿದ್ದ ಅಪಾರ ಆಸಕ್ತಿ, ಅಭಿಮಾನ ವ್ಯಕ್ತವಾಗುತ್ತಿದ್ದವು.

ಬ್ಯಾನರ್ಜಿ ಅವರಿಂದ ಬಂಗಾಳಿ ಸಾಹಿತ್ಯದ ಹಲವಾರು ವಿಷಯಗಳ ಪರಿಚಯ ಅವಳಿಗಾಯಿತು. ಅವರ ಜ್ಞಾನಸೂರ್ಯನ ಎದುರು ತನ್ನ ತಿಳಿವಳಿಕೆ ಮಿಂಚು ಹುಳದಂತೆ ಅನ್ನಿಸಿ ಅವಳಿಗೆ ಸಂಕೋಚವಾಯಿತು. ಹೆಚ್ಚೆಂದರೆ ಮುವತ್ತೈದರ ಪ್ರಾಯದವರಾಗಿರಬಹುದಾದ ಅವರ ಓದಿನ ವ್ಯಾಪ್ತಿ, ಧೀಶಕ್ತಿಗಳು ಅವಳಲ್ಲಿ ಬೆರಗನ್ನು ಉಂಟುಮಾಡಿದವು. ಕೇವಲ ಬಂಗಾಳಿಯಲ್ಲಿ ಮಾತ್ರವಲ್ಲದೆ ಕನ್ನಡ ಸಾಹಿತ್ಯದ ಬಗೆಗಿದ್ದ ಅವರ ಅರಿವನ್ನು ಕಂಡು ಮಂತ್ರಮುಗ್ಧಳಾದಳು.

ಕುಕ್ಕರಹಳ್ಳಿ ಕೆರೆಯ ಏರಿ ನಿರ್ಜನವಾಗಿತ್ತು, ಅಲ್ಲೊಬ್ಬ ಇಲ್ಲೊಬ್ಬ ಹಾದಿಹೋಕರನ್ನು ಹೊರತುಪಡಿಸಿದಂತೆ. ಸ್ವಚ್ಛ, ನೀಲ, ಗಾಜಿನಂಥ ಆಕಾಶ. ರೇಷ್ಮೆಯ ಎಳೆಯಂತೆ ತಾಗುವ ತಂಗಾಳಿ, ಕಳಕಳಿಸುವ ಹಸಿರು, ಹೊಳೆಹೊಳೆವ ಹೊನ್ನ ಹಳದಿ ಹೂಗಳು...

ಕೆರೆಯ ದಂಡೆಯ ಮೇಲಿನ ಕಲ್ಲುಬೆಂಚಿನ ಮೇಲೆ, ಲತಾಮಂಟಪದ ಒಳಗೆ ಕುಳಿತಿದ್ದ ಇಷಾ

ಅಂದು ತರಗತಿಯಲ್ಲಿ, ನಡೆದ ಘಟನೆಯೊಂದನ್ನು ತುಂಬ ತನ್ಮಯಳಾಗಿ ಹೇಳುತ್ತಿದ್ದಳು.

''ಇಷಾ, ನಿನ್ನ ಮಾತನ್ನು ಎಷ್ಟು ಕೇಳಿದರೂ ಹೀಗೆ ಕೇಳುತ್ತಲೇ ಇರಬೇಕೆನ್ನಿಸುತ್ತದೆ, ನಿನ್ನ ಮಾತು ಸಂಗೀತದ ಹಾಗೆ!''

ಅವರ ಮೆಚ್ಚುಗೆಯ ಮಾತುಗಳಿಂದ ಅವಳ ಮುಖ ನಾಚಿಕೆಯಿಂದ ಕೆಂಪಾಯಿತು. ಒಮ್ಮೆ ಅವರತ್ತ ನೋಡಿದಳು. ಅವಳ ಕಣ್ಣಕೊಳದಲ್ಲಿ ಬ್ಯಾನರ್ಜಿ ಅವರ ಬಿಂಬ ನಾವೆಯಂತೆ ಚಲಿಸಿತು. ಅವಳು ಬಾಗಿ, ನೆಲದ ಮೇಲಿನ ಹುಲ್ಲು ಗರಿಕೆಯನ್ನು ಕಿತ್ತು ಅದರೊಂದಿಗೆ ಆಡತೊಡಗಿದಳು. ಮುಂದೇನೂ ಹೇಳಲು ತೋರದೆ ಮೌನವಾದಳು.

''ಇಷಾ ನಿನ್ನ ಮಾತು ಇಂಪಾಗಿದೆ ಎಂದ ಕೂಡಲೇ ಮಾತಾಡುವುದನ್ನೇ ನಿಲ್ಲಿಸಿಬಿಟ್ಟೆಯಲ್ಲ ಹೋಗಲಿ, ನಿನ್ನ ಕೈನೀಡು, ಭವಿಷ್ಯ ಹೇಳ್ತೀನಿ''

''ನಿಮಗೆ ಬರಿಯೋಕೆ ಅಷ್ಟೇ ಅಲ್ಲ, ಭವಿಷ್ಯ ಹೇಳೋಕೂ ಬರುತ್ತಾ? ನಗುತ್ತಲೇ ತನ್ನ ಕೈ ಮುಂದೆ ಮಾಡಿದಳು''.

''ಹಾಗಲ್ಲ ಹೀಗೆ!'' ಅವಳ ಮಡಿಸಿದ ಬೆರಳುಗಳನ್ನು ಬಿಡಿಸಿ ತಮ್ಮ ಕೈಮೇಲೆ ಇಟ್ಟುಕೊಂಡು ಅಂಗೈನ ಗೆರೆಗಳ ಮೇಲೆ ತಮ್ಮ ತೋರುಬೆರಳನ್ನು ಆಡಿಸುತ್ತ ಲಕ್ಷ್ಯವಿಟ್ಟು ನೋಡುತ್ತ ಕುಳಿತರು.

ಅವರ ಸಾಮಿಪ್ಯ, ಸ್ಪರ್ಶ ಅವಳಲ್ಲಿ ನವುರಾದ ಕಂಪನವನ್ನು ಉಂಟುಮಾಡಿತು. ಮೌನ ವಿಸ್ತಾರವಾಗುತ್ತ ಹೋದಂತೆನಿಸಿ ''ಅಲ್ಲೇನಿದೆ ಅಂತ ಹಾಗೆ ನೋಡುತ್ತಿದ್ದೀರಿ?'' ಎಂದು ನಕ್ಕು ಮೌನವನ್ನು ಮುರಿದಳು.

''ಏನಿದೆ ಎಂದೆಯಾ ಇಷಾ, ಇಲ್ಲಿ ಎಲ್ಲವೂ ಇದೆ ನೋಡು! ನಿನಗೆ ತುಂಬ ಉಜ್ವಲವಾದ ಭವಿಷ್ಯವಿದೆ...''

''ಹೌದಾ! ಥ್ಯಾಂಕ್ಸ್'' ಅವಳಿಗೆ ಅವರ ಮಾತು ಮುದ ತಂದಿತ್ತು.

ಅವಳ ತುಟಿಯಂಚಿನ ನಗುವನ್ನೇ ನೋಡುತ್ತ ಬ್ಯಾನರ್ಜಿ ''ಅಷ್ಟೇ ಅಲ್ಲ, ನಿನಗೆ ಮಹಾರಾಣಿ ಆಗುವ ಯೋಗವಿದೆ''

ಅವಳು ಜೋರಾಗಿ ನಕ್ಕುಬಿಟ್ಟಳು. ''ಇದು ಮಾತ್ರ ಸುಳ್ಳು. ಈ ಕಾಲದಲ್ಲಿ ರಾಜರೇ ಇಲ್ಲ, ಇನ್ನು ಮಹಾರಾಣಿ ಆಗುವುದೆಲ್ಲಿಂದ ಸಾಧ್ಯ?''

ಅವಳಿನ್ನೂ ನಗುತ್ತಲೇ ಇದ್ದಳು:

''ಏಕೆ ಸಾಧ್ಯವಿಲ್ಲ, ಈ ಹೃದಯ ಸಿಂಹಾಸನದಲ್ಲಿ ಕುಳಿತು ರಾರಾಜಿಸುತ್ತಿರುವ ಮಹಾರಾಣಿ ನೀನಲ್ಲದೆ ಮತ್ತಾರು !''

ಅವಳ ನಗು ತಟ್ಟನೆ ನಿಂತು ಹೋಯಿತು. ಅವರು ಏನು ಹೇಳಿದರು ಎಂಬುದನ್ನು ಒಂದು ಕ್ಷಣ ಸಂಬಲಾಗಲಿಲ್ಲ ಅವಳಿಗೆ. ಹೃದಯದಲ್ಲಿ ಆನಂದದ ಮಹಾಪೂರವೇ ಉಕ್ಕಿತು. ಕೆನ್ನೆಯಲ್ಲಿ ಸಂಜೆಯ ಸೂರ್ಯ ಮೂಡಿದ. ಅವಳ ನೋಟ ಕೆಳಗೆ ಬಾಗಿತು, ಕೆರೆಯ ಅಲೆಗಳನ್ನು ದಿಟ್ಟಿಸಿತು.

ಅವಳ ಕೈಯನ್ನು ಭದ್ರವಾಗಿ ಹಿಡಿದ ಬ್ಯಾನರ್ಜಿ ಕೇಳಿದರು, ''ನಿನ್ನಂಥವಳ ಸಂಗಾತಿಯಾಗಲು ನನಗೆ ಯೋಗ್ಯತೆ ಇದೆಯಾ ಹೇಳು ಇಷಾ''.

''ಈ ಪ್ರಶ್ನೆಯನ್ನು ನಾನು ನಿಮಗೆ ಕೇಳಬೇಕಿತ್ತು. ನಿಮ್ಮ ಪ್ರೀತಿ ಈ ಜೀವದ ಸೌಭಾಗ್ಯವೆಂದು ನಾನು ತಿಳಿಯುತ್ತೇನೆ''


ಹೃದಯದಾಳದಿಂದ ಮಾತುಗಳು ಹೊರಬಂದವು, ಮೆಲುವಾಗಿ, ಮಾರ್ದವವಾಗಿ.

ಅವಳ ಕೈಯನ್ನು ತೆಗೆದು ತಮ್ಮ ಕೆನ್ನೆಗೆ ಸೋಕಿಸಿ, ಮೆಲ್ಲಗೆ ಹೂ ಮುತ್ತನಿತ್ತರು.

ಅವಳ ಮೈಯಲ್ಲಿ ಮಿಂಚಿನ ಹೊಳೆ ತುಳುಕಾಡಿತು.

''ಬೇಡಿ, ಬ್ಯಾನರ್ಜಿ ಅವರೆ, ಪ್ಲೀಸ್''.

ಅವಳು ಕತ್ತೆತ್ತಿ ಅವರತ್ತ ನೋಡಿದಳು. ಅವರ ಕಣ್ಣಲ್ಲಿ ಹೊಂಗಿರಣಗಳು ಚೆಲ್ಲುವಂತೆ ಭಾಸವಾಯಿತು.



ದೇವದಾಸ್

ಸುತ್ತಲೂ ಕತ್ತಲಾವರಿಸುತ್ತಿತ್ತು. ನೀರವತೆ ಬೆಳೆಯುತ್ತಿತ್ತು. ಅವಳಿಗೆ ಅಳುಕೆನ್ನಿಸಿ ಮೇಲೆದ್ದಳು.

ಅದಾದ ನಂತರ ನಗರದ ಪಾರ್ಕುಗಳ, ಹೂ ದಿಬ್ಬಗಳ ನಡುವೆ, ಚಾಮುಂಡಿ ಬೆಟ್ಟದ ಹಸಿರು ತಪ್ಪಲಲ್ಲಿ, ಕೊಳದ ದಂಡೆಯಲ್ಲಿ, ನದೀ ತೀರದಲ್ಲಿ ಅವರಿಬ್ಬರ ಹೆಜ್ಜೆಗಳು ಮೂಡಿದವು. ಸಂಜೆಮಲ್ಲಿಗೆಯ ಹಾಗೆ ಮಾತುಗಳು ಅರಳಿದವು.

''ಇಷಾ, ನನ್ನ ಇಷಾ, ಭಾವನೆಗಳು ನಿನ್ನಲ್ಲಿ ಪರಿಮಳಿಸುವ ಹಾಗೆ ಬೇರೆ ಯಾರಲ್ಲೂ ಆಗುವುದನ್ನು ನಾನು ನೋಡಿಲ್ಲ'' ಎಂದರು ಬ್ಯಾನರ್ಜಿ.

''ಮಹಾಭಾರತದಲ್ಲಿ ಮತ್ಸ್ಯಗಂಧಿಯ ಚೆಲುವಿಗೆ ಶಂತನು ಮರುಳಾದಂತೆ, ನಿನ್ನ ಸೌಂದರ್ಯಕ್ಕೆ ನಾನು ಸೋತು ಶರಣಾಗಿದ್ದೇನೆ''.

ಅವರ ಮಾತಿಗೆ ಅವಳು ಮೌನವಾಗಿ ಸ್ಪಂದಿಸಿದಳು. ಎಲ್ಲ ಪ್ರೇಮಿಗಳ ಹಾಗೆ ಅವರ ಕನಸಿನಲ್ಲೂ ಹೂವಿತ್ತು, ಜೇನಿತ್ತು, ಸೂರ್ಯ ನೊಡಲ ಬಿಸಿಯಿತ್ತು, ತಿಳಿಗೊಳದ ತಂಪಿತ್ತು, ದಿನಕ್ಕೊಂದು ಸವಿ ಬಗೆ. ಎದೆಯಲ್ಲಿ ಕಾಮನ ಬಿಲ್ಲಿನ ಹೊಸಬೆಳೆ!

ಆ ಸಂಜೆ, ಬಯಲು ರಂಗಮಂದಿರದ ಮೆಟ್ಟಲಿನ ಮೇಲೆ ಕುಳಿತು ಬ್ಯಾನರ್ಜಿ ಇಷಾ ಳೊಂದಿಗೆ ನುಡಿದರು.

''ನಾಳೆ ನಾನು ಊರಿಗೆ ಹೊರಡಲಿದ್ದೇನೆ''

ಅವರ ಮಾತಿನಿಂದ ಅವಳಿಗೆ ಆಶ್ಚರ್ಯಾಘಾತ ವಾಯಿತು.

''ಇದೇನು ಇದ್ದಕ್ಕಿದ್ದಂತೆ ಹೊರಟಿದ್ದೀರಿ? ರಜೆ ಮುಗಿಯಲು ಇನ್ನೂ ಒಂದು ತಿಂಗಳು ಇದೆಯಲ್ಲ!''

''ಇದೆ, ಆದರೆ ಅಮ್ಮನಿಗೆ ತುಂಬ ಹುಷಾರಿಲ್ಲವಂತೆ. ಅದಕ್ಕೆ ಕೂಡಲೇ ಬರುವಂತೆ ತಿಳಿಸಿದ್ದಾರೆ''.

''ನಿಮ್ಮನ್ನು ಬಿಟ್ಟು ನಾನು ಹೇಗಿರಲಿ? ಮತ್ತೆ ಯಾವಾಗ ಬರುತ್ತೀರಿ ಇಲ್ಲಿಗೆ?''

ತಾವು ಹೋಗಿ ತಾಯಿಯನ್ನು ನೋಡಿ ಕೊಂಡು ಒಂದು ವಾರದಲ್ಲಿ ಹಿಂತಿರುಗುವುದಾಗಿ ತಿಳಿಸಿದರು.

ಅವರ ಮಾತನ್ನು ನಂಬಬಹುದೆ?... ಅವಳ ಕಣ್ಣಲ್ಲಿ ನೀರಾಡಿತು.

''ಛಿ! ಇಷ್ಟಕ್ಕೆಲ್ಲ ಅಳುತ್ತಾರ ಇಷಾ, ನನ್ನ ಮಾತಲ್ಲಿ ನಂಬಿಕೆಯಿಲ್ಲವ, ನನ್ನ ಕಣ್ಣಲ್ಲಿ ಕಣ್ಣಟ್ಟು ಹೇಳು''.

ಅವಳಿಗೆ ಅವರ ಮಾತಲ್ಲಿ ಭರವಸೆ ಮೂಡಿ ದಂತಾಗಿ ತೆಳುನಗು ತುಟಿಯಲ್ಲಿ ಹರಡಿತು.

ಅವರು ''ಗುಡ್‌ಗರ್ಲ್'' ಎಂದು ಅವಳ ಕೆನ್ನೆ ಮೃದುವಾಗಿ ತಟ್ಟಿದರು.

''ಮತ್ತೆ, ನನ್ನನ್ನು ಕಲ್ಕತ್ತಾಗೆ ಕರೆದುಕೊಂಡು ಹೋಗೋದಿಲ್ಲವ? ನಿಮ್ಮ ಬಾಳ ಸಂಗಾತಿ ಆಗಬೇಕೆನ್ನುವ ನನ್ನ ಕನಸನ್ನು ಯಾವಾಗ ನನಸು ಮಾಡ್ತೀರಿ?'' ಗದ್ಗದಿತ ಸ್ವರದಲ್ಲಿ ನುಡಿದಳು. ಕತ್ತಲು ಆವರಿಸುತ್ತಿತ್ತು.

ಅವಳ ಬೆರಳುಗಳೊಂದಿಗೆ ಆಡುತ್ತಿದ್ದ ಬ್ಯಾನರ್ಜಿ ''ಇಷಾ ನೀನು ಯಾವಾಗಲೂ ನನ್ನ ಹೃದಯದಲ್ಲೇ ಇದ್ದೀಯ. ಮೊದಲು ನಿನ್ನ ಓದು ಮುಗೀಲಿ. ಅನಂತರ ನಾವಿಬ್ಬರೂ ಜೊತೆಯಾಗಿ ಜೀವನಪೂರ್ತಿ ಇದ್ದುಬಿಡೋಣ ಹೀಗೆ...''

ಅವಳನ್ನು ತೋಳಿನಿಂದ ಬಳಸಿದ ಬ್ಯಾನರ್ಜಿ ಗಾಢವಾಗಿ ಚುಂಬಿಸಿದ್ದರು...

ಸವಿನೆನಪಿನ ಲೋಕದಲ್ಲಿ ತೇಲಿಹೋಗಿದ್ದ ಅವಳನ್ನು ತಾಯಿಯ ಕರೆ ಎಚ್ಚರಿಸಿತು... ಕಾಲಿಚರಣ್ ಬ್ಯಾನರ್ಜಿ ಕಲ್ಕತ್ತಾಗೆ ಹೋಗಿ ವಾರಗಳು ಉರುಳಿದವು. ಅವರ ಬರುವಿಕೆಗಾಗಿ ಕಾದೂ ಕಾದೂ ಅವಳ ಕಣ್ಣುಗಳು ಸೋತವು. ಅವರಿಬ್ಬರೂ ನಡೆದಾಡಿದ ಹಾದಿಯಲ್ಲಿ ಹುಲ್ಲು ಬೆಳೆಯಿತು. ಮರದ ತುಂಬ ಕಂಗೊಳಿಸುತ್ತಿದ್ದ ಹೊನ್ನ ಹೂಗಳು ಉದುರಿದವು.

ಅವಳು ಬ್ಯಾನರ್ಜಿ ಅವರ ವಿಳಾಸಕ್ಕೆ ಪತ್ರ ಬರೆದಳು. ಅದಕ್ಕೂ ಉತ್ತರ ಬರಲಿಲ್ಲ. ಅವರ ತಾಯಿಯ ದೇಹಸ್ಥಿತಿ ಏನಾಗಿದೆಯೋ, ಜೊತೆಗೆ ರಜೆಯೂ ಮುಗಿಯುತ್ತಾ ಹೋಯಿತು... ಅವಳ ನಿರೀಕ್ಷೆಯ ಕಣ್ಣುಗಳು ಕೊಳಗಳಾದವು.

ಅವಳು ಕ್ಲಾಸಿನಲ್ಲಿದ್ದಾಗ ಅವಳಿಗೆ ಒಂದು ಪಾರ್ಸೆಲ್ ಬಂತು. ಅದನ್ನು ಕಳಿಸಿದವರು ಯಾರೆಂದು ಕುತೂಹಲದಿಂದ ನೋಡಿದಳು ಕೆ. ಬ್ಯಾನರ್ಜಿ, ಕಲ್ಕತ್ತಾ ಎಂದು ಬರೆದಿತ್ತು. ಅವಳಿಗೆ ಸಂತೋಷವನ್ನು ತಡೆಯಲಾಗಲಿಲ್ಲ. ಅಲ್ಲಿಂದ ಹೊರಟು ಸೀದಾ ಮನೆಗೆ ಹೋದಳು. ತನ್ನ ರೂಮಿನ ಬಾಗಿಲು ಹಾಕಿಕೊಂಡು ಆ ಪಾರ್ಸೆಲನ್ನು ಬಿಚ್ಚಿದಳು.

ಚೆಲುವೆಯೊಬ್ಬಳ ಕಲಾತ್ಮಕವಾದ ಮುಖ ಪುಟವಿದ್ದ ಪುಸ್ತಕ ಅದರಲ್ಲಿತ್ತು. ಅದು ಬ್ಯಾನರ್ಜಿ ಅವರ ಕಾದಂಬರಿ. ಅದರ ಹೆಸರು 'ಸ್ವಪನ್ ಸಂಗೀತಾ' ಎಂದಿತ್ತು. ಅವರು ಅದನ್ನು ಇಷಾಳಿಗೆ ಅರ್ಪಣೆ ಮಾಡಿದ್ದರು. ಪುಸ್ತಕದ ಹಿಂಬದಿಯಲ್ಲಿ ಕಾಲಿಚರಣ್ ಬ್ಯಾನರ್ಜಿ ಅವರ ನಗುಮೊಗದ ಭಾವಚಿತ್ರವಿತ್ತು.

ಪುಸ್ತಕದ ಹೆಸರು, ಅರ್ಪಣೆ ಇವುಗಳೆಲ್ಲ ಇಂಗ್ಲಿಷಿನಲ್ಲಿ ಇದ್ದುದರಿಂದ ಅದನ್ನು ಅವಳಿಗೆ ಓದಲು ಸಾಧ್ಯವಾಗಿತ್ತು. ಸುಮಾರು ಮುನ್ನೂರು ಪುಟದ ಕಾದಂಬರಿ ಅದು. ಅವಳಿಗೆ ಬ್ಯಾನರ್ಜಿ ತನ್ನನ್ನು ಮರೆತಿಲ್ಲ ಎಂದುಕೊಂಡು ಬಹಳ ಸಂತೋಷವಾಯಿತು. ಅವರು ಪುಸ್ತಕ ತನಗೆ ಅರ್ಪಿಸಿದ್ದಾರೆಂದ ಮೇಲೆ ತನ್ನ ಮೇಲೆ ಅವರಿಗೆ ಅದೆಷ್ಟು ಪ್ರೀತಿಯಿದೆ ಎನ್ನಿಸಿ ಅವರ ಭಾವಚಿತ್ರಕ್ಕೆ ಮುತ್ತಿಟ್ಟಳು.

ಹರಿದ ಪಾರ್ಸೆಲಿನ ಒಳಗೆ ಇನ್ನೊಂದು ಪತ್ರ ಇರುವುದು ಅವಳ ಗಮನಕ್ಕೆ ಬಂದಿತು. ಅವಳು ಅದನ್ನು ಸರಸರನೆ ತೆಗೆದು ಓದತೊಡಗಿದಳು

ಪ್ರೀತಿಯ ಇಷಾ,

ಹೇಗಿದ್ದೀಯ? ನಿನಗೆ ಮಾತುಕೊಟ್ಟಂತೆ

ಹಿಂತಿರುಗಿ ಬರಲಾಗಲಿಲ್ಲ, ಕ್ಷಮಿಸು. ಈಗ ರಜೆ ಮುಗಿದಿರುವುದರಿಂದ ಬ್ಯಾಂಕಿಗೆ ಹೋಗುತ್ತಿದ್ದೇನೆ.

ಇಷಾ, ನಿನ್ನೊಂದಿಗೆ ಮೈಸೂರಿನಲ್ಲಿ ನಾನು ಕಳೆದ ಕ್ಷಣಗಳು ಸದಾ ಹಚ್ಚಹಸಿರಾಗಿವೆ. ನಿನ್ನ ಸ್ನೇಹ, ಪ್ರೀತಿಯ ನೆನಪು ಈ ಹೃದಯವನ್ನು ತುಂಬಿದೆ. ನಿನ್ನ ಗೆಳೆತನ ನನ್ನ ಈ ಕಾದಂಬರಿಗೆ ಹಂದರವೊಂದನ್ನು ಒದಗಿಸಿತು ಮಾತ್ರವಲ್ಲ , ಅದಕ್ಕೆ ರಕ್ತ, ಮಾಂಸಗಳನ್ನು ತುಂಬಿ ಜೀವವನ್ನೂ ನೀಡಿತು. ನನ್ನ 'ಸ್ವಪನ್ ಸಂಗೀತಾ' ಕ್ಕೆ ಸ್ಫೂರ್ತಿ, ಪ್ರೇರಣೆ ಎಲ್ಲವೂ ನೀನೇ. ಅದರ ಯಶಸ್ಸು ಸಂಪೂರ್ಣವಾಗಿ ನಿನಗೇ ಸೇರಿದ್ದು.

ಮೊದಲಿಗೇ ನಿನ್ನ ತಂಪಾದ ಕಣ್ಣುಗಳಲ್ಲಿ ಮೂಡುತ್ತಿದ್ದ ಬೆಚ್ಚನೆಯ ಭಾವಗಳು ನನ್ನನ್ನು ಆಕರ್ಷಿಸಿದವು. ನಾನಾಗ ಈ ಕಾದಂಬರಿಯನ್ನು ಬರೆಯುವ ಸಿದ್ಧತೆ ಮಾಡುತ್ತಿದ್ದೆ. ಅದರಲ್ಲಿ ಮುಗ್ಧ, ಭಾವುಕ ಮನಸ್ಸಿನ ಯುವತಿಯೊಬ್ಬಳ ಪ್ರೇಮದ ಒಂದು ವಾಸ್ತವ ಚಿತ್ರಣವನ್ನು ನಾನು ಮಾಡಲು ಬಯಸಿದ್ದೆ.

ಹಾಗಾಗಿ ನಾನು ನಿನ್ನ ಆ ಸುಂದರವಾದ ಮೊಗದಲ್ಲಿ ಅರಳುವ ಭಾವದ ಹೂವುಗಳನ್ನು ಸೂಕ್ಷ್ಮವಾಗಿ ಗಮನಿಸತೊಡಗಿದೆ. ನಿನ್ನ ನುಡಿ ಮುತ್ತುಗಳನ್ನು ಆರಿಸಿ ಅಕ್ಷರರೂಪದಲ್ಲಿ ಪೋಣಿಸುತ್ತಾ ಹೋದೆ. ನಿನ್ನ ಕಣ್ಣ ಮಿಂಚು, ಬೆರಳಿನ ನವುರು, ಕಂಪನ, ಮೃದುಮಾತಿನಲ್ಲಿ ಹೊಮ್ಮುವ ಮಧುರ ಮಾದಕತೆಗಳು ನನ್ನ ಕಾದಂಬರಿಯಲ್ಲಿ ಪ್ರತಿಬಿಂಬಿಸಿದವು. ಆ ನಿನ್ನ ನಿಷ್ಕಲ್ಮಶ ಪ್ರೀತಿ ತಾದಾತ್ಮ್ಯ, ಉತ್ಕಟತೆ ಎಲ್ಲವೂ ಅದರಲ್ಲಿ ಮರುಸ್ಪಂದನಗೊಂಡವು.

ನನ್ನನ್ನು ಕ್ಷಮಿಸು,ಇಷಾ. ನಿನಗೆ ಬಹಳ ವಿಚಿತ್ರ ಅನ್ನಿಸಬಹುದು. ನಾನು ನಿನ್ನ ಪ್ರೀತಿಯನ್ನು ಮನಸಾರೆ ಅನುಭವಿಸಿದೆ. ಆ ಪ್ರೇಮ ಪುಷ್ಪದ ಪರಿಮಳವನ್ನು ಗಾಢವಾಗಿ ಆಘ್ರಾಣಿಸಿದೆ, ನಿಜ. ಆದರೆ ಒಬ್ಬ ಪ್ರೇಮಿಯಾಗಿ ಅಲ್ಲ, ಒಬ್ಬ ಲೇಖಕನಾಗಿ! ಆ ತೀವ್ರವೂ ಮಧುರವೂ ಆದ ಅನುಭವಕ್ಕೆ ನನ್ನನ್ನು ಒಡ್ಡಿಕೊಂಡಿದ್ದರಿಂದಲೇ 'ಸ್ವಪನ್ ಸಂಗೀತಾ'ದಂಥ ಉತ್ಕೃಷ್ಟವೂ, ಕಾವ್ಯಾತ್ಮಕವೂ ಆದ ಕಾದಂಬರಿಯನ್ನು ನಾನು ಬರೆಯುವುದಕ್ಕೆ ಸಾಧ್ಯವಾಯಿತು.

ನಿನಗೆ ನಾನು ತಿಳಿಸದೆ ಮುಚ್ಚಿಟ್ಟ ಮತ್ತೊಂದು ಸಂಗತಿ ಎಂದರೆ ನಾನು ವಿವಾಹಿತ. ನನ್ನ ಹೆಂಡತಿ ಹಳ್ಳಿಯ ಹುಡುಗಿ, ಹಠಮಾರಿ. ಬಡತನದ ಹಿನ್ನೆಲೆಯ ನನಗೆ ಓದಲು ಧನಸಹಾಯ ಮಾಡಿದ ಶ್ರೀಮಂತನ ಮಗಳು. ಮಾವ ಎನ್ನಿಸಿಕೊಂಡವನು ಮಹಾದುಷ್ಟ. ನನ್ನ ಓದು ಮುಗಿಯುತ್ತಿದ್ದಂತೆಯೇ ಅವಳನ್ನು ನನ್ನ ಕೊರಳಿಗೆ ಕಟ್ಟಿ ಕೈತೊಳೆದುಕೊಂಡ. ಅವಳು ನನ್ನ ಮನೆ ತುಂಬಿದಳೇ ಹೊರತು ಮನ ತುಂಬಲಿಲ್ಲ. ವ್ಯಾಸಂಗ ಮಾಡುತ್ತಿದ್ದಾಗಲೂ ಸಹ ಬಡತನದ ಕೀಳರಿಮೆಯಿಂದ ಕುಗ್ಗಿಹೋಗಿದ್ದ ನಾನು ಹುಡುಗಿಯರನ್ನು ಕಣ್ಣೆತ್ತಿಯೂ ನೋಡುತ್ತಿರಲಿಲ್ಲ. ಹೀಗಾಗಿ ಸ್ವಚ್ಛ, ನಿರ್ಮಲ, ಕೋಮಲ ಒಲವಿನ ಅನುಭವಕ್ಕೆ ನನ್ನನ್ನು ತೆರೆದುಕೊಳ್ಳುವ ಅವಕಾಶ ನನಗೆ ಎಂದಿಗೂ ಒದಗಿ ಬರಲಿಲ್ಲ, ನಿನ್ನ ಸಂಧಿಸುವವರೆಗೆ.

ಅಂದ ಹಾಗೆ ನನಗೆ ನಾಲ್ಕು ವರ್ಷದ ಒಬ್ಬ ಮಗನೂ ಇದ್ದಾನೆ. ಇಷಾ ಇದು ವಾಸ್ತವ. ವಾಸ್ತವದಾಚೆಗಿನ ಕಥೆ ಬರೆಯಲು ಹೊರಟ ನಾನು ಕನಸಿನಲೋಕವನ್ನು ನಿನ್ನಿಂದ ಕಂಡೆ. ಮೊದಮೊದಲು ಯಾಂತ್ರಿಕವಾಗಿ, ಉದ್ದೇಶಪೂರ್ವಕವಾಗಿ ನಿನ್ನೊಂದಿಗೆ ವರ್ತಿಸುತ್ತಿದ್ದ ನಾನು ಕೊನೆಗೆ ನಿನ್ನಲ್ಲಿ ಅನುರಕ್ತನಾಗುತ್ತಿರುವುದನ್ನು ತಿಳಿದು ಆತಂಕಗೊಂಡೆ. ಆದ್ದರಿಂದಲೇ ಇನ್ನೂ ಸಾಕಷ್ಟು ದಿನ ರಜೆ ಇದ್ದರೂ ನಾನು ತಕ್ಷಣ ಅಲ್ಲಿಂದ ಹಿಂತಿರುಗಿದೆ.

ಈಗ ನನ್ನ ನಡತೆಯ ಬಗ್ಗೆ ನನಗೆ ತುಂಬ ಪಶ್ಚಾತ್ತಾಪವಾಗಿದೆ. ನಾನು ನಿನ್ನ ಭಾವನೆಗಳ ಜೊತೆ ಚೆಲ್ಲಾಟವಾಡಿದೆ. ಭಾವಜೀವಿಯಾದ ನಿನ್ನ ಮನಸ್ಸಿಗೆ ನನ್ನಿಂದ ತುಂಬ ನೋವಾಗಿದೆ ಎಂದು

ನನಗೆ ಗೊತ್ತು. ಆದರೆ ಈ ವಿಷಯದಲ್ಲಿ ನಾನು ಅಸಹಾಯಕ. ನಿನ್ನನ್ನು ಪ್ರೀತಿಸುವಂತೆ ನಟಿಸಿ, ನಂಬಿಸಿ, ದ್ರೋಹ ಮಾಡಿದ ವಂಚಕ. ದಯವಿಟ್ಟು ನನ್ನನ್ನು ಕ್ಷಮಿಸು ಇಷಾ. ನನ್ನನ್ನು ಮರೆತು ಯಾರಾದರೂ ಯೋಗ್ಯನನ್ನು ಮದುವೆಯಾಗಿ ಸುಖವಾಗಿರು. ಆದರೆ ಒಂದು ಎಚ್ಚರಿಕೆಯ ಮಾತು; ಇನ್ನು ಮುಂದೆ ಕೇವಲ ಅನುಭವದ ಬೆನ್ನು ಹತ್ತುವ ನನ್ನಂಥ ಲೇಖಕರ ಬಗ್ಗೆ ತುಂಬ ಎಚ್ಚರದಿಂದಿರು.

ನಿನ್ನ ನೆನಪು ಸದಾ ನನ್ನೆದೆಯಲ್ಲಿ ಬೆಳಗುವ ಹೊನ್ನ ಪ್ರಣತಿ. ಕ್ಷಮೆಯಿರಲಿ ಗೆಳತಿ.

ಇಂತಿ ನಿನ್ನ
ಬ್ಯಾನರ್ಜಿ.

ಇಷಾಳ ಕಣ್ಣುಗಳಿಂದ ಕಂಬನಿ ಧಾರೆಧಾರೆಯಾಗಿ ಹರಿಯಿತು. ಅವಳು 'ಸ್ವಪನ್ ಸಂಗೀತಾ' ಕಾದಂಬರಿಯನ್ನು ಕೈಗೆತ್ತಿಕೊಂಡು ಒಂದು ಸಲ ಮೊದಲಿಂದ ಕೊನೆಯ ಪುಟದವರೆಗೂ ಕಣ್ಣಾಡಿಸಿದಳು.

ಅನಂತರ ಟೇಬಲ್ಲಿನ ಡ್ರಾಯರನ್ನು ಎಳೆದು ಬೆಂಕಿಪೊಟ್ಟಣವನ್ನು ತೆಗೆದುಕೊಂಡು ಕಡ್ಡಿಗೀಚಿ ಆ ಕಾದಂಬರಿಗೆ ಹಿಡಿದಳು. ನೋಡನೋಡುತ್ತಿದ್ದಂತೆ 'ಸ್ವಪನ್ ಸಂಗೀತಾ' ಜ್ವಾಲೆಗಳನ್ನು ಹೊಮ್ಮಿಸುತ್ತಾ ಉರಿಯತೊಡಗಿತು.

ನನ್ನ ಪಾಲಿಗೆ ಕಥೆ ಎಂದರೆ ...

ಅದೊಂದು ಅನುಭವದ ಹೊಳಹು, ವಿಚಾರದ ಮಿಂಚು ಹಾಗೂ ಭಾವದ ಒಂದು ಬೆಳಕು. ಅಷ್ಟೇ ಅಲ್ಲ ಅದು ಕಥನಾತ್ಮಕತೆಯೊಂದಿಗೇ ಭಾವಗೀತಾತ್ಮಕತೆಯನ್ನೂ ಒಳಗೊಳ್ಳುವ ಒಂದು ನಿರೂಪಣಾ ವಿಧಾನ ಮತ್ತು ಭಾವದ ಸೂಕ್ಷ್ಮತೆಯ ಜೊತೆಗೇ ಅಭಿವ್ಯಕ್ತಗೊಳ್ಳುವ ಬದುಕಿನ ಸಂಕೀರ್ಣತೆಯ ಒಂದು ದರ್ಶನ.

ಲತಾ ರಾಜಶೇಖರ್



ಭಾವನಾ

ಮುಂದಿನ ಸಂಚಿಕೆಗಳಲ್ಲಿ.......

• ಶ್ರೇಷ್ಠ ಕತೆಗಳು • ಆತ್ಮಕಥನ • ಸಂದರ್ಶನ

• ಸ್ಮೃತಿ ಚಿತ್ರ • ಲಲಿತ ಪ್ರಬಂಧ.

ಓದುಗರಿಗಾಗೇ ರೂಪಿಸಲಾಗಿರುವ ಹೊಸ ಅಂಕಣಗಳು.

ಸ್ಫೂರ್ತಿದೇವತೆ!

ಚಿತ್ತಾಲರ 'ಶಿಕಾರಿ'ಯ ನಾಗಪ್ಪ, ಎಂ.ಕೆ.ಇಂದಿರಾರ 'ಸದಾನಂದ' ಕಾದಂಬರಿಯ ನಾಯಕ, ಕಾರಂತರ ಮೂಕಜ್ಜಿ... ಹೀಗೆ ನೀವು ಓದಿದ ಕೃತಿಯ ಪಾತ್ರವೊಂದು ಇಷ್ಟದೇವತೆಯಾಗಿ ನಿಮ್ಮನ್ನು ಕಾಡಿರಬಹುದು. ರೋಲ್‌ಮಾಡೆಲ್ ಆಗಿ ನಿಮ್ಮನ್ನು ರೂಪಿಸುತ್ತಿರಬಹುದು. ನಿಮ್ಮನ್ನು ಕಲಕಿ ಮನದಲ್ಲಿ ನೆಲೆಯೂರಿದ ಇಂತಹ ಸ್ಫೂರ್ತಿದೇವತೆಗಳ ಬಗ್ಗೆ, ಅವರು ನಿಮ್ಮ ನಿಲುವನ್ನು, ದಾರಿಯನ್ನು ಪ್ರಭಾವಿಸಿದ ಬಗ್ಗೆ ಒಂದು ಫುಲ್‌ಸ್ಕೇಪ್ ಹಾಳೆಗೆ ಮೀರದಂತೆ ಬರೆದು ಕಳುಹಿಸಿ. ನಿಮ್ಮ ಈ ಪುಟ, ಬರಹ ಮತ್ತು ಬದುಕಿನ ನಡುವಿನ ವಿಶಿಷ್ಟ ಗುಣಾತ್ಮಕ ಸಂಬಂಧದ ಮೇಲೆ ಬೆಳಕು ಚೆಲ್ಲಬಹುದು. ಇತರರಿಗೂ ಉಪಯುಕ್ತವಾಗಬಹುದು.

ನಿಮ್ಮ ಮುದ್ದು ತಪ್ಪು !

ನೀವು ಮಾಡಿದ ತಪ್ಪಿನಿಂದಾಗಿ ಅನಿರೀಕ್ಷಿತವಾಗಿ ನಿಮಗೋ, ಇತರರಿಗೋ ಒಳ್ಳೆಯದಾಗಿದೆಯೇ? 'ಬ್ಲೆಸಿಂಗ್ ಇನ್ ಡಿಸ್ ಗೈಸ್'ಥರದ ಪ್ರಮಾದ ಮಾಡಿ ಆ ಕುರಿತು ಹೆಮ್ಮೆ ಪಟ್ಟುಕೊಳ್ಳುವಂತಾಗಿತ್ತೆ? ಅಂತಹ ಕುತೂಹಲ ಕಾರಿ ತಪ್ಪಿನ ಬಗ್ಗೆ ನಮಗೆ ಸಂಕ್ಷಿಪ್ತವಾಗಿ ಒಂದು ಪುಟ ಬರೆದು ಕಳಿಸಿ.

ಉತ್ತಮ ಛಾಯಾಚಿತ್ರ

ವರ್ಣಪಾರದರ್ಶಿಕೆಗಳಿಗೆ ಸ್ವಾಗತ

ನಾಡಿನ ವೃತ್ತಿನಿರತ ಮತ್ತು ಹವ್ಯಾಸಿ ಛಾಯಾ ಚಿತ್ರಗ್ರಾಹಕರಿಂದ/ಕಲಾವಿದರಿಂದ ಅತ್ಯುತ್ತಮ ವರ್ಣ ಮತ್ತು ಕಪ್ಪುಬಿಳುಪು ಛಾಯಾಚಿತ್ರ ಗಳನ್ನು/ಕಲಾಕೃತಿಗಳ ವರ್ಣಪಾರದರ್ಶಿಕೆಗಳನ್ನು ಆಹ್ವಾನಿಸುತ್ತಿದ್ದೇವೆ.

ನಿಮ್ಮ ಹೆಸರು ವಿಳಾಸ ಸ್ಪಷ್ಟವಾಗಿರಲಿ. ಆಯ್ಕೆಯಾದ ಬರಹಗಳಿಗೆ/ಚಿತ್ರಗಳಿಗೆ ಬಹುಮಾನ ಉಂಟು.

ವಿಳಾಸ: ಸಂಪಾದಕರು ಭಾವನಾ
ನಂ. 32, 2ನೆಯ ಮುಖ್ಯ ರಸ್ತೆ, ವೈಯಾಳಿಕಾವಲ್ ಬೆಂಗಳೂರು - 560 003
ದೂರವಾಣಿ: 3365312, 3365313.



ಚಾರ್ಲಿ ಚಾಪ್ಲಿನ್

ಲಯ



ಸ್ಪೇನಿನ ಆ ಕಿರಿದಾದ ಕಾರಾಗೃಹದ ಮೂಕ ನೀರವತೆಯಲ್ಲಿ ಚಲಿಸಿದ್ದು ಬೆಳಗು. ಬಂದೂಕುಧಾರಿಗಳ ಪಡೆಯೆದುರು ನಿಂತಿದ್ದ ಆ ಯುವ ನಿಷ್ಠಾವಂತ. ಪೂರ್ವಭಾವಿ ಏರ್ಪಾಡುಗಳು ಮುಗಿದಿದ್ದವು. ಇನ್ನು ಅಂತ್ಯವನ್ನು ನೋಡಲೆಂದು ಒಂದು ಬದಿಗೆ ಸರಿದು ಗುಂಪುಗೂಡಿದ್ದ ಅಧಿಕಾರಿಗಳ ಪುಟ್ಟ ಸಮೂಹ. ಇಡೀ ದೃಶ್ಯ ವಿಹ್ವಲ ಮೌನದಲ್ಲಿ ಬಿಗಿದುಕೊಂಡ ಹಾಗಿತ್ತು.

ಮರಣದಂಡನೆಗೆ ಕೇಂದ್ರ ಕಚೇರಿಯಿಂದ ತಡೆಯಾಜ್ಞೆ ಬರಬಹುದೆಂಬ ಭರವಸೆಯಲ್ಲಿ ಬಂಡುಕೋರರು ಕಡೆ ಗಳಿಗೆವರೆಗೂ ಕಾದಿದ್ದರು. ಯಾಕೆಂದರೆ ಆರೋಪಿ, ಬಂಡುಕೋರರ ಹೋರಾಟದ ವಿರೋಧಿಯಾಗಿದ್ದರೂ, ಸ್ಪೇನಿನಲ್ಲಿ ಅಪಾರ ಜನಪ್ರೀತಿ ಪಡೆದ ಉಜ್ವಲ ಹಾಸ್ಯ ಬರಹಗಾರನಾಗಿದ್ದ; ದೇಶದ ಸಂತೋಷಕ್ಕೆ ಸಾಕಷ್ಟು ಕೊಡುಗೆ ಕೊಟ್ಟಿದ್ದ.

ಈ ಬಂದೂಕುಧಾರಿಗಳ ಮೇಲಿನ ಮುಖ್ಯ ಅಧಿಕಾರಿಗೂ ಆತನ ವೈಯಕ್ತಿಕ ಪರಿಚಯವಿತ್ತು. ಅಂತರ್ಯುದ್ಧಕ್ಕೆ ಮುಂಚೆ ಅವರಿಬ್ಬರೂ ಗೆಳೆಯರಾಗಿದ್ದರು. ಮ್ಯಾಡ್ರಿಡ್ ವಿಶ್ವವಿದ್ಯಾಲಯದಲ್ಲಿ ಒಟ್ಟಿಗೇ ಪದವಿ ಪಡೆದಿದ್ದರು. ರಾಜಪ್ರಭುತ್ವವನ್ನು ಕಿತ್ತೊಗೆಯಲು ಮತ್ತು ಚರ್ಚಿನ ಪರಮಾಧಿಕಾರದ ವಿರುದ್ಧ ಒಟ್ಟಿಗೇ ಹೋರಾಡಿದ್ದರು. ಒಟ್ಟಿಗೇ ಕೂತು ಕುಡಿದಿದ್ದರು. ಎಷ್ಟೋ ರಾತ್ರಿಗಳು ಹೋಟೆಲ್ ಮೇಜಿನ ಮುಂದೆ ಕೂತು ಹಾಸ್ಯ ಮಾಡಿಕೊಂಡು ನಕ್ಕಿದ್ದರು. ಸಂಜೆಗಳನ್ನು ಆಧ್ಯಾತ್ಮಿಕ ಚರ್ಚೆಯಲ್ಲಿ ಸಂತೋಷವಾಗಿ ಕಳೆದಿದ್ದರು. ಕೆಲವು ಬಾರಿ ಸರ್ಕಾರದ ಗತಿತಾರ್ಕಿಕತೆಯ ಮೀಮಾಂಸೆಯಲ್ಲಿ ವಾದ ಹೂಡಿದ್ದೂ ಉಂಟು. ಆ ಕಾಲದ ಅವರ ತಾಂತ್ರಿಕ ಭಿನ್ನಾಭಿಪ್ರಾಯಗಳಿಗೂ ಸ್ನೇಹದ ಸ್ಪರ್ಶವಿತ್ತು. ಆದರೆ ಆ ಅಭಿಪ್ರಾಯಭೇದವೇ ಈಗ ದೇಶಾದ್ಯಂತ ಕ್ಲೇಶ ಹಾಗೂ ವಿಪ್ಲವಗಳನ್ನು ತಂದೊಡ್ಡಿ, ಗೆಳೆಯನನ್ನು ಬಂದೂಕುಪಡೆಯ ಮುಂದೆ ತಂದು ನಿಲ್ಲಿಸಿತ್ತು.


ಅಷ್ಟಾದರೂ, ಈಗ ಯಾಕೆ ಕಳೆದುಹೋದದ್ದರ ಚಿಂತೆ? ಕಾರಣಗಳ ಹುಡುಕಾಟ ಯಾಕೆ ಬೇಕು? ಅಂತರ್ಯುದ್ಧ ಮುಗಿದ ಮೇಲೆ ಕಾರಣ, ವಿವರಣೆಗಳಿಂದಲಾದರೂ ಏನು ಉಪಯೋಗ? ಜೈಲಿನ ಅಂಗಳದ ಮೌನದಲ್ಲಿ ಈ ಪ್ರಶ್ನಾರ್ಥಕ ಆಲೋಚನೆಗಳು ಆ ಅಧಿಕಾರಿಯ ತಲೆಯಲ್ಲಿ ಬಿರುಸಾಗಿ ಹರಿದಾಡಿದವು.

ಇಲ್ಲ. ಭೂತಕಾಲದ ಕದ ಮುಚ್ಚಬಿಡಬೇಕು. ಮುಖ್ಯವಾದದ್ದು ಭವಿಷ್ಯ ಮಾತ್ರ. ಭವಿಷ್ಯ? ಎಂಥ ಭವಿಷ್ಯ? ಎಷ್ಟೋ ಗೆಳೆಯರನ್ನು ಕಳೆದುಕೊಳ್ಳಬೇಕಾದ ಭವಿಷ್ಯದ ಜಗತ್ತು....

ಯುದ್ಧದ ನಂತರ ಅವರಿಬ್ಬರೂ ಭೇಟಿ ಮಾಡಿದ್ದೇ ಈವತ್ತು ಬೆಳಗ್ಗೆ. ಆದರೆ ಪರಸ್ಪರ ಕಂಡಾಗ ಒಂದೇ ಒಂದು ಮಾತು ಹೊರಬರಲಿಲ್ಲ. ಜೈಲಿನ ಅಂಗಳಕ್ಕೆ ಕಾಲಿಡುವ ಮುನ್ನ ಇಬ್ಬರ ನಡುವೆ ಹಾದುಹೋದ ಪರಿಚಯದ ಕ್ಷೀಣ ಮುಗುಳ್ನಗೆಯೊಂದೇ.

ಆ ಮಸುಕು ಬೆಳಗಿನಲ್ಲಿ ಬೆಳಕಿನ ಬೆಳ್ಳಿ - ಕೆಂಪು ರೇಖೆಗಳು ಜೈಲಿನ ಗೋಡೆಗಳ ಮೇಲೆ ಇಣುಕಿ, ಆ ಮೌನದ ಲಯವನ್ನೇ ಹಿಡಿದಂತೆ ನಿಶ್ಶಬ್ದ ಚರಮಗೀತೆಯನ್ನು ಉಸುರುತ್ತಿದ್ದವು. ಎದೆಬಡಿತದ ಹಾಸಿನ, ನಿಶ್ಶಬ್ದ ತುಡಿತದ ಲಯ.

''ಅಟೆನ್‌ಷನ್!''



ಮುಖ್ಯ ಅಧಿಕಾರಿಯ ಧ್ವನಿ ಆ ಮೌನವನ್ನು ಒಡೆದು, ಗೋಡೆಗಳಿಗೆ ಬಡಿದು, ಅನುರಣಿಸಿತು.

ಆಜ್ಞೆ ಹೊರಬಿದ್ದ ಕೂಡಲೇ ಆರು ಮಂದಿ ತಮ್ಮ ಬಂದೂಕುಗಳನ್ನು ಪಕ್ಕಗೆ ಬಡಿದು ಹುರಿಗೊಂಡು ನಿಂತರು. ಆ ಒಮ್ಮತದ ಕ್ರಿಯೆಯ ನಂತರ ಮುಂದಿನ ಆಜ್ಞೆಗೆ ಕಾಯುತ್ತ ತುಸು ವಿರಾಮ.

ಆದರೆ ಆ ಅಲ್ಪವಿರಾಮದಲ್ಲಿ ಇನ್ನೇನೋ ನಡೆಯಿತು ಆ ಲಯದ ಹರಿವನ್ನು ಮುರಿದ ಹಾಗೆ.... ಆರೋಪಿ ಕೆಮ್ಮಿದ, ತನ್ನ ಗಂಟಲು ಸರಿ ಮಾಡಿಕೊಂಡ. ಆ ಸಣ್ಣ ಅಡಚಣೆಯಿಂದ ಇವರ ಕ್ರಿಯಾಕಲಾಪದ ಸರಪಳಿ ತುಂಡರಿಸಿಹೋಯಿತು.

ಅಧಿಕಾರಿ, ಆ ಖೈದಿ ಏನಾದರೂ ಹೇಳಬಹುದೆಂದು ಅವನತ್ತ ತಿರುಗಿದ. ಯಾವ ಶಬ್ದವೂ ಹೊರಬರಲಿಲ್ಲ. ಮತ್ತೆ ಆತ ತನ್ನ ಕೆಳ ಅಧಿಕಾರಿಗಳತ್ತ ತಿರುಗಿ ಇನ್ನೇನು ಮುಂದಿನ ಆಜ್ಞೆ ನೀಡಬೇಕು ಅನ್ನುವಷ್ಟರಲ್ಲಿ ಅವನ ಮಿದುಳಿನಲ್ಲಿ ಹಠಾತ್ ಕಲಮಲವೆದ್ದುಬಿಟ್ಟಿತು. ಒಮ್ಮೆಲೇ ತನ್ನನ್ನು ಶೂನ್ಯದಲ್ಲಿ ನಿಲ್ಲಿಸಿದ ವಿಸ್ಮೃತಿ. ತಬ್ಬಿಬ್ಬಾಗಿ ತನ್ನವರನ್ನು ನೋಡಿದ. ಯಾರದು? ಜೈಲಿನ ಅಂಗಳದೊಳಗಿನ ಈ ದೃಶ್ಯಕ್ಕೆ ಅರ್ಥವೇ ಇಲ್ಲ. ವಸ್ತುನಿಷ್ಠವಾಗಿ ಕಣ್ಣು ಬಿಟ್ಟು ನೋಡಿದ ಗೋಡೆಗೆ ಬೆನ್ನು ಹಾಕಿ ಬಂದೂಕುಧಾರಿಗಳು, ಮತ್ತೆಲ್ಲರನ್ನೂ ಎದುರಿಸಿ ನಿಂತ ಆ ಮನುಷ್ಯ. ಮತ್ತೆ ಈ ಕಡೆ ನಿಂತವರು ಎಂಥ ಮೂರ್ಖರ ಹಾಗೆ ಕಂಡರು! ಹಠಾತ್ತಾಗಿ ನಡಿಗೆ ನಿಂತ ಗಡಿಯಾರಗಳ ಹಾಗೆ. ಯಾರೂ ಚಲಿಸಲಿಲ್ಲ. ಯಾರಿಂದಲೂ ಏನೂ ಅರ್ಥ ಹೊರಡಲಿಲ್ಲ. ಎಲ್ಲೋ ಏನೋ ತಪ್ಪಾಗಿದೆ. ಇದೆಲ್ಲ ಕೇವಲ ಕನಸಿರಬೇಕು, ಸೀಳಿ ಹೊರಬರಬೇಕು.

ನಿಧಾನಕ್ಕೆ ಅವನಿಗೆ ನೆನಪು ಮರುಕಳಿಸತೊಡಗಿತು. ಹೀಗೇ ಎಷ್ಟು ಹೊತ್ತು ನಿಂತಿದ್ದೆ ನಾನು? ನಡೆದಿದ್ದೇನು? ಓ ಹೌದು! ಒಂದು ಆಜ್ಞೆ ನೀಡಿದ್ದೆ. ಮುಂದಿನ ಆಜ್ಞೆಯೇನು?

''ಅಟೆನ್‌ಷನ್'' ಅಂದ ಬಳಿಕ ''ಬಂದೂಕುಗಳೊಂದಿಗೆ ಸಜ್ಜಾಗಿ'' ಅನ್ನಬೇಕು. ಅದಾದ ಮೇಲೆ ''ಗುರಿ ಹಿಡಿಯಿರಿ'' ಮತ್ತೆ ''ಫೈರ್!''. ಇದೆಲ್ಲದರ ಒಂದು ಕ್ಷೀಣ ಕಲ್ಪನೆ ಅವನ ಒಳಮನಸ್ಸಿನಲ್ಲಿತ್ತು. ಆದರೆ ಅಗತ್ಯ ಶಬ್ದಗಳನ್ನು ಹೊರಡಿಸುವುದು ತೀರಾ ಅಸ್ಪಷ್ಟವಾಗಿ, ತನ್ನಿಂದಾಚೆಗಿನ ಕ್ರಿಯೆಯಂತೆ ಭಾಸವಾಯಿತು.

ಈ ದ್ವಂದ್ವದಲ್ಲೇ ಆತ ಅಸಂಗತವಾಗಿ ಅಸಂಬದ್ಧ ಪದಗಳನ್ನು ಚೆಲ್ಲಿ ಅರಚಿದ. ಆದರೆ ಇವನಿಗೇ ನಿರಾಳವಾಗುವಂತೆ ಆ ಅಧಿಕಾರಿಗಳು ತಮ್ಮ ಪಾಡಿಗೆ ಬಂದೂಕುಗಳನ್ನು ಎತ್ತಿಕೊಂಡರು. ಅವರ ಕ್ರಿಯೆಯ ಸ್ಪಷ್ಟ ಲಯಗತಿ ಇವನ ಆಲೋಚನೆಯ ಲಯವನ್ನು ಮರಳಿ ತಂದು, ಆತ ಮತ್ತೊಮ್ಮೆ ಕಿರುಚಿದ. ಅವರೆಲ್ಲ ಗುರಿ ಹಿಡಿದು ನಿಂತರು.

ಆ ಅಲ್ಪವಿರಾಮದಲ್ಲಿ ಜೈಲಿನ ಅಂಗಳದಲ್ಲಿ ಅವಸರದ ಹೆಜ್ಜೆ ಸಪ್ಪಳ ಕೇಳತೊಡಗಿತು. ಆ ಸಪ್ಪಳಕ್ಕೆ 'ತಡೆಯಾಜ್ಞೆ' ಎಂದೇ ಅರ್ಥ ಎಂಬುದನ್ನು ಆತ ಬಲ್ಲ. ತಕ್ಷಣವೇ ಅವನ ಮನಸ್ಸು ತಿಳಿಯಾಯಿತು. ಕೂಡಲೇ ಬಂದುಕುಧಾರಿಗಳಿಗೆ ಕೂಗಿ ಹೇಳಿದ-'ಸ್ಟಾಪ್!'.

ಆರು ಜನ, ತಮ್ಮ ಬಂದೂಕುಗಳ ಆಯ ಹಿಡಿದು ನಿಂತ ಆರು ಜನ, ತಮ್ಮದೇ ಸುಸಂಬದ್ಧ ಲಯಗತಿಗೆ ಸಿಕ್ಕು ನಿಂತ ಆರು ಜನ, 'ಸ್ಟಾಪ್!' ಎಂಬ ಆಜ್ಞೆ ಕಿವಿಗೆ ಬಿದ್ದಿದ್ದೇ ಗುಂಡು ಹಾರಿಸಿದರು.


ಜಗದ್ವಿಖ್ಯಾತ ನಟ-ನಿರ್ದೇಶಕ ಚಾರ್ಲಿ ಚಾಪ್ಲಿನ್, ಎರಡನೇ ಮಹಾಯುದ್ಧ ಆರಂಭವಾಗುವ ಮೊದಲು 1938ರಲ್ಲಿ ಬರೆದ ಪುಟ್ಟ ಕತೆಯಿದು. ಅದರ ಮುಂದಿನ ವರ್ಷವೇ ಚಾಪ್ಲಿನ್ ಹಿಟ್ಲರ್‌ನನ್ನು ಅಣಕಿಸುವ 'ದಿ ಗ್ರೇಟ್ ಡಿಕ್ಟೇಟರ್' ಚಿತ್ರ ನಿರ್ಮಿತಿಗೆ ಕೈ ಹಾಕಿದ್ದು. ಈ ಪುಟ್ಟ ಕತೆಯನ್ನು ಕನ್ನಡಕ್ಕೆ ತಂದವರು 'ಚಂಚಲೆ', 'ಉಲ್ಟಾಪಲ್ಟಾ' ಖ್ಯಾತಿಯ ಎನ್.ಎಸ್. ಶಂಕರ್.



ಉಮಾ ರಾವ್


ಹಾವಾಡಿಗ





ಬೆಂಗಳೂರಿನ ದಕ್ಷಿಣವಲಯದಲ್ಲಿ ತಲೆ ಎತ್ತಿದ್ದ ಅತ್ಯಂತ ಆಧುನಿಕ ವಸತಿ ಸಮುಚ್ಚಯ ಗಳಲ್ಲಿ 'ಸ್ವರ್ಗ ಅಪಾರ್ಟ್‌ಮೆಂಟ್ಸ್' ಕೂಡ ಒಂದು. ಅದರಲ್ಲಿದ್ದ ನೂರು ಮನೆಗಳಲ್ಲಿ ವಾಸಿಸು ವವರಿಗೆ ದಿನನಿತ್ಯ ಜೀವನ ಸುಖಮಯ, ಸುಗಮ ವಾಗಿ ಮಾಡಲು ಅಷ್ಟೂ ಸೌಕರ್ಯಗಳನ್ನು ಒದಗಿಸ ಲಾಗಿತ್ತು. ಬೆಳಗಿನ ಬಿಸಿಲಲ್ಲಿ ಮಿರಮಿರ ಮಿರಗುವ ಈಜುಗೊಳವಿತ್ತು, ಟೇಬಲ್‌ಟೆನ್ನಿಸ್, ಬಿಲಿಯರ್ಡ್ಸ್ ಮುಂತಾದ ಆಟಗಳನ್ನು ಒಳ ಗೊಂಡ ಕ್ಲಬ್‌ಹೌಸ್ ಇತ್ತು. ಬಣ್ಣಬಣ್ಣದ ಹೂ ಗಿಡಗಳನ್ನು ಒಳಗೊಂಡ ತೋಟವೂ, ನಡು ನಡುವೆ ಗುಲ್‌ಮೊಹರ್ ಮರಗಳು, ಅದರ ಮಧ್ಯೆ ಹಾದುಹೋಗುವ ಕಾಲುದಾರಿಗಳೂ ಇದ್ದುವು. ಕೋಕ್, ಪೆಪ್ಸಿ, ಕಿಟ್‌ಕ್ಯಾಟ್, ರಿಗ್ಲೇಸ್ ಮುಂತಾದುವನ್ನು ಮಾರುವ ಸಣ್ಣ ಅಂಗಡಿಯಿತ್ತು.

ಇಪ್ಪತ್ನಾಲ್ಕು ಗಂಟೆ ಕರೆಂಟ್ ಒದಗಿಸಲು ಜನರೇಟರ್ ವ್ಯವಸ್ಥೆ ಇತ್ತು. ಇದಕ್ಕೆಲ್ಲಾ ಕಾವಲು ಕಾಯುವ ಸೆಕ್ಯೂರಿಟಿ ಗಾರ್ಡುಗಳಿದ್ದರು. ಅಲ್ಲಿ



ಮನೆಗೆಲಸ ಮಾಡಲು ಬರುವ ಹೆಂಗಸರಿಗೆ ಕನ್ನಡದ ಜೊತೆಗೆ ಹಿಂದಿ, ತಮಿಳು ಕೂಡ ಮಾತಾಡಲು ಬರುತ್ತಿತ್ತು. ಅವರಿಗೆಲ್ಲಾ ಒಂದು ಫೊಟೋಸಹಿತ ಐ.ಡಿ. ಕಾರ್ಡ್ ಕೊಡಲಾಗಿತ್ತು.

'ಸ್ವರ್ಗ ಕಾಂಪ್ಲೆಕ್ಸ್'ನಲ್ಲಿ ದೇಶದ ಬೇರೆ ಬೇರೆ ಭಾಗಗಳಿಂದ ಬಂದ ಜನರು ವಾಸಿಸುತ್ತಿದ್ದರು. ರೆಡಿಮೇಡ್ ಗಾರ್ಮೆಂಟ್ಸ್, ಪ್ಲಾಸ್ಟಿಕ್ ಸಾಮಾನುಗಳು ಇತ್ಯಾದಿಗಳ ಸಣ್ಣಪುಟ್ಟ ಕಾರ್ಖಾನೆಗಳ ಮಾಲಿಕರು, ಅಮೆರಿಕಾ ತಮ್ಮ ಹಿತ್ತಲೆಂಬಂತೆ ಅಲ್ಲಿಗೆ ಹೋಗಿ, ಬಂದು ಮಾಡುವ ಸಾಫ್ಟ್‌ವೇರ್ ಇಂಜಿನಿಯರ್‌ಗಳು, ವಿದೇಶಕ್ಕೆ ತಮ್ಮ ಮಕ್ಕಳನ್ನೆಲ್ಲಾ ವಲಸೆ ಕಳಿಸಿ, ಇಲ್ಲಿ ನಾಯಿ ಸುತ್ತಿಸುತ್ತಾ ಆರಾಮ ಜೀವನ ಮಾಡುವ ನಿವೃತ್ತ ಅಧಿಕಾರಿಗಳು, ಫ್ರೀಲ್ಯಾನ್ಸ್ ಪತ್ರಕರ್ತರು, ಟಿವಿ ಸೀರಿಯಲ್ ನಿರ್ಮಾಪಕರು, ಬಹುರಾಷ್ಟ್ರೀಯ ಕಂಪೆನಿಗಳ ಎಕ್ಸಿಕ್ಯುಟಿವ್‌ಗಳು ಹೀಗೆ. ಎಲ್ಲರೂ ಒಬ್ಬರೊಬ್ಬರ ನಡುವೆ ಶಿಷ್ಟರಾಗಿ ವರ್ತಿಸುತ್ತಿದ್ದರು.

ಈ ನೂರು ಕುಟುಂಬಗಳ ನಡುವೆ ಆಗಾಗ ಸಣ್ಣಪುಟ್ಟ ಜಗಳಗಳೂ ನಡೆದುಹೋಗುತ್ತಿದ್ದವು. ಯಾರದೋ ಮನೆಯ ಕೆಲಸದವಳು ತಮ್ಮ ಮೆಟ್ಟಿಲುಗಳ ಮೇಲೆ ಎಲೆ ಅಡಿಕೆ ಉಗಿದಿದ್ದರ ಬಗ್ಗೆಯೋ, ತಮ್ಮ ಮನೆಯ ಪಾರ್ಟಿಯ ಮಾರನೆಯ ದಿನ ತಮ್ಮ ಕೆಲಸದವಳು ತೆಗೆದುಕೊಂಡು ಹೋಗುತ್ತಿದ್ದ ಖಾಲಿ ಬಿಯರ್ ಬಾಟಲುಗಳಲ್ಲಿ ಒಂದು ನಾಲ್ಕನ್ನು ಸೆಕ್ಯುರಿಟಿ ಗಾರ್ಡ್ ತೆಗೆದಿಟ್ಟುಕೊಂಡದ್ದರ ಬಗ್ಗೆಯೋ, ಒಬ್ಬ ಕಂಪೆನಿ ಕಾರಿನ ಡ್ರೈವರ್ ಬಂದುಹೋಗುವ ಕೆಲಸದ ಹುಡುಗಿಯರ ಮೇಲೆ ಹಿಂದಿಯಲ್ಲಿ ಕಾಮೆಂಟ್ ಮಾಡುವುದರ ಬಗ್ಗೆಯೋ ಈ ಜಗಳಗಳು ಇರುತ್ತಿದ್ದವು.

ಪ್ರತಿ ತಿಂಗಳೂ ತಪ್ಪದೆ ಆಗುತ್ತಿದ್ದ ಕಮಿಟಿ ಮೀಟಿಂಗುಗಳಲ್ಲಿ ಈ ಜಗಳಗಳ ಬಗ್ಗೆ ಚರ್ಚೆ ಆಗುತ್ತಿತ್ತು. ಆಗ ಸದಸ್ಯರೆಲ್ಲಾ ಸೇರಿ 'ನಾವೆಲ್ಲಾ ಪ್ರಿವಿಲೈಜ್ಡ್ ಪೀಪಲ್. ಒಳ್ಳೆ ಸಾಧಾರಣಸ್ಥರಂತೆ ಕಿತ್ತಾಡುವುದು ತಮ್ಮ ಮಟ್ಟಕ್ಕೆ ತಕ್ಕುದಲ್ಲ' ಎಂದು ಹೇಳಿಕೊಂಡು, ಮತ್ತೆ ಏನೂ ಆಗದವರಂತೆ ಒಬ್ಬರಿಗೊಬ್ಬರು ಗುಡ್‌ಮಾರ್ನಿಂಗ್, ಗುಡ್‌ನೈಟ್ ಹೇಳಿಕೊಂಡು ಓಡಾಡುತ್ತಿದ್ದರು.

'ಸ್ವರ್ಗ ಕಾಂಪ್ಲೆಕ್ಸ್'ನಲ್ಲಿ ಸಮಾರಂಭಗಳಿಗೂ ಏನೂ ಕೊರತೆ ಇರಲಿಲ್ಲ. ವಾರಕ್ಕೊಂದೋ, ಎರಡೋ ಬರುತ್ತಲೇ ಇದ್ದ ಹುಟ್ಟಿದ ಹಬ್ಬಗಳಿಗೆ ಮಕ್ಕಳೆಲ್ಲಾ ಹೋಗಿ ಮ್ಯಾಜಿಕ್ ಶೋ ನೋಡಿ, ಕ್ಯಾಂಡಲ್ ಊದಿ, ಕೇಕ್ ಸಮೋಸಾ ತಿಂದು, ಹ್ಯಾಪಿ ಬರ್ತ್‌ಡೇ ಹಾಡಿ ಬರುತ್ತಿದ್ದರು. ಇನ್ನು ಆಗಾಗ ಆಗುತ್ತಿದ್ದ ಡಿನ್ನರ್‌ಗಳಲ್ಲಿ ಕಾಂಪ್ಲೆಕ್ಸ್‌ನವರೆಲ್ಲಾ ಸೇರುತ್ತಿದ್ದರು. 'ರೋಟಿ ಸಾಗರ'ದಿಂದ ಬರುತ್ತಿದ್ದ ಪಂಜಾಬಿ ಊಟ ಹೊಡೆದು, ಬಿಯರ್ ಕುಡಿದು, ಅಂತ್ಯಾಕ್ಷರಿ ಆಡಿ, ಸರ್‌ದಾರ್ ಜೀ ಜೋಕುಗಳನ್ನು ಹೇಳಿ, ತಮ್ಮ ಇತ್ತೀಚಿನ ಸಿಂಗಪುರ-ಬ್ಯಾಂಕಾಕ್ ಹಾಲಿಡೇ ಬಗ್ಗೆ ಕೊಚ್ಚಿಕೊಳ್ಳುತ್ತಾ, 'ಎಂಜಾಯ್ ಮಾಡೋದೂಂದ್ರೆ, 'ಸ್ವರ್ಗ'ದವರ ಸಮಾನ ಇಲ್ಲ' ಎಂದು ಖುಶಿಪಟ್ಟುಕೊಳ್ಳುತ್ತಿದ್ದರು. ಆಗಾಗ ಶಂತನೂ ಥರದವರು ''ನನಗೆ ಈ ಸಿಂಗಪುರ- ಬ್ಯಾಂಕಾಕ್... ಎಲ್ಲವೂ ಮಾಡಿದ್ದೇ ಮಾಡಿ ಬೇಸರವಾಯ್ತು. ಅದಕ್ಕೇ ಈ ಸಲ ಆಫ್ರಿಕಾಗೆ ಹೋಗಿ ಬರಬೇಕೆಂದು ಇದ್ದೇನೆ'' ಎಂದು ಘೋಷಿಸಿದಾಗ, ಆಫ್ರಿಕಾ ಸಿಂಗಾಪುರ-ಬ್ಯಾಂಕಾಕಿಗಿಂತ ಹೆಚ್ಚಿನದೋ ಕಡಿಮೆಯೋ ತಿಳಿಯದೆ, ಹೇಗೆ ಪ್ರತಿಕ್ರಿಯಿಸಬೇಕೆಂದು ಅರ್ಥವಾಗದೆ, ''ನೀನು ಬಿಡು, ಯೂ ಆರ್ ಡಿಫರೆಂಟ್'' ಎಂದು ತೇಲಿಸಿ ಬಿಡುತ್ತಿದ್ದರು.

ಹೀಗೆ ಸರಾಗವಾಗಿ ನಡೆಯುತ್ತಿದ್ದ ಆ ಕಾಂಪ್ಲೆಕ್ಸ್‌ನ ದಿನಚರಿಯನ್ನು ಆ ಭಾನುವಾರ ನಡೆದ ಘಟನೆ ಅಲ್ಲೋಲಕಲ್ಲೋಲಗೊಳಿಸಿತು. ಅಂದು ಬೆಳಿಗ್ಗೆ ಎಲ್ಲರೂ ಗಡದ್ದಾಗಿ ತಿಂಡಿ ತಿಂದು, ಪೇಪರ್ ಹಿಡಿದು ಆರಾಮಾಗಿ ಕೂತಿದ್ದಾಗ ಸಣ್ಣ ತ್ರಿಚಕ್ರ ವಾಹನವೊಂದು ಕಾಂಪ್ಲೆಕ್ಸ್‌ನ ಮುಂದೆ ಬಂದು ನಿಂತಿತು. ಅದನ್ನು ಬಾಲ್ಕನಿಯಿಂದ ಗಮನಿಸಿದ ಕೆಲವು ಗೃಹಿಣಿಯರು ಯಾರದೋ ಮನೆಗೆ ಹೊಸ ಫ್ರಾಸ್ಟ್‌ಫ್ರೀ ಫ್ರಿಜ್ ಬಂದಿರ ಬೇಕೆಂದುಕೊಂಡು ಒಳಗೆ ಹೋದರು. ಆದರೆ ಸ್ವಲ್ಪ ಹೊತ್ತಿನ ನಂತರ ಏರುದನಿಯಲ್ಲಿ ನಡೆಯುತ್ತಿದ್ದ ವಾಗ್ವಾದ ಕೇಳಿ ಕೆಲವರು ಮತ್ತೆ ತಮ್ಮ ಬಾಲ್ಕನಿಗಳಿಗೆ ಮರಳಿ ಬಂದರು. ಆ ಬಿಲ್ಡಿಂಗ್ ರೆಸಿಡೆಂಟ್ಸ್ ಸೊಸೈಟಿಯ ಸೆಕ್ರೆಟರಿ ರಾಧಾಕೃಷ್ಣನ್ ಕೈಯಲ್ಲಿ 'ಡೆಕ್ಕನ್ ಹೆರಾಲ್ಡ್' ಹಿಡಿದೇ ಕೆಳಗಿಳಿದು ಬಂದರು. ಅಲ್ಲಿ ವಿಚಿತ್ರ ವೇಷದ ವ್ಯಕ್ತಿಯೊಬ್ಬ ಕೈಯಲ್ಲಿರುವ ಕಾಗದಪತ್ರಗಳನ್ನು ಸೆಕ್ಯೂರಿಟಿ ಗಾರ್ಡುಗಳ ಮುಂದೆ ಹಿಡಿದು ವಾದಿಸುತ್ತಿದ್ದ. ರಾಧಾಕೃಷ್ಣನ್ ಹತ್ತಿರದಿಂದ ಆ ವ್ಯಕ್ತಿಯನ್ನು ಕೂಲಂಕಷವಾಗಿ ಪರೀಕ್ಷಿಸಿದವರೇ ಸ್ವಲ್ಪ ಕಸಿವಿಸಿಗೊಂಡರು. ಚೌಕಳಿ ಚೌಕಳಿಯ ತುಂಡುಪಂಚೆ, ತೆಳುವಾದ ಅರ್ಧತೋಳಿನ ಜುಬ್ಬಾ, ದಟ್ಟಮೀಸೆ, ಹಣೆಯಲ್ಲಿ ವಿಭೂತಿ, ಕುಂಕುಮ, ಕತ್ತಿನಲ್ಲಿ ಬಣ್ಣ ಬಣ್ಣದ ಮಣಿಗಳು, ರುದ್ರಾಕ್ಷಿಹಾರದ ಜೊತೆಗೆ ಕರಿದಾರದಿಂದ ನೇತಾಡುತ್ತಿರುವ ತಾಯಿತ, ಹೆಗಲಿನಿಂದ ಜೋತುಬಿದ್ದ ಒಂದು ಗುಂಡು ಬುಟ್ಟಿ. ಆ ಬುಟ್ಟಿ ಮುಚ್ಚಿಯೇ ಇದ್ದರೂ ನೋಡಿದ ತಕ್ಷಣ ಯಾರಿಗಾದರೂ ತಿಳಿಯಲೇ ಬೇಕು ಅದರಲ್ಲೇನಿದೆಯೆಂದು.

ರಾಧಾಕೃಷ್ಣನ್ ಗಾರ್ಡ್ ಕಡೆ ತಿರುಗಿ 'ಏನಯ್ಯಾ, ಇವನ ಜೊತೆ ಏನು ವಾದ, ಇಂಥ ಹಾವಾಡಿಗರು, ದೊಂಬರಾಟದವರನ್ನೆಲ್ಲಾ ಸುಮ್ಮ ಸುಮ್ಮನೆ ಕಾಂಪ್ಲೆಕ್ಸ್ ಒಳಗಡೆ ಬಿಡಬಾರದೆಂದು ಎಷ್ಟು ಸಲ ಹೇಳಿಲ್ಲ?' ಎಂದು ರೇಗಿದರು.

ಗಾರ್ಡ್ 'ಇಲ್ಲ ಸಾರ್...... ಇವರು......' ಎಂದು ತೊದಲಿದಾಗ ಹಿಂದಿನಿಂದ ಪ್ರತ್ಯಕ್ಷನಾದ ಎಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್ ಶಶಿಧರ 'ಇಲ್ಲ ಇವರು....... 'ಎ' ಬ್ಲಾಕಿನಲ್ಲಿ...... ಬಾಡಿಗೆಗೆ ಬಂದಿದ್ದಾರೆ...' ಎಂದು ವಿವರಿಸಿದ.

'ಆಂ?' ಮುವತ್ತು ವರ್ಷ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಬದುಕು ಸವೆಸಿದ್ದ ರಾಧಾಕೃಷ್ಣನ್‌ಗೆ ಹರ್ಷದ್‌ಮೆಹತಾ ನಾಟಕಗಳು ಕೂಡ ಇಂತಹ ಶಾಕ್ ಕೊಟ್ಟಿರಲಿಲ್ಲ.

ಶಶಿಧರ ತನ್ನ ಕೈಯಲ್ಲಿದ್ದ ಅಗ್ರಿಮೆಂಟ್ ಕಾಪಿ ರಾಧಾಕೃಷ್ಣನ್ ಮುಂದೆ ಹಿಡಿಯುತ್ತಾ ''ಎಲ್ಲಾ ಪೇಪರ್ಸ್ ಆರ್ಡರ್ಸ್‌ನಲ್ಲಿದೆ ಸರ್. ಓನರ್ ನಮಗೆ ಬರೆದಿರೋ ಕಾಗದಾನೂ ಜೊತೆಗೆ ತಂದಿದ್ದಾರೆ'' ಎಂದಾಗ ರಾಧಾಕಷ್ಣನ್ ಹಾಗೇ ಶಶಿಧರನನ್ನು ಪಕ್ಕಕ್ಕೆ ಕರೆದರು. ಶಶಿಧರ 'ನಾನು ಒಳಗೆ ಹೋಗಿ ಚೆಕ್ ಮಾಡಿದೆ ಸರ್. ನನ್ನ ಚೆಕ್ ಟ್ಯಾಲಿ ಆಗುತ್ತೆ' ಎಂದಾಗ 'ಫೋನ್ ಮಾಡಿ ಕೇಳ್ರೀ' ಎಂದು ಅಸಹನೆಯಿಂದ ಗುಡುಗಿದರು. 'ಟ್ರೈ ಮಾಡ್ದೆ ಸಾರ್, ಅವರು ಅಮೆರಿಕಾಗೆ ಮಗನ ಮನೆಗೆ ಹೋಗಿಬಿಟ್ಟಿದ್ದಾರೆ' ಎಂದಾಗ ಇವರಿಗೆಲ್ಲಾ ಬೇರೆ ದಾರಿಯೇ ಇಲ್ಲದಂತಾಯಿತು.

ಇದೆಲ್ಲಾ ಸುದ್ದಿ ಬಿಲ್ಡಿಂಗ್‌ನಲ್ಲಿ ಹರಡಿ ಎಲ್ಲರೂ ಭಾನುವಾರ ಬೆಳಿಗ್ಗೆಯ ತಮ್ಮ ಕೆಲಸಗಳನ್ನು ಒತ್ತಟ್ಟಿಗಿಟ್ಟು ಬಾಲ್ಕನಿಗೆ ಬಂದು ನಿಂತರು. ಮಕ್ಕಳೆಲ್ಲಾ ಕೆಳಗಡೆ ಸೇರಿ ಆ ಹಾವಾಡಿಗನ ಸುತ್ತ ಗುಂಪುಕಟ್ಟಿದರು. ಅವನು ಮಾತ್ರ ಇದ್ಯಾವುದರಿಂದಲೂ ವಿಚಲಿತನಾಗದೆ ತನ್ನ ಪಾಡಿಗೆ ತಾನು ತ್ರಿಚಕ್ರ ವಾಹನದಿಂದ ಸಾಮಾನುಗಳನ್ನು ಕೆಳ

ಗಿಳಿಸತೊಡಗಿದ. ಅವನು ತಂದಿದ್ದೋ ಒಂದು ಚಾಪೆ, ಸುತ್ತಿದ ಹಾಸಿಗೆ, ಒಂದಷ್ಟು ಪಾತ್ರೆಪಗಡ, ಎರಡು ಮಡಕೆ, ಒಂದು ಸೀಮೆಣ್ಣೆ ಸ್ಟೋವ್, ನಾಲ್ಕೈದು ದೇವರ ಪಟಗಳು, ಬೆಡ್‌ಶೀಟಿನಲ್ಲಿ ಸುತ್ತಿದ್ದ ಬಟ್ಟೆಗಳ ಗಂಟು, ಕೋಲು, ಒಂದು ಗೋಣಚೀಲದ ತುಂಬಾ ಏನೇನೋ ಸಾಮಾನು ಗಳು... ಕೊನೆಗೆ ತುಂಬಾ ಹುಷಾರಾಗಿ ಇಳಿಸಿ ಕೊಂಡು ತೆಗಲ ಮೇಲೆ ಹಾಕಿಕೊಂಡಿದ್ದು ಒಂದ ರೊಳಗೊಂದು ಸೇರಿಸಿ ದಾರ ಕಟ್ಟಿದ್ದ ಎರಡು ಪುಂಗಿಗಳನ್ನು. ಇದನ್ನು ಕಂಡ ತಕ್ಷಣ ಎಲ್ಲರಿಗೂ ಮೈ ಜುಂ ಎಂದಿತು.

ಅವನ್ನೆಲ್ಲಾ ಒಂದೊಂದಾಗಿ ತಾನೇ ಎತ್ತಿ ಕೊಂಡು ಹೋಗಿ 'ಎ' ಬ್ಲಾಕಿನ ಮೂರನೇ ಮಹಡಿಯಲ್ಲಿದ್ದ ತನ್ನ ಮನೆಯೊಳಗೆ ಇಡ ತೊಡಗಿದ. ಮಾಮೂಲಿನಂತೆ ಸಾಮಾನೆತ್ತಿ ಇಡಲೋ ಬೇಡವೋ ಎಂದು ಅನುಮಾನಿ ಸುತ್ತಿದ್ದ ಸೆಕ್ಯೂರಿಟಿ ಗಾರ್ಡಿಗೆ ರಾಧಾಕೃಷ್ಣನ್ ಬೇಡವೆಂದು ಕಣ್ಣಲ್ಲೇ ಎಚ್ಚರಿಸಿದರು. ಈ ಮಧ್ಯೆ ತುಂಟ ಡಿಂಪಿ ಹಾವಾಡಿಗನ ಹತ್ತಿರ ಬಂದು ಆ ಬುಟ್ಟಿ ತೋರಿಸುತ್ತಾ "ಅಂಕಲ್, ಇದರಲ್ಲಿ ಹಾವಿದೆಯಾ?" ಎಂದು ಕೇಳಿ ಅಮ್ಮನ ಕೈಯಲ್ಲಿ ಏಟು ತಿಂದ. ಹೊಸದಾಗಿ ವಾಸಿಸಲು ಬಂದವರ ಹೆಸರು, ವೃತ್ತಿ ಇತ್ಯಾದಿ ದಾಖಲಿಸುವ ರಿಜಿಸ್ಟರಿನಲ್ಲಿ ಶಂಭು, ಹಾವಾಡಿಗ- ಎ-30/ ಎಂದು ತುಂಬಿಸಿ ಸಹಿಗಾಗಿ ರಾಧೃಕೃಷ್ಣನ್ ಹತ್ತಿರ ಬಂದಾಗ ಶಶಿಧರನ ಮೇಲೆ ಅವರು ಕೆಂಡವಾದರು. "ಏನಯ್ಯಾ ಇದು, ಅಷ್ಟು ಬುದ್ಧಿ ಬೇಡವೇ? ಪ್ರೊಫೆಶನ್ ಅನ್ನೋ ಕಡೆ ಬಿಸಿನೆಸ್ ಅಂತ ಬರಿ..." ಎಂದು ಗದರಿದರು. ಕಾಲುಗಂಟೆಯಲ್ಲಿ ಅಷ್ಟೂ ಸಾಮಾನು ಒಳಗೆ ಸಾಗಿಸಿದ ಶಂಭು ಮನೆ ಬಾಗಿಲು ಹಾಕಿ, ಬಾಲ್ಕನಿ ಬಾಗಿಲು ತೆಗೆದುಬಿಟ್ಟ. ಆ ಕ್ಷಣದಿಂದ 'ಸ್ವರ್ಗ ಅಪಾರ್ಟ್‌ಮೆಂಟ್ಸ್'ನ ನಿವಾಸಿಗಳ ಬದುಕಿನಲ್ಲಿ ವಿಚಿತ್ರ ಅಶಾಂತಿ ಪ್ರಾರಂಭವಾಯಿತು.

ತಂದೆತಾಯಿ ತಮ್ಮ ಮಕ್ಕಳಿಗೆ ವಿಶೇಷ ಎಚ್ಚರ ಕೊಟ್ಟರು. ಶಂಭು ಜೊತೆಗೆ ಮಾತನಾಡ ಬಾರ ದೆಂದೂ, ಅವನು ಕರೆದರೂ ಅವನ ಮನೆಗೆ ಹೋಗಬಾರದೆಂದೂ, ಪೆಪ್ಪರಮಿಂಟ್, ಚಾಕಲೇಟ್ ಕೊಟ್ಟರೆ ಮುಟ್ಟಬಾರದೆಂದೂ ಹೇಳಿ ದರು. ಎ-32 ರಲ್ಲಿದ್ದ ಸೀತಾಚಂದ್ರನ್ 'ನಮ್ಮ ಪಾಡಿಗೆ ನಾವಿದ್ದೆವಲ್ಲಾ... ಇದೆಲ್ಲಿ ಬಂತು ಗ್ರಹಚಾರ... ಸಕ್ಕರೆ, ಕಾಫಿಪುಡಿ, ಸಾಲ ಕೇಳಲೂ ಅಕ್ಕಪಕ್ಕದವರಿಲ್ಲದಂತಾಯಿತಲ್ಲಾ...' ಎಂದು ಕಣ್ಣೀರೇ ಇಟ್ಟರು. ಮನೆಕೆಲಸದವರು ಶಂಭು ಬಗ್ಗೆ ಏನು ತಿಳಿದುಕೊಳ್ಳಬೇಕು ಎಂಬುದರ ಬಗ್ಗೆ ಅವರದೇ ಮೀಟಿಂಗ್ ನಡೆದುಹೋಯಿತು.

'ಇಂಥೋರ ಸಂಗ ಬೇಡಪ್ಪಾ. ಇವರೆಲ್ಲಾ ಮಂತ್ರ, ಮಾಟ ಬೇರೆ ಮಾಡ್ತಾರೆ'

'ಅವನ ಕಣ್ಣು ನೋಡಿದ್ಯಾ ಹೆಂಗಿದೆ...?'

'ಕೆಲಸ ಮಾಡೊಲ್ಲ ಅಂದ್ರೆ ಕೋಪದಿಂದ ಏನಾದ್ರೂ ಮಾಡಿದ್ರೆ...?'

'ಏಯ್... ಏನು ಮಾಡ್ತಾನೆ... ಹಾವೇ ನಾದರೂ ಛೂ ಬಿಡ್ತಾನಾ...?'

ಎಲ್ಲರೂ ಗೊಳ್ಳನೆ ನಕ್ಕರು.

ಒಂದೇ ಒಂದು ಮನೆ ಮಾಡುತ್ತಿದ್ದ ಮುದುಕಿ ನಂಜಮ್ಮ ಮಾತ್ರ 'ಏಯ್, ನಂಗೇನೂ ಭಯ ಇಲ್ಲ, ನಾನು ಮಾಡ್ತೀನಿ. ನನ್ನ ರಟ್ಟೆ ಮೇಲೆ ಗರುಡಮಚ್ಚೆ ಇದೆ ಎಂದಳು. ಇದನ್ನು ಕೇಳಿದ ಬೇರೆಯವರು ಅವಳತ್ತ ಅಸೂಯೆಯಿಂದ ನೋಡಿದರು.

ಇಡೀ ಕಾಂಪ್ಲೆಕ್ಸ್‌ಗೇ ಹಾಲು ಸರಬರಾಜು ಮಾಡಲು ಒಬ್ಬನಿಗೆ ಮಾತ್ರ ಪರ್ಮಿಶನ್ ಕೊಡಲಾಗಿತ್ತು. ಅವನು ಯಾರು ಹೊಸದಾಗಿ ಬಂದರೂ ಹೋಗಿ ವಿಚಾರಿಸುವಂತೆ, ಹಿಂಜರಿ

ುತ್ತಲೇ ಶಂಭುವಿನ ಮನೆ ಬೆಲ್ ಮಾಡಿದ. ಗ ಅವನು ''ನಾನು ಪಾಕೆಟಿನ ಹಾಲು ಗೊಳ್ಳೋಲ್ಲ. ಆಗ ಕರೆದ ಹಾಲೇ ಆಗಬೇಕು ಮ್ಮ ನಾಗಪ್ಪಂಗೆ'' ಎಂದು ಬಾಗಿಲು ಹಾಕಿಬಿಟ್ಟ. ಂದಿನಿಂದ ಯಾವುದೋ ಕೊಟ್ಟಿಗೆಯಲ್ಲಿ ಕರೆದ ಾಲು ಕ್ಯಾನೊಂದರಲ್ಲಿ ಅವನ ಮನೆಗೆ ಮಾತ್ರ ರತೊಡಗಿತು.

ಹಾಗಾಗಿ ಕಾರ್‌ಪಾರ್ಕಿನ ಒಂದು ಮೂಲೆ ುಲ್ಲಿ ತಮ್ಮ ಡ್ರೈವರ್ ಮಲಗಲು ಪರ್ಮಿಶನ್ ೇಳಿ ಕಮಿಟಿಯವರಿಂದ ಇಲ್ಲ ಅನ್ನಿಸಿಕೊಂಡಿದ್ದ ಮಲಾ ರಾಜಿ ''ಪಾಪ ನಮ್ಮ ಶರದ್ ಇಲ್ಲಿ ುಲಗಿದ್ರೆ ಏನಾಗ್ತಿತ್ತು. ಹೊರಗಿನೋನು ಬೇಡ ಂದ್ರು. ಈಗ ಈ ಹೊರಗಿನ ಹಾಲಿನವನನ್ನು ಿಡ್ತಿದಾರಲ್ಲಾ ಪರವಾಗಿಲ್ಲ'' ಎಂದು ಹಂಗಿಸಿ ಳು. ಆದರೆ ಅವನನ್ನು ತಡೆಯಲು ಯಾರಿಗೂ ೈರ್ಯವಿರಲಿಲ್ಲ.

ಹೀಗಾಗಿ ಆ ಕಾಂಪ್ಲೆಕ್ಸ್‌ಗೇ ಒಂದು ರೀತಿ ಗರ ಡಿದಂತಾಗಿ, ಎಲ್ಲರ ಮನಸ್ಸೂ ಶಂಭುವಿನ, ಅವನ ಚಟುವಟಿಕೆಗಳ ಸುತ್ತ ಇಪ್ಪತ್ನಾಲ್ಕು ಗಂಟೆಗಳೂ ಸುತ್ತತೊಡಗಿದವು. ಅವನೊಡನೆ ಲಿಫ್ಟಿನಲ್ಲಿ ಕೂಡ ಓಡಾಡಲು ಹೆದರುತ್ತಿದ್ದ ಜನ ಕತೆಗಳನ್ನು ಮಾತ್ರ ಹುಟ್ಟಿಸಿದರು.

''ಸಂಜೆ ಹೊತ್ತು ಅವನ ಮನೆ ಬಾಗಿಲ ಹತ್ತಿರ ಹೋದರೆ ಹೇಗೆ ಕೇದಗೆ ಹೂ ವಾಸನೆ ಬರುತ್ತೆ ಗೊತ್ತಾ...?''

''ಮೊನ್ನೆ ನಮ್ಮ ಚಿಂಚು, ಪುಟ್ಟೂನ ಮನೆ ಒಳಗೆ ಕರೆದನಂತೆ, ಚಾಕೋಲೇಟ್ ಕೊಡ್ತೀನಿ ಅಂದನಂತೆ. ಇವರೆಲ್ಲಾ ಸದ್ಯ ಮನೆಗೆ ಓಡಿ ಬಂದರು...''

''ಅವತ್ತು ಅವನು ತೆಗೆದು ಹಾಕಿದ್ದ ನಿರ್ಮಾಲ್ಯದ ಹೂ ಗುಡಿಸಿ ಹಾಕಿದಳಲ್ಲಾ ಲಕ್ಕವ್ವ, ಎಷ್ಟು ಜ್ವರ ಬಂದು ಮಲಗಿಬಿಟ್ಟಿದಾಳೆಂತ...''

''ಅವನಿಗ್ಹೇಳಬೇಕು ಆ ತುಂಡುಪಂಚೇಲಿ ಹಾಗೆ ಸುತ್ತಾಡಬೇಡ ಅಂತ... ಇಲ್ಲೆಲ್ಲಾ ಫ್ಯಾಮಿಲಿ ಪೀಪಲ್ ಇದಾರೆ ಅಂತ''

''ಸದ್ಯ ಹೇಳೋರು ಯಾರು...?''

''ಹೇಗಿದ್ದ ಬಿಲ್ಡಿಂಗ್ ಹೇಗಾಗಿ ಹೋಯಿತು...?''

''ದಿನಾ ರಾತ್ರಿ ಹನ್ನೆರಡು ಗಂಟೆಗೆ ಪುಂಗಿ ನಾದ ಕೇಳಿಸುತ್ತೆ ಗೊತ್ತಾ... ನಾನು ಮೊದಲು ಯಾರೋ ನಾಗಿನ್ ಕ್ಯಾಸೆಟ್ ಹಾಕಿದಾರೆ ಅಂತಿದ್ದೆ... ಆಮೇಲೆ ಗೊತ್ತಾಯ್ತು...''



ಶಂಭು ಮನೆಯ ಪಕ್ಕದ ಮನೆಯ ಸೀತಾ ಚಂದ್ರನ್ ಗೋಳಂತೂ ಅತಿರೇಕಕ್ಕೇ ಹೋಗಿತ್ತು. 'ನಾನು ಈ ಮನೆ ಮಾರೇ ಬಿಡೋಣಾಂತ ಏಜೆಂಟ್ ಹತ್ತಿರ ಹೋದೆ. ನಮ್ಮ ಏಜೆಂಟ್ ಕೇಳ್ತಾನೆ 'ಯಾರ್ರೀ ಬರ್‍ತಾರೆ ಆ ಮನೇಗೆ?'

'ಆಗ್ಲೇ ಎಲ್ಲರಿಗೂ ಗೊತ್ತಾಗಿದೆ, ನಾಲ್ಕೈದು ಲಕ್ಷಕ್ಕೆ ಮಾರಿ. ಯಾರಾದರೂ ಆಫೀಸ್-ಗೀಫೀಸ್ ಹಾಕ್ಕೊಂಡು ಬರ್ತಾರೆ' ಅಂದ. ಇಂಥ ಮನೆ ಅಷ್ಟು ಕಡಿಮೇಗೆ ಮಾರೋದುಂಟೆ...? ಈ ಗೋಳು ನನ್ನ ಜನ್ಮಕ್ಕೆ ಹತ್ತಿದ್ದೇ...

ಎಲ್ಲರೂ ಇಷ್ಟೆಲ್ಲಾ ತುಮುಲಗಳಲ್ಲಿದ್ದರೂ ಏನೂ ಆಗದಂತೆ ಶಾಂತಿಯಿಂದ ಇರುತ್ತಿದ್ದುದು ಶಂಭು ಕೆಳಗಡೆ ಮನೆಯ ಶಾರದಮ್ಮ ಮಾತ್ರ. ಎಂಬತ್ತು ವರ್ಷದ ಆಕೆ ಗಂಡ ಹೋದ ಮೇಲೆ ಮಕ್ಕಳೂ ಇಲ್ಲದ್ದರಿಂದ ಒಬ್ಬರೇ ಇರುತ್ತಿದ್ದರು. ಅವತ್ತು ಎಲ್ಲರೂ ಸೇರಿದ್ದಾಗ ಝಾಡಿಸಿದರು "ಅವನೇನ್ರೀ ಮಾಡ್ತಾನೆ? ತನ್ನ ಪಾಡಿಗೆ ತಾನಿದ್ದಾನೆ. ಸರಿಯಾಗಿ ಬಾಡಿಗೆ ಕೊಡ್ತಾನೆ, ಬೆಳಿಗ್ಗೆ ಹೋಗಿ ಸಂಜೆ ಮನೆಗೆ ಬರ್ತಾನೆ. ನೀವೆಲ್ಲಾ ಏನು ಹೇಳೋದು... ಕೈಯಲ್ಲಿ ಫೋನ್ ಸಿಗಿಸಿ ಕೊಂಡು ಕಾರಲ್ಲಿ ಓಡಾಡೋದು ಮಾಡೋದೇ ಕೆಲಸವಾ? ಅವರೇ ಮರ್ಯಾದಸ್ಥರು... ನೋಡಿ ಅವತ್ತು ಮಾಲಿ ಬರದೆ ಎರಡು ದಿನ ಗಿಡಕ್ಕೆ ನೀರು ಹಾಕೋರಿಲ್ದೆ ಅಯ್ಯೋ ಹೂವಿನ ಗಿಡ ಸೊರಗಿ ಹೋಯ್ತೂಂತ ಎಲ್ಲರೂ ಸುಮ್ನೆ ಗೊಣಗಿದ್ರಿ, ಏನಾದ್ರೂ ಮಾಡಿದ್ರಾ? ಶಂಭು ಕೆಳಗೆ ಬಂದವ್ನೇ ಪೈಪ್‌ನ ಗಾರ್ಡನ್ ನಲ್ಲೀಗೆ ಸಿಕ್ಕಿಸಿ ಅರ್ಧಗಂಟೇಲಿ ಅಚ್ಚುಕಟ್ಟಾಗಿ ನೀರು ಹಾಯಿಸಿ, ಏನೂ ಆಗದಂತೆ ಒಳಗೆ ನಡೆದು ಬಿಟ್ಟ... ಸುಮ್ನೆ ಯಾಕೆ ಹುಚ್ಚುಚ್ಚಾಗಿ ಮಾತಾಡ್ತೀರಿ..." ಎಂದರು.

ಶಾರದಮ್ಮನ ಎದುರಿಗೆ ಎಲ್ಲರೂ ಸುಮ್ಮನಿದ್ದರೂ ಹಿಂದೆ 'ಅಯ್ಯೋ ಈ ಮುದುಕಿಗೆ ಅರಳು ಮರುಳಾಗಿದೆ. ಈಗಿನ ಕಾಲದವರ ವಿಷಯ ಗೊತ್ತಿದ್ರೆ ತಾನೇ...? ಇಷ್ಟರಮೇಲೆ ಇದಕ್ಕೆ ಯಾರಿಗೇನಾದರೆ ಏನು?...' ಎಂದೆಲ್ಲಾ ಮಾತಾಡಿದರು.

ಅಂದು 'ಸ್ವರ್ಗ ಕಾಂಪ್ಲೆಕ್ಸ್'ಗೆ ಅಮರಿದ ಹೊಸ ಗಂಡಾಂತರದ ಬಗ್ಗೆ ಚರ್ಚಿಸಲು ವಿಶೇಷ ಕಮಿಟಿ ಮೀಟಿಂಗನ್ನೇ ಕರೆಯಲಾಯಿತು. ಹೇಗಾದರೂ ಶಂಭು ತಾನಾಗಿಯೇ ಮನೆ ಬಿಡುವಂತೆ ಕಿರುಕುಳ ಕೊಡಲು ಉಪಾಯಗಳನ್ನು ಹುಡುಕಲಾಯಿತು.

"ಇನ್ನೇನು ಮಾಡೋಕೆ ಸಾಧ್ಯ? ಕೇಬಲ್ ಕಟ್ ಮಾಡೋದು ತುಂಬಾ ಇಫೆಕ್ಟಿವ್ ಆಗೇನೋ ಇರುತ್ತೆ. ಆದರೆ, ಟೀವೀನೆ ಇಲ್ಲದೋನ ಹತ್ತಿರ ಇದೇನು ಪ್ರಯೋಜನ...?

ನೀರು...

ಹೌದು. ನೀರು ಕಟ್ ಮಾಡದಿದ್ದರೂ... ಫ್ಲೋ ತುಂಬಾ ಕಡಿಮೆ ಆಗುವಂತೆ ಮಾಡಬಹುದಲ್ಲಾ? ಆಗ ಅವನು ಕಂಪ್ಲೇನ್ ಮಾಡುವ ಹಾಗೂ ಇಲ್ಲ, ಮಾಡಿದರೆ, ಎಲ್ಲಾ ಮನೆಗಳಿಗೂ ಇದೇ ಪ್ರಾಬ್ಲಮ್. ರಿಪೇರಿ ಮಾಡಿಸುತ್ತಿದ್ದೇವೆಂದು ಹೇಳುತ್ತಾ ಹೋದರೆ ಆಯ್ತು..."

"ಬ್ರಿಲಿಯಂಟ್ ಐಡಿಯಾ. ಇಟ್ ಶುಡ್ ವರ್ಕ್"

ಮಾರನೆಯ ದಿನ ಕಾಂಪ್ಲೆಕ್ಸಿನ ವಾಸಿಗಳಿಗೆ ಒಂದು ಅಚ್ಚರಿಯೇ ಕಾದಿತ್ತು. ಎರಡೂ ಕೈಗಳಲ್ಲಿ ಒಂದೊಂದು ಪ್ಲಾಸ್ಟಿಕ್ ಕೊಡ ಹಿಡಿದ ಶಂಭು ಧಡಧಡನೆ ಮೂರು ಮಹಡಿ ಇಳಿದು ಕೆಳಗೆ ಗಾರ್ಡನ್ ನಲ್ಲಿಯಿಂದ ನೀರು ತುಂಬಿಸಿ ಹತ್ತಿ ಹೋದ. ಇದೇ ರೀತಿ ನಾಲ್ಕಾರು ಟ್ರಿಪ್ಪುಗಳನ್ನು ಮಾಡಿದ. ಅವನು ನೀರು ಕಡಿಮೆ ಬಂದಿದ್ದರ ಬಗ್ಗೆ ಚಕಾರವೆತ್ತಲಿಲ್ಲ.

ಇವನು ಹೀಗೆ ಕೊಡ ಹೊತ್ತು ನೀರು ತುಳುಕಿಸಿಕೊಳ್ಳುತ್ತಾ ಮಹಡಿ ಹತ್ತುತ್ತಿದ್ದಾಗ ಎರಡನೇ ಮಹಡಿಯಲ್ಲಿದ್ದ ಒಂದು ಅಪಾರ್ಟ್

ಂಟನ್ನು ಖರೀದಿಸಲು ಬಂದಿದ್ದ ಶೂ ವ್ಯಾಪಾರಿಯೊಬ್ಬರು ಎದುರಾದರು. ಅವರು ಮನೆ ಹೋರಾಟಗಾರನಿಗೆ ''ಏನಯ್ಯಾ ಇದು ನೀರು ಕೊಚ್ಕೊಂಡು ಹೋಗೋ ಸ್ಥಿತಿ ಇರೋ ಈ ಬಿಲ್ಡಿಂಗ್‌ನಲ್ಲಿ ನಂಗೆ ಮನೆ ತೋರಿಸಿದ್ದೀಯಲ್ಲಾ... ಇನ್ನು ಇಲ್ಲಿ ಮನೆಯೂ ಬೇಡ, ನಿನ್ನ ಸಾವಾಸವೂ ಬೇಡ...'' ಎಂದು ಕೋಪದಿಂದ ಹೊರಟುಹೋದರು.

''ನೋಡ್ರೀ ಈ ಪ್ರಾಪರ್ಟಿ ವ್ಯಾಲ್ಯೂನೇ ಬಿದ್ದುಹೋಗುತ್ತಿದೆ ಒಂದು ವ್ಯಕ್ತಿಯಿಂದ. ಏನಾದ್ರೂ ತಕ್ಷಣ ಮಾಡದೆ ಇದ್ರೆ ಆಗೋಲ್ಲ. ಲಾಯರ್ ರಾಜಣ್ಣ ಅವರನ್ನೂ ಈ ಎಮರ್ಜನ್ಸಿ ಮೀಟಿಂಗಿಗೆ ಕರೆದುಕೊಂಡು ಬಂದೆ'' ಎಂದು ರಾಧಾಕೃಷ್ಣನ್ ವಿವರಿಸಿದರು.


ಎಲ್ಲರ ಷಡ್ಯಂತ್ರಗಳನ್ನೂ ಮೊದಲೇ ಅರಿತವನಂತೆ ಮುಖ ಮಾಡಿಕೊಂಡ ಮೆನನ್ ''ನೋಡ್ರಿ, ಇದೆಲ್ಲಾ ಈ ಫ್ಲ್ಯಾಟ್ ಓನರ್‌ದೇ ಕಾರುಬಾರು. ಇಂಥಾವನನ್ನು ಇಲ್ಲಿ ತಂದಿಟ್ಟು ಅಮೆರಿಕಾಗೆ ಹೋಗಿ ಕೂತಿದ್ದಾನೆ. ಇಲ್ಲಿ ಆಗ್ಲೇ ನಮ್ಮ ಕಾಂಪ್ಲೆಕ್ಸ್ ಹೆಸರು ಕೆಟ್ಟು, ಕಟ್ಟಡದ ಬೆಲೆ ಬೀಳುತ್ತಿದೆ. ಆರು ತಿಂಗಳ ನಂತರ ವಾಪಸ್ಸು ಬಂದು, ಇಡೀ ಬಿಲ್ಡಿಂಗನ್ನು ಅರ್ಧ ಬೆಲೆಗೆ ಕೊಂಡು, ಈ ಹಾವಾಡಿಗನ್ನ ಹೊರಗೆ ತರ್ತಾನೆ ಅಷ್ಟೆ...'' ಎಂದು ಹೇಳಿದಾಗ, ಎಲ್ಲರಿಗೂ ಈ ವಿಷಯ ತಮಗೆ ಹೊಳೆಯಲೇ ಇಲ್ಲವಲ್ಲಾ ಎಂದು ಬೇಸರವಾಯಿತು.

ಎಲ್ಲರ ದೂರನ್ನೂ ಕೇಳಿದ ಲಾಯರ್ ರಾಜಣ್ಣ ''ನೋಡಿ, ಈ ವ್ಯಕ್ತಿಯ ಹತ್ತಿರ ರೇಶನ್ ಕಾರ್ಡಿದೆ. ಎಲ್ಲಾ ಡಾಕ್ಯುಮೆಂಟ್ಸ್ ಇದೆ ಅಂತೀರಿ. ಸರಿಯಾಗಿ ಬಾಡಿಗೆ ಕೊಡ್ತಾನೆ. ತನ್ನ ಪಾಡಿಗೆ ತಾನು ಇದ್ದಾನೆ. ಅವನನ್ನು ಕೇವಲ 'ವಿಚಿತ್ರ ವೃತ್ತಿಯವನೂಂತ' ಇಲ್ಲಿಂದ ಓಡಿಸೋಕೆ ಆಗೋಲ್ಲ'' ಅಂದುಬಿಟ್ಟರು.

'ಏನಾದರೂ ಕಾರಣ ಹುಡುಕಿ' ಎಂದು ಎಲ್ಲರೂ ಪ್ರಾಣ ತಿಂದಾಗ 'ಅವನೇನಾದರೂ ನಿಗೂಢವಾದ ಚಟುವಟಿಕೆಗಳಲ್ಲಿ ಇನ್‌ವಾಲ್ವ್ ಆಗಿದ್ರೆ... ರೌಡಿ ಅಂತಲೋ, ಆತಂಕವಾದಿಯಂತಲೋ ಅನುಮಾನ ಬರೋ ಹಾಗಿದ್ರೆ...'

ಎಲ್ಲರ ಕಿವಿ ನೆಟ್ಟಗಾಯಿತು. ''ಹೌದು , ವಿ ವಿಲ್ ವರ್ಕ್ ಆನ್ ದಿಸ್''ಎಂದು ರಾಧಾಕೃಷ್ಣ ಟೇಬಲ್ ಗುದ್ದಿದರು.

'ಕೇಸು ಸರಿಯಾಗಿ ತಯಾರು ಮಾಡಿ. ಸೀದಾ ಪೊಲೀಸ್ ಕಮಿಷನರ್ ಹತ್ತಿರವೇ ಹೋಗೋಣ.' ಎಂದಾಗ ಎಲ್ಲರ ಮುಖದ ಮೇಲೂ ಸಮಾಧಾನದ ನಗೆ ಮೂಡಿತು.



'ಸ್ವರ್ಗ ಅಪಾರ್ಟ್‌ಮೆಂಟ'ನ ನಾಲ್ಕು ಜನ ಕಮಿಟಿ ಮೆಂಬರುಗಳು ಪೊಲೀಸ್ ಕಮಿಷನರ್‌ರೊಡನೆ ಅಪಾಯಿಂಟ್‌ಮೆಂಟ್ ತೆಗೆದುಕೊಂಡ ದಿನ ಮುಂಜಾನೆಯೇ ಒಂದು ವಿಚಿತ್ರ ನಡೆದು ಹೋಯಿತು. ಬೆಳಗಾಗೆದ್ದು ಶಂಭುವಿನ ಎದುರು ಮನೆಯವರು ಪೇಪರ್, ಹಾಲು ಒಳಗಿಟ್ಟುಕೊಳ್ಳಲು ಬಾಗಿಲು ತೆಗೆದಾಗ, ಯಾವಾಗಲೂ ಮುಚ್ಚಿರುತ್ತಿದ್ದ ಅವನ ಮನೆ ಬಾಗಿಲು ಹಾರು ಹೊಡೆದಿದ್ದು ಕಂಡು ಅವರಿಗೆ ಆಶ್ಚರ್ಯವಾಯಿತು. ಏನೋ ಎಂದುಕೊಂಡು ಬಾಗಿಲು ಹಾಕಿಕೊಂಡರು. ಎಂಟುಗಂಟೆಗೆ ಕೆಲಸದವಳು ಬಂದಾಗಲೂ ಬಾಗಿಲು ತೆರೆದ ಕೂಡಲೇ ಅದೇ ದೃಶ್ಯ. ಜೊತೆಗೆ ಅವನ ಮನೆ ಬಾಗಿಲು ತೆಗೆದಾಗ ಹಾಲಿನಲ್ಲಿ ಕಣ್ಣಿಗೆ ಬೀಳುತ್ತಿದ್ದ ನೀರಿನಹೂಜಿ, ಹಾಸಿದ ಚಾಪೆ, ಮುಂದೆ ದೇವರಪಟ ಎಲ್ಲಾ ನಾಪತ್ತೆ. ಕೆಲಸದವಳನ್ನು ಮುಂದೆ ಮಾಡಿಕೊಂಡು ಒಂದೆರಡು ಹೆಜ್ಜೆ ಒಳಗೆ ಹೋದಾಗ ಮನೆ ಖಾಲಿಯಿರುವುದು ಅರಿವಾಯಿತು. ತಕ್ಷಣ ಇವರು ಇಂಟರ್‌ಕಾಮ್‌ನಲ್ಲಿ ಸೆಕ್ಯೂರಿಟಿಯವನಿಗೂ, ರಾಧಾಕೃಷ್ಣನ್‌ಗೂ ಹೇಳಿದರು. ಎಲ್ಲಾ ತಕ್ಷಣ ಓಡಿ ಬಂದರು. ಹೆಜ್ಜೆ ಮೇಲೆ ಹೆಜ್ಜೆ ಇಡುತ್ತಾ ಮನೆ ಪೂರ್ತಿ ಸುತ್ತುಹಾಕಿದರು.

ಬಿಕೋ ಅನ್ನುತ್ತಿದ್ದ ಮನೆಯಲ್ಲಿ ಉಳಿದಿದ್ದ ಎಂದರೆ ವಿಚಿತ್ರ ಊದುಕಡ್ಡಿ ವಾಸನೆ. ಜೊತೆ ರೂಮಿನ ಮೂಲೆಯಲ್ಲಿ ಮುಚ್ಚಿ ಹಾಗೇ ಇಟ್ಟಿ ಹಾವಿನ ಬುಟ್ಟಿ. ಅದು ಕಂಡಕೂಡಲೇ ಎಲ್ಲರು ಹೌಹಾರಿದರು. ಆದರೆ, ಯಾರಿಗೂ ಅದನ ತೆಗೆದುನೋಡುವ ಧೈರ್ಯ ಬರಲಿಲ್ಲ ರಾಧಾಕೃಷ್ಣನ್ ಕೂಡ ಅದನ್ನು ದಿಟ್ಟಿಸುತ್ತಲೇ ಅದೇನಾದರೂ ಅಲ್ಲಾಡುತ್ತಿದೆಯೇ ಎಂದು ಪರಿಶೀಲಿಸಿದರು. ನಿಧಾನವಾಗಿ ಸದ್ದಿಲ್ಲದೆ ಮ ಹೊರಗೆ ಬರಲು ಎಲ್ಲರಿಗೂ ಸನ್ನೆ ಮಾಡಿದರು.

ಜೋರಾಗಿ ಬಾಗಿಲೆಳೆದುಕೊಂಡು, ತವ ಮನೆಯಿಂದಲೇ ಒಂದು ಬೀಗ ತಂದು ಹಾಕಿ ಎಳೆದೆಳೆದು ನೋಡಿ, ಬಿದ್ದಿದೆಯೇ ಎಂದು ಖಾತ್ರಿ ಮಾಡಿಕೊಂಡು, ಬೀಗದ ಕೈ ಸೆಕ್ಯೂರಿಟಿ ಗಾರ್ಡಿಗೆ ಕೊಟ್ಟರು.

"ಈಗ್ಲೇ ಹೋಗಿ ಯಾರಾದರೂ ಹಾವ ಹಿಡಿಯೋನ್ನ ಕರ್ಕೊಂಡು ಬಾ... ಇದೆಲ್ಲ ನಮಗ್ಯಾರಿಗೂ ಆಗದ ಕೆಲಸ" ಅಂದರು.



ಇತಿ ಎಂಟರಿ

ಮಕ್ಕಿ ಮಕ್ಕಿ ಓದುವ ಹಿಂದುಸ್ತಾ.

ಉಷಾ ರಾವ್





ವಿವೇಕ ಶಾನಭಾಗ

ಕಥನ ಕುತೂಹಲ

ಅಧ್ಯಯನದಿಂದ ಇಲೆಕ್ಟ್ರಿಕಲ್ ಇಂಜಿನಿಯರ್, ವೃತ್ತಿಯಿಂದ ಬಹುರಾಷ್ಟ್ರೀಯ ಕಂಪನಿಯೊಂದರ ಐ.ಟಿ. ವರಿಷ್ಠರಾಗಿರುವ ವಿವೇಕ ಶಾನಭಾಗ, ಕನ್ನಡದ ಮುಂಚೂಣಿ ಆಧುನಿಕ ಕತೆಗಾರ. 'ಅಂಕುರ' 'ಲಂಗರು' 'ಹುಲಿಸವಾರಿ' ಇವರ ಪ್ರಸಿದ್ಧ ಕಥಾ ಸಂಗ್ರಹಗಳು. 'ಸಕ್ಕರೆಗೊಂಬೆ' ಎಂಬ ನಾಟಕವನ್ನೂ ಇತ್ತೀಚೆಗೆ ಪ್ರಕಟಿಸಿದ್ದಾರೆ. ಉದ್ಯೋಗನಿಮಿತ್ತ ಈಗ ಲಂಡನ್‌ನಲ್ಲಿರುವ ವಿವೇಕ ಪ್ರತಿತಿಂಗಳು 'ಭಾವನಾ'ಕ್ಕೆ ಅಂಕಣವನ್ನು ಬರೆಯುತ್ತಾರೆ. ತಮ್ಮ ಬದುಕು ಬರೆಹ ಎರಡರಲ್ಲೂ ಮಾತಿಗಿಂತ ಮೌನವನ್ನೇ ಹೆಚ್ಚಿಗೆ ನೆಚ್ಚಿಕೊಂಡಿರುವ ವಿವೇಕರ ಅಂಕಣ ಹೊಸ ಗಾಳಿ ಬೆಳಕುಗಳ ಕಿಟಕಿಯಾಗುತ್ತದೆ ಎಂಬ ವಿಶ್ವಾಸದೊಂದಿಗೆ 'ಕಥನ ಕುತೂಹಲ'ವನ್ನು ನಿಮ್ಮ ಮುಂದಿಡುತ್ತಿದ್ದೇವೆ.

"ಅಯ್ಯೋ ಪಾಪ, ಮತ್ತೇನು ಹೇಳಿಯಾನು?"

ಇತ್ತೀಚೆಗೆ ಪ್ರಸಿದ್ಧ ಚಿತ್ರನಿರ್ದೇಶಕ ಎಂ.ಎಸ್. ಸತ್ಯು ಅವರ ಜೊತೆ ಮಾತಾಡುವಾಗ, ಕನ್ನಡದ ಸಣ್ಣ ಕತೆಗಳನ್ನು ಆಧರಿಸಿ ತಾವು ಮಾಡಿದ ಒಂದು ಟೆಲಿಸಿರಿಯಲ್ ಬಗ್ಗೆ ಹೇಳುತ್ತ, ಮಾಸ್ತಿಯವರ 'ಆಚಾರವಂತ ಆಚಾರ್ಯರು' ಎಂಬ ಕತೆಯನ್ನು ಓದಿದ್ದೀರಾ? ಎಂದು ಕೇಳಿದರು. ನನಗದು ಮರೆತುಹೋಗಿತ್ತು. ಸತ್ಯು ಆ ಕತೆಯನ್ನು ವಿವರವಾಗಿ, ಸುಮಾರು ಎಂಟು ಹತ್ತು ನಿಮಿಷಗಳಲ್ಲಿ ಹೇಳಿದರು. ಅವರಿಂದ ಕೇಳಿದ ಕತೆ ಎಷ್ಟು ಇಷ್ಟವಾಯಿತು ಅಂದರೆ ಸಿಕ್ಕಿದ ಮೊದಲ ಅವಕಾಶದಲ್ಲಿ ಕತೆಯನ್ನು ಮತ್ತೆ ಓದಿದೆ. ಮತ್ತು ಪೆಚ್ಚಾದೆ. ಸತ್ಯು ಅವರು ಹೇಳಿದ ರೀತಿ, ಅವರು ಅದರ ವಿವರಗಳನ್ನು ಕಟ್ಟಿದ ಬಗೆ ಎಲ್ಲವೂ ಎಷ್ಟು ಚಿತ್ರವತ್ತಾಗಿತ್ತೆಂದರೆ ಮಾಸ್ತಿಯವರ ಕತೆ ಸಪ್ಪೆ ಅನಿಸಿಬಿಟ್ಟಿತು. ಕತೆ ಅದೇ.

ಸತ್ಯು ಯಾವ ಹೊಸ ಘಟನೆಯನ್ನೂ ಸೇರಿಸಿರಲಿಲ್ಲ. ಮಾಸ್ತಿಯವರ ಬಹುತೇಕ ಕತೆಗಳ ಹಾಗೆ ಇದೂ ಕೂಡ. ಯಾರೋ ಯಾರಿಗೋ ಹೇಳಿದ ಕತೆಯನ್ನು ಮಾಸ್ತಿ ಓದುಗರಿಗೆ ಹೇಳಿದ್ದರು. ಸತ್ಯು ನನಗೆ.

ಸತ್ಯು ಅವರಿಂದ ಕತೆ ಕೇಳಿದಾಗ ಆದ ಅನುಭವ ನನಗೆ ಮಾಸ್ತಿಯವರ ಕತೆ ಓದಿದಾಗ ಆಗದಿರುವುದಕ್ಕೆ ಕಾರಣ, ಕತೆ ಒಬ್ಬರಿಂದೊಬ್ಬರಿಗೆ ದಾಟಿ ಹೋಗುವ ಪ್ರಕ್ರಿಯೆಯಲ್ಲಿ ಪಡೆಯುವ ಮರುಹುಟ್ಟುಗಳಿರಬಹುದು. ಅಂದರೆ ಮಾಸ್ತಿಯವರ ಕತೆಯನ್ನು ಸತ್ಯು ಗ್ರಹಿಸಿದ ರೀತಿ ಆ ಕತೆಯ ನನ್ನ ಓದಿಗಿಂತ ಭಿನ್ನವಾಗಿತ್ತು. ಒಬ್ಬ ಚಿತ್ರನಿರ್ದೇಶಕರಾಗಿ ಅವರು ಅದರ ಚಿತ್ರಕ ಶಕ್ತಿಯನ್ನು ಕೂಡ ಗಮನಿಸಿದ್ದರು. ಮಾಸ್ತಿ ಎರಡು ವಾಕ್ಯದಲ್ಲಿ ಹೇಳಿದ್ದನ್ನು ಸತ್ಯು ವಿವರಗಳಲ್ಲಿ ಕಂಡಿದ್ದರು. ಈ ಕತೆ ಬರೆಯಲು ಯೋಗ್ಯ, ನಾಲ್ಕು ಜನರಿಗೆ ಹೇಳಲು ಯೋಗ್ಯ ಎಂದು ಯಾವ ಕಾರಣಗಳಿಗಾಗಿ ಮಾಸ್ತಿಯವರಿಗೆ ಅನಿಸಿ ಅವರಿದನ್ನು ಬರೆದಿದ್ದರೋ ಬಹುಶಃ ಅದಕ್ಕಿಂತ ಹೆಚ್ಚಿನ ಅಥವಾ ಬೇರೆಯಾದ ಕಾರಣಗಳಿಗಾಗಿ ಸತ್ಯು ಅವರಿಗೆ ಈ ಕತೆ ಮುಖ್ಯವೆಂದು ಅನಿಸಿದೆ. ಒಬ್ಬ ಹೆಂಗಸು ಮನೆ ಬದಲಾಯಿಸುವ ಸನ್ನಿವೇಶವನ್ನು ಮಾಸ್ತಿ ಒಂದು ವಾಕ್ಯದಲ್ಲಿ ಹೇಳಿದ್ದರೆ ಸತ್ಯು ಅವರಿಗೆ ಅದು ವಿವರ ವಿವರಗಳಲ್ಲಿ ಕಂಡಿದೆ. ಅವರ ಒಳಗಿನ ಯಾವುದೋ ತಂತಿಯನ್ನು ಮೀಟಿದೆ. ಈ ಕತೆಯನ್ನು ಕೇಳಿದಾಗ ನನ್ನಲ್ಲಿ ಅದು ಹುಟ್ಟಿಸಿದ ಅನುರಣನಗಳು, ಮತ್ತು ಈ ಕತೆ ಮುಖ್ಯವೆಂದು ನನಗೆ ಅನಿಸಿದ್ದಕ್ಕೆ ಇರುವ ಕಾರಣಗಳು ಬಹುಶಃ ಸತ್ಯು ಅವರ ಕಾರಣಗಳಿಗಿಂತ ಬೇರೆಯಾಗಿರಬಹುದು. ಈ ದಿಕ್ಕಿನಲ್ಲಿ ನೋಡುತ್ತ ಹೋದಂತೆ ಒಂದು ಕತೆ ತನ್ನ ಒಡಲಲ್ಲಿ ಇಟ್ಟುಕೊಂಡಿರುವ ಸಾಧ್ಯತೆಗಳ ಅಗಾಧತೆಯ ಬಗ್ಗೆ ಕೌತುಕವಾಗುತ್ತದೆ. ಹೀಗೆಯೇ ಯಾರೋ ಹೇಳಿದ ಒಂದು ಘಟನೆ ಕತೆಯಾಗುತ್ತದೆ. ಅವರು ಕಂಡಿರದ ಸಾಧ್ಯತೆಗಳು ಕಾಣುತ್ತವೆ. ರಾಮಾನುಜನ್ ಹೇಳಿದ ಕತೆ ಎರಡು ಬೇರೆ ಬೇರೆ ನಾಟಕಗಳಾಗುತ್ತವೆ.

ಯಾರೋ ಯಾರಿಗೋ ಹೇಳಿದ ಕತೆಯನ್ನು ನಿಮಗೆ ಹೇಳುತ್ತಿದ್ದೇನೆ ಎಂಬಂತೆ ಇರುವ ಮಾಸ್ತಿಯವರ ಬಹುತೇಕ ಕತೆಗಳ ಸಂರಚನೆಯನ್ನು ಗಮನಿಸಿದರೆ ಇದರ ಹಿಂದೆ ಎರಡು ಮುಖ್ಯ ಭಾವಗಳು ಕಾಣುತ್ತವೆ: ಒಂದು, ಈ ಕತೆಯ ಅನೇಕ ಸಾಧ್ಯತೆಗಳಲ್ಲಿ ಒಂದನ್ನು ನಿಮಗೆ ಹೇಳುತ್ತಿದ್ದೇನೆ ಎಂಬುದನ್ನು ಸೂಚಿಸುವ ಮೂಲಕ ಓದುಗ ಹಾಗೂ ಲೇಖಕ ಇಬ್ಬರಿಂದಲೂ ಅವರು ಬಯಸುವ ನಮ್ರತೆ. ಇನ್ನೊಂದು, ಕತೆ ಮರುಹುಟ್ಟು ಪಡೆಯುವ ಈ ಪ್ರಕ್ರಿಯೆ ನಿಮ್ಮೊಳಗೂ ಶುರುವಾಗಲಿ ಎಂಬ ಒತ್ತಾಯ ಮತ್ತು ಶುರುವಾಗುತ್ತದೆಂಬ ಭರವಸೆ. ಹೀಗೆಯೇ ಕತೆಯೊಂದು ಬೇರೆ ಬೇರೆ ಮನಸ್ಸುಗಳಲ್ಲಿ, ಒಂದು ಮಾಧ್ಯಮದಿಂದ ಇನ್ನೊಂದರಲ್ಲಿ ಮರುಹುಟ್ಟು ಪಡೆಯುವ ಸಾಧ್ಯತೆಗಳ ಬಗ್ಗೆ ಹೇಳುತ್ತ ಅಡಿಗರು 'ನಮ್ಮಲ್ಲಿ ಮಹಾಭಾರತ ಮತ್ತು ರಾಮಾಯಣಗಳ ನಂತರ ಕತೆಗಳು ಹುಟ್ಟಿಲ್ಲ' ಎಂದಿದ್ದರು. ಒಂದು ಕಾದಂಬರಿಯೋ, ಕತೆಯೋ ಸಿನೇಮಾ ಆದಾಗ ಅದು ಮೂಲ ಕೃತಿಯಂತೆ ಇಲ್ಲ ಎಂದು ವಿವಾದಗಳು ಏಳದೇ ಇದ್ದರೆ ಏನೋ ತಪ್ಪಿದಂತಾಗುತ್ತದೆ. ಗ್ರಹಿಕೆಯ ಕ್ರಮದಲ್ಲಿರುವ ವ್ಯತ್ಯಾಸವಲ್ಲದೇ, ಮಾಧ್ಯಮವೂ ಬದಲಾದಾಗ ಆಗುವ ಪರಿವರ್ತನೆಯ ಪ್ರಮಾಣವನ್ನು ಪರಿಗಣಿಸಿದರೆ ಇಂಥ ವಿವಾದಗಳು ಅನಗತ್ಯ ಅನಿಸಬಹುದು.

ಕತೆ, ಕತೆಗಾರನಿಂದ ಹೊರ ಹೋಗಿ ಓದುಗನಲ್ಲಿ ಮರುಹುಟ್ಟು ಪಡೆದು ಸಾರ್ಥಕವಾಗುತ್ತದೆ. ನಮ್ಮ ಜಾನಪದ ಸಾಹಿತ್ಯದಲ್ಲಿ ಇದು ಅನೇಕ ರೂಪಗಳಲ್ಲಿ ಕಾಣಸಿಗುತ್ತದೆ. ಕತೆಯನ್ನು ಯಾರಿಗೂ ಹೇಳದೇ, ಒಳಗೇ ಇಟ್ಟುಕೊಂಡಾತನ ಹೊಟ್ಟೆ ಉಬ್ಬಿದ್ದು ಅಂಥ ಒಂದು ರೂಪಕ. ಒಂದು ಕೃತಿಯ ಕುರಿತಾದ ಚರ್ಚೆ, ವಿಮರ್ಶೆ, ಜಗಳ, ಅಸಂತೋಷ ಎಲ್ಲವೂ ಅದರ ಜೀವಂತಿಕೆಯ ಚಿಹ್ನೆಗಳು. ಬದುಕಿರುವ

ಮನುಷ್ಯರ ಜೊತೆಯ ವಾಗ್ವಾದ, ಸಂವಾದ, ಜಗಳಗಳ ಹಾಗೆ. ತಲೆಮಾರಿನಿಂದ ತಲೆಮಾರಿಗೆ ಹೊಸ ಹುಟ್ಟು ಪಡೆದು ಇನ್ನೂ ಜೀವಂತವಾಗಿರುವ ಸಾಹಿತ್ಯ ಕೃತಿಗಳ ಅನೇಕ ಉದಾಹರಣೆಗಳು ನಮ್ಮಲ್ಲಿವೆ. ಓದಿದ್ದನ್ನೇ ಮತ್ತೆ ಓದುತ್ತೇವೆ. ಇಲ್ಲಿ 'ಕತೆ' ಕೆರಳಿಸುವ ಕುತೂಹಲ ಅಮುಖ್ಯವಾಗುತ್ತದೆ. ಅದು ಎಬ್ಬಿಸುವ ಅನುರಣನಗಳು ಮುಖ್ಯವಾಗುತ್ತವೆ.

ಕಳೆದುಹೋದ ಗಳಿಗೆಗಳು ಪುನರ್ಜನ್ಮ ಪಡೆದಂತೆ ಎದ್ದು ಬರುವುದನ್ನು ಅನುಭವಿಸುವುದು ಲೇಖಕನ ರೋಮಾಂಚನಗಳಲ್ಲಿ ಮುಖ್ಯವಾದದ್ದು. ಎಲ್ಲೋ ಆಳದಲ್ಲಿ ಹೂತುಹೋದ ವಿವರಗಳು, ಆವರೆಗೂ ಕಳೆದೇಹೋದಂತಿದ್ದ ಘಟನೆಗಳು ಬರೆಯುವ ಕ್ಷಣಗಳಲ್ಲಿ ಪೂರ್ಣ ವಿವರಗಳೊಂದಿಗೆ ಎದ್ದುಬರುತ್ತವೆ. ಹೊಸ ಬೆಳಕಿನಲ್ಲಿ ಕಂಗೊಳಿಸುತ್ತವೆ. ಬರೆಬರೆಯುತ್ತ ಅದು ಒದಗಿಬರುವುದನ್ನು ಕಾಣುತ್ತ, ಕೌತುಕಪಡುತ್ತ, ಈ ಅನಾವರಣ ಹುಟ್ಟಿಸಿದ ರೋಮಾಂಚನವನ್ನು ಅನುಭವಿಸುವುದು ಸೃಷ್ಟಿಕ್ರಿಯೆಯ ಖುಷಿಗಳಲ್ಲೊಂದು. ಹೀಗೆ ಒಂಟಿಯಾಗಿ ಪಡೆದದ್ದರ ಅನನ್ಯತೆಯಿರುವುದು ಬರೆವ ಕ್ಷಣದ ಖಂಡತುಂಡ ಪ್ರಾಮಾಣಿಕತೆಯಿಂದಾಗಿ. ಅನುಭವವೊಂದು ಕಥನವಾಗುವ, ಹಾಗಾಗುತ್ತ ಆಗುತ್ತ ಅದಕ್ಕೆ ತಕ್ಕ ಆಕಾರ, ರೂಪ ಪಡೆದು ಭಾಷೆಯಲ್ಲಿ ಮೈತಾಳುವ ಈ ಸೃಜನಕ್ರಿಯೆಯನ್ನು ಸ್ಫೂರ್ತಿಯೋ, ಪ್ರತಿಭೆಯೋ ಅಥವಾ ಬರೀ ಅದೃಷ್ಟವೋ ಅಥವಾ ಎಲ್ಲವೂ ಕೂಡಿ ಬಂದ ಕ್ಷಣವೋ ಇದೇ ಎಂದು ಮಾತಲ್ಲಿಡುವುದಂತೂ ಕಷ್ಟ. 'ಕಥನವೇ ಎಲ್ಲ ಉತ್ತಮ ಗದ್ಯ ಸಾಹಿತ್ಯದ ಮೂಲ. ಲೇಖಕನಲ್ಲಿ ಈ ಕಥನಶಕ್ತಿ ಇಲ್ಲದಿದ್ದಲ್ಲಿ, ಯಾವುದೇ ರೂಪಕ, ಪ್ರತಿಮೆಗಳಿಂದಾಗಲೀ, ಭಾಷೆಯ ಆಟದಿಂದಾಗಲೀ, ವೈಚಾರಿಕತೆಯ ಲೇಪದಿಂದಾಗಲೀ ಈ ಅವಗುಣವನ್ನು ಮುಚ್ಚಿಹಾಕಲು ಸಾಧ್ಯವಿಲ್ಲ' ಎಂದು ಶ್ರೇಷ್ಠ ಕತೆಗಾರ ಸಿಂಗರ್ ಸೃಜನಶೀಲ ಗದ್ಯದ ಬಗ್ಗೆ ಹೇಳುತ್ತಾನೆ.

ಸೃಷ್ಟಿಕ್ರಿಯೆಯ ಕ್ಷಣಗಳಲ್ಲಿ ಅಗತ್ಯವಾದ ತಾದಾತ್ಮ್ಯ ಮತ್ತು ನಂತರದ ನಿರ್ಮೋಹವನ್ನು ಮಾಸ್ತಿಯವರಿಗೆ ಸಂಬಂಧಿಸಿದ ಈ ಘಟನೆ ಹೇಳುತ್ತದೆ: ತಮ್ಮ ಕೊನೆಯ ಕೆಲವು ಕತೆಗಳನ್ನು ಮಾಸ್ತಿ ಹೇಳಿ ಬರೆಸಿದ್ದರು. ಅಂಥ ಒಂದು ಕತೆಯನ್ನು ಪಡೆಯಲು ನನ್ನ ಸಂಪಾದಕ ಮಿತ್ರರೊಬ್ಬರು ಹೋಗಿದ್ದಾಗ ಮಾಸ್ತಿ ಅತ್ತಿಂದಿತ್ತ ಶಥಪಥ ನಡೆಯುತ್ತ ತಾವು ಹೇಳಿ ಬರೆಸಿದ ಕತೆಯನ್ನು ಓದಿಸಿ ಕೇಳಿಸಿಕೊಳ್ಳುತ್ತಿದ್ದರು. ಕತೆಯ ನಡುವೆ ಪಾತ್ರವೊಂದರ ಮಾತು ಕೇಳಿಸಿಕೊಂಡ ಅವರು 'ಅಯ್ಯೋ ಪಾಪ ಅದಲ್ಲದೇ ಮತ್ತೇನು ಹೇಳಿಯಾನು?' ಅಂದರಂತೆ!! ■



ಯಶವಂತ ಚಿತ್ತಾಲ

ಅಪ್ಪ



ಭಾವನಾ ಏಪ್ರಿಲ್, 2000



ಎಂದಿನ ಹಾಗೆಯೇ ದೂರ, ಪೂರ್ವ ದಿಕ್ಕಿನಲ್ಲಿ, ಮುರ್ಕುಂಡಿ ದೇವಸ್ಥಾನವನ್ನು ಹೊತ್ತುನಿಂತ ಗುಡ್ಡದಾಚೆಯ ಆಕಾಶ ಕೆಂಪೇರುವ ಮೊದಲೇ ಭರತನು ಎದ್ದ. ಪ್ರಾತರ್ವಿಧಿಗಳನ್ನು ಮುಗಿಸಿ, ರಸ್ತೆಯಂಚಿನ ದೊಡ್ಡ ಅಶ್ವತ್ಥಕ್ಕೆ, ಅಂಗಳದಲ್ಲಿಯ ತುಳಸೀ ಕಟ್ಟೆಗೆ ಪ್ರದಕ್ಷಿಣೆ ಹಾಕಿ ಹಿತ್ತಲ ಗಿಡಗಳಿಂದ ಹೂವುಗಳನ್ನು ಕಿತ್ತುತಂದ. ಕೊರೆಯುವ ಚಳಿಯಲ್ಲೂ ಬಾವೀಕಟ್ಟೆಯ ಮೇಲೆ ತಣ್ಣೀರು ಸ್ನಾನ ಮಾಡಿ, ಮಡಿ ಪಂಚೆಯುಟ್ಟು, ನಾಮ ಮುದ್ರೆ, ಪ್ರಾತಃ ವಂದನೆಗಳನ್ನು ಮುಗಿಸಿ ದೇವರ ಪೂಜೆ ಮಾಡಿದ. ಜಗಲಿಯ ಮೇಲೆ ತನ್ನ ಹಾದಿ ಕಾಯುತ್ತಿದ್ದ ತಾಯಿಗೆ ತೀರ್ಥ ಪ್ರಸಾದಗಳನ್ನು ಕೊಟ್ಟು, ಕೈಮುಗಿದು, ಅವಳ ಆಶೀರ್ವಾದ ಪಡೆದು ಅವಳೆದುರು ಚಕ್ಕಳಬಕ್ಕಳ ಕುಳಿತುಕೊಂಡ. ಹಾಗೂ ನಮ್ರತೆಯೇ ಹೆಪ್ಪುಗಟ್ಟಿತೇನೋ ಎಂಬಂಥ ತಣ್ಣಗಿನ ನಿರ್ಧಾರದಿಂದ ಕೇಳಿದ:

''ಇವತ್ತು ನಾನು ಕೇಳುವ ಪ್ರಶ್ನೆಗೆ ನೀನು ಉತ್ತರ ಕೊಡಲೇಬೇಕು. ನಿನ್ನ ಉತ್ತರವನ್ನು ಕೇಳುವ ಧೈರ್ಯ ನನಗಿದೆ. ನಾನೀಗ ಸಣ್ಣವನಲ್ಲ. ನನಗೀಗ ಹದಿಮೂರು ವರ್ಷ ವಯಸ್ಸು. ಹೇಳಮ್ಮ, ನಾನು ನಿಜಕ್ಕೂ ಯಾರು? ಎಲ್ಲಿಂದ ಬಂದವನು? ಇಲ್ಲಿಗೆ ಹೇಗೆ ಬಂದೆ? ಹೇಳುತ್ತೇನೆಂದು ಭರವಸೆ ಕೊಟ್ಟ ಹೊರತು ಇಲ್ಲಿಂದ ಕದಲಲಾರೆ'' ಹುಡುಗ ಹಠ ಹಿಡಿದ.

ತಾಯಿಯೂ ಇದನ್ನು ನಿರೀಕ್ಷಿಸಿದ ಹಾಗಿತ್ತು. ಎಳ್ಳಷ್ಟೂ ವಿಚಲಿತಳಾಗದೇ ಸೌಮ್ಯ ದನಿಯಲ್ಲಿ ಉತ್ತರಕೊಟ್ಟಳು:

''ಹೌದು ಮಗೂ ನೀನೀಗ ದೊಡ್ಡವನಾಗಿದ್ದೀ. ಒಂದು ದಿವಸ ನಿನಗೆ ಹೇಳುವವಳೇ ಇದ್ದೆ, ಇವತ್ತು ಮುಹೂರ್ತ ಬಂದಂತಿದೆ. ಈಗ ಸಾಲೆಗೆ ಹೋಗು. ಮಧ್ಯಾಹ್ನದ ಊಟ, ಸಾಲೆಯ ಅಭ್ಯಾಸ ಮುಗಿದ ಮೇಲೆ ನಿತ್ಯದಂತೆ ಸಣ್ಣ ನಿದ್ದೆ ಮಾಡಿ ಏಳು. ಆಮೇಲೆ ನಿನ್ನನ್ನು ಕಾಡುತ್ತಿದ್ದ ನಿನ್ನ ಜನ್ಮದ ಕಥೆಯನ್ನು ಹೇಳುತ್ತೇನೆ.''

ಹುಡುಗ ತಾಯಿಯ ಮಾತನ್ನು ನಂಬಿದ. ಅವಳನ್ನು ಕಾಲು ಮುಟ್ಟಿ ನಮಸ್ಕರಿಸಿ ಕುಳಿತಲ್ಲಿಂದ ಎದ್ದು ಸಾಲೆಗೆ ಹೋಗುವ ತಯಾರಿಗೆ ತೊಡಗಿದ.

ಅಪರಾಹ್ನ, ಮಗನಿಗೆ ಕೊಟ್ಟ ಮಾತನ್ನು ಮರೆತಿರದ ತಾಯಿ, ದೇವರ ಕೋಣೆಗೆ ಹೋಗಿ ಹೊರಗೆ ಬಂದವಳೇ ಜಗಲಿಯ ಮೇಲೆ ತನ್ನ ಹಾದಿ ಕಾಯುತ್ತಿದ್ದ ಮಗನಿಗೆ, ''ಬಾ. ಇಲ್ಲಿ ಬೇಡ. ಈ ಮನೆಯ ಬಾಗಿಲು, ಕಿಡಕಿಗಳು, ಗೋಡೆಗಳು, ನೆಲ ಮಾಡುಗಳು ಎಲ್ಲ ಮನುಷ್ಯ ನಿರ್ಮಿಸಿದವುಗಳು. ನಿನ್ನ ಹುಟ್ಟಿನ ಕಥೆ ಕೇಳಲು ಲಾಯಕ್ ಆದವುಗಳಲ್ಲ. ಹಿತ್ತಲಿಗೆ ಹೋಗೋಣ. ಬಾವೀಕಟ್ಟೆಯ ಬಳಿಯ ಹಲಸಿನ ಮರದ ನೆರಳಲ್ಲಿ ಕುಳಿತು ಮಾತನಾಡೋಣ. ಆಗಲೇ ಅಲ್ಲಿ ಹುಲ್ಲಿನ ಮೇಲೆ, ಬಾವಿನೀರಿನಿಂದ ಚೆನ್ನಾಗಿ ತೊಳೆದು ಬಿಸಿಲಲ್ಲಿ ಒಣಗಿಸಿದ ಚಾಪೆಯನ್ನು ಹಾಸಿ ಬಂದಿದ್ದೇನೆ'' ಎಂದಳು.





ಭರತನು ತನ್ನ ತಾಯಿಯನ್ನು ಹಿಂಬಾಲಿಸಿದ. ಹಿತ್ತಿಲಲ್ಲಾಗ ಎಲ್ಲೆಲ್ಲೂ ನಿಶ್ಶಬ್ದ ನೆಲೆಸಿತ್ತು. ದೂರದ ಗುಡ್ಡಗಳಾಚೆಯಿಂದ ತೂರಿ ಬರುತ್ತಿದ್ದ, ಅಸ್ತಕ್ಕೆ ಸಾಗಿದ ಸೂರ್ಯನ, ಹೊಂಬಣ್ಣದ ಬೆಳಕಿನಲ್ಲಿ ಆಕಾಶದೆತ್ತರದ ಗಿಡಗಳ ತುದಿಗಳಷ್ಟೇ ಬೆಳಗಿಕೊಂಡಿದ್ದು ತಾಯಿ-ಮಗನ ನಡುವೆ ನಡೆಯಲಿದ್ದ ಸಂವಾದಕ್ಕೆ ಸಾಕ್ಷಿಯಾದವುಗಳ ಭಂಗಿಯಲ್ಲಿ ಕೈಕಟ್ಟಿ ನಿಂತಿದ್ದುವು. ಚಾಪೆಯ ಮೇಲೆ ಚಕ್ಕಳ ಮಕ್ಕಳ ಹಾಕಿಕೊಂಡು ಕುಳಿತವರಿಬ್ಬರೂ ಮೌನವಾಗಿ ಸುತ್ತಲಿನ ಎಲ್ಲದಕ್ಕೂ ಪರಾಙ್ಮುಖರಾಗ ತೊಡಗಿದರು. ಯಾವ ಗಳಿಗೆಯಲ್ಲೂ ತನ್ನ ಬಾಯಿಂದ ಹೊರಬೀಳಬಹುದಾದ ಮೊದಲ ಶಬ್ದದ ಬಗ್ಗೆ ಅದನ್ನು ಆಡಲಿದ್ದವಳೇ ದಿಗಿಲುಗೊಂಡಂತಿತ್ತು.

ಹಾಗೆ ನೋಡಿದರೆ ಅವನ ಜನ್ಮದ ಕಥೆಯನ್ನು ಅವಳು ಎಲ್ಲಿಂದಲೂ ಆರಂಭಿಸಬಹುದಿತ್ತು. ಆದರೇಕೋ ಅವನ ತಾಯಿಗೆ ಕತೆ ಆರಂಭವಾಗುವ ಮೊದಲ ಶಬ್ದವೇ ಅದರ ಯಥಾರ್ಥತೆಯನ್ನು ನಿಶ್ಚಯಿಸುತ್ತದೆ ಅನ್ನಿಸಿತು. ಯಾಕೆ ಹಾಗೆ ಅನ್ನಿಸಿತೋ. ಕಥೆಯೇನು ಅವಳು ಹುಟ್ಟಿಸಿ ಹೇಳಹೊರಟಿದ್ದೇ? ಕೇಳುವವನು ಹದಿಮೂರು ವರುಷದ ಬಾಲಕನೆಂದು ಆ ಶಬ್ದದ ಬದಲು ಈ ಶಬ್ದ ಬಳಸಿದ ಮಾತ್ರಕ್ಕೆ ಕಥೆ ತನ್ನ ಸತ್ಯವನ್ನು ಕಳೆದುಕೊಳ್ಳುತ್ತದೆಯೆ? ನಿನ್ನಪ್ಪ ಬಹಳ ಒಳ್ಳೆಯವರೇ, ಆದರೆ ನಾವಿಬ್ಬರೂ ಮದುವೆಯಿಂದ ಗಂಡ ಹೆಂಡಿರಲ್ಲ. ಅಂದರೆ ಚಪ್ಪರ ಹಾಕಿರಲಿಲ್ಲ, ಮಂಟಪ ಕಟ್ಟಿರಲಿಲ್ಲ, ಬಾಜಾ ಬಜಂತ್ರಿಯಿರಲಿಲ್ಲ, ಭಟ್ಟರನ್ನು ಕರೆದಿರಲಿಲ್ಲ, ಮಾಲೆ ಹಾಕಿದ್ದನ್ನು ನೋಡಲು, ಮಂತ್ರಾಕ್ಷತೆ ಹಾಕಲು ಜನರನ್ನು ಆಮಂತ್ರಿಸಿರಲಿಲ್ಲ. ಇವರು ಮದುವೆಯಾಗಿ ಹೆಂಡತಿಯನ್ನು ಕಳೆದುಕೊಂಡ ವಿಧುರರು. ನನ್ನವರಾಗುವ ಹೊತ್ತಿಗೆ ಅವರಿಗೆ ಐವತ್ತು ದಾಟಿತ್ತು. ನನಗೆ ಮುವ್ವತ್ತು. ಹೆಂಡತಿ ಹೇಗೆ ಸತ್ತಳು, ಮರು ಮದುವೆ ಏಕೆ ಆಗಲಿಲ್ಲ-ನಾನು ವಿವರ ಕೇಳಲಿಲ್ಲ. ಯಾರೂ ಹೇಳಲಿಲ್ಲ. ಐದು ವರ್ಷಗಳ ದೊಡ್ಡ ಯೋಜನೆ ಹಾಕಿಕೊಂಡು ಅಮೇರಿಕೆಗೆ ಹೊರಟು ನಿಂತ ಗಳಿಗೆಯಲ್ಲಿ ನನಗದೇನಾಯಿತೋ: ನೀವು ಈ ಒಂದು ದಿನದ ರಾತ್ರಿಯ ಮಟ್ಟಿಗೆ ನನಗೆ ಬೇಕು ಎಂದೆ. ಕಾಣಲು ಚೆಂದ ಇದ್ದರು, ಅಗದಿ ನಿನ್ನ ಹಾಗೆ. ವಿಜ್ಞಾನದಲ್ಲಿ ಬಹು ದೊಡ್ಡ ಹೆಸರು ಮಾಡಿದವರು. ಮುಂಬಯಿಯ ಕಾಲೇಜ್ ಒಂದರಲ್ಲಿ ಕಲಿಸುತ್ತಿದ್ದರು. ಅವರ ಈ ಪ್ರಾಜೆಕ್ಟ್ ಕೆಲಸದ ಸಲುವಾಗಿಯೇ ಆರು ತಿಂಗಳ ಟೈಪಿಂಗ್ ಕೆಲಸದ ಸಲುವಾಗಿ ನನ್ನನ್ನು ನೇಮಿಸಿಕೊಂಡಿದ್ದರು. ನಾವಿದ್ದ ಕಟ್ಟಡದಲ್ಲೇ ಅವರ ಮನೆ. ನಮ್ಮದು ಮೊದಲ ಮಜಲೆಯ ಮೇಲಾದರೆ ಅವರದು ಆರನೇ, ಮಜಲೆಯ ಮೇಲೆ. ಮನೆಯಲ್ಲಿ ಅವರೊಬ್ಬರೇ. ಬೆಳಗ್ಗೆ, ಸಂಜೆಗೆ ಅಡಿಗೆ ಮಾಡಲು ಒಬ್ಬ ಅಡಿಗೆಯವನು ಬರುತ್ತಿದ್ದ. ಕಸ ಮುಸುರೆಯ ಕೆಲಸಕ್ಕೆ ಕೆಲಸದ ಹೆಣ್ಣು ಬರುತ್ತಿದ್ದಳು. ನಮ್ಮ ಕಟ್ಟಡದ ಜನ ಅಲ್ಲಿ ಹೆಚ್ಚು ಹೋಗುತ್ತಿದ್ದಿಲ್ಲ. ಆದರೂ ಕಟ್ಟಡದ ಹದಿನೆಂಟೂ ಮನೆಗಳಿಗೆ ಪರಿಚಿತರು. ಬಹಳ ಓದಿಕೊಂಡವರು, ಒಂದೆರಡು ಪುಸ್ತಕಗಳನ್ನೂ ಬರೆದವರು ಎಂದು ಪ್ರಸಿದ್ಧರು. ನಮ್ಮ ಮನೆಯಲ್ಲಿ ನಾವು ಮೂವರೇ- ನಾನು, ಅಮ್ಮ ಹಾಗೂ ಅಪ್ಪ. ಅಪ್ಪ ಒಂದು ದೊಡ್ಡ ಕಂಪನಿಯಲ್ಲಿ ಕೆಲಸಕ್ಕಿದ್ದವರು ಸದ್ಯವೇ ನಿವೃತ್ತರಾಗಿದ್ದರು. ಅಪ್ಪ-ಅಮ್ಮರ ಅಚ್ಚೆಯವಳಾಗಿಯೂ ನನಗೆ ಮದುವೆಯಾಗಿರಲಿಲ್ಲ. ಅಪ್ಪ, ಅಮ್ಮರಿಗೆ ನಾವು ಮೂರು ಮಂದಿ ಹೆಣ್ಣು ಮಕ್ಕಳೇ. ನಾನು ನಡುವಿನವಳು. ಅಕ್ಕ, ತಂಗಿ ಮದುವೆಯಾಗಿ ಒಬ್ಬಳು ಕಲ್ಕತ್ತಾದಲ್ಲೂ ಇನ್ನೊಬ್ಬಳು ಬರೋಡಾದಲ್ಲೂ ನೆಲೆಸಿದ್ದಾರೆ. ಇಬ್ಬರ ಗಂಡಂದಿರೂ ಸರಕಾರಿ ನೌಕರರು. ಮಕ್ಕಳಾಗಿವೆ.

ಅಪ್ಪನ ಜೊತೆ ಇವರಿಗೆ ಸಲುಗೆ ಇತ್ತು. ಆಗೊಮ್ಮೆ ಈಗೊಮ್ಮೆ ನಮ್ಮ ಮನೆಗೆ ಬರುತ್ತಿದ್ದರು. ನನ್ನನ್ನು ನೋಡಿದಾಗ ಮುಗುಳ್ನಗುತ್ತಿದ್ದರು. ನನ್ನ ಮೋರೆಯ ಅಂದವನ್ನು ಈ ಹಾಳು ಕರಿಮಚ್ಚೆಯೊಂದು ಕೆಡಿಸಿರದಿದ್ದರೆ ನಾನೂ ಮದುವೆಯಾಗುತ್ತಿದ್ದೆ. ಸಂಸಾರ ಹೂಡುತ್ತಿದ್ದೆ. ಕಲಿಯಲು ಹುಷಾರಾಗಿದ್ದೆ. ಬಿ.ಎ.ಗೆ ಇಂಗ್ಲಿಷ್ ಸಾಹಿತ್ಯ ತೆಗೆದುಕೊಂಡು ಫಸ್ಟ್‌ಕ್ಲಾಸ್‌ನಲ್ಲಿ ಪಾಸಾಗಿದ್ದೆ. ಕಾಲೇಜಿನಲ್ಲಿ ಲೆಕ್ಚರರ್ ಆಗುವ ಮನಸ್ಸಿತ್ತು. ಏನಾದರೂ ಮಾಡಬೇಕೆಂದು ಟೈಪಿಂಗ್ ಕಲಿತೆ. ಕಲಿಯುವುದಕ್ಕೆ ಕಲಿತೆ ಆದರೆ ಉದ್ದೇಶ ಸಾಧಿಸಲಿಲ್ಲ. ಯಾವ ಆಫೀಸಿನಲ್ಲೂ ಕೆಲಸ ಮಾಡುವುದುಳಿಯಲಿ ಇಂಟರ್ವ್ಯೂ ಕೊಡುವುದಕ್ಕೂ ಧೈರ್ಯವಾಗಲಿಲ್ಲ. ಆರ್ಥಿಕ ದೃಷ್ಟಿಯಿಂದ ಕೆಲಸ ಮಾಡಲೇಬೇಕು ಎನ್ನುವ ಒತ್ತಾಯವಿರಲಿಲ್ಲ. ಆದರೆ ಇದು ಅಪ್ಪ, ಅಮ್ಮ ಬದುಕಿರುವವರೆಗೆ ಮಾತ್ರ. ಆಮೇಲೆ? ಮೋರೆಯ ಮೇಲೆ ಈ ಸುಟ್ಟ ಸಾಡೇಸಾತಿಯೊಂದು ಅರ್ಧಕ್ಕೂ ಹೆಚ್ಚು ವ್ಯಾಪಿಸಿಕೊಂಡಿದ್ದಕ್ಕೆ ಇಷ್ಟು ದೊಡ್ಡ ಶಿಕ್ಷೆಯೆ? ಹಾಗೆ ನೋಡಿದರೆ ಕಲಿಯುವಾಗ ಸಾಲೆ ಕಾಲೇಜುಗಳಲ್ಲಿ ಎಲ್ಲರಿಗೂ ಬೇಕಾದವಳೇ. ಶಿಕ್ಷಕರಿಗೆ ಕೂಡ. ಈ ಕಟ್ಟಡದಲ್ಲೇ ಒಂದಿಬ್ಬರನ್ನು ಬಿಟ್ಟರೆ ಎಲ್ಲರೂ ನನ್ನನ್ನು ಸಹಾನುಭೂತಿಯಿಂದ ನೋಡುವವರೇ. ಸಹಾನುಭೂತಿಯೋ ಅನುಕಂಪವೋ ಯಾರು ಬಲ್ಲರು? ಇನ್ನೊಬ್ಬರ ಭಾವನೆಗಳನ್ನು ಅರಿಯುವ ಅಧಿಕಾರವನ್ನೇ ಕಳಕೊಂಡಂತೆ ಅನ್ನಿಸುತ್ತಿತ್ತು. ಇನ್ನೊಬ್ಬರ ಭಾವನೆಗಳ ಮಾತೇಕೆ ಸ್ವತಃ ನನ್ನ ಭಾವನೆಗಳೂ ನನಗೆ ತಮ್ಮ ಪರಿಚಯ ಹೇಳದಾದುವು. ಆದರೂ ನಾನು ಅಪ್ಪ-ಅಮ್ಮರ ಸಲುವಾಗಿ ಹೊರಗೆ ಹಾಗೆ ತೋರಿಸಿಕೊಳ್ಳುತ್ತಿರಲಿಲ್ಲವೇನೋ. ನನಗೆ ಗೊತ್ತಿಲ್ಲ. ದೇಹದ ಎಲ್ಲ ಸಂವೇದನೆಗಳೂ ಜೀವಂತವಿದ್ದೂ ಎಲ್ಲವನ್ನೂ ಸಹಿಸಬಲ್ಲೆ ಎಂದು ತೋರಿಸಿಕೊಳ್ಳುವುದು ಸಾಧ್ಯವಿತ್ತೇ? ಆರೋಗ್ಯ ಚೆನ್ನಾಗಿತ್ತು. ಮೈಕಟ್ಟು ಕಟ್ಟುಮಸ್ತಾಗಿತ್ತು. ದೇಹದ ಪ್ರತಿಯೊಂದು ರಂಧ್ರದಿಂದ 'ಬೇಕು' ಎಂದು ಚೀರುತ್ತಿದ್ದ ಉಮೇದು, ಉತ್ಸಾಹಗಳಿದ್ದುವು. ಏನು ಪ್ರಯೋಜನ? ಎಲ್ಲದರ ತೃಪ್ತಿ ಸಾಧ್ಯವಿದ್ದೂ ನಿಗ್ರಹಿಸುವುದು ಒಂದು ಮಾತು. ತೃಪ್ತಿಪಡಿಸುವುದೇ ಸಾಧ್ಯವಿಲ್ಲದಾಗ ನಿಗ್ರಹಕ್ಕೆ ಏನು ಬೆಲೆ? ನಮ್ಮ ಮನೆಯಿದ್ದ ಕಟ್ಟಡದಲ್ಲೇ ಇದ್ದ ಇಬ್ಬರು ಮುತ್ಯಾಳರಿಗೆ ನನ್ನ ಮೇಲೆ ಕಣ್ಣು ಬಿದ್ದಾಗ ಅವರು ನನ್ನ ರೂಪವನ್ನು ಬಣ್ಣಿಸಿದ ರೀತಿ ನೋಡಬೇಕಿತ್ತು! ಪರಸ್ಪರ ಮಾತನಾಡಿಕೊಂಡವರ ಹಾಗೆ ಇಬ್ಬರ ಬಾಯಿಂದಲೂ ಅವೇ ಶಬ್ದಗಳು, ಅವೇ ಹಾವಭಾವಗಳು. ಬೇಸತ್ತು ಒಂದು ದಿನ ಅವರಲ್ಲೊಬ್ಬನನ್ನು ಕೈರಟ್ಟೆ ಹಿಡಿದು ನಿಲ್ಲಿಸಿದ ಹಾಗೆ ನಿಲ್ಲಿಸಿ, 'ಮದುವೆ ಆಗ್ತೀಯಾ?' ಎಂದು ಕೇಳಿಬಿಟ್ಟೆ. 'ಆಗ್ತಿದ್ರೆ ಅಪ್ಪ-ಅಮ್ಮರನ್ನು ಬಂದು ನೋಡು. ಅಷ್ಟಕ್ಕೂ ನೀರಿಲ್ಲದವನಾದರೆ ನಿನ್ನ ಅಪ್ಪ-ಅಮ್ಮರನ್ನು ಕಳಿಸು.' ಎಂದೆ. ಅಲ್ಲಿ ನಿಂತನೆ? ಮತ್ತೆ ನನ್ನ ಕಡೆಗೆ ಮೋರೆ ತಿರುವಿ ನೋಡಲಿಲ್ಲ. ಇವನಿಗಾದ ಮಂಗಳಾರತಿ ಇನ್ನೊಬ್ಬನಿಗೆ ಗೊತ್ತಾಗಿರಬೇಕು. ಅವನೂ ನನ್ನ ತಂಟೆಗೆ ಬರುವುದನ್ನು ಬಿಟ್ಟುಕೊಟ್ಟ. ಬಿಟ್ಟುಕೊಟ್ಟರೇನಂತೆ, ಅವರು ಆಡಿದ ಆ ಹಲ್ಕಟ್ ಮಾತುಗಳು-ಮೋರೆಯ ಮೇಲೆ ಕಲೆ ಇದ್ದರೇನಂತೆ? ಹಾಗೆ ಇದ್ದವರು ಇಲ್ಲವೆ? ಬಾಕಿ ಎಲ್ಲ ಸರಿ ಇದ್ದರಾಯಿತು-ಅವು ಏನು ಹಾಗೇ ಗಾಳಿಯಲ್ಲಿ ಹಾರಿಹೋಗುವಂತಹವೆ? ಎಲ್ಲ ಭೌತಿಕ ಸಂಗತಿಗಳ ಹಾಗೆ ಒಮ್ಮೆ ಹುಟ್ಟಿ ಬಂದುವೆಂದರೆ ಕಾಯಂ ಉಳಿಯುವವೇ. ತಮ್ಮ ಕೆಟ್ಟ ಕೆಲಸವನ್ನು ಮಾಡುತ್ತ ಇರುವಂತಹವೇ. ನೆನಪಿಗೆ ಬಂದ ಪ್ರತಿಸಾರೆ ಖಿನ್ನಳಾಗುತ್ತೇನೆ- ಈಗಲೂ ಸಿಟ್ಟಿನಿಂದ ಕುದಿಯುತ್ತೇನೆ ಎನ್ನಬೇಕು. ಏನು ಪ್ರಯೋಜನ? ನೌಕರಿ ಮಾಡುತ್ತಿದ್ದ ಆರು ತಿಂಗಳು ಮಾತ್ರ ನನ್ನ ಬದುಕಿನ ಅತ್ಯಂತ ನೆಮ್ಮದಿಯ ದಿನಗಳಾದುವು. ಕೆಲಸದ ಕೋಣೆಯಲ್ಲಿ

ನಾವಿಬ್ಬರೇ ಇದ್ದಾಗ ಏನೇನೋ ವಿಚಾರಗಳು. ಒಳ್ಳೆಯವು, ಕೆಟ್ಟವು. ಕೆಟ್ಟವು ಎಂದು ಹೇಗೆ ಹೇಳಲಿ? ಕೆಲವು ವಿಚಾರಗಳಿಂದ ಮೈ ಜುಮ್ ಎನ್ನುತ್ತಿದ್ದದ್ದು ನಿಜ. ಮೈಯ ಕಿತಾಪತಿಗೆ ಮನಸ್ಸು ಭಿಡೆ ಹಿಡಿದಾಗ ಇದೆಲ್ಲ ಸರಿಯಲ್ಲ ಅನ್ನಿಸುತ್ತಿದ್ದದ್ದೂ ನಿಜ. ಮೋರೆಯ ಮೇಲಿನ ಈ ದರಿದ್ರದಿಂದಾಗಿ ಅಲ್ಲವೆ ಇಷ್ಟೊಂದು ಆಪತ್ತು? ಇಲ್ಲವಾದರೆ? ಬೇರೆ ಯಾರಿಗೂ ಇಲ್ಲದ ಈ ದ್ವಂದ್ವ ನನಗೇ ಏಕೆ? ಹಲವೊಮ್ಮೆ ನನ್ನ ವಿಚಾರಗಳ ಗುಂಗಿನಲ್ಲೇ ಮಗ್ನಳಾದಾಗ ನನಗಾದರೂ ಇಂಥ ದ್ವಂದ್ವಗಳು ಇದ್ದದ್ದು ನಿಜವೆ? ಎಂದು ಕೇಳಿಕೊಂಡದ್ದುಂಟು. ಹಾಗೆ ಕೇಳಿಕೊಂಡ ಆ ದಿನ ಮಾತ್ರ, ಅದು ನಡೆದು ಹೋಯಿತು. ನಡೆದು ಹೋದದ್ದೇ ತಿಳಿಯಲಿಲ್ಲ. ಅಷ್ಟೊಂದು ಸಹಜವಾಗಿ, ಸರಕ್ಕನೆ, ಶೀಘ್ರವಾಗಿ, ಇಷ್ಟೊಂದಕ್ಕೇ ಇಷ್ಟೆಲ್ಲ ನಖರಾ ಏಕೆ ಬೇಕಿತ್ತೋ, ಎನ್ನಿಸುವ ಹಾಗೆ. ಅದೇ ಗಳಿಗೆಯಲ್ಲಿ, ಅಷ್ಟೇ ಸಹಜ ಮಾಯೆಯಿಂದ ನೀನು ಹುಟ್ಟಿದ್ದೆ. ಹುಟ್ಟಿದ್ದು ನನಗೆ ಗೊತ್ತಾಗಿತ್ತು-ತಕ್ಷಣ ನನ್ನ ವಿಶ್ವದ ತಂತುವೊಂದು ಮೆಲ್ಲನೆ ಝಲ್ ಎಂದು ಸದ್ದು ಮಾಡಿದ್ದು ಕೇಳಿಸಿತ್ತು. ಬಹುಶಃ ವಿಶ್ವದಲ್ಲಿ ಸಂಗೀತ ಹುಟ್ಟಿದ್ದು ಹೀಗೇ ಇರಬೇಕು. ಸತ್ಯವಾದದ್ದು, ಸುಂದರವಾದದ್ದು ಹುಟ್ಟಿದ್ದು ಕೂಡ. ಮಾರನೇ ದಿನ ಬೆಳಗಿಗೇ ಇವರು ಅಮೇರಿಕೆಗೆ ಹೊರಟಿರಬೇಕು. ಅತಿ ನಸುಕಿನಲ್ಲಿ ವಿಮಾನದ ಉಡ್ಡಾಣವಿತ್ತು. ನಾನು ಮತ್ತೆ ಅವರನ್ನು ಭೇಟಿಯಾಗಲು ಹೋಗಲಿಲ್ಲ. ಮುಹೂರ್ತದ ಗಳಿಗೆ ದಾಟಿದ್ದೇ ಮನೆಗೆ ಬಂದುಬಿಟ್ಟಿದ್ದೆ. ಹೊಸ ಹುಟ್ಟಿನ ಒಳಿತಿನಲ್ಲಿ ವಿಶ್ವಾಸವಿದ್ದಂತಿದ್ದ ಜಗತ್ತು ಏನನ್ನೂ ಪ್ರಶ್ನಿಸಲಿಲ್ಲ. ನಿನ್ನ ಬೀಜಾರೋಪಣವಾದದ್ದೇ ನೆಪವೆಂಬಂತೆ ಒಂದು ದಿನ ಅಪ್ಪ-ಅಮ್ಮ ನನ್ನ ಮೇಲೆ ಮುದ್ದಿನ ಮಳೆಗರೆಯುತ್ತ ತಮ್ಮ ತೀರ್ಥಯಾತ್ರೆಯ ಯೋಜನೆಯನ್ನು ಮುಂದಿಟ್ಟರು. ಅಕ್ಕ ತಂಗಿ ಇಬ್ಬರೂ ತಮ್ಮ ಗಂಡಂದಿರೊಂದಿಗೆ ಬಂದಿದ್ದರು. ಎಲ್ಲರಿಗೂ ಗೊತ್ತಿತ್ತು. ನನಗೊಬ್ಬಳಿಗೇ ಗೊತ್ತಿರಲಿಲ್ಲವೆ? ನನಗೆ ಕೆಡುಕೆನ್ನಿಸಲಿಲ್ಲ. ನನಗೆ ಇಂಥದ್ದರಲ್ಲಿ ಆಸ್ಥೆಯೇ ಇರಲಿಲ್ಲ. ನಾನು ಏನೂ ಕೇಳದ್ದಕ್ಕೆ ಅವರಿಗೇ ಕೆಡುಕೆನ್ನಿಸಿತೋ ತಿಳಿಯಲಿಲ್ಲ. ಅಪ್ಪ ನನ್ನ ಬಗ್ಗೆ ಮಾಡಿದ ಹಣದ ವ್ಯವಸ್ಥೆಯ ಅಸ್ಪಷ್ಟ ಕಲ್ಪನೆಯಿತ್ತು. ಮುಂಬಯಿಯಿಂದ ನಾನೂರು ಮೈಲು ದೂರದ ಹಳ್ಳಿಯಲ್ಲಿ ಹಳ್ಳಿಯಾಗಿದ್ದ ಈ ಊರಲ್ಲಿಯ ಈ ಮನೆಯ ಬಗ್ಗೆ ಕೇಳಿ ಗೊತ್ತಿತ್ತು; ನೋಡಿರಲಿಲ್ಲ. ಈ ಕತೆ ನಡೆದ ಹೊತ್ತಿಗೆ ನಮ್ಮ ದಾಯಾದಿಗಳಾದ ಹಳೇ ಮುದುಕ-ಮುದುಕಿ ಈ ಮನೆಯಲ್ಲಿದ್ದು ಅದರ ದೇಖರೇಖಿ ಮಾಡುತ್ತಿದ್ದರು. ಅಪ್ಪ ಯಾತ್ರೆಗೆ ಹೊರಡುವ ಮೊದಲೇ ಏನೋ ಮುಂಗಂಡವರಂತೆ ಈ ದಂಪತಿಗಳ ಬಗ್ಗೆ ಹೇಳುತ್ತ, ''ಕಷ್ಟ ಬಂದರೆ ಅಲ್ಲಿಗೇ ಹೋಗು. ಮುದುಕರಾದರೂ ಕೈಕಾಲುಗಳಿಂದ ಗಟ್ಟಿಯಾದವರೇ. ನಿನ್ನ ಬಗ್ಗೆ ಗೊತ್ತಿದೆ. ನಮ್ಮ ಕುಟುಂಬದ ಬಗ್ಗೆ, ಊರಿನ ಜನರ ಬಗ್ಗೆ ತಿಳಿದವರು. ಮಾರ್ಗದರ್ಶನ ಮಾಡಲು ನನಗಿಂತ ಅವರೇ ಯೋಗ್ಯರು. ಇಬ್ಬರು ಗಂಡು ಮಕ್ಕಳಿದ್ದಾರೆ. ಏನು ಪ್ರಯೋಜನ? ಇಬ್ಬರೂ ಪೋಲಿಗಳ ಸಹವಾಸ ಮಾಡಿ ಕೆಟ್ಟರು. ಈಗ ಎಲ್ಲಿದ್ದಾರೆ ಎನ್ನುವುದು ಕೂಡ ಗೊತ್ತಿಲ್ಲ. ಅಲ್ಲಿಗೇ ಹೋಗುವುದು ನಿನಗೆ ಸಾಧ್ಯವಾದರೆ ಅವರಿಗೂ ನಿನ್ನ ಆಸರೆ ದೊರಕೀತು,'' ಎಂದರು. ಕಷ್ಟಕಾಲ ಬರಲು ತಡವಾಗಲಿಲ್ಲ. ಅಪ್ಪ-ಅಮ್ಮ ಕಾಶಿ ತಲುಪಿದ್ದೇ ಪತ್ರ ಬರೆಯುತ್ತೇನೆ ಎಂದಿದ್ದರು. ಆ ಪತ್ರಬರಲೇ ಇಲ್ಲ. ಅವರು ಪತ್ರ ಬರೆಯುವ ಬಗ್ಗೆ ನನಗೆ ವಿಶ್ವಾಸವೇ ಇರಲಿಲ್ಲ. ಬರೆದರೆ ನನಗಾಗಿ ಬರೆಯಬೇಕಾಗಿತ್ತು. ಯಾವ ಒಂದು ನಿಲುಗಡೆಗೆ ಬರುವ ಭರವಸೆಯೇ ಕಾಣದ ನನ್ನ ಪ್ರಶ್ನೆಯಿಂದ ಸೋತುಹೋದ ಇಬ್ಬರೂ ಪತ್ರ ಬರೆಯುವುದುಳಿಯಲಿ ತಿರುಗಿಬರುತ್ತಾರೆ ಎನ್ನುವ ಬಗೆಗೇ ನನಗೆ ಖಾತ್ರಿಯಾಗದಾಯಿತು. ನನ್ನ ಪರಿಸ್ಥಿತಿಯನ್ನು ನನ್ನ ಅಪ್ಪ-ಅಮ್ಮರೇ ನನಗಿಂತ

…ಚ್ಚು ಮನಸ್ಸಿಗೆ ಹಚ್ಚಿಕೊಂಡು ಕೊರಗಿದಂತಿತ್ತು. ಆತ್ಮಹತ್ಯೆಯ ವಿಚಾರ ನನ್ನ ಮನಸ್ಸಿನಲ್ಲಿ ಹಲವು ಸಾರೆ ಸುಳಿದದ್ದಿದೆ. ಆದರೆ ಎಂದೂ ಅದರಲ್ಲಿ ಕಾರ್ಯಕ್ಕಿಳಿಯುವ ದಮ್ಮು ಇರಲಿಲ್ಲ. ಬದುಕ…ಿಂದೇ ಹುಟ್ಟಿ ಬಂದ ದೇಹಕ್ಕೆ, ಏನು ತಾರುಣ್ಯ ತುಂಬಿದ ಹಂಗಾಮಿನಲ್ಲಿ, ಸಾಯುವ ಕಲ್ಪನೆ ಹೇಗೆ ಸಹಿಸೀತು? ಸಹಿಸಲಿಲ್ಲ. ಆದರೆ ಸಾವು ಎಷ್ಟೆಲ್ಲ ರೂಪಗಳಲ್ಲಿ ಅವತರಿಸೀತು, ಯಾರು ಬಲ್ಲರು? ನಾನು ಸಾವಿಗೆ ಎಂದೂ ಹೆದರಿರಲಿಲ್ಲ. ಆದರೆ ಆ ದಿನ ಅದು ಪ್ರಕಟಿಸಿದ ರೂಪಕ್ಕೆ ಚಿಟ್ಟನೆ ಚೀರಿದೆ.



ಇದು ಸಾವು ಎನ್ನುವುದು ಕೂಡ ತಟ್ಟನೆ ಹೊಳೆಯ ಲಿಲ್ಲ. ಹೊಳೆದಾಗ ಇಂತಹ ರೂಪದಲ್ಲಿ ಬರ ಬೇಕಿತ್ತೇ ದೇವರೆ? ಎಂದುಕೊಂಡೆ. ಬಂದದ್ದು ಭಾವನ ರೂಪದಲ್ಲಿ- ನನ್ನ ಹಿರಿಯಕ್ಕನ ಗಂಡನ ವೇಷದಲ್ಲಿ. ಅಪ್ಪ-ಅಮ್ಮ ಯಾತ್ರೆಗೆ ಹೊರಟು ಹೋದ ಹನ್ನೊಂದನೇ ದಿನ. ಮನೆಯಲ್ಲಿ ನಾನೊಬ್ಬಳೇ. ಉಳಿದವರೆಲ್ಲ ಯಾವುದೋ ಸಿನೇಮಾಕ್ಕೆ ಹೋಗಿದ್ದರು 2-30ರ ಆಟಕ್ಕೆ. ಇವರೂ ಹೋಗಿದ್ದಾರೆಂದು ಬಗೆದಿದ್ದೆ. ನಾನು ಗೆಳತಿಯೊಬ್ಬಳ ಮನೆಯಿಂದ ವಾಪಸ್ಸಾಗಿ ಮನೆ ಹೊಕ್ಕು ಒಂದು ಕಪ್ಪ ಚಹ ಮಾಡಿ ಕುಡಿಯುವ ವಿಚಾರ ಮಾಡುತ್ತ ದಿವಾಣಖಾನೆಯ ಸೋಫಾ ದಲ್ಲಿ ಒರಗಿದ ಅರ್ಧ ನಿಮಿಷದಲ್ಲಿ ಕದ ಬಡೆದ ಸದ್ದಾಯಿತು. ಯಾಕೋ ತೀರಾ ಅನಿರೀಕ್ಷಿತವಾಗಿ ಹುಟ್ಟಿದ ಈ ಸದ್ದು ಪರಿಚಯದ ಜಗತ್ತಿನದಲ್ಲ ಅನ್ನಿಸಿಹೋಯಿತು. ಆ ಜಗತ್ತಿಗೆ ಹೆಸರು ಕೊಡ ಬೇಕು ಎಂದುಕೊಳ್ಳುವಷ್ಟರಲ್ಲಿ ಕದದ ಮೇಲೆ ಇನ್ನೊಮ್ಮೆ ಬಡೆದ ಸದ್ದು. ಕದದ ಕಳ್ಳಗಿಂಡಿ ಯೊಳಗಿಂದ ನೋಡಿದಾಗ ಪ್ರಕಟಗೊಂಡಿತ್ತು:



''ಅಯ್ಯೋ, ಇದು ಸಾವು! ಇದೆಂಥ ಆಕರಾ
ವಿಕರಾಳ ವೇಷ ಹಾಕಿದ್ದೀಯಾ? ಹೋಗ
ಹೋಗು. ಮುಂದೆ ಹೋಗು'' ಎಂದು ಬಂದ
ಸಮನೆ ಚೀರಿದೆ. 'ನಾನು ಸಾವಲ್ಲ. ಕದ ತೆಗ
ನಾನು ನಿನ್ನ ಭಾವ. ನಿನಗಾಗಿಯೇ ಸಿನೇಮಾ
ಹೋಗದೆ ಬಂದಿದ್ದೇನೆ' ಎಂದ. ಇದು ಖಂಡಿ
ಭಾವನ ದನಿಯಲ್ಲ-ಎಂದಿನ ಭಾವ
ದನಿಯಲ್ಲ, ಭಾವನ ದನಿ ಎಂದು
ಹೀಗಾಗುವುದು ಶಕ್ಯವಿಲ್ಲ. ಬೇಗ ಹೊರಟ
ಹೋಗು. ಇಲ್ಲವಾದರೆ ದೊಡ್ಡಕ್ಕೆ ಬೊಬ
ಹಾಕುತ್ತೇನೆ. ಎಲೈ ದರಿದ್ರ ಮಾರಿಯೇ ಭಾವನ
ರೂಪ ಹಾಕಿಕೊಂಡು ಬಂದು ಮೋ
ಮಾಡುತ್ತೀಯಾ? ತಡೆ. ಬದಿಯ ಮನೆಯವರಿ
ಫೋನ್ ಮಾಡಿ ಕರೆಯುತ್ತೇನೆ. ಇದೆಂತಹ
ಹುಚ್ಚು ವಿಚಾರವಾಗಿತ್ತೋ. ಬದಿಯ
ಮನೆಯವರಲ್ಲಿ ಫೋನೇ ಇರಲಿಲ್ಲ! ಅವನು
ಹೊರಟು ಹೋದ ಸದ್ದು ಕೇಳಿಸಿತು. ನಿಜಕ್ಕೂ
ಕೇಳಿಸಿತೆ? ಬರೀ ನನ್ನ ಭ್ರಮೆಯೆ? ಏನೇ ಆಗಲಿ
ಜಪ್ಪಯ್ಯ ಅಂದರೂ ಕದ ತೆರೆಯಲಾರೆ. ಕದಕ್ಕಿದ್ದ
ಇನ್ನೆರಡು ಅಗಳಿಗಳನ್ನೂ ಹಾಕಿದೆ. ಸಿನೇಮಾಕ್ಕೆ
ಹೋದವರು ಯಾವಾಗೊಮ್ಮೆ ಬಂದಾರೋ
ಎಂದು ಆಗಿ ಹೋದವಳಂತೆ ಕಾದೆ. ಬಂದ
ಮೇಲೆ ಅಕ್ಕ, ತಂಗಿ ಇಬ್ಬರನ್ನೂ ಗುಟ್ಟಿನಲ್ಲಿ ಸಂಧಿಸಿ
ಇನ್ನೆಷ್ಟು ದಿನ? ಎಂದು ಕೇಳಿದೆ. ಆ ಪ್ರಶ್ನೆಯನ್ನು
ನಾನು ಕೇಳುವ ಮೊದಲೇ ಅರಿತವರ ಹಾಗೆ
ಇಬ್ಬರೂ ಒಂದೇ ಕಾಲಕ್ಕೆ 'ನಾಳೆ' ಎಂದರು.
ಇಲ್ಲಿಗೆ ಬರುವಾಗಲೇ ಹಿಂತಿರುಗಿ ಹೋಗುವ
ಟಿಕೆಟ್ ಬುಕ್ ಮಾಡಿಯೇ ಬಂದದ್ದಂತೆ. ಮಕ್ಕ
ಳನ್ನು ಅಜ್ಜ-ಅಜ್ಜಿಯರ ತಾಬೆಗೆ ಕೊಟ್ಟು ಬಂದಿ
ದ್ದೇವೆ ಅಂದರು. ಇವರು ಇಷ್ಟೊಂದು ಭಂಡ
ರಾಗುತ್ತಾರೆಂದು ಎಣಿಸಿರಲಿಲ್ಲವಂತೆ. ಮರು
ದಿನವೇ ಅವರೆಲ್ಲ ಹೊರಟುಹೋದರು. ಅಪ್ಪ-
ಅಮ್ಮರ ಮನೆ ತೊಳೆಯುವ ಕಠೋರ ನಿರ್ಧಾ
ರಕ್ಕೆ ಏನು ಕಾರಣವಾಯಿತು, ತಿಳಿಯಲಿಲ್ಲ.

ಆದರೆ ಅಲ್ಲೆಲ್ಲೋ ನಾನಿದ್ದೆ-ಅದು ನಿಃಸಂಶಯ. ಜಗತ್ತಿನಲ್ಲಿ ಇಂದು ನಡೆಯುತ್ತಿದ್ದ ಎಷ್ಟೆಲ್ಲ ಆಟಾಟೋಪಗಳ ಹಿಂದಿನ ಕಾರಣ ಶಕ್ತಿಯೆ ನಾನೇನೋ ಅನ್ನಿಸಿತು. ನೀನು ನನ್ನಲ್ಲಿ ಇಳಿದು ಬರುತ್ತಿದ್ದ ಅಮೃತ ಗಳಿಗೆಯಲ್ಲೇ ಅಪ್ಪ-ಅಮ್ಮ ಇಂಥ ಕಠೋರ ನಿರ್ಧಾರಕ್ಕೆ ಬಂದಿರ ಬೇಕು. ಮುಂದಾಗುವುದನ್ನು ಎದುರಿಸುವ ಧೈರ್ಯ ಅವರಲ್ಲಿರಲಾರದು. ಆದರೆ ಅದು ನನ್ನಲ್ಲಿದೆಯೆಂದು ಯಾಕೆ ತಿಳಿದರೋ! ಮುಂದಿನ ಎರಡು ವಾರಗಳವರೆಗೂ ಅವರಿಂದ ಸುದ್ದಿ ಇಲ್ಲವಾದ ಮೇಲೆ ನನ್ನ ಮೊದಲಿನ ಸಂಶಯವೇ ನಿಜವಾಗುವ ಭಯವಾಯಿತು. ಸರಕ್ಕನೆ, ಯಾತ್ರೆಗೆ ಹೊರಡುವ ಒಂದು ದಿನ ಮೊದಲು ಯಾವ ಸಂದರ್ಭವೂ ಇಲ್ಲದೆ ಅಪ್ಪ ಹೇಳಿದ ಮಾತು ನೆನಪಿಗೆ ಬರಹತ್ತಿತು: 'ನಿನ್ನ ಮೇಜಿನ ಖಣದಲ್ಲಿ ನಿನ್ನ ಬ್ಯಾಂಕ್ ಖಾತೆಗೆ ಸಂಬಂಧಪಟ್ಟ ಕೆಲವು ಕಾಗದ ಪತ್ರಗಳನ್ನಿರಿಸಿದ್ದೇನೆ. ನಿನ್ನ ಬ್ಯಾಂಕ್ ಮ್ಯಾನೇಜರ್‌ನನ್ನು ಕಂಡು ನಿನ್ನ ಖಾತೆಗೆ ಹಣ ತುಂಬಿದ್ದೇನೆ. ಹೊಸ ಚೆಕ್‌ಬುಕ್ ಇರಿಸಿದ್ದೇನೆ. ಸವಡು ಆದಾಗ ಒಂದು ದಿನ ನೀನೇ ತೆರೆದು ನೋಡು.' ಆಗ ಅರ್ಥವಾಗಿರಲಿಲ್ಲ. ಈಗ ಮೂಡಿದ ಗುಮಾನಿಯ ಆಘಾತಕ್ಕೆ ಎದ್ದು ಹೋಗಿ ನೋಡಿದರೆ ಪಾಸ್‌ಬುಕ್, ಚೆಕ್‌ಬುಕ್ ಎರಡೂ ಇದ್ದುವು. ಅವುಗಳ ಜೊತೆಗೆ, ಎಲ್ಲಕ್ಕೂ ಕೆಳಗೆ, ಬಾಯಿ ಮುಚ್ಚಿದ ಲಕ್ಕೋಟೆ, ಲಕ್ಕೋಟೆಯ ಮೇಲೆ ಅಕ್ಷರಗಳಿರಲಿಲ್ಲ. ಅದರ ಒಳಗೆ ಏನಿತ್ತು ಎಂಬುದರ ಕಲ್ಪನೆ ಇತ್ತು. ಲಕ್ಕೋಟೆಯ ಸ್ವಚ್ಛ ಬಿಳಿಯ ಪೃಷ್ಠ ನೋಡುತ್ತ ಅತ್ತುಬಿಟ್ಟೆ. ತೆರೆಯುವ ಧೈರ್ಯವಿದ್ದೂ ಅದನ್ನು ಮುಟ್ಟಲಿಲ್ಲ ಕೂಡ. ತೆರೆಯುವ ಕುತೂಹಲ ಕೂಡಲೇ ಆಗಲಿಲ್ಲ. ಅದರೊಳಗಿನ ಚೀಟಿಯಲ್ಲಿ ಅಪ್ಪ ತನ್ನ ಮುತ್ತಿನಂತಹ ಸಣ್ಣ ಅಕ್ಷರಗಳಲ್ಲಿ ಬರೆದದ್ದನ್ನು ಲಕೋಟೆ ತೆರೆಯದೆಯೂ ಓದಬಲ್ಲವಳಾಗಿದ್ದೆ. 'ಬ್ಯಾಂಕಿನಲ್ಲಿ ನಿನ್ನ ಹೆಸರಿನಲ್ಲಿ ಹಣ ಇರಿಸಿದ್ದೇನೆ, ನಾವು ಹಿಂತಿರುಗಿ ಬರುವ ತನಕ ಇದು ನಿನಗೆ ಸಾಲಬಹುದು. ನಿನ್ನ ಕಾಳಜಿ ತೆಗೆದುಕೋ.' ಇತ್ಯಾದಿ ಇತ್ಯಾದಿ. ಅಂದು ಮಧ್ಯಾಹ್ನದ ಊಟ ಮುಗಿಸಿ ಹಾಸಿಗೆಯಲ್ಲಿ ಅಡ್ಡವಾದಲ್ಲೇ ಲಕೋಟೆಯಲ್ಲಿ ಇದ್ದದ್ದು ಪತ್ರವಲ್ಲ, ಬೇರೆಯ ಇನ್ನೇನೋ ಎಂದು ನಿಷ್ಕಾರಣವಾಗಿ ಹೊಳೆದದ್ದೇ ಭಡಕ್ಕನೆ ಎದ್ದು ಮೇಜಿನ ಖಣದಿಂದ ಮೊದಲು ಪಾಸ್‌ಬುಕ್ ಎಳೆದು ತೆರೆದು ನೋಡಿದೆ. ಕಣ್ಣು ನಂಬದಾದೆ. ಇಷ್ಟೊಂದು ಹಣ! ದೇವರೇ ಇದು ಯಾವ ಲೆಕ್ಕಕ್ಕಾಗಿ? ಯಾರಿಗಾಗಿ? ಯಾತಕ್ಕಾಗಿ? ಲಗುಬಗೆಯಿಂದ ಲಕೋಟೆ ತೆರೆದೆ. ಚೀಟಿ ಹೊರತೆಗೆದು ಓದಿದೆ. ಓದಿದ್ದು ಅರ್ಥವಾಗುತ್ತಿರಲಿಲ್ಲ. ಹತ್ತು ಹತ್ತು ಸಾರೆ ಓದಿದರೂ ಶಬ್ದಾರ್ಥ ಹೊಳೆಯುತ್ತಿತ್ತೇ ಹೊರತು ಮಜಕೂರು ತಿಳಿಯುತ್ತಿರಲಿಲ್ಲ. ಹೀಗೇಕೆ ಮಾಡಿದಿರಿ ಎಂದು ಕೇಳುವ ಮನಸ್ಸಾಗಿಯೂ ಕೇಳದಾದೆ. ಯಾರು ಜತೆಗಿದ್ದರೆ ಅದನ್ನೆಲ್ಲ ಧೈರ್ಯದಿಂದ ಎದುರಿಸುತ್ತಿದ್ದೆನೋ ಅವರೇ ಮನೆಯಿಂದ ಏಕಾಏಕೀ ಹೊರಟು ಹೋದ ಮೇಲೆ ಅದೆಲ್ಲವೂ ನಿರರ್ಥಕವೆಂದು ತೋರುತ್ತಿದ್ದಂತೆಯೆ ಮನಸ್ಸು ಮತ್ತೆ ಗಟ್ಟಿಯಾಗಹತ್ತಿತು. ಹನ್ನೊಂದನೆಯ ಸಾರೆ ಒಂದೊಂದೇ ಅಕ್ಷರದ ಮೇಲೆ ಬೆರಳಿಟ್ಟು ಎನ್ನುವಂತೆ ಸಾವಕಾಶ ಓದಿದೆ: 'ಮಗೂ, ನೀನು ಉಳಿದ ಅಕ್ಕತಂಗಿಯರ ಹಾಗೇ ಮದುವೆಯಾಗಿ ಬದುಕಿನಲ್ಲಿ ನೆಲೆನಿಂತ ಮೇಲೇ ಹೀಗೆ ಹೋಗುವ ಮನಸ್ಸಿತ್ತು. ಹೋಗುತ್ತಿದ್ದೆವೋ ಇಲ್ಲವೋ ಈಗ ಹೇಳುವುದು ಕಷ್ಟ. ಈಗ ಹೊರಟುನಿಂತದ್ದಂತೂ ಖರೆ. ತಿರುಗಿ ಬರುತ್ತೇವೆ ಎನ್ನುವ ಖಾತರಿ ಇಲ್ಲ. ಬಹುಶಃ ಬರುವುದಿಲ್ಲ. ಮನಸ್ಸಿನ ಹೊಯ್ದಾಟದ ಭಾಷೆ ಇದು, ಅಲ್ಲವೆ? ಹೋಗಬೇಕು ಎನ್ನುವುದಕ್ಕೆ ಬಲವಾದ ಕಾರಣವಿಲ್ಲ. ನಿನ್ನೆ ರಾತ್ರಿ ನಡೆದದ್ದು ಅದು ನಡೆಯುತ್ತಿದ್ದ ಗಳಿಗೆಯಲ್ಲೇ ನಮ್ಮಿಬ್ಬರಿಗೂ ಗೊತ್ತಾಗಿತ್ತು. ತಪ್ಪೆಂದು ತಿಳಿಯಲಿಲ್ಲ. ಗಂಡು ಮಗುವೇ ಹುಟ್ಟುತ್ತದೆ. ನಿನ್ನ ಮನಸ್ಸಿಗೆ ಒಪ್ಪುವ




ಹೆಸರಿನ ಜೊತೆಗೆ ಭರತ ಎನ್ನುವ ಹೆಸರನ್ನೂ ಇಡು. ಅಜ್ಜ-ಅಜ್ಜಿಯರ ನೆನಪಿಗೆ ಆಯಿತು. ನಿಮಗೆ ಕಲ್ಯಾಣವಾಗಲಿ! ಬೇಕು ಎನ್ನಿಸಿದರೆ ಹಳ್ಳಿಯ ಮನೆಗೇ ಹೋಗಿರಿ. ನಿನ್ನ ಮಗ ಕಾಲೇಜಿಗೆ ಹೋಗುವ ವಯಸ್ಸಿಗೆ ಬಂದ ಮೇಲೆ ಬೇಕಾದರೆ ಇಲ್ಲಿಗೆ ಬಂದರಾಯಿತು. ಈ ಮನೆಯನ್ನು ನಿನ್ನ ಹೆಸರಿಗೆ ಮಾಡಿದ್ದೇನೆ. ನಿನ್ನ ಅಕ್ಕ ತಂಗಿಯರಿಗೆ ಗೊತ್ತಿದೆ. ನಿನ್ನ ಭಾವಂದಿರು ತಂಟೆಗೆ ಬರಲಾರರು. ಅಂಥ ವ್ಯವಸ್ಥೆಯನ್ನು ವಕೀಲರೇ ಮಾಡಿದ್ದಾರೆ!'

ಮರುದಿನವೇ ನಾನು ಹಳ್ಳಿಗೆ ಹೋಗಲೆಂದು ಗಂಟುಮೂಟೆ ಕಟ್ಟಿದೆ. ಅಗಲೇ ನನಗೆ ಎರಡು ತಿಂಗಳು. ಮತ್ತೆ ಹೊಯ್ದಾಟ ಬೇಡ. ಹಳ್ಳಿಯ ಮನೆಯ ಪ್ರತ್ಯೊಬ್ಬರಿಗೂ ನನ್ನ ಬಗ್ಗೆ ಗೊತ್ತಿದೆ. ನನ್ನನ್ನು ನೋಡಿಲ್ಲ, ಅಷ್ಟೇ. ಪರಿಚಯ ಮಾಡಿಕೊಂಡರಾಯಿತು ಎಂದುಕೊಳ್ಳುವಷ್ಟರಲ್ಲಿ ಅಪ್ಪನ ಪತ್ರ, ಬೇರೆಯ ಅರ್ಥ ಪಡೆದು ಮೋರೆಯ ಮುಂದೆ ನಿಂತಂತಾಯಿತು. ನನಗೆ ನೀನು ಹುಟ್ಟಿ[illegible] ಕ್ಷಣ ಭಾವಗೋಚರ ವಾದಂತೆಯೆ ಅಪ್ಪ-ಅಮ್[illegible] ರಿಗೂ ಆಗಿತ್ತು! ಹೇಗೆ ಎಂದು ಈಗ ಕೇಳಿಕೊಂಡೆ[illegible] ಉತ್ತರ ಹೊಳೆಯಲಿಲ್ಲ. ಮೈತುಂಬ ನವಿರೆದ್ದಿತು[illegible] ನನ್ನ ಮೋರೆಯನ್ನು ಅಂದಗೆಡಿಸಿದ ಮಚ್ಚೆಗೆ ಏನು ಅರ್ಥ? ನನ್ನ ಯಾತನೆಗೆ ಏನು ಅರ್ಥ? ಅಪ್ಪ-ಅಮ್ಮರ ಆಶೀರ್ವಾದ ಇದೆಯಲ್ಲ- ಸಾಕು! ಸಮಾಧಾನ ತಂದುಕೊಳ್ಳಲು ಪ್ರಯತ್ನಿಸಿದಷ್ಟೂ ಸಮಾಧಾನ[illegible] ವಾಗದಾಯಿತು. ಮೋರೆಯ ಮೇಲಿನ ಕಲೆ, ನಿನ್ನ ಹುಟ್ಟು, ಅಪ್ಪನ ವಿಚಿತ್ರ ಊಹೆ ಒಂದಕ್ಕೊಂದು ಗಂಟು ಹಾಕಿಕೊಂಡವುಗಳೆ? ತಿಳಿಯದೆ ಕಂಗೆಟ್ಟೆ[illegible] ಹಾಗೆ ನೋಡಿದರೆ ಈ ಜಗತ್ತಿನೊಳಗಿನ ಎಷ್ಟೆಲ್ಲ ಸಂಗತಿಗಳು ನಮಗೆ ಅರ್ಥವಾಗಿವೆಯೆಂದಾಗ[illegible] ಬೇಡವೆ? ಅರ್ಥವಾಗಿವೆಯೆಂದು ನಂಬಲು[illegible] ನಿಗೂಢಗಳನ್ನು ಅಲ್ಲಗಳೆಯುತ್ತೇವೆಯೆ? ಆದರೆ ಈ ನಿಗೂಢ ಅಂಥದ್ದಲ್ಲ. ನನ್ನ ಭಾವನೆಗೆ ಸ್ವಲ್ಪವಾದರೂ ಆಧಾರವಿತ್ತು. ಅಪ್ಪನ ಊಹೆಗೆ?

ನಾನು ಹಳ್ಳಿಯಲ್ಲಿ ಕಾಲಿರಿಸುವ ಹೊತ್ತಿಗೆ ಮುಸ್ಸಂಜೆಯ ಮಬ್ಬುಗತ್ತಲೆ ಹರಡಿತ್ತು. ಅವರಿವರನ್ನು ಕೇಳುತ್ತ ಸಾಂತಯ್ಯ ಬಾಪ್ಪಾನ ಮನೆಯನ್ನು ತಲುಪಿದೆ. ಮುದುಕ-ಮುದುಕಿ ಇಬ್ಬರೂ ಮನೆಯಲ್ಲಿದ್ದರು. ಜೀವಕ್ಕೆ ಹಾಯೆನ್ನಿಸಿತು. ಬದುಕಿನ ಒಂದು ಐನು ಜಾಗದಲ್ಲಿ ದಾರಿತಪ್ಪಿಸಿ, ಕಂಗೆಡಿಸಿ, ನನ್ನ ದೈವ ಉಳಿದ ಕಡೆಗಳಲ್ಲಿ ನನ್ನನ್ನು ಕೈಹಿಡಿದು ಕಾಪಾಡುತ್ತಿದ್ದಂತಿತ್ತು. ಎಲ್ಲವೂ ಸುರಳೀತ ಸಾಗುತ್ತದೆಯೆಂದು ಮುಂಬಯಿಯಿಂದ ಹೊರಡುವಾಗಲೇ ಅನ್ನಿಸಿತ್ತು. ಮುದಿ ಜೀವಗಳು ತುಂಬಾ ಅಕ್ಕರೆಯಿಂದ ಬರಮಾಡಿಕೊಂಡವು. ಮುಜುಗರ ಹುಟ್ಟಿಸುವಂಥ ಯಾವ ಒಂದು ಪ್ರಶ್ನೆಯನ್ನೂ ಕೇಳಲಿಲ್ಲ. ಅಪ್ಪ-ಅಮ್ಮರ ತೀರ್ಥಯಾತ್ರೆಯ ಬಗ್ಗೆ ತಿಳಿಸಿದಾಗ, ವಿಚಿತ್ರ ರೀತಿಯಲ್ಲಿ ಮುಗುಳ್ನಗುತ್ತ, "ಯಾತ್ರೆಯೆಂದು ಹೇಳಿದರೆ? ನಮ್ಮ ಮನೆತನದಲ್ಲಿ ಇಂಥದ್ದು ನಡೆದದ್ದು ಇದುವೇ ಮೊದಲ ಸಾರೆ ಅಲ್ಲವಲ್ಲ. ಹೆದರಬೇಡ, ಅವರು ತಿರುಗಿ ಬರುವುದಿಲ್ಲ. ನಾವಿದ್ದೇವಲ್ಲ. ಕಾಣಲು ಹೀಗಿದ್ದರೂ ಒಳಗೆ ಗಟ್ಟಿಮುಟ್ಟಿಯಾಗಿದ್ದೇವೆ. ಇದು ನಿಮ್ಮದೇ ಮನೆ, ನಾವು ನೋಡಿಕೊಂಡಿದ್ದೇವೆ, ಬೇಕಾದರೆ ನೀನು ಇಲ್ಲೇ ಇರಬಹುದು ಬೇಕಾದಷ್ಟು ದಿನ. ನನಗೆಲ್ಲ ಗೊತ್ತಿದೆ ಮಗೂ ನಿನ್ನ ಬಗ್ಗೆ. ನಿನ್ನ ಮೋರೆಯ ರೂಪ ಕೆಡಿಸಿದ ಮಚ್ಚೆಗೆ ಯಾರನ್ನು ಜವಾಬ್ದಾರ ಹಿಡಿಯುತ್ತೀಯಾ? ದೇವರನ್ನು? ಹೋದ ಜನ್ಮದ ಕರ್ಮವನ್ನು? ಎರಡು ತಿಂಗಳ ಹಿಂದೆ ನಡೆದದ್ದಕ್ಕೆ ಮಾತ್ರ ನೀನು ಜವಾಬ್ದಾರಳೆ? ಖುಶಿಯಾಗಿದ್ದೀಯಲ್ಲ? ಉಳಿದದ್ದನ್ನೆಲ್ಲ ಮರೆತು ಬಿಡು. ಅವತರಿಸಿ ಬರಲಿದ್ದವನ ಹಾದಿ ಕಾಯಿ. ಅವನೇ ಉತ್ತರಕೊಡುತ್ತಾನೆ, ನಿನ್ನ ಎಲ್ಲ ಪ್ರಶ್ನೆಗಳಿಗೆ. ಈ ಮನೆ, ಹಿತ್ತಲು, ಅದಕ್ಕೆ ತಾಗಿದ ಆ ಗದ್ದೆ ಎಲ್ಲವನ್ನೂ ನಮ್ಮ ಹೆಸರಿನಲ್ಲಿ ಮಾಡಲು ಹೊರಟಿದ್ದ ನಿನ್ನಪ್ಪ. ಅವನೊಬ್ಬ ಮಳ್ಳ ಹನುಮ. ಈ ವಯಸ್ಸಿನಲ್ಲಿ ನಮ್ಮ ಹೆಸರಿಗೆ ಮಾಡಿದರೇನು ಅವನ ಹೆಸರಿಗೇ ಉಳಿದರೇನು? ನಾಳೆ ನನ್ನ ಮಕ್ಕಳಲ್ಲಿ ಕುರುಕ್ಷೇತ್ರವಾಗುವುದು ಬೇಡ. ಬಾಕಿ ಯಾವುದಕ್ಕೆ ಕಡಿಮೆಯಾದರೂ ಇಂಥದ್ದರಲ್ಲಿ ಹಿಂದೆ ಬೀಳಲಾರರು. ಇಲ್ಲಿಂದ ಓಡಿ ಹೋಗಿ ಎಷ್ಟು ವರ್ಷಗಳಾದುವೋ, ಒಮ್ಮೆ ಓಡಿ ಹೋದವರು ತಿರುಗಿ ಇತ್ತ ಕಡೆಗೆ ಮೋರೆ ತೋರಿಸಿಲ್ಲ. ಇಷ್ಟಕ್ಕೂ ಆಗಲಿದ್ದುದನ್ನು ಮುಂಗಂಡವರು ಯಾರು? ತಪ್ಪಿಸಿದವರು ಯಾರು? ಇಲ್ಲಿಂದ, ಓ ಅಲ್ಲಿ, ಕಾಣಿಸುತ್ತದಲ್ಲ ಗುಡಿಸಲಿನಂಥದು? ಅದು ಒಂದು ಕಾಲಕ್ಕೆ ನಮ್ಮ ಮನೆಯಾಗಿತ್ತು. ಸದ್ಯವೇ ಅಲ್ಲೊಂದು ಹಾವಿನ ಹುತ್ತ ಎದ್ದು ಬಂದಿದೆ. ಅಲ್ಲೀಗ ಯಾರೂ ಕಾಲಿಡುವುದಿಲ್ಲ. ನಾವೂ ಇಟ್ಟಿಲ್ಲ. ಬೇಕಾದರೆ ಒಂದು ದಿನ ಹೋಗಿ ಹಾಲಿಟ್ಟು ದೂರದಿಂದಲೇ ಕೈ ಮುಗಿದು ಬರೋಣ. ಮನೆಯ ರಕ್ಷಣೆಗಿದ್ದ ನಾಗ ಮನೆಯ ಜನರಿಗೆ ಹಾನಿ ಮಾಡುವುದಿಲ್ಲವಂತೆ. ನನಗೆ ಮುದುಕನ ಮಾತಿನ ಮೇಲೆ ಲಕ್ಷ್ಯವೇ ಇರಲಿಲ್ಲ. ಲಕ್ಷ್ಯವೆಲ್ಲ ಅವನ ಹಾವಭಾವದ ಮೇಲೆ. ಎಷ್ಟು ಚೆಂದ ಕಾಣುತ್ತಿದ್ದರಂತೀ! ಮುದುಕಿ, ನಮ್ಮೆಲ್ಲರ ಸಲುವಾಗಿ ಕಷಾಯ ಮಾಡಿ ತಂದಳು. ಯಾವಾಗ ನಮ್ಮನ್ನು ಕೇಳಿದ್ದಳು, ಯಾವಾಗ ಎದ್ದು ಹೋಗಿದ್ದಳು, ಗೊತ್ತಾಗಲೇ ಇಲ್ಲ. ಸ್ನಾನವಾಗ ಬೇಕೇನೋ. ಹಂಡೆಗೆ ಬೆಂಕಿಹಾಕಿ ಬಂದಿದ್ದೇನೆ ಎಂದ ಮುದುಕಿ ನನ್ನ ಮನಸ್ಸನ್ನು ಓದಿಕೊಂಡವಳ ಹಾಗೆ, "ಹೆದರಬೇಡ, ಅದು ಇಲ್ಲಿ ಬರಲಾರದು. ಸದ್ಯವೇ ಈ ಹಳ್ಳಿಗೂ ಕರೆಂಟು ಬಂದಿದೆ. ಬಚ್ಚಲ ಮನೆಗೂ ದೀಪ ಹಾಕಿಸಿದ್ದೇವೆ. ನೀನು ಸ್ನಾನ ಮಾಡು, ನಾನು ಬಾಗಿಲ ಹೊರಗೇ ನಿಂತಿರುತ್ತೇನೆ" ಎಂದಳು. ನನ್ನ ಭಯ ಕಡಿಮೆಯಾಗುವ ಬದಲು ಹೆಚ್ಚೇ ಆಯಿತು. ತೋರಿಸಿಕೊಳ್ಳಲಿಲ್ಲ. ಪಟ್ಟಣದ ಹುಡುಗಿ ತಾನೇ! ಸ್ನಾನ ಮಾಡಿ ಮಡಿ ನೈಟಿ ತೊಟ್ಟುಕೊಂಡು ಹೊರಗೆ ಬಂದಾಗ ನಾನು ತೀರ ಬೇರೆಯವಳೇ ಆಗಿದ್ದೆ. ತುಂಬಾ ತುಂಬಾ ಉಲ್ಲಸಿತಳಾಗಿದ್ದೆ.

ಮುದುಕ-ಮುದುಕಿಯರನ್ನು ಇದೀಗ ಮೊದಲ ಬಾರಿಗೇ ಭೇಟಿ ಯಾಗುತ್ತಿದ್ದವಳ ಹಾಗೆ ನನಗಾದದ್ದು, ಆಗಲಿ ದ್ದುದ್ದು ಎಲ್ಲವನ್ನೂ ಸಮಚಿತ್ತಳಾಗಿ ಹೇಳಿದೆ. ಮುದಿ ಜೀವಗಳಿಗೆ ಎಲ್ಲವೂ ಗೊತ್ತಿದ್ದ ಹಾಗಿತ್ತು. ಮುದುಕ ಆಗ ಹಾಗೆಂದು ಜಂಭಕೊಚ್ಚಿ ಕೊಂಡಿರಲಿಲ್ಲವೆ? ಈಗ, ಜಗಲಿಯ ಮೇಲಿನ ಇಲೆಕ್ಟ್ರಿಕ್ ದೀಪದ ಮಂದ ಬೆಳಕಿನಲ್ಲಿ ನನ್ನ ಕತೆ ಕೇಳುತ್ತಿದ್ದವರ ಮೋರೆಗಳ ಮೇಲಿನ ಕ್ಷಣಕ್ಷಣಕ್ಕೆ ಬದಲಾಗುತ್ತಿದ್ದ ಭಾವಕ್ಕೆ ಕತೆ ಹೇಳುತ್ತಿದ್ದ ನಾನೇ ದಂಗುಬಡಿದೆ. ಯಾರು ಯಾರಿಗೆ ವರದಿ ಒಪ್ಪಿಸುತ್ತಿದ್ದಾರೆ ಎನ್ನುವ ಬಗೆಗೇ ದಿಗ್ಭ್ರಮೆಯಾಗ ತೊಡಗಿತು. ಎರಡು ತಿಂಗಳ ಹಿಂದಿನ ಘಟನೆಗೆ ಬಂದಾಗಲಂತೂ ಮುದುಕಿಯ ಮೋರೆಯ ಮೇಲೆ ತುಂಟತನದ ಮುಗುಳ್ನಗೆ ಹರಡಿತು. ನಾನು ಹೇಳಿ ಮುಗಿಸಿದ್ದೇ ಖುಷಿಯಿಂದ ನನ್ನನ್ನು ತಬ್ಬಿಕೊಂಡುಬಿಟ್ಟಳು. 'ಯಾವುದೇ ದುರಾಸೆ ಯಿಂದ ಮಾಡಿದ ಕೆಲಸ ಅಲ್ಲವದು, ಮಗೂ, ನಾನಿದ್ದೇನೆ ನಿನ್ನ ಧೈರ್ಯಕ್ಕೆ. ಹೆದರಬೇಡ. ಸಾಗರ ದಾಟಿ ಹೋದವನು ಒಂದಲ್ಲ ಒಂದು ದಿನ ಬಂದೇ ಬರುತ್ತಾನೆ. ತನ್ನ ಮಗನನ್ನು ಗುರುತಿಸಿ ತಲೆಯ ಮೇಲೆ ಕೈಯಿಟ್ಟು ಹರಸಿಯೇ ಹರಸುತ್ತಾನೆ. ನಿನಗೆ ಇನ್ನೇನು ಬೇಕು?' ಎಂದಳು. ನನಗೆ ನಾನು ಯಾವ ಜಗತ್ತಿನಲ್ಲಿದ್ದೇನೆ, ಕೂಡಲೇ ತಿಳಿಯಲಿಲ್ಲ. ಇಷ್ಟೊಂದು ಸುಂದರವಾದ ಇನ್ನೊಬ್ಬಳು ಮುದುಕಿಯ ನೋಡಿಯೆ ಇರಲಿಲ್ಲ. ಒಂದು ಬಗೆಯ ಧನ್ಯತೆಯ ಭಾವ ಒಳಜೀವದಿಂದ ಪುಟಿದೆದ್ದು ಬಂದಂತಾಗಿ ಇಬ್ಬರೂ ವೃದ್ಧರ ಪಾದಗಳನ್ನು ಮುಟ್ಟಿ ಮುಟ್ಟಿ ಕೃತಜ್ಞತೆಯನ್ನು ಅರ್ಪಿಸಿದೆ. ಶಬ್ದಗಳಲ್ಲಿ ಹೇಳೋಣವೆಂದರೆ ಶಬ್ದಗಳೇ ಮೂಡದಾದುವು. ಇಬ್ಬರೂ ಹಿರಿಯರು ವಾತ್ಸಲ್ಯದಿಂದ ನನ್ನ ಬೆನ್ನ ಮೇಲೆ ಕೈಯಾಡಿಸಿದರು. ಏಳು ತಿಂಗಳ ಮೇಲೆ ನೀನು ಬಂದೆ.




''ಮಗೂ, ನಿನ್ನಪ್ಪ ಬಹಳ ಒಳ್ಳೆಯ ಜನ'' ಮಗನಿಗೆ ಅವನ ಜನ್ಮದ ಕತೆಯನ್ನು ಹೇಳಲು ಶಬ್ದ ಹುಡುಕುತ್ತ ಮೌನಳಾಗಿಬಿಟ್ಟ ತಾಯಿ ಕೊನೆಗೊಮ್ಮೆ ಬಾಯಿ ಬಿಟ್ಟಳು.

ಆಗಿನಿಂದಲೂ ತಾಯ ಬಾಯಿಂದ ತನ್ನ ಜನ್ಮಗಾಥೆಯನ್ನು ಕೇಳಲು ಉತ್ಸುಕನಾಗಿ ಕುಳಿತಿದ್ದ ಬಾಲಕ ತಾಯ ತುಟಿಗಳಿಂದ ಈ ಶಬ್ದಗಳನ್ನು ಕೇಳಿದ್ದೇ, ''ಸಾಕಮ್ಮಾ ಸಾಕು, ಮತ್ತೇನೂ ಹೇಳುವುದು ಬೇಡ. ನನಗೆಲ್ಲ ಗೊತ್ತಮ್ಮಾ, ನಿನಗಿಂತ ಮೊದಲೇ ಗೊತ್ತು. ಅಪ್ಪ ಬಂದಿದ್ದರು ನಿನ್ನೆ ಸಾಲೆಗೆ'' ಮಧ್ಯದ ಬಿಡುವಿನಲ್ಲಿ ಕ್ಲಾಸಿನಿಂದ ಹೊರಗೆ ಬಂದ ನಮ್ಮ ಟೋಳಿಯ ನಡುವೆ ನಿಂತು ನಮ್ಮನ್ನು ಒಬ್ಬೊಬ್ಬರನ್ನೇ, ತಲೆಯ ಮೇಲೆ ಕೈಯಿಟ್ಟು, ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತ, ನನ್ನ ಸರದಿ ಬರುತ್ತಲೇ 'ನೀನು!' ಎಂದವರು, 'ಹೌದಲ್ಲವೋ?' ಎನ್ನುವ ಭಾವದಲ್ಲಿ ನಿರುಕಿಸುತ್ತ, 'ಶಕುಂತಲೆಯ ಮಗನಲ್ಲವೆ?' ಎಂದು ಕೇಳಿದರು. ಮುಗುಳ್ನಕ್ಕರು. ನಾನು ಹೌದೆಂದು ತಲೆ ಹಾಕಿದಾಗ 'ನಾನು ನಿನ್ನಪ್ಪ ಮಗ! ನೋಡಿದ ನೆನಪಿದೆಯೆ?' ಎಂದು ಕೇಳಿದರು. ನಾನೂ ಎಂಥ ಮಳ್ಳ. ವಿಚಾರ ಮಾಡುವ ಮೊದಲೇ 'ಹೌದು' ಎಂದುಬಿಟ್ಟೆ. ಆ ಗಳಿಗೆಯಲ್ಲಿ ಹಾಗೇ ಅನ್ನಿಸಿಬಿಟ್ಟಿತಮ್ಮ. ಈ ಜನ್ಮದಲ್ಲಿ ಮಾತ್ರವಲ್ಲ.

ಎಷ್ಟೊಂದು ಜನ್ಮಗಳಲ್ಲಿ! ಹೋಗುವಾಗ ಇದೊಂದನ್ನು ನನ್ನ ಕೈಯಲ್ಲಿಟ್ಟು 'ಇದನ್ನು ಅಮ್ಮ ನಿಗೆ ಕೊಡು. ಕಳಕೊಳ್ಳಬೇಡವೆಂದು ಹೇಳು' ಎಂದರು. ಎಷ್ಟು ಚೆಂದವಾಗಿ ನಕ್ಕರಂತಿ! ನಿನ್ನೆ ರಾತ್ರಿಯಿಡೀ ಈ ಉಂಗುರ ನನ್ನ ಕೈಯಲ್ಲಿತ್ತು. ನನ್ನ ಅಪ್ಪ ನಿಜಕ್ಕೂ ಒಳ್ಳೆಯವನಿದ್ದ ಎಂದು ನಿನ್ನ ಬಾಯಿಂದಲೇ ಕೇಳಿದ ಮೇಲೇ ಇದನ್ನು ನಿನಗೆ ತೋರಿಸುವುದೆಂದು ನಿಶ್ಚಯಿಸಿದ್ದೆ. ಇಗೋ! ಇದೀಗ ನಿನ್ನ ನಿಧಿ. ನಿಮ್ಮ ಎಂಥ ರಹಸ್ಯ ಇದರಲ್ಲಡಗಿದೆಯೋ ನನಗೆ ಹೇಳಬೇಕೆಂದಿಲ್ಲ. 'ಅಪ್ಪ ಬಹಳ ಒಳ್ಳೆಯ ಜನ' ಎಂದು ಹೇಳಲು ಅರ್ಧಗಂಟೆಯ ಸಮಯ ತೆಗೆದುಕೊಂಡೆ. ಎಂದ ಮೇಲೆ ಅವರ ಒಳ್ಳೆತನದ ಕತೆ ಹೇಳಲು ಎಷ್ಟು ಹೊತ್ತು ತೆಗೆದುಕೊಳ್ಳುತ್ತೀಯೋ, ಕೂಡಲೇ ಹೇಳುವುದು ಬೇಡ. ಇಡೀ ಆಯುಷ್ಯವುಂಟಲ್ಲ ಹೇಳುವುದಕ್ಕೆ, ಕೇಳುವುದಕ್ಕೆ. ನೀನಾಗಿ ಹೇಳಿಲ್ಲ ವೆಂದ ಮೇಲೆ ಹಳ್ಳಿಗೆ ಬಂದಾಗ, ಹಳ್ಳಿ ಬಿಡುವಾಗ ಅವರು ಇಲ್ಲಿ ಬಂದಿರಲಾರರು. ನಾನೂ ಕೇಳಲಾರೆ'' ಎಂದವನೇ ಬಯಲಾಟದೊಳಗಿನ ಬಾಲವೇಷಧಾರಿಯಂತೆ ತಾಯ ಸುತ್ತಲೂ ಆವೇಷದಿಂದ ಧಿಮಿಕಿಟ ಕುಣಿಯಹತ್ತಿದ.

ನನ್ನ ಪಾಲಿಗೆ ಕಥೆ ಎಂದರೆ ಅನುಭವಿಸುವ ಮನುಷ್ಯನ ಮನಸ್ಸಿಗೆ ಅತಿ ಸಹಜವಾದ ಚಟುವಟಿಕೆಯಂತಾಗಿದೆ. ನಮ್ಮ ಪ್ರತಿಯೊಬ್ಬರಲ್ಲೂ ಒಂದು ಕತೆಯಿದೆ. ಯಾಕೆಂದರೆ ಪ್ರತಿಯೊಬ್ಬರಲ್ಲೂ ಇನ್ನೊಬ್ಬರಿಗೆ ಹೇಳಲು ತವಕಿಸುವ ಅನುಭವವಿದೆ.

-ಯಶವಂತ ಚಿತ್ತಾಲ




ಮಮತ ಹಲ್ಲುಕಚ್ಚಿ ನಿರ್ಧರಿಸಿಬಿಟ್ಟಳು. ''ಇವತ್ತು ಏನೇ ಆದರೂ ಸರಿ, ನಾನಿದನ್ನು ಮಾಡಿಯೇ ಮಾಡುತ್ತೇನೆ.''

ತುಂಬಾ ವರ್ಷಗಳಿಂದ, ಅಂದರೆ ಅವಳು ಕಾಲೇಜಿಗೆ ಸೇರಿದಾಗಿನಿಂದ ಹಿಡಿದು ಈಗ ಆಫೀಸಿಗೆ ಸೇರುವತನಕ ಈ ವಿಷಯವನ್ನು ಯೋಚಿಸಿದ್ದಿವೆ. ಆದರೆ ಸಾಧ್ಯವಾಗಿರಲಿಲ್ಲ. ಈಗ ಅವಳು ಸರ್ಕಾರಿ ಕೆಲಸಕ್ಕೆ ಸೇರಿಯೇ ಎರಡು ವರ್ಷವಾಗುತ್ತಾ ಬಂತು. ಈಗಲೂ ಮಾಡದಿದ್ದರೆ ಇನ್ನ್ಯಾವಾಗ ಮಾಡುವುದು?

ಸಾಂಪ್ರದಾಯಿಕ ಮಧ್ಯಮವರ್ಗದಲ್ಲಿ ಬೆಳೆದ ಅವಳಿಗೆ ಈ ಕೆಲಸ ಅಷ್ಟು ಸುಲಭವಾದದ್ದೇನಲ್ಲ. ನೋಡಿದವರು ಏನೆಂದುಕೊಂಡಾರು! ಮಮತಾಳ ಎದೆಬಡಿತ ಹೆಚ್ಚಾಯಿತು. ಆ ಸ್ಥಳ ಹತ್ತಿರವಾದಂತೆ ಸಣ್ಣಗೆ ನಡುಕ ಹತ್ತಿ ಕಾಲುಗಳು ಹಿಂತೆಗೆಯಲಾರಂಭಿಸಿದವು. ''ಬೇಡಪ್ಪಾ ಬೇಡ, ನನ್ನ ಕೈಯಲ್ಲಂತೂ ಸಾಧ್ಯವಿಲ್ಲ'' ಮನಸ್ಸು ಹಿಂದಕ್ಕೆಳೆಯಲಾರಂಭಿಸಿತು.


ಆದರೆ ತಾನು ಹತ್ತು ನಿಮಿಷಗಳ ಹಿಂದೆ ಮಾಡಿದ್ದ ನಿರ್ಧಾರ! ಅದನ್ನಂತೂ ಅದೆಷ್ಟು ಬಾರಿ ಮುರಿದಿದ್ದಳೋ.. ತನ್ನಿಚ್ಛೆಯಂತೆ ನಡೆಯಲಾಗದೆ ಅದೆಷ್ಟು ಕಸಿವಿಸಿಪಟ್ಟಿದ್ದಳೋ ಅವಳಿಗೇ ಗೊತ್ತು.

ಬೇರೆ ಕೆಲವು ಹೆಂಗಸರು ಹೀಗೆ ಧೈರ್ಯವಾಗಿ ಮಾಡುವುದನ್ನು ನೋಡಿದ್ದಳು. ತನಗಾಗುವ ಸಂಕೋಚ ಅವರಿಗ್ಯಾಕಿಲ್ಲ? ತಾನಿಷ್ಟು ವಿದ್ಯಾವಂತೆಯಾಗಿ, ಉದ್ಯೋಗಸ್ಥ ಮಹಿಳೆಯಾಗಿ ಇಷ್ಟು ಮಾಡಲು ಸಾಧ್ಯವಿಲ್ಲವೇ?



ಎಲ್. ಜಿ. ಮೀರಾ

ಹೊಸ್ತಿಲು



ಬಲವಂತವಾಗಿ ಆ ಸ್ಥಳದ ಹತ್ತಿರ ಕಾಲುಗಳನ್ನು ಎಳೆದುಕೊಂಡು ಹೋದಳು. ಅಲ್ಲಿ ಗುಂಪುಗುಂಪಾಗಿ ಜನ ನಿಂತಿದ್ದರು. ಗಂಡಸರು, ಹೆಂಗಸರು, ಮಕ್ಕಳು ಎಲ್ಲರೂ. ಕೆಲವರಿಗೆ ಗಡಿಬಿಡಿ. ಕೆಲವರಿಗೆ ಆರಾಮು. ಯಾರಾದರೂ ತನ್ನನ್ನು ಗಮನಿಸುತ್ತಾರೇನೋ ಎಂದು ಬೆದರುಗಣ್ಣಿನಿಂದ ಸುತ್ತಮುತ್ತ ನೋಡಿದಳು.

ಆಗಲೇ ಇವಳು ಒಂಟಿ ಅನ್ನುವುದನ್ನು ಗಮನಿಸಿದ ಕೆಲವರು ಗಂಡಸರು ಇವಳತ್ತ ಸ್ವಲ್ಪ ಕುತೂಹಲದಿಂದ ನೋಡುತ್ತಿದ್ದರು. ''ಇದು ಮಧ್ಯಾಹ್ನ ಹನ್ನೆರಡೂವರೆ ಸಮಯ. ಈಗ ನನಗೇನು ಭಯ?'' ಅಂದುಕೊಂಡರೂ ಆ ನೋಟಗಳಿಂದ ಅವಳಿಗೆ ಹಿಂಸೆಯಾಗದಿರಲಿಲ್ಲ.

''ಏನು ಮಾಡಲಿ? ಹಿಂತಿರುಗಿಬಿಡಲೇ?'' ಮಮತ ಮೀನಮೇಷ ಎಣಿಸಲಾರಂಭಿಸಿದಳು. ಹಿಂತಿರುಗಿ ಹೋಗುವುದೇನೋ ಸುಲಭ. ಆದರೆ ಆಮೇಲೆ ಅದರಿಂದ ಕಷ್ಟ ಜಾಸ್ತಿ. ಇಡೀ ದಿನ ಸಂಕಟವಾಗುತ್ತದೆ. ''ಅಲ್ಲ, ನನ್ನ ಜೀವನ, ನನ್ನ ಹಣ ನನ್ನ ಕೈಯಲ್ಲಿರುವಾಗ ನನಗೇನು ಭಯ?'' ಮಮತಾಳಿಗೆ ಎರಡೆರಡು ಮನಸ್ಸು.

ಸರಿ, ಹೋಗುವುದೇನೋ ಹೋಗಬಹುದು. ಆಮೇಲೆ ಒಬ್ಬಳೇ ಅಲ್ಲಿ ಹೇಗೆ ಸಮಯ ಕಳೆಯುವುದು? ಏನಾದರೂ ಓದೋಣವೇ? ಓದೋಣ ಅಂದರೆ ಪುಸ್ತಕವೂ ಇಲ್ಲ. ಹಾಳಾದ್ದು. ಮಮತಾಳ ಮನಸ್ಸಿನಲ್ಲಿ ಎಂಥೆಂಥವೋ ಕಷ್ಟಕರ ಭಾವಗಳು.

ಆಗಲೇ ಅವಳು ಅಲ್ಲಿ ಬಂದು ಹತ್ತು ನಿಮಿಷವಾಗಿತ್ತು. ಇನ್ನು ಸುಮ್ಮನಿದ್ದರೆ ಜನ ತನಗೆ ಹುಚ್ಚು ಅಂದುಕೊಂಡಾರು. ''ಏನಾದರೂ ಆಗಲಿ, ಇವತ್ತು ಈ ಕೆಲಸ ಮಾಡಿಯೇ ಬಿಡೋಣ'' ಎಂದು ಧೈರ್ಯ ಮಾಡಿದಳು.

ಢವಗುಟ್ಟುತ್ತಿದ್ದ ಎದೆಯನ್ನು ತಹಬಂದಿಗೆ ತಂದು, ವಿಪರೀತವಾಗಿ ಉಂಟಾಗುತ್ತಿದ್ದ ಸಂಕೋಚವನ್ನು ಬದಿಗೊತ್ತಿ,''ಅಲ್ಲಿ ಇನ್ಯಾರೂ ಇಲ್ಲ. ನಾನೊಬ್ಬಳೇ ಇದ್ದೇನೆ'' ಅಂದುಕೊಂಡು ಮಮತ ಇಲ್ಲಿಯವರೆಗೆ ತಾನು ಒಂಟಿಯಾಗಿ ಎಂದೂ ಮಾಡದೆ ಇದ್ದ ಕೆಲಸವನ್ನು ಮಾಡಲುಪಕ್ರಮಿಸಿದಳು.

ಅವಳು ಸೀದಾ ದರ್ಶಿನಿಯ ಕ್ಯಾಷಿಯರ್‌ನ ಬಳಿ ಹೋಗಿ, ಐದು ರೂಪಾಯಿ ಕೊಟ್ಟು, ''ಒಂದು ಕಾಫಿ'' ಅಂದಳು.



ಗುಲ್ಜಾರ್

ಸೀಮಾ



ಆ ಹಳೆಯ ಮನೆಯ - ಅಂದರೆ ಸುಧೀರನ ಮನೆಯ-ಕೀಲಿಕೈ ಆ ಬೆಳಿಗ್ಗೆಯಿಂದ ಮೂರನೇ ಬಾರಿ ಕೈಚೀಲದಲ್ಲಿ ಬೇರೇನನ್ನೋ ಹುಡುಕುತ್ತಿರುವಾಗ ಕೈಗೆ ತಾಕಿತ್ತು. ಸುಧೀರನನ್ನು ಬಿಟ್ಟು ಒಂದು ವರ್ಷದ ಮೇಲಾಗಿದ್ದರೂ, ಈಗಲೂ ಕೈಚೀಲದಲ್ಲಿ ಏನನ್ನಾದರೂ ಹುಡುಕುವಾಗ ಅದು ಕೈಗೆ ತಾಕಿಬಿಟ್ಟರೆ ಆಯ್ತು, ತಕ್ಷಣ ಟ್ಯಾಕ್ಸಿ ನಿಲ್ಲಿಸಿ, ಆ ಡ್ರೈವರಿಗೆ ''ಈ ದಾರಿ ಅಲ್ಲಪ್ಪ, ಹಿಂದಕ್ಕೆ ಹೋಗು. ಈಗ ತಾನೆ ನಾನು ಗಂಡನ್ನ ಬದಲಿ ಮಾಡ್ಕೊಂಡೆ'' ಅಂತ ಅವಳಿಗೆ ಹೇಳಬೇಕೆನ್ನಿಸುತ್ತದೆ. ಪ್ರಯಾಣ ಮಾಡುವಾಗ ಟ್ಯಾಕ್ಸಿ ಬದಲಾಯಿಸುವಂತೆ ಅವಳು ಸುಲಭವಾಗಿ ಗಂಡನನ್ನು ಬದಲಾಯಿಸಿಬಿಟ್ಟಿದ್ದಳು.

ಈಗಾಗಲೇ ಒಂದು ವರ್ಷ ಕಳೆದಿದ್ದರೂ ಅವಳಿಗೆ ತಾನು ಸುಧೀರನನ್ನು ಬಿಟ್ಟು ಬಂದಂತೆ ಅನ್ನಿಸುತ್ತಲೇ ಇರಲಿಲ್ಲ. ಟಿ.ಕೆ. ಕೂಡಾ ಇವಳನ್ನು ತುಂಬಾ ಪ್ರೀತಿಸುತ್ತಾನೆ. ಅವನದು ಚೂಟಿಯಾದ, ನಗು ಮುಖದ ವ್ಯಕ್ತಿತ್ವ. ಪ್ರತಿ ದಿನವೂ ಹೊಸತೊಂದು ಆಂಟಿಕ್ಕನ್ನೋ, ಇಲ್ಲಾ ಮತ್ತೇನಾದರೂ ವಿಶೇಷವನ್ನೋ ತಂದೇ ತರ್ತಾನೆ. ಒಂದು ದಿನ ಸಂಜೆಯಂತೂ ಇದ್ದಕ್ಕಿದ್ದಂತೆ ಒಂದು ಹೊಸ ಕಾರಿನಲ್ಲಿ ಬಂದು ''ಬಾ, ನಿಂಗೆ ಡ್ರೈವಿಂಗ್ ಕಲಿಸ್ತೀನಿ. ನಾನಂತೂ ಡ್ರೈವರನ್ನು ಇಟ್ಟುಕೊಳ್ಳಲಿಕ್ಕೆ ಇಷ್ಟಪಡಲ್ಲ ಅಥವಾ ನೀನು ಟ್ಯಾಕ್ಸಿಗಳಲ್ಲಿ ಸುತ್ತಾಡುವುದು ನನಗೆ ಸರಿ ಹೋಗಲ್ಲ. ಈವತ್ತಿನಿಂದ ನಿನಗೊಂದು ಕಾರು, ನನಗೊಂದು ಕಾರು'' ಎಂದಿದ್ದ!

ಆದರೆ ಅವಳು ಈಗಲೂ ಟ್ಯಾಕ್ಸಿಗಳಲ್ಲಿ ಪ್ರಯಾಣ ಮಾಡುತ್ತಾಳೆ. ಪ್ರತಿಬಾರಿಯೂ ಅವಳು ಸ್ವತಃ ಕಾರು ತೆಗೆದುಕೊಂಡು ಹೋದಾಗೆಲ್ಲ ಎಲ್ಲೋ ಒಂದು ಕಡೆ ಗುದ್ದಿಬಿಟ್ಟಿದ್ದಳು. ಕಾರ್ ಡ್ರೈವಿಂಗ್ ಮಾತ್ರ ಅವಳ ಕೈಯಿಂದ ಸಾಧ್ಯವಿಲ್ಲ.

ಮದುವೆಯಾದ ಸ್ವಲ್ಪೇ ದಿನಗಳಲ್ಲಿ ಅವಳು ತನಗೆ ಸಮುದ್ರವೆಂದರೆ ತುಂಬಾ ಇಷ್ಟವೆಂದು ಹೇಳಿದ್ದಳು. ಟಿ.ಕೆ.ಗೆ ಅಷ್ಟೇ ಸಾಕಾಗಿತ್ತು. ಸಮುದ್ರದ ಪಕ್ಕದಲ್ಲಿದ್ದ ಬಂಗಲೆಯೊಂದನ್ನು ಖರೀದಿಸಿಬಿಟ್ಟಿದ್ದ. ಕಾರಿನಲ್ಲಿ ಅವಳನ್ನು ಕೂಡಿಸಿಕೊಂಡು ''ಈವತ್ತು ನಿಂಗೊಂದು ಮಜಾ ತೋರಿಸ್ತೀನಿ'' ಎಂದು ಹೇಳಿ, ಬಂಗಲೆಯ ಬಳಿ ಕರೆದುಕೊಂಡು ಹೋಗಿ ''ಇದು ನಾನು ನಿನಗೆ ಕೊಡುತ್ತಿರುವ ಮದುವೆಯ ಉಡುಗೊರೆ'' ಎಂದಿದ್ದ!

ಟಿ.ಕೆ.ಯದು ಮಹಾಪೂರದಲ್ಲಿ ಕೊಚ್ಚಿಕೊಂಡು ಹೋಗುವಂತಹ ಪ್ರೀತಿಯಾದರೆ ಸುಧೀರನದು ಕೊಚ್ಚಿಕೊಂಡು ಹೋಗದಂತೆ ನೆಲದಲ್ಲಿ ಗಟ್ಟಿಯಾಗಿ ತಳವೂರುವಂತಹದು. ಯಾವಾಗ ನೋಡಿದರೂ ಶುಚಿತ್ವ, ಸಾಧನೆ, ಅರ್ಪಣೆ ಇತ್ಯಾದಿ.



'ಪರಿಚಯ್' 'ಆಂಧೀ' 'ಕೋಶಿಶ್' 'ಇಜಾಜತ್' 'ಮೌಸಂ' 'ಮಾಚಿಸ್' 'ಹುತುತು'ಗಳಂತಹ ತರಲ ವಿರಲ ಚಿತ್ರಗಳನ್ನು ಬರೆದು ನಿರ್ದೇಶಿಸಿರುವ ಗುಲ್ಜಾರ್ ಮೂಲತಃ ಕವಿ. ಬಿಮಲ್‌ರಾಯ್ ಗರಡಿಯಲ್ಲಿ ಪಳಗಿದ ಗುಲ್ಜಾರರ ಕವಿಮನಸ್ಸು ಅವರ ಎಲ್ಲಾ ಚಿತ್ರಗಳಿಗೊಂದು ವಿಶಿಷ್ಟ ತನ್ಮಯತೆ ತಂದುಕೊಟ್ಟಿದೆ. ಈ ಕವಿಯ ಪ್ರಪ್ರಥಮ ಕಥಾಸಂಕಲನ 'ರಾವೀಪಾರ್' ಈಗ ನಾಡಿನಾದ್ಯಂತ ಹೆಸರುಪಡೆಯುತ್ತಿದೆ. ಅದರ ಇಂಗ್ಲಿಷ್ ಆವೃತ್ತಿಯೂ ಹೊರಬಂದಿದೆ. ಇನ್ನೂ ಹಸಿಯಾಗಿರುವ ವಿಭಜನೆಯ ಗಾಯಗಳು, ಗಂಡು ಹೆಣ್ಣುಗಳ ನಡುವಿನ ವಿಲಕ್ಷಣ ಸೆಳೆತದ ಅಗಣಿತ ಸತ್ವಪರೀಕ್ಷೆಗಳು, ಬಣ್ಣದ ಬದುಕಿನ ದಾರುಣ ಬಿರುಕುಗಳು ಗುಲ್ಜಾರ್ ಕಥೆಗಳ ಜೀವಾಳವಾಗಿವೆ. ಸಹಜ ಪ್ರೇಮದ ಮುಗ್ಧತೆಯನ್ನು ನಾಶಮಾಡುವ ಪೊಳ್ಳು ಸಾಮಾಜಿಕತೆಯನ್ನು ಗುಲ್ಜಾರ್ ನಾಜೂಕಾಗಿ ಪ್ರಶ್ನಿಸುತ್ತಾರೆ.

ಈಗಾಗಲೇ ತಮ್ಮ 'ಮನೀಷೆ' ಕಥಾಸಂಗ್ರಹದಿಂದ ಕನ್ನಡ ಸಾಹಿತ್ಯಾಸಕ್ತರ ಮನಸ್ಸನ್ನು ಗೆದ್ದಿರುವ ವಸುಧೇಂದ್ರ, ಎಸ್. ಗುಲ್ಜಾರ್‌ರ 'ರಾವೀಪಾರ್' ಕತೆಗಳನ್ನು ಕನ್ನಡಕ್ಕೆ ತಂದಿದ್ದಾರೆ. ಅದರಿಂದ ಆಯ್ದ ಕೆಲ ಕತೆಗಳನ್ನು ನಿಮಗೆ ನೀಡುತ್ತಿದ್ದೇವೆ. ಮೊದಲ ಕಥೆ 'ಸೀಮಾ'.

ಬೆಳಿಗ್ಗೆ ಎದ್ದ ತಕ್ಷಣ ಮಾಡಬೇಕಾದ ಮೊದಲ ಕೆಲಸವೆಂದರೆ ಬಿಸಿನೀರಿನಿಂದ ಬಾಯಿ ಮುಕ್ಕಳಿಸುವುದಾಗಿತ್ತು. ನಾಟಕಕ್ಕಾಗಿ ಗಂಟಲು ಮತ್ತು ಧ್ವನಿಯನ್ನು ಸ್ವಚ್ಛ ಮಾಡಿಕೊಳ್ಳುವುದು ಅತ್ಯಂತ ಮಹತ್ವದ್ದಾಗಿತ್ತು. ರಂಗಮಂದಿರವನ್ನು ಸರಿಯಾದ ಸಮಯದಲ್ಲಿ ಸೇರಬೇಕಿತ್ತು ಮತ್ತು ತಮ್ಮ ಸಂಭಾಷಣೆಯನ್ನು ತಮ್ಮ ಸ್ವಂತ ಅಕ್ಷರದಲ್ಲಿ ಬರೆದಿಟ್ಟುಕೊಳ್ಳಬೇಕಿತ್ತು. ಅವಳಿಗೆ ಬೇಜಾರಾಗಿ ಕಣ್ಣಲ್ಲಿ ನೀರು ಬರುವ ತನಕ ಅವನು ರಿಹರ್ಸಲ್ ಮಾಡಿಸುತ್ತಿದ್ದ. ಉಸಿರಿನ ಉಚ್ಛ್ವಾಸ ಮತ್ತು ನಿಶ್ವಾಸ ಹೇಗಿರಬೇಕೆಂಬ ಮಟ್ಟಿಗೆ ಮುಂಚೆಯೇ ಹೇಳಿಕೊಡುತ್ತಿದ್ದ. ನಟ - ನಟಿಯರು ಅವನು ಹೇಳಿದ್ದನ್ನೆಲ್ಲಾ ವೇದವಾಕ್ಯದಂತೆ ಪರಿಪಾಲಿಸುತ್ತಿದ್ದರಲ್ಲದೆ ಯಾವತ್ತೂ ಅವನಿಗೆ ಎದುರಾಡುತ್ತಿರಲಿಲ್ಲ. ಯಾವು ಯಾವುದೋ ಚಿತ್ರ-ವಿಚಿತ್ರ ನಟನೆಯ ವಿಧಾನಗಳನ್ನೆಲ್ಲಾ ಹೇಳಿಕೊಡುತ್ತಿದ್ದನಾದರೂ, ನಾಟಕ ರಂಗವನ್ನೇರಿದಾಗ ಅತ್ಯಮೋಘವಾಗಿ ಯಶಸ್ವಿಯಾಗುತ್ತಿತ್ತು. ನಾಟಕದ ಕೊನೆಯಲ್ಲಿ ಪ್ರೇಕ್ಷಕರು ಕುತೂಹಲದಿಂದ ಕುರ್ಚಿಯ ತುದಿಗೆ ಕುಳಿತುಕೊಳ್ಳುವಂತೆ ಮಾಡುತ್ತಿದ್ದ.

ಹೆಚ್ಚು ಕಡಿಮೆ ಅವಳಿಗೆ ಅವನ ನಾಟಕದಿಂದ ಸಾಕಾಗಿ ಹೋಗಿತ್ತು. ಅವಳಿಗೆ ತಾನ್ಯಾರೋ ಹೆಡ್ ಮಾಸ್ತರನ್ನು ಮದುವೆಯಾಗಿ, ಮನೆಯಲ್ಲಿರುವುದರ ಬದಲು ಶಾಲೆಯಲ್ಲಿರುವಂತೆ ಭಾಸವಾಗುತ್ತಿತ್ತು.

ಒಂದು ದಿನ ಅವಳು ತನ್ನ ಉದ್ದನೆಯ ಕೂದಲನ್ನು ಕೈಯಲ್ಲಿ ಹಿಡಿದುಕೊಂಡು, ತನ್ನ ಹೆಗಲವರೆಗೆ ತಂದು, ಸಹಜವಾಗಿ ''ನಾನು ಕೂದಲನ್ನು ಕತ್ತರಿಸಿದರೆ ಹೇಗಿರ್ತದೋ? ಇಕೋ, ಇಷ್ಟುದ್ದ'' ಎಂದು ಕೇಳಿದ್ದಳು.

ಸುಧೀರ ನಕ್ಕು ''ನೀನು ಹಾಗೆ ಮಾಡಿದ್ರೆ, 'ಅದಾಲತ್ ಜಾರೀ ಹೈ' ನಾಟಕದ ಲೀಲಾಬೀ

ನಾರೇ ಏನು ಮಾಡಬೇಕು? 'ಆಧೇ ಅಧೂರೆ'ಯ ಸಾವಿತ್ರಿ ಗತಿಯೇನು?'' ಎಂದು ಶಾಂತವಾಗಿ ಹೇಳಿದ್ದ.

ಅವಳಿಗೆ ಮೈಯೆಲ್ಲಾ ಉರಿದುಹೋಗಿತ್ತು. ''ನೀನು ಯಾವಾಗಲೂ ನಿನ್ನ ನಾಟಕದ ಪಾತ್ರಗಳ ಮೂಲಕವೇ ನನ್ನ ನೋಡ್ತೀಯ. ಯಾವತ್ತಾದ್ರೂ ನನ್ನನ್ನು ನಾನಾಗಿ ನೋಡಿದ್ದೀಯಾ?'' ಎಂದು ಚೀರಿದ್ದಳು.

ಸುಧೀರ ನಕ್ಕುಬಿಟ್ಟು ಅದನ್ನು ಅಲ್ಲಿಗೇ ಮುಕ್ತಾಯ ಮಾಡಲು ಪ್ರಯತ್ನಿಸಿದನಾದರೂ ಅವಳು ಗಂಭೀರಳಾಗಿಬಿಟ್ಟಳು. ''ನಂಗೊತ್ತೋ, ಚೆನ್ನಾಗಿ ಗೊತ್ತು. ಒಂದು ವೇಳೆ ನಿಂಗೆ ನಾಟಕ ಮತ್ತು ನನ್ನ ಮಧ್ಯೆ ಯಾವುದಾದರೂ ಒಂದನ್ನು ಆಯ್ಕೆ ಮಾಡಬೇಕಾಗಿ ಬಂದ್ರೆ ನೀನು ನಾಟಕಾನೇ ಬೇಕಂತೀಯ. ನಿನ್ನ ಬದುಕಲ್ಲಿ ಏನಿದ್ದರೂ ನಾನು ಎರಡನೆಯವಳು. ನಂಗಿದು ಇಷ್ಟ ಆಗಲ್ಲ ಕಣೋ, ಇಷ್ಟ ಆಗಲ್ಲ.''

ಸುಧೀರ ಮಾಮೂಲಿಯಂತೆ ನಕ್ಕು, ಅವಳ ಕೆನ್ನೆಯನ್ನು ಮೃದುವಾಗಿ ಸವರಿ ''ಸೀಮಾ, ನನ್ನ ಚಿನ್ನ, ಕೇಳಿಲ್ಲಿ. ಇಂತಹ ಪ್ರಶ್ನೆ ಎದುರಾದರೆ ನಾನು ಮೊದಲು ಆಯ್ಕೆ ಮಾಡಿಕೊಳ್ಳೋದು ನಾಟಕಾನೇ, ಅನಂತರ ನೀನು, ಕಡೆಗೆ ನಾನು'' ಎಂದು ಹೇಳಿದ್ದ.

ಅವಳಿಗೆ ಆಗ ಏನಂತ ಉತ್ತರಿಸಬೇಕೋ ಗೊತ್ತಾಗಿರಲಿಲ್ಲ. ಆದರೆ ಅವಳಿಗೆ ಅವನ ಮಾತು ಒಂದು ಚೂರೂ ಇಷ್ಟವಾಗಿರಲಿಲ್ಲ.

ಅವಳು ಎಂದೂ ಸುಧೀರನ ಪ್ರೀತಿ ಮತ್ತು ಅಕ್ಕರೆಯ ಬಗ್ಗೆ ಶಂಕಿಸಿರಲಿಲ್ಲ. ಆದರೆ ಕೆಲವೊಮ್ಮೆ ಅವನು ಹೇಳೋದೆಲ್ಲಾ ಯಾವುದಾ ದರೂ ನಾಟಕದ ಮಾತುಗಳೆ? ಅಂತ ಅನು ಮಾನವಾಗುತ್ತಿತ್ತು. ಅವನ ಜೀವನ ರೀತಿಯೇ ಹಾಗಿತ್ತು. ಅವನೆಂದೂ ಧ್ವನಿಯನ್ನು ಎತ್ತರಿಸುತ್ತಿರಲಿಲ್ಲ, ಮೊಂಡುತನ ಮಾಡುತ್ತಿರಲಿಲ್ಲ ಅಥವಾ ಸಂಯಮ ಕಳೆದುಕೊಳ್ಳುತ್ತಿರಲಿಲ್ಲ. ಒಟ್ಟಾರೆ ಅವರ ಕುಟುಂಬ ಜೀವನದಲ್ಲಿ ಏರು-ಪೇರುಗಳಿರಲಿಲ್ಲ. ನಾಟಕದಲ್ಲಿ ಅಷ್ಟೊಂದು ಏರಿಳಿತಗಳನ್ನು ಸೃಷ್ಟಿಸುವ ವ್ಯಕ್ತಿ ನಿಜಜೀವನದಲ್ಲಿ ಯಾಕೆ ಇಷ್ಟೊಂದು ಜಡವಾಗಿದ್ದಾನೆ? ಅಂತ ಅವಳಿಗೊ ಮ್ಮೊಮ್ಮೆ ಆಶ್ಚರ್ಯವಾಗುತ್ತಿತ್ತು. ಅಷ್ಟೊಂದು ತಟಸ್ಥನಾಗಿದ್ದ. ಅವನಿಗೆ ಪ್ರಮುಖವಾದದ್ದೆಂದರೆ ನಾಟಕ, ಬರೀ ನಾಟಕ.

ಆದರೆ ಒಂದು ಸಲ ಮಾತ್ರ, ಅದೂ ಒಂದೇ ಒಂದು ಸಲ, ತನಗೆ ಮಗುವೊಂದು ಬೇಕೆಂದು ಆಸೆ ವ್ಯಕ್ತಪಡಿಸಿದ್ದ. ಆದರೆ ಅದಕ್ಕವಳು ''ನಂಗಂತೂ ಬಸುರಾಗ್ಲಿಕ್ಕೆ ತುಂಬಾ ಹೆದರಿಕೆ'' ಅಂತ ತಳ್ಳಿ ಹಾಕಿದ್ದಳು.

''ಹಾಗಿದ್ದರೆ ನಾನೇ ಬಸುರಾಗ್ತೀನಿ ಬಿಡು'' ಅಂತ ನಗುತ್ತಾ ಹೇಳಿ ಆ ಮಾತನ್ನು ತಳ್ಳಿ ಹಾಕಿದ್ದನಾದರೂ ಕೆಲವು ದಿನಗಳ ನಂತರ, ಬಹುಶಃ ಅವಳು ಕೂದಲನ್ನು ಕತ್ತರಿಸಿಕೊಳ್ಳುತ್ತೀನಿ ಎಂದ ದಿನವೇ ಇರಬೇಕು, ತನ್ನ ಸ್ಕ್ರಿಪ್ಟನ್ನು ಚೀಲದಲ್ಲಿಡುತ್ತಾ ''ನಿನ್ನ ಸಮಸ್ಯೆ ಏನಂತ ನಿಂಗೊತ್ತಾ? ನಿನ್ನನ್ನು ನೀನು ಸಂಪೂರ್ಣವಾಗಿ ಅರ್ಪಿಸಿಕೊಳ್ಳಲಿಕ್ಕೆ ಭಯಪಡ್ತೀಯ. ನಿನ್ನ ಕೈಗೆ ಬೇಡಿ ಹಾಕಲಿಕ್ಕೆ ನಿಂಗೆ ಇಷ್ಟ ಇಲ್ಲ. ನಿಂಗೆ ಗುರಿಯನ್ನ ಸಾಧಿಸಬೇಕೆಂಬ ಛಲಾನೇ ಇಲ್ಲ. ಅದಕ್ಕಾಗಿ ನಿನ್ನ ಆಯ್ಕೆಗಳನ್ನೆಲ್ಲಾ ತೆರೆದು ಇಟ್ಟುಕೊಂಡಿರ್ತೀಯ. ಯಾಕೆಂದರೆ ನಿನ್ನ ಚಂಚಲ ಮನಸ್ಸಿಗೆ ತಕ್ಕಂತೆ ದಾರಿ ಬದಲಾಯಿಸ್ತಾನೇ ಇರ್ತೀಯ. ನಿಂಗೆ ನೆನಪದಾ, ನಾವು ಭೇಟಿಯಾದಾಗ ನೀನು ಯಾವುದೋ ಪೇಂಟಿಂಗ್ ಶಾಲೆಗೆ ಹೋಗುತ್ತಿದ್ದೆ. ಆದರೆ ಗಿರಿಪ್ರಸಾದರ ಬಳಿ ಸಂಗೀತ ಕಲಿಬೇಕಂತ ಅದನ್ನ ಬಿಟ್ಟುಬಿಟ್ಟೆ. ಆದರೆ ಈಗ ನಿನ್ನ ತಂಬೂರಿ ಕೂಡಾ ಜಂಗು ಹಿಡೀತಾ ಇದೆ...'' ಎಂದು ಹೇಳಿದ್ದ.

ಅವನ ಮಾತಿಗೆ ಅವಳಿಂದ ಉತ್ತರ ಬರದಿದ್ದಾಗ ಅವನು ಅವಳ ಹಿಂದೆ ಬಂದು ನಿಂತು ''ಏನು ಮಾಡ್ತಾ ಇದೀಯ?'' ಎಂದು ಕೇಳಿದ್ದ. ಅವಳು ಕನ್ನಡಿಯ ಮುಂದೆ ಕುಳಿತುಕೊಂಡು

ಐಬ್ರೋ ಪೆನ್ಸಿಲ್ಲಿನಿಂದ ತನ್ನ ಮುಖದಲ್ಲಿ ಮೀಸೆ ಬರೆದುಕೊಳ್ಳುತ್ತಿದ್ದಳು. "ನಂಗೆ ಮೀಸೆ ಇದ್ರೆ ಹೇಗಿರ್ತದೆ ಅಂತ ನೋಡಬೇಕನ್ನಿಸ್ತು. ಈಗ ನಾನು ಹೇಗೆ ಕಾಣ್ತೇನಿ? ನಾನು ಗಂಡಾಗಿದ್ರೆ ಹೇಗಿರ್ತಿತ್ತು?" ಅಂತ ನಗುತ್ತಲೇ ಅವನನ್ನು ಕೇಳಿದ್ದಳು.

ಸುಧೀರ ಮತ್ತೆ ತನ್ನ ವಿಮರ್ಶೆಯ ಧ್ವನಿಯಲ್ಲಿ "ಬಹುಶಃ ಅದೇ ನಿನ್ನ ಸಮಸ್ಯೆಯಾಗಿರಬೇಕು" ಎಂದು ಹೇಳಿ ತನ್ನ ಚೀಲವನ್ನು ಅಲ್ಲಾಡಿಸುತ್ತಾ ಹೊರಟು ಹೋಗಿದ್ದ.

"ಬರೀ ನಾಟಕೀಯ, ತಥ್!" ಕಿರಿಕಿರಿಗೊಂಡ ಅವಳು ಫೂತ್ಕರಿಸಿದ್ದಳು. "ಪ್ರತಿ ಸಲಾನೂ ಸರಿ ಉತ್ತರಾನೇ ಕೊಡಬೇಕಂತ ಏನಾದರೂ ನಿಯಮ ಅದಾ? ಮನುಷ್ಯ ಎಲ್ಲವನ್ನೂ ಅನುಭವಿಸಬೇಕು. ಯಾವುದೋ ಗಂಭೀರ ಚರ್ಚೆಗಾಗಿ ನಾನು ಈ ಮೀಸೆ ಬಳಿದುಕೊಂಡಿಲ್ಲ. ಹಾಸ್ಯವನ್ನ ಹಾಸ್ಯದಿಂದಲೇ ಉತ್ತರಿಸಲಿಕ್ಕೆ ಆಗುತ್ತೆ. ನೀನು ಪ್ರತಿಯೊಂದಕ್ಕೂ ನನಗೆ ನೀತಿಯನ್ನು ಹೇಳಬೇಕಾಗಿಲ್ಲ". ಅವಳು ಸುಧೀರನನ್ನು ಘಾಸಿಗೊಳಿಸಲು ಕೊಂಕು ಮಾತನ್ನಾಡುತ್ತಿದ್ದಳು.

ಆ ರಾತ್ರಿ ಕನ್ನಡಿಯ ಮುಂದೆ ತುಂಬಾ ಹೊತ್ತು ಕುಳಿತಿದ್ದ ಅವಳು ಟೆಲಿಫೋನ್ ಸದ್ದು ಕೇಳಿದಾಗಲೇ ಎದ್ದಿದ್ದು. "ಹಲೋ" ಎಂದಿದ್ದಳು. ಆದರೆ ಅದ್ಯಾವುದೋ ರಾಂಗ್ ನಂಬರ್ ಕಾಲ್ ಆಗಿತ್ತು. "ಅಲ್ಲ, ಇದು ಸುಶೀಲ ಅಲ್ಲ. ಆದರೆ ಸುಶೀಲನ ಬದಲು ಬೇರೆ ಯಾರಾದರೂ ಆದರೆ ಪರ್ವಾಗಿಲ್ವಾ? ಶೀಲ ಆದ್ರೆ ನಡೀತದಾ?"

ಆ ಕಡೆಯ ವ್ಯಕ್ತಿ ಗಲಿಬಿಲಿಗೊಂಡು ಉದ್ಗಾರವನ್ನೆತ್ತಿದ್ದ. ಅವಳು ಗಟ್ಟಿಯಾಗಿ ನಕ್ಕು ರಿಸೀವರನ್ನು ಸ್ವಸ್ಥಾನದಲ್ಲಿಟ್ಟಿದ್ದಳು. ಮನಸ್ಸಿನಲ್ಲಿ ಕವಿದಿದ್ದ ಮೋಡಗಳೆಲ್ಲಾ ಕರಗಿಹೋಗಿದ್ದವು. ಅದೇ ಸಮಯಕ್ಕೆ ಪಕ್ಕದ ಮನೆಯ ಕೆಲಸದ ಹುಡುಗ 'ಮುಂಡು' ತನ್ನ 'ಗಿಯಾ-ಗ್ಯಾಸ್' ಕೇಳಿಕೊಂಡು ಬಂದಿದ್ದ. "ಗಿಯಾ-ಗ್ಯಾಸ್ ಅಂದ್ರೇನೋ?" ಎಂದು ಸೀಮಾ ಕೇಳಿದ್ದಳು.

"ಅದರ ಮೇಲೆ ತರಕಾರಿ ಸುಡಬಹುದು" ಅಂತ ಉತ್ತರಿಸಿದ್ದ.

"ಆದರೆ ನೀನೇನ್ಮಾಡ್ತೀಯ?"

"ನಾನು ಅದರ ಮೇಲೆ ಗಿಯಾ ಸುಡ್ತೀನಿ" ಅಂತ ಅವನು ಹೇಳಿದ. ಆ ಕ್ಷಣದಲ್ಲಿ ಅವಳಿಗೆ ತಾನು ಫೋನಿನಲ್ಲಿ ಕೇಳಿದ ಉದ್ಗಾರವನ್ನು ಮಾಡಬೇಕೆಂತ ಬಯಕೆಯಾಯ್ತು. ಆದರೆ ಕಷ್ಟಪಟ್ಟು ತಡೆದುಕೊಂಡಳು. ಅವನು ಹೊರಟು ಹೋದ ನಂತರ ತನ್ನ ಬಟ್ಟೆಗಳನ್ನು ಬಿಚ್ಚಿ, ಬೇಕಾಬಿಟ್ಟಿ ಎಲ್ಲೆಂದರಲ್ಲಿ ಮನೆಯ ತುಂಬಾ ಒಗೆದು, ಹುರುಪಿನಲ್ಲಿ ಬಚ್ಚಲ ಮನೆಗೆ ನಡೆದಳು.

ಆ ದಿನ ರಂಗಮಂದಿರದಲ್ಲಿ ಅವಳಿಗೆ ಸುಧೀರನಿಂದ ಬೈಗಳು ಕಾದಿದ್ದವು. ಸ್ಕ್ರಿಪ್ಟ್‌ನ ಮೂರು ಪುಟಗಳು ಕಾಣೆಯಾಗಿದ್ದವು.

"ಅವು ಎಲ್ಲಿ ಹೋದವು?"

"ನಂಗೊತ್ತಿಲ್ಲ"

"ನಂಗೊತ್ತಿಲ್ಲ ಅಂದ್ರೆ, ಏನರ್ಥ?"

"ನಂಗೊತ್ತಿಲ್ಲ"

ಸುಧೀರನ ಧ್ವನಿ ಚೆಂಡಿನಂತೆ ಪುಟಿದು, ತಾರಸಿಗೆ ತಾಕಿ ನಂತರ ಅವಳ ಕಿವಿಗಪ್ಪಳಿಸಿತು. "ನಿಂಗೊತ್ತಿಲ್ಲ ಅಂದ್ರೆ, ಇನ್ಯಾರಿಗೆ ಗೊತ್ತಿರಬೇಕು? ನಿಂಗಾ ಇಲ್ಲಾ ನಂಗಾ?" ಸಿಟ್ಟಿನಿಂದ ಸ್ಕ್ರಿಪ್ಟನ್ನು ಅವಳ ಕೈಯಲ್ಲಿ ತುರುಕಿ "ಇದು ನಿನ್ನ ಮನೆ ಅಲ್ಲ, ರಂಗಮಂದಿರ, ಪಾತ್ರ ಇಲ್ಲದೆ ಮನೆ ನಡೆಸಬಹುದು, ಆದರೆ ಸ್ಕ್ರಿಪ್ಟ್ ಇಲ್ಲದೆ ನಾಟಕ ಮಾಡ್ಲಿಕ್ಕಾಗಲ್ಲ, ತಿಳ್ಕೋ"

ಅವಳು ಬೇಕೆಂದೇ ರಂಗಮಂದಿರದಿಂದ ಸೀದಾ ಸಿನಿಮಾಕ್ಕೆ ಹೋಗಿದ್ದಳು. ರುಕ್ಸಾನಾನ್ನಾದರೂ ಕರೆದುಕೊಂಡು ಹೋಗೋಣ ಎಂದೆನ್ನಿಸಿತ್ತಾದರೂ 'ಅವಳಿಗಿನ್ನೂ ಹುಡುಗು ಬುದ್ಧಿ, ಬರೀ ಸುಧೀರ ಹೇಳಿದಂತೆ ಕೇಳಿಕೊಂಡಿರ್ತಾಳೆ' ಅಂತನ್ನಿಸಿ ಬಿಟ್ಟುಬಿಟ್ಟಿದ್ದಳು. ಫಾರುಕ್‌ನನ್ನಾದರೂ ಸಿನಿಮಾಕ್ಕೆ ಕರೆಯೋಣ ಎಂದುಕೊಂಡಿದ್ದಳು. ಆದರೆ ಸುಧೀರ ಅವನನ್ನು ನಿರ್ಮಾಣಕ್ಕೆ



ಸಂಬಂಧಿಸಿದ ಯಾವುದೋ ಕೆಲಸಕ್ಕೆ ಕಳುಹಿಸಿ ಬಿಟ್ಟಿದ್ದ. ಕೊನೆಗೆ ಅವಳೊಬ್ಬಳೇ ಎರಡನೇ ಶೋ ಸಿನಿಮಾಕ್ಕೆ ಹೋಗಿದ್ದಳು.

ಮನೆಗೆ ಬರುವುದರಲ್ಲಿ ಸುಧೀರ್ ಎಚ್ಚರ ದಿಂದಿರುವುದಿಲ್ಲವೆಂದು ಅವಳಿಗೆ ಗೊತ್ತು. ಇಬ್ಬರ ಬಳಿಯಲ್ಲೂ ಮನೆಯ ಕೀಲಿಗಳಿರುವುದರಿಂದ ಅನುಕೂಲವಾಯ್ತು. ಮನೆಯೊಳಗಡೆ ಬಂದ ಮೇಲೆ, ಟೇಬಲ್ ಮೇಲಿಟ್ಟಿದ್ದ ಚೀನೀ ತಿನಿಸು ಗಳನ್ನು ಗಮನಿಸಿದಳು. ಸುಧೀರ ಏನೂ ತಿಂದಿಲ್ಲ ವೆಂದು ಗೊತ್ತಾಯ್ತು. ಒಳಗಿನಿಂದ ಟೇಪ್‌ರಿಕಾ ರ್ಡರನ್ನು ನಿಲ್ಲಿಸಿ, ದೀಪವಾರಿಸಿ ಅವಳು ಸೀದಾ ಬಾಲ್ಕನಿಗೆ ಬಂದು ತಣ್ಣನೆಯ ನೆಲದ ಮೇಲೆ ಮಲಗಿಕೊಂಡಳು. ಸಮುದ್ರ ದೂರದಲ್ಲಿದ್ದರೂ ಅದರ ಘೋಷ ಕೇಳುತ್ತಿತ್ತು.

ಅಡುಗೆ ಮನೆಯಲ್ಲಿನ ನಲ್ಲಿ ತೊಟ್ಟಿಕ್ಕ ಲಾರಂಭಿಸಿ ಎರಡು ತಿಂಗಳೇ ಕಳೆದಿತ್ತು. ಹಗಲು-ರಾತ್ರಿ ಅದು 'ಟಪ್' 'ಟಪ್' ಸದ್ದು ಮಾಡು ವುದು ಕೇಳಿಸುತ್ತಿತ್ತು. ಸುಧೀರ ಮತ್ತು ಅವಳು ಇದರ ಬಗ್ಗೆ ಸಾಕಷ್ಟು ಬಾರಿ ಒಬ್ಬರಿಗೊಬ್ಬರು ಹೇಳಿಕೊಂಡಿದ್ದರೂ ಯಾರೂ ಪ್ಲಂಬರ್‌ನ್ನು ಕರೆ ದಿರಲಿಲ್ಲ. ಸೀಮಾಳ ಪ್ರಕಾರ ಮನೆಯ ಗಂಡಸಿಗೆ ಅತ್ಯಾವಶ್ಯಕವಾಗಿ ಕೆಲವೊಂದು ಕೆಲಸಗಳು ಗೊತ್ತಿ ರಬೇಕು. ಗೋಡೆಗೆ ಮೊಳೆ ಹೊಡೆಯೋದು, ಫ್ಯೂಜ್ ಹಾಕೋದು, ಬಲ್ಬನ್ನು ಬದಲಾಯಿ ಸೋದು, ಔಷಧಿಯ ಬಾಟಲಿಗಳ ಮುಚ್ಚಳವನ್ನು ತೆಗೆಯೋದು, ಹೀಗೆ... ಹೆಂಡತಿಯಾದವಳಿಗೆ ಅಡುಗೆ ಮಾಡಲಿಕ್ಕೆ ತಿಳಿದಿರಬೇಕು, ಕಿತ್ತು ಹೋದ ಗುಂಡಿ ಹೊಲಿಯಬೇಕಂತ ಅವರೂ ನಿರೀಕ್ಷಿಸುವುದಿಲ್ಲವೆ, ಹಾಗೆ. ಸುಧೀರ ಒಂದು ಸಾಯಂಕಾಲ ಬೇಗನೆ ಮನೆಗೆ ಬಂದು ನಲ್ಲಿ ಯನ್ನು ಸರಿ ಮಾಡುತ್ತಾನೆ ಎಂದು ಅವಳು ನಿರೀಕ್ಷಿ ಸಿದ್ದಳು. ಆದರೆ ಹಾಗಾಗಲಿಲ್ಲ.

ಒಂದು ದಿನ ಸಂಜೆ ಅವಳೇ ಅದಕ್ಕೆ ಕೈ ಹಚ್ಚಿ ದಳಾದರೂ ಅಡುಗೆ ಮನೆ ತುಂಬಾ ನೀರಾ ಯಿತು. ಮನೆಯಲ್ಲೊಂದು ವಾಷರ್ ಕೂಡಾ ಇರಲಿಲ್ಲ. ಸುಧೀರ ಬಟ್ಟೆಯೊಂದನ್ನು ಸುತ್ತಿ ನೀರನ್ನು ತಡೆಯಲು ಪ್ರಯತ್ನಿಸಿದ. ಸೀಮಾ ಕೂಡಾ ಅವನಿಗೆ ಸಹಾಯ ಮಾಡಲು ಪ್ರಯತ್ನಿಸಿ ದಳಾದರೂ ಚಿಮ್ಮಿದ ನೀರಿನ ರಭಸಕ್ಕೆ ಅಂಜಿ ಹಿಂದೆ ಸರಿದುಬಿಟ್ಟಳು. ಅವಳು ತೊಯ್ದು ತೊಪ್ಪಡಿಯಾಗಿಬಿಟ್ಟಳು. ನಲ್ಲಿಯನ್ನು ಹಾಗೇ ಬಿಟ್ಟರೆ ಮನೆಯ ಸೂರಿನವರೆಗೆ ನೀರು ತುಂಬು ತ್ತಿತ್ತು. ಆದರೂ ಛಲ ಬಿಡದೆ ನೀರಿನ ಧಾರೆಯನ್ನು ನಿಲ್ಲಿಸಲು ಅವರಿಬ್ಬರೂ ಪ್ರಯತ್ನಿಸುವಾಗ ಅದೇ ಸಮಯಕ್ಕೆ ಸರಿಯಾಗಿ ಸುಧೀರನ ಕಾಲೇಜಿನ ದಿನಗಳ ಗೆಳೆಯ ಟಿ.ಕೆ. ಬಂದಿದ್ದ. ತುಂಬಾ

ಸರಳವಾಗಿದ್ದ ಅವನು ಚೆನ್ನಾಗಿ ಮಾತನಾಡುತ್ತಿದ್ದನಲ್ಲದೆ ಒಳ್ಳೆಯ ಹಾಸ್ಯಪ್ರಜ್ಞೆಯೂ ಅವನಲ್ಲಿತ್ತು. ಪುಣ್ಯಾತ್ಮನಿಗೆ ಪ್ಲಂಬರ್ ಕೆಲಸದ ಜ್ಞಾನವೂ ಇತ್ತು. ಅವನೂ ನೀರಿನಲ್ಲಿ ಒದ್ದೆಯಾದನಾದರೂ ಎರಡೇ ನಿಮಿಷದಲ್ಲಿ ನಲ್ಲಿ ಸರಿಮಾಡಿಬಿಟ್ಟ. ಸುಧೀರ ಅವನನ್ನು ರಾತ್ರಿಯ ಊಟಕ್ಕಾಗಿ ಮನೆಗೆ ಆಹ್ವಾನಿಸಿದ್ದನ್ನು ಮರೆತೇಬಿಟ್ಟಿದ್ದ. ಹೇಳದೆ ಕೇಳದೆ ಹೀಗೆ ಯಾರನ್ನೋ ಊಟಕ್ಕೆ ಕರೆದರೆ ಹೇಗೆ? ಎಂದು ಸೀಮಾಳಿಗೆ ಸಿಟ್ಟು ಬಂತು.

ಆದರೆ ಟಿ.ಕೆ.ಯದು ಗಳಾಬಿಳಿ ಸ್ವಭಾವ. ''ಸೀಮಾ, ಯಾಕೆ ಯೋಚ್ನೆ ಮಾಡ್ತೀಯ? ಪಂಜಾಬಿಗಳ ತರಹ ಹಸೀ ಉಳ್ಳಾಗಡ್ಡಿ ಒಡೆದು ಉಪ್ಪು-ಖಾರ ಹಾಕಿಕೊಟ್ಟರೂ ಸಾಕು, ಖುಷಿಯಿಂದ ತಿಂತೀನಿ'' ಅಂದುಬಿಟ್ಟ.

ಸುಧೀರ ಮಧ್ಯದಲ್ಲಿ ಮಾತನಾಡಿ ''ನಿಜ ಹೇಳಬೇಕೆಂದರೆ ನಮ್ಮ ಮನೆಯಲ್ಲಿ ಉಳ್ಳಾಗಡ್ಡಿಯೂ ಇಲ್ಲ, ಪಂಜಾಬೀನೂ ಇಲ್ಲ. ಎರಡಕ್ಕೂ ಹೇಳಿ ಕಳುಹಿಸಬೇಕಷ್ಟೆ'' ಅಂತಂದ.

ಆ ಸಮಸ್ಯೆಯನ್ನೂ ಟಿ.ಕೆ. ಪರಿಹರಿಸಿದ. ಅವನಿಗೆ ಚೆನ್ನಾಗಿ ಅಡಿಗೆ ಮಾಡಲಿಕ್ಕೂ ಬರುತ್ತಿತ್ತು. ಗಂಟೆಯೊಂದರಲ್ಲಿ ತಿನ್ನಲು ಏನೋ ಸಿದ್ಧ ಮಾಡಿಬಿಟ್ಟ. ''ಇನ್ನೂ ಯಾವ ಯಾವ ವಿದ್ಯೆಗಳು ನಿಮಗೆ ಗೊತ್ತಿವೆ?'' ಅಂತ ಸೀಮಾ ಕೇಳಿಯೇ ಬಿಟ್ಟಳು.

''ನಂಗೆ ಹಾಡಲಿಕ್ಕೆ ಬರಲ್ಲ, ಆದರೆ ಟೇಪ್ ರೇಕಾರ್ಡರ್ ಹಾಕಲಿಕ್ಕೆ ಬರುತ್ತದೆ'' ಅಂತ ಅವನುತ್ತರಿಸಿದ್ದ.

ಸುಧೀರನ ಉಡುಪನ್ನು ಧರಿಸಿದ ಟಿ.ಕೆ. ಅವನ ಮತ್ತೊಂದು ಪ್ರತಿರೂಪದಂತೆ ಕಾಣುತ್ತಿದ್ದ. ಆ ಸಂಜೆಯನ್ನವರು ಹೃದಯ ಹಗುರವಾಗುವಷ್ಟು ಮಾತಾಡಿ, ನಕ್ಕು ಕಳೆದರು. ಆ ಮನೆಯಲ್ಲಿ ಹಿಂದೆ ಎಂದೂ ಅಷ್ಟೊಂದು ನಕ್ಕಿರುವುದು ಅವಳಿಗೆ ನೆನಪಿರಲಿಲ್ಲ.

ಅನಂತರ ಅವಳು ಸುಧೀರನಿಗೆ ''ನಿಮ್ಮ ಗೆಳೆಯ ಎಷ್ಟೊಂದು ಗಳಾಬಿಳಿಯಾಗಿ ಆರಾಮಾಗಿದ್ದಾರಲ್ಲ? ನಿಮ್ಮ ಜೊತೆ ಇಷ್ಟೊಂದು ನಗುತ್ತಾ ಮಾತನಾಡುವವರನ್ನು ನಾನು ನೋಡೇ ಇರಲಿಲ್ಲ. ರಂಗಮಂದಿರದಲ್ಲಂತೂ ಎಲ್ಲರೂ ಒಳ್ಳೆ ನಿಮ್ಮ ಆಳುಗಳ ತರಹ ಇರ್ತಾರೆ'' ಅಂತ ಹೇಳಿದ್ದಳು.

ಸುಧೀರ ಓದುತ್ತಿದ್ದ ಪುಸ್ತಕದಿಂದ ತಲೆಯೆತ್ತಿ ನೋಡಿದ್ದ. ''ನಾನೂ ಹಾಗೇ ಇರ್ತೀನಲ್ಲ'' ಎಂದು ನಕ್ಕು ನುಡಿದು ಅವಳು ಬೇರೆ ದಿಕ್ಕಿಗೆ ಮುಖ ಮಾಡಿದಳು.

ಸುಧೀರನ ಬಟ್ಟೆಗಳನ್ನು ಹಿಂತಿರುಗಿಸಲು ಬಂದಾಗ ಟಿ.ಕೆ. ಅವರಿಬ್ಬರಿಗೂ ತನ್ನ ಮನೆಗೆ ಬರಲು ಆಹ್ವಾನವಿತ್ತ. ಆದರೆ ಸುಧೀರ ತನ್ನ ಹೊಸ ನಾಟಕವೊಂದರ ನಿರ್ಮಾಣವೊಂದರಲ್ಲಿ ಸಂಪೂರ್ಣವಾಗಿ ತೊಡಗಿಕೊಂಡಿದ್ದ. 'ಆಧೇ ಅಧೂರೆ' ರಂಗವನ್ನೇರಲು ಸಜ್ಜಾಗಿತ್ತು. ''ನೀನು ಮೊದಲು ಹೋಗಿರು, ನಾನು ಆಮೇಲಕ್ಕೆ ರಂಗಮಂದಿರದಿಂದ ನೇರವಾಗಿ ಬರ್ತೀನಿ'' ಅಂತ ಸೀಮಾಗೆ ಹೇಳಿದ.

ಸುಧೀರ ಅಲ್ಲಿಗೆ ಹೋಗುವುದರೊಳಗೆ ಸೀಮಾ ಮತ್ತು ಶ್ಯಾಂಪೇನ್‌ನೊಡನೆ ಟಿ.ಕೆ. 'ಚಿಯರ್ಸ್' ಹೇಳಿಯಾಗಿತ್ತು. ಸುಧೀರ ತಡವಾಗಿ ಬಂದಿದ್ದಕ್ಕೆ ಟಿ.ಕೆ. ನಕ್ಕು ''ಸುಧೀರ, ನೀನು ನಿನ್ನ ಹೆಂಡತೀನ ಜೋಪಾನವಾಗಿ ನೋಡ್ಕೋಬೇಕು, ಇಲ್ಲಾ ಅಂತಂದ್ರೆ, ಅವಳು ಓಡಿ ಹೋಗ್ತಾಳೆ'' ಅಂತ ಹೇಳಿದ.

''ನನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗೋದಾದರೆ, ಅವಳು ಎಲ್ಲಿಗೆ ಬೇಕಾದರೂ ಹೋಗಬಹುದು'' ಅಂತ ಸುಧೀರನೂ ನಕ್ಕು ಪ್ರತಿಯುತ್ತರಿಸಿದ್ದ.

ಆಗ ಅವರು ಹಾಸ್ಯಕ್ಕಾಗಿ ಈ ಮಾತನ್ನಾಡಿದ್ದರೂ ಮುಂದೆ ಅದೇ ನಿಜವಾಗಿ ಹೋಗಿತ್ತು. ಸೀಮಾ 'ಆಧೇ ಅಧೂರೆ' ನಾಟಕದ ರಿಹರ್ಸ

ಲ್‌ನ ಮಧ್ಯದಲ್ಲಿಯೇ ರಂಗಮಂದಿರದಿಂದ ಹೊರಬಂದಿದ್ದಳು. ಮತ್ತೊಮ್ಮೆ ಹಿಂದೆ ನಡೆದಂತಹ ಜಗಳ ಮರುಕಳಿಸಿತ್ತು. ನಾಟಕದ ಯಾವುದೋ ಸಂಭಾಷಣೆಯನ್ನು ಸುಧೀರ ಓದುತ್ತಿದ್ದ.

''ಅನಂತರ ಜಗಮೋಹನ್ ರಂಗದ ಮೇಲೆ ಬರ್ತಾನೆ. ದೊಡ್ಡ ದೊಡ್ಡ ಮನುಷ್ಯರ ಪರಿಚಯ, ಆಕರ್ಷಕ ಜೀವನ ಶೈಲಿ, ಕಣ್ಸೆಳೆಯುವ ರೀತಿ-ನೀತಿ, ಜೊತೆಗೆ ಸುರ ಸುಂದರಾಂಗ. ಮಹೇಂದ್ರನ ಜಾಗದಲ್ಲಿ ಇವನಾದರೂ ಇದ್ದಿದ್ದರೆ ಎಷ್ಟೊಂದು ಚೆನ್ನಾಗಿರ್ತಿತ್ತು ಅಂತ ನೀನಂದ್ಕೊಳ್ತೀಯ. ವಾಸ್ತವವೇನೆಂದರೆ ಮಹೇಂದ್ರನ ಜಾಗದಲ್ಲಿ ಬೇರೆ ಯಾರೇ ಗಂಡಸರನ್ನು ನೋಡಿದ್ದರೂ ನಿನಗದೇ ಆಲೋಚನೆ ಬರುತ್ತಿತ್ತು. ನಿನಗೆ ಸರಿ ಹೊಂದದ ಗಂಡಿನೊಡನೆ ನಿನ್ನ ಮದುವೆಯಾಗಿ ಹೋಗಿದೆ ಅಂತ ನಿನಗೆ ಮನದಟ್ಟಾಗಿ ಹೋಗಿತ್ತು. ಏಕೆಂದರೆ ನಿನ್ನ ಪ್ರಕಾರ ಅರ್ಥಪೂರ್ಣ ಜೀವನ ಅಂದರೆ ಬೇಕಾದ್ದೆಲ್ಲ ಕೈಗೆ ಸಿಗುವಂತಹದ್ದು, ಅದನ್ನು ಅನುಭವಿಸುವಂತಹದ್ದು ಮತ್ತು ಅವುಗಳ ಮಧ್ಯದಲ್ಲಿಯೇ ಇರುವಂತಹದ್ದು''

ಈ ಸಂಭಾಷಣೆಯ ನಂತರ ಅವಳು ಒಂದೆರಡು ವಾಕ್ಯಗಳನ್ನು ಹೇಳಬೇಕಿತ್ತು. ಆದರೆ ಯಾವುದೋ ಧ್ಯಾನದಲ್ಲಿದ್ದ ಅವಳನ್ನು ಯಾರೋ ಎಚ್ಚರಿಸಬೇಕಾಯ್ತು. 'ನನ್ನ ಮನಸ್ಸೆಲ್ಲಾ ಟಿ.ಕೆ. ಮೇಲೇ ಯಾಕೆ ಕೇಂದ್ರೀಕೃತವಾಗಿದೆಯಂತ ನನಗೆ ಗೊತ್ತಾಗುತ್ತಿಲ್ಲ. ನಂಗನ್ನಿಸುತ್ತೆ, ಸುಧೀರ ಬೇಕೆಂದೇ ಜಗಮೋಹನನ ಪಾತ್ರವನ್ನು ಟಿ.ಕೆ. ಎಂಬಂತೆ ಚುಚ್ಚಿ ಚುಚ್ಚಿ ಮಾತನಾಡುತ್ತಿದ್ದಾನೆ'. 'ಆದರೆ ಸುಧೀರ್ ಹೇಳಿದ್ದೆಲ್ಲಾ ನಾಟಕದಲ್ಲಿತ್ತು. ಮೋಹನ್ ರಾಕೇಶರ ಆ ನಾಟಕವನ್ನು ಟಿ.ಕೆ. ಯನ್ನು ನೋಡುವುದಕ್ಕೆ ಮುಂಚೆ ಸಾಕಷ್ಟು ಬಾರಿ ಸೀಮಾ ಓದಿದ್ದಾಳೆ.

ರಿಹರ್ಸಲ್ ತೀವ್ರವಾದಂತೆಲ್ಲಾ ಅವಳ ಅನ್ಯಮನಸ್ಕತೆ ಹೆಚ್ಚಾಗುತ್ತಾ ಹೋಯಿತು. ಒಂದು ದಿನ ಸುಧೀರ ಎಲ್ಲರ ಮುಂದೆ ಕೂಗಾಡಿಬಿಟ್ಟ. ಆದರೆ ಅವಳೂ ಅದಕ್ಕೆ ಎದುರುತ್ತರ ಕೊಟ್ಟಳು.

''ಎಲ್ಲರ ಮುಂದೆ ನನ್ನ ಮೇಲೆ ಕೂಗಾಡಬೇಡ. ನಾನು ಬರೀ ನಿನಗಾಗಿ ಕೆಲಸ ಮಾಡ್ತಿರೋ ನಟಿ ಅಲ್ಲ. ನಿನ್ನ ಹೆಂಡ್ತಿ ಅನ್ನೋದೂ ನೆನಪಿನಲ್ಲಿರಲಿ''

''ಮನೆಯಲ್ಲಿ ನೀನು ನನ್ನ ಹೆಂಡ್ತಿ ಆಗಿರಬಹುದು. ಆದರೆ ಇಲ್ಲಿ ನೀನು ಉಳಿದೆಲ್ಲರಂತೆ ನಟಿ ಮಾತ್ರ, ತಿಳ್ಕೋ''

''ಇಲ್ಲಿರೋರೆಲ್ಲಾ ನೀನು ಬರೀ ನಿರ್ದೇಶಕನಲ್ಲ, ಸಾಕ್ಷಾತ್ ದೇವರು ಅಂತ ತಿಳ್ಕೊಂಡಾರೆ. ಆ ರೀತಿ ಹಸು ತರಹ ಬದುಕ್ಲಿಕ್ಕೆ ನಂಗೆ ಆಗಲ್ಲ''

ಅವಳ ಕಡೆಯ ವಾಕ್ಯವನ್ನು ಕೇಳಿ ಸುಧೀರ ದಿಗ್ಭ್ರಾಂತನಾದ. ಕೈಯಲ್ಲಿದ್ದ ಫೈಲನ್ನು ಸುಧೀರನ ಮುಖಕ್ಕೆಸೆದ ಸೀಮಾ ''ನಿನ್ನ ನಾಟಕದಿಂದ ನನಗೆ ಸಾಕು ಸಾಕಾಗಿದೆ. ಇದರಲ್ಲಿ ನಾನು ಪಾತ್ರ ಮಾಡಲಾರೆ'' ಎಂದುಬಿಟ್ಟಳು.

''ಮನೆಯಲ್ಲಿದ್ದಾಗ ನಿನಗೆ ಮನೆ ಅಂದರೆ ಸಾಕು ಸಾಕಾಗಿರ್ತದೆ. ಈಗ ಇಲ್ಲಿ ರಂಗಮಂದಿರ. ಯಾವಾಗ ನೋಡಿದರೂ ನೀನು ನೀನಿರೋ ಜಾಗ ಬಿಟ್ಟು ಬೇರೆಲ್ಲಿಯಾದರೂ ಇರ್ಲಿಕ್ಕೆ ಇಷ್ಟಪಡ್ತೀಯ. ನಿನ್ನ ಹತ್ತಿರ ಏನಿದೆಯೋ ಅದರಲ್ಲಿ ತೃಪ್ತಿಪಡ್ಲಿಕ್ಕೆ ನಿಂಗಾಗಲ್ಲ. ಈ ಹೊತ್ತಿಗೆ ನೀನು ಎಲ್ಲಿದ್ದೀಯ, ಎಲ್ಲಿಗೆ ಹೋಗ್ಲಿಕ್ಕೆ ಇಷ್ಟಪಡ್ತೀಯ ಅಂತ ನಿಂಗೇ ಗೊತ್ತಿರಲ್ಲ.'' ಈ ಮಾತುಗಳನ್ನಾಡುವಾಗ ಸುಧೀರನ ಧ್ವನಿ ಕುಗ್ಗಿತ್ತು.

ಆ ದಿನ ವಿಶೇಷವೊಂದು ನಡೆಯಿತು. ಎಂದೂ ಹಾಗೆ ಮಾಡದ ಸುಧೀರ ಅಂದು ರಂಗಮಂದಿರದಿಂದ ಹೊರಟುಹೋಗಿದ್ದ.

ಈ ಘಟನೆಯ ನಂತರ ಹಲವಾರು ವಾರಗಳವರೆಗೆ ಅವರು ಮಾತನಾಡಲಿಲ್ಲ. ರಂಗಮಂದಿರದ ಬಗ್ಗೆಯಂತೂ ಅಪ್ಪಿತಪ್ಪಿಯೂ ಸೊಲ್ಲೆತ್ತಲಿಲ್ಲ.

ಪ್ರಾರಂಭದಲ್ಲಿ ಅವಳು ಟಿ.ಕೆ.ಯೊಡನೆ ಆಗಾಗ ಮಾತನಾಡುತ್ತಿದ್ದಳು. ಅನಂತರ ಅವನೇ ಅವಳಿಗೆ ಫೋನ್ ಮಾಡಲಾರಂಭಿಸಿದ. ಮನೆಗೆ ಬಂದು ಕರೆದುಕೊಂಡು ಹೋಗಿ, ಅನಂತರ ವಾಪಸ್ ಮನೆಗೆ ಬಿಟ್ಟು ಹೋಗುತ್ತಿದ್ದ. ತಮ್ಮಿಬ್ಬರ ಭೇಟಿಯನ್ನು ಸುಧೀರನಿಂದ ಏಕೆ ರಹಸ್ಯವಾಗಿ ಡುತ್ತಿದ್ದೇವೆಯೆಂದು ಅವರಿಬ್ಬರಿಗೂ ಗೊತ್ತಾಗ ಲಿಲ್ಲ. ಸುಧೀರ ಸಂಶಯಪಡುವ ವ್ಯಕ್ತಿಯಲ್ಲ ವೆಂದು ಅವಳಿಗೆ ಚೆನ್ನಾಗಿ ಗೊತ್ತಿದ್ದರೂ, ತಾನು ಟಿ.ಕೆ.ಯ ಬಾಹುಗಳಲ್ಲಿರೋದನ್ನ ನೋಡಿದರೆ ಏನೆಂದಾನು? ಮನೆಯಿಂದ ತಾನು ಹೊರಬೀಳು ವಾಗ ನೋಡಿಬಿಟ್ಟರೆ ಸುಮ್ಮನೆ ಇರ್ತಾನಾ? ಅಂತೆಲ್ಲಾ ಆಲೋಚಿಸುತ್ತಿದ್ದಳು.


ಅವನು ನೇರವಾಗಿ ಹಾಗೆ ಹೇಳಿಬಿಟ್ಟರೆ ಅವಳು ಅಸಮಾಧಾನವಾಗುವುದಂತೂ ಸತ್ಯ. ''ನನ್ನ ಬಗ್ಗೆ ಅನುಮಾನಪಡ್ತೀಯೇನೋ?'' ಎಂದು ಕೇಳಿಬಿಡುತ್ತಿದ್ದಳು. ಹಾಗಂತ ಅವನು ಅವಳನ್ನು ಏನೂ ಕೇಳದಿದ್ದರೂ ಅವಳು ಅಷ್ಟೇ ಅಸಮಾಧಾನವಾಗುತ್ತಿದ್ದಳು, ''ನಾನು ಅಂತಂದರೆ ಅಷ್ಟೊಂದು ನಿರ್ಲಕ್ಷ್ಯ ಆದ್ನೇನೋ?''

ಅವಳು ಬಾಗಿಲಿಗೆ ಕೀ ಹಾಕಿ ತಿರುವಿದಾಗ ಟಿ.ಕೆ.ಯ ಬಾಹುಗಳು ಅವಳ ಸೊಂಟವನ್ನು ಬಂಧಿಸಿದ್ದವು. ಬಾಗಿಲನ್ನು ನೂಕಿ, ಜೊತೆ ಜೊತೆ ಯಲ್ಲಿ ಒಳಗೆ ಹೆಜ್ಜೆಯಿಟ್ಟ ಅವರು ಸುಧೀರ ಕಂಬ ದಂತೆ ಒಳಗೆ ನಿಂತಿರುವುದನ್ನು ನೋಡಿ ಒಂದು ಹೆಜ್ಜೆ ಹಿಂದಿಟ್ಟರು. ಸುಧೀರನ ಮುಖ ನಿರ್ವಿಕಾರ ವಾಗಿತ್ತು. ಟಿ.ಕೆ. ಏನೂ ನಡೆದಿಲ್ಲ ಎನ್ನುವ ತರಹ ಇರಲಿಕ್ಕೆ ಪ್ರಯತ್ನಿಸಿದ. ''ಇತ್ತೀಚೆಗೆ ನೀನು ಏನು ಮಾಡ್ತಿದೀಯ? ಯಾವ ಹೊಸ ನಾಟಕಕ್ಕೆ ಕೈ ಹಾಕಿದೀಯ?'' ಎಂದು ಸುಧೀರನನ್ನು ಕೇಳಿದ.

''ನಂದೇ ವೈಯಕ್ತಿಕ ನಾಟಕದಲ್ಲಿ ಸಿಕ್ಕಿ ಹಾಕ್ಕೋಂಡೀನಿ''

''ಹಾಗಂದ್ರೇನು?''

''ಹಾಗಂದ್ರೆ, ಕೂತ್ಕೋ, ಸೀಮಾ ನೀನೂ.''



ಅವಳು ಅಧೀರಳಾಗಿದ್ದಳು. ಸುಧೀರ ಮತ್ತೆ ಮಾತನ್ನು ಮುಂದುವರಿಸಿದ. ''ನಿಜ ಹೇಳ ಬೇಕೆಂದರೆ ಅದು ಬೇರೆ ಯಾರದೋ ನಾಟಕ. ನಂದು ಏನೂ ತಪ್ಪಿಲ್ಲದಿದ್ದರೂ ನಾನು ಅದರಲ್ಲಿ ಸಿಕ್ಕಿಹಾಕಿಕೊಂಡಿದೀನಿ.''

''ಹಾಗಂದ್ರೆ?''

''ಹೇಳ್ತೀನಿ ಇರು. ಮುಖರ್ಜಿ ಅನ್ನೋ ವ್ಯಕ್ತಿ ನಮ್ಮ ಜೋಡಿ ರಂಗಮಂದಿರದಲ್ಲಿ ಕೆಲಸ ಮಾಡ್ತಾನೆ''

''ಮುಖರ್ಜಿ? ಅದ್ಯಾರು'' ಎಂದು ಸೀಮಾ ಕೇಳಿದಳು.

''ಬಹುಶಃ ನಿನಗವನ ಜ್ಞಾಪಕವಿರಲಿಕ್ಕಿಲ್ಲ. ಅವನಲ್ಲಿ ಏನಿದೆಯಂತ ಅವನನ್ನು ಜ್ಞಾಪಿಸಿಕೊಳ್ಳ ಬೇಕು? ಆದರೆ ಅವನಿಗೊಬ್ಬಳು ಸುಂದರ ಹೆಂಡ

ತಿಯಿದ್ದಾಳೆ. ಜನ ಅವನನ್ನು ಅದಕ್ಕಾಗಿ ಜ್ಞಾಪಿಸಿಕೊಳ್ತಾರೆ. ಅವಳು ಬರೀ ಸುಂದರಿ ಮಾತ್ರವಲ್ಲ, ಚಾಣಾಕ್ಷಳೂ ಹೌದು. ಈಗ ಏನಾಗಿದೆಯೆಂದರೆ ಮೂರನೆಯ ವ್ಯಕ್ತಿಯೊಬ್ಬ ಅವಳನ್ನು ಪ್ರೀತಿಸಲಿಕ್ಕೆ ಪ್ರಾರಂಭ ಮಾಡಿದ್ದಾನೆ. ಅಥವಾ ಅವಳೇ ಅವನನ್ನು ಪ್ರೀತಿಸುತ್ತಿದ್ದಾಳೆ ಅಂತಲೂ ಹೇಳಬಹುದು.''

ಟಿ.ಕೆ. ಮತ್ತು ಸೀಮಾ ಒಬ್ಬರಿಗೊಬ್ಬರು ಮುಖ ನೋಡಿಕೊಂಡರು. ಆದರೆ ನಾಟಕದ ಯಾವುದೋ ದೃಶ್ಯವನ್ನು ಅವರಿಬ್ಬರಿಗೂ ವಿವರಿಸುವಂತೆ ಸುಧೀರ ಮಾತನಾಡುತ್ತಿದ್ದ. ''ಏನೇ ಆದರೂ ಪ್ರೀತಿ ಅನ್ನೋದು ಕೆಟ್ಟದ್ದು. ಭದ್ರವಾಗಿ ನಿಂತವನ ಕಾಲ ಕೆಳಗಿನ ಚಾಪೆಯನ್ನೇ ಎಳೆದು ಬಿಡುವಂತಹದ್ದು. ಆದರೂ ಅವನು ಪ್ರೀತಿಯನ್ನು ಜೀವನದಲ್ಲಿ ಪಡೆಯುವಂತಹದ್ದು ಅಂತ ನಂಬಿಕೊಳ್ತಿದಾನೆ. ಆದರೆ ಕಲೆ, ಜ್ಞಾನ ಎಲ್ಲಾ ಕೆಲಸಕ್ಕೆ ಬಾರದವುಗಳಾಗುತ್ತಿವೆ. ಗೊತ್ತಿದ್ದರೆ ಒಳ್ಳೆಯದು, ಆದರೆ ಗೊತ್ತಿಲ್ಲ ಅಂತಂದ್ರೆ ತಲೆ ಹೋಗುವಂತಹದ್ದು ಏನೂ ಇಲ್ಲ. ಅದೇ ತರ್ಕವನ್ನು...''

ಅವಳು ಅವನ ಮಾತನ್ನು ತುಂಡರಿಸಿ ''ಹಾಗಿದ್ರೆ ಮುಖರ್ಜಿ ಸಮಸ್ಯೆಯಾದರೂ ಏನು?'' ಎಂದಳು.

''ಅವನ ಸಮಸ್ಯೆ ಏನೆಂದರೆ ಅವನಿಗೀಗ ಹೆಂಡತಿಯ ಸಂಬಂಧ ಗೊತ್ತಾಗಿ ಬಿಟ್ಟಿದೆ. ಆದರೆ ಅವನಿಗೆ ಏನು ಮಾಡಬೇಕೆಂದು ತಿಳಿಯುತ್ತಿಲ್ಲ. ಗೊತ್ತಿದ್ದೂ ಗೊತ್ತಿದ್ದೂ ಏನಾದರೂ ಮಾಡಿಕೊಂಡು ಹಾಳಾಗಿಹೋಗಲಿ ಎಂದು ಸುಮ್ಮನೆ ಇರಬೇಕಾ? ಇಲ್ಲಾ ಹೆಂಡತಿಯನ್ನೇ ಮನೆ ಬಿಟ್ಟು ಹೊರಹಾಕಬೇಕಾ? ಅವನೀಗ ಏನು ಮಾಡಬೇಕು?''

ಸುಧೀರನ ಧ್ವನಿ ಕ್ರಮೇಣವಾಗಿ ಗಡುಸಾಗುತ್ತಿತ್ತು. ಟಿ.ಕೆ. ಮತ್ತು ಸೀಮಾ ಇಬ್ಬರಿಗೂ ಅವನು ಹೇಳುತ್ತಿರುವುದೇನೆಂದು ಅರ್ಥವಾಗಿತ್ತು. ನಾಟಕದ ಪಾತ್ರಧಾರಿಯೊಂದು ಆಸ್ಥಳದಿಂದ ಪಾರಾಗಲು ಪ್ರಯತ್ನಿಸಿತು. ಆದರೆ ಸುಧೀರ ಬಿಡಲಿಲ್ಲ. ತಣ್ಣನೆಯ, ಕರ್ಕಶವಾದ ಧ್ವನಿಯಲ್ಲಿ ''ಟಿ.ಕೆ. ಕೂತ್ಕೋ. ನೀನೇನೂ ಮಗುವಲ್ಲ. ನಾನೇನು ಹೇಳ್ತಾ ಇದೀನಿ ಅಂತ ನಿನಗೂ ಅರ್ಥ ಆಗ್ತಾ ಇದೆ'' ಅಂತಂದು ಮತ್ತೆ ಮುಂದುವರಿಸಿದ. ''ನೋಡು, ಜಗತ್ತಿನಲ್ಲಿ ವಿಧೇಯ ಗಂಡ ಅಥವಾ ವಿಧೇಯ ಹೆಂಡತಿ ಅನ್ನೋದು ಇಲ್ಲವೇ ಇಲ್ಲ. ಈ ಸಂಬಂಧಗಳ ಮೇಲೆ ಅನಾವಶ್ಯಕವಾಗಿ ಇಂತಹ ಮುದ್ರೆ ಒತ್ತಿಬಿಟ್ಟಿದ್ದಾರೆ. ನೀವು ಬೇಕೆಂದರೆ ಇಂತಹ ಮುದ್ರೆ ಇರೋ ರೇಷನ್ ಕಾರ್ಡ್ ತೆಗೆದುಕೊಳ್ಳಬಹುದು. ಆದರೆ ಅವುಗಳಿಂದ ಸಂಬಂಧಗಳನ್ನು ಬೆಸೆಯೋಕಾಗಲ್ಲ.''

ಸೀಮಾ ಕೋಪ ಮತ್ತು ವ್ಯಂಗ್ಯಗಳನ್ನು ಮೊದಲಬಾರಿ ಸುಧೀರನ ಧ್ವನಿಯಲ್ಲಿ ಗುರುತಿಸಿದ್ದಳು. ದುಃಖವನ್ನು ತಡೆಗಟ್ಟಿದ ಧ್ವನಿಯಲ್ಲಿ ಅವನು ಮಾತನಾಡುತ್ತಿದ್ದ. ''ಈವತ್ತಿನವರೆಗೂ ಘಟಿಸಬೇಕಾದ್ದನ್ನು ತಡೆಯೋಕೆ ಯಾರಿಗೂ ಆಗಿಲ್ಲ. ಏನಾಗುತ್ತೋ ಅದನ್ನು ತಡೆಯೋಕೆ ನಿಮಗೂ ಆಗಲ್ಲ. ನನ್ನ ಜೀವನದ ಈ ಕ್ಯಾನ್ಸರ್‌ನಿಂದ ತುಂಬಾ ದಿನ ನಾನು ನರಳಲಾರೆ. ನೀವಿಬ್ಬರೂ ಹುಚ್ಚಾಟ ಆಡದೆ ನಿಜಕ್ಕೂ ಪ್ರೀತಿ ಮಾಡುತ್ತಿದ್ದರೆ, ಒಬ್ಬರ ಕೈ ಒಬ್ಬರು ಹಿಡಿದುಕೊಂಡು ಈ ಮನೆಯಿಂದ ಹೊರಟುಹೋಗಿ. ತೊಲಗಿ!''

ಸುಧೀರನ ಕಣ್ಣಲ್ಲಿ ನೀರು ಧಾರಾಕಾರವಾಗಿ ಸುರಿಯಲಾರಂಭಿಸಿತ್ತು. ಅವಳಿಗೆ ಅವನನ್ನು ಅಪ್ಪಿಕೊಂಡು, ತಲೆ ಸವರಿ ಸಮಾಧಾನ ಮಾಡಬೇಕೆನ್ನಿಸಿತ್ತು. ಆದರೆ ಅದೇ ವೇಳೆಗೆ ಟೆಲಿಫೋನ್ ಸದ್ದು ಮಾಡಿದಾಗ ಸುಧೀರ ಅದನ್ನು ಕಾಲಿನಿಂದ ಒದ್ದುಬಿಟ್ಟ. ನೆಲದ ಮೇಲೆ ಬಿದ್ದ ರಿಸೀವರ್‌ನಿಂದ 'ಹಲೋ, ಹಲೋ' ಎಂಬ ಧ್ವನಿ ಗುಹೆಯಿಂದ ಹೊರಬಂದಂತೆ ಅವಳಿಗೆ ಕೇಳುತ್ತಿತ್ತು. ಸುಧೀರ ಮೇಲಕ್ಕೆದ್ದು ಬಾಗಿಲನ್ನು ತೆರೆದು ಅವರಿಗೆ ಹೊರಹೋಗಿ ಎಂದು ಹೇಳುವಂತೆ ನಿಂತ. ಗಡಸು ಧ್ವನಿ

ಯಲ್ಲಿ "ನಂಗೆ ಈವಾಗ್ಲೇ, ಈ ಗಳಿಗೇನೇ ನಿಮ್ಮ ನಿರ್ಧಾರ ಏನು ಅಂತ ಗೊತ್ತಾಗಬೇಕು" ಎಂದಿದ್ದ.

ಟಿ.ಕೆ.ಯನ್ನು ಮದುವೆಯಾದ ತಕ್ಷಣ ಅವಳು ತನ್ನ ಕೂದಲನ್ನು ಕತ್ತರಿಸಿಕೊಂಡಿದ್ದಳು. ಒಂದ ರ್ಥದಲ್ಲಿ ಅವಳು ಲೀಲಾ ಜಿಸಾರೆ ಮತ್ತು ಸಾವಿತ್ರಿಯ ಕೂದಲನ್ನು ಕತ್ತರಿಸಿಬಿಟ್ಟಿದ್ದಳು. ಅವಳು ರಂಗಮಂದಿರವನ್ನೇ ಮರೆಯಲು ಪ್ರಯತ್ನಿಸಿದಳಾದರೂ, ಸುಧೀರನನ್ನು ಮರೆಯಲಾಗಲಿಲ್ಲ. ಟಿ.ಕೆ. ಅವಳನ್ನು ತನ್ನ ಮೀನು ದೋಣಿಗಳು ಕೆಲಸ ಮಾಡುವ ಕೊಚಿನ್‌ಗೆ ಕರೆದುಕೊಂಡು ಹೋಗಿದ್ದ. ಸಮುದ್ರ ದಂಡೆಯ ಮೇಲೆ ಎಂಟು ಹತ್ತು ದಿನಗಳು ಕಳೆದದ್ದು ನಿಜಕ್ಕೂ ಒಂದು ಹೊಸ ಅನುಭವವಾಗಿತ್ತು. "ಏನೇ, ಸಮುದ್ರದ ದಂಡೆಯ ಮೇಲೆ ಬಂದು ಅದರ ಉಪ್ಪು ನಿನ್ನ ಮೈಯಲ್ಲೂ ಸೇರಿಕೊಂಡಂತಿದೆ" ಅಂತ ಟಿ.ಕೆ. ಅವಳನ್ನು ರೇಗಿಸುತ್ತಿದ್ದ.

ಒಂದು ದಿನ ಅವಳ ಕಣ್ಣಲ್ಲಿ ನೀರನ್ನು ಕಂಡು ಟಿ.ಕೆ. ಅವಳ ಪಕ್ಕ ಬಂದು ಕುಳಿತುಕೊಂಡ. ತನ್ನ ಬೊಗಸೆಯಲ್ಲಿ ಅವಳ ಮುಖವನ್ನು ತೆಗೆದುಕೊಂಡು, "ನಿನ್ನ ಕಣ್ಣೀರಲ್ಲಿ ಸುಧೀರನ ಮುಖವೇನಾದರೂ ಕಾಣಿಸುತ್ತಿದೆಯಾ ಅಂತ ನಂಗೆ ಅನುಮಾನವಾಗ್ತಿದೆ" ಎಂದಿದ್ದ.

"ಹೂಂ" ಎಂದು ಒಪ್ಪಿಗೆಯಿಂದ ಗೋಣು ಹಾಕಿದ್ದಳು.

"ಜಗಳಾಡಿಯೋ, ಹೊಡೆದಾಡಿಯೋ ಸಂಬಂಧವನ್ನು ಕಳೆದುಕೊಳ್ಳೋದು ಸುಲಭ. ಆದರೆ ಬಂಧನವನ್ನು ಕಳಚಿಕೊಂಡ ನಂತರವೂ ಸುಧೀರ ನಮ್ಮಿಬ್ಬರನ್ನು ಬಿಡ್ತಾ ಇಲ್ಲ. ಇದೆಲ್ಲಾ ನೋಡಿ ನಂಗ್ಯಾಕೋ ಒಳಗೊಳಗೇ ಅಳುಕಾಗ್ತಾ ಇದೆ"

ಟಿ.ಕೆ.ಯದು ನಿಷ್ಕಲ್ಮಷ ಪ್ರೇಮವಾಗಿತ್ತು. ಅದರಲ್ಲಿ ಯಾವುದೇ ಕೃತ್ರಿಮತೆ ಇರಲಿಲ್ಲ.

ಆದರೆ ಕೊಚಿನ್‌ನಿಂದ ಹಿಂತಿರುಗಿದ ನಂತರ ಅಸ್ವಾಭಾವಿಕ ಘಟನೆಯೊಂದು ಜರುಗಿತು. ಒಂದು ದಿನ ಬೆಳಿಗ್ಗೆ ಅವಳಿಗೆ ಬಾಯಿ ಮುಕ್ಕಳಿಸುತ್ತಿರುವ ಸದ್ದು ಕೇಳಿಸಿ, ಹಾಸಿಗೆಯಿಂದ ಜಿಗಿದು, ಬಚ್ಚಲು ಮನೆಗೆ ಹೋಗಿ ನೋಡಿದಾಗ ಅಲ್ಲಿ ಟಿ.ಕೆ. ವಾಷ್‌ಬೇಸಿನ್ ಮುಂದೆ ಗಾರ್ಗಲ್ ಮಾಡುತ್ತಿದ್ದ.

"ಇದೇನ್ ಮಾಡ್ತಾ ಇದೀಯ?" ಅಂತ ಆತಂಕದಿಂದ ಕೇಳಿದ್ದಳು.

"ಯಾಕೋ ಗಂಟಲು ಕೆರೀತಾ ಇದೆ. ಅದಕ್ಕೇ ಗಾರ್ಗಲ್ ಮಾಡ್ತಾ ಇದೀನಿ" ಅಂತ ಟಿ.ಕೆ. ಹೇಳಿದ್ದ.

ಉಪ್ಪು ಬೆರೆತ ಬಿಸಿನೀರನ್ನು ವಾಷ್‌ಬೇಸಿನ್‌ಗೆ ಚೆಲ್ಲಿದ ಸೀಮಾ "ಅಷ್ಟಕ್ಕೆಲ್ಲಾ ಗಾರ್ಗಲ್ ಮಾಡೋ ಅವಶ್ಯಕತೆಯಿಲ್ಲ. ಬಾ, ನಾನು ನಿಂಗೆ ಒಳ್ಳೆ ಔಷಧಿ ಕೊಡ್ತೀನಿ" ಎಂದು ಹೇಳಿದಳು.

ಆ ತಕ್ಷಣ ಡಾಕ್ಟರರಿಗೆ ಫೋನ್ ಮಾಡಿದಳಾದರೂ ಅವರು ಸಿಗಲಿಲ್ಲ. ಟಿ.ಕೆ. ಆಫೀಸಿಗೆ ಹೊರಟುಹೋದ. ಸಂಜೆ ಅವಳೇ ಆಸ್ಪತ್ರೆಗೆ ಹೋದಳು. ಅವಳನ್ನು ನೋಡಿದ ತಕ್ಷಣ ಡಾಕ್ಟರರು "ನಾನಾಗ್ಲೇ ಅವನನ್ನು ನೋಡ್ಲಿಕ್ಕೆ ಹೋಗಿದ್ದೆ. ಸುಧೀರನ್ನ ಪರೀಕ್ಷೆಯೂ ಮಾಡ್ದೆ. ಬೇರೆ ಏನೂ ಅಲ್ಲ, ಮತ್ತದೇ ಟಾನ್ಸಿಲ್ಸ್ ಸಮಸ್ಯೆ" ಎಂದು ಹೇಳಿದರು.

ಸೀಮಾಳಿಗೆ ಎಡವಿ ಬಿದ್ದಂತಾಯ್ತು. ಆ ಮನೆಯಲ್ಲಿ ತಾನೀಗ ವಾಸಿಸುವುದಿಲ್ಲ ಎಂದು ಡಾಕ್ಟರರಿಗೆ ಹೇಳಲು ಮರೆತಿದ್ದಳು. ಸುಧೀರ ಕೂಡಾ ಹೇಳಿರಲಿಕ್ಕಿಲ್ಲ.

"ನನ್ನ ಪ್ರಕಾರ ಆ ಟಾನ್ಸಿಲ್‌ಗಳನ್ನ ಆಪರೇಷನ್ ಮಾಡಿ ಕಿತ್ತಿ ಹಾಕಬೇಕು. ಆದರೆ ಅವನು ನನ್ನ ಮಾತೆಲ್ಲಿ ಕೇಳ್ತಾನೆ? ನಿನ್ನ ಜೋಡಿ ಅದರ ಬಗ್ಗೆ ವಿಚಾರ ಮಾಡಿ, ನೀನು ಹಠ ಮಾಡಿದ್ರೆ ಮಾತ್ರ ಒಪ್ಕೊಳ್ತೀನಿ ಅಂತ ಹೇಳಿ ಹೋದ"

ಸುಧೀರ ಆಪರೇಷನ್‌ಗೆ ಒಪ್ಪುವುದಿಲ್ಲವೆಂದು ಅವಳಿಗೆ ಚೆನ್ನಾಗಿ ಗೊತ್ತು. ಬೇಕಾದರೆ ನೋವಿನಿಂದ ನರಳಿಯಾನು, ಆದರೆ ಆಪರೇಷನ್‌ಗೆ ಒಪ್ಪುವುದಿಲ್ಲ. ಇಂತಹ ವಿಷಯಗಳಲ್ಲಿ

ಅವನು ನಿಜಕ್ಕೂ ಅಂಜುಪುಕ್ಕ. ಆ ಟ್ಯಾನ್ಸಿಲ್‌ಗಳಿಗೆ ಗ್ಲಿಸರಿನ್ ಹಾಕೋದಕ್ಕೆ ಅವನು ಮಾಡುತ್ತಿದ್ದ ಹಾಹಾಕಾರ ಅವಳಿಗೆ ಚೆನ್ನಾಗಿ ನೆನಪಿದೆ. ಅವನ ಎದೆಯ ಮೇಲೆ ಕುಳಿತು, ಅವನು ಮಿಸುಕಾಡದಂತೆ ಎರಡೂ ಕೈಗಳನ್ನು ಕಾಲಲ್ಲಿ ಹಿಡಿದು, ''ಏಯ್, ಸ್ವಲ್ಪ ಸಹಿಸ್ಗೊಂಡು ಗ್ಲಿಸರಿನ್ ಹಚ್ಚಲಿಕ್ಕೆ ಬಿಡು. ಇಲ್ಲಾ ಅಂದ್ರೆ ಇಡೀ ಬಾಟಲ್ ಗ್ಲಿಸರಿನ್ನನ್ನು ನಿನ್ನ ಗಂಟಲಿಗೆ ಸುರಿದುಬಿಡ್ತೀನಿ ನೋಡು! ಬಾಯಿ ತೆಗಿ, ತೆಗಿಯೋ...''

ಟ್ಯಾಕ್ಸಿ ಅವಳ ಬಂಗಲೆಯ ಮುಂದೆ ಬಂದು ನಿಂತಿತು. ಡ್ರೈವರಿಗೆ ಹಣ ಕೊಡಲೆಂದು ಪರ್ಸಿಗೆ ಕೈ ಹಾಕಿದಾಗ, ಮತ್ತೊಮ್ಮೆ ಸುಧೀರನ ಕೀಲಿ ಕೈ ತಾಕಿತು. ವಾಚ್‌ಮನ್ ಕಾರಿನ ಬಾಗಿಲನ್ನು ತೆಗೆಯುತ್ತಾ ''ಕೊಚಿನ್‌ನಿಂದ ಸಾಹೇಬರ ಫೋನ್ ಬಂದಿತ್ತಮ್ಮ. ಈವೊತ್ತು ಬರಂಗಿಲ್ಲಂತೆ. ಮತ್ತೆ ರಾತ್ರಿ ನಿಮಗೆ ಫೋನ್ ಮಾಡ್ತೀನಿ ಅಂತ ಹೇಳ್ಯಾರೆ'' ಎಂದ.

ಒಮ್ಮೆಲೆ ನೂರಾರು ಆಲೋಚನೆಗಳಿಂದ ಅವಳ ತಲೆ ತುಂಬಿಹೋಯ್ತು. ಸುಧೀರ್ ಏನು ಯೋಚಿಸಿರಬಹುದು? ಅವನು ನನ್ನನ್ನು ಹೇಗೆ ಭೇಟಿ ಮಾಡಲಿಕ್ಕೆ ಸಾಧ್ಯ? ನಿನ್ನೆಯಷ್ಟೇ ಅವನ ಆರೋಗ್ಯ ಸರಿಯಿಲ್ಲ ಅಂತ ಅವಳಿಗೆ ಗೊತ್ತಾಗಿದ್ದು. ಕಳೆದ ಒಂದು ವರ್ಷದಲ್ಲಿ ಅವಳು ಅವನನ್ನು ಒಮ್ಮೆ ಮಾತ್ರ ಭೇಟಿಯಾಗಿದ್ದಳು. ಅವಳೊಮ್ಮೆ ಟ್ಯಾಕ್ಸಿಯಿಂದ ಕೆಳಗಿಳಿಯುವಾಗ, ಸುಧೀರ ಟ್ಯಾಕ್ಸಿಗಾಗಿ ಅವಳ ಬಳಿ ಬಂದಿದ್ದ. ಅವಳ ಬಳಿ ಬರೀ ನೂರರ ನೋಟಿತ್ತು. ಟ್ಯಾಕ್ಸಿ ಡ್ರೈವರ್ ಚಿಲ್ಲರೆಗಾಗಿ ಗೊಣಗಾಡಿದಾಗ ಸುಧೀರ ತಾನು ಅವಳ ಪರವಾಗಿ ಹಣ ಕೊಡುವುದಾಗಿ ಹೇಳಿ ಆ ನೂರರ ನೋಟನ್ನು ಹಿಂತಿರುಗಿಸಿ ಕೊಟ್ಟು, ನಂತರ ಟ್ಯಾಕ್ಸಿಯೇರಿ ಹೊರಟು ಹೋಗಿದ್ದ.


ಆ ಘಟನೆಯ ನಂತರ ಈ ದಿನ ಮತ್ತೊಮ್ಮೆ ಅವಳ ಟ್ಯಾಕ್ಸಿ ಸುಧೀರನ ಮನೆಯ ಮುಂದೆ ನಿಂತಿತ್ತು.

ಲಿಫ್ಟ್‌ನಲ್ಲಿ ಅವನ ಮನೆಯಿರುವ ಮಜಲಿಗೆ ಬಂದಳು. ಬಾಗಿಲ ಮುಂದೆ ಒಂದೆರಡು ಕ್ಷಣ ಸುಮ್ಮನೆ ನಿಂತಳು. ತನ್ನ ಕಿವಿಗಳನ್ನು ಬಾಗಿಲಿಗೆ ಹಚ್ಚಿ ಆಲಿಸಿದಳಾದರೂ ಯಾವುದೇ ಸದ್ದು ಕೇಳಲಿಲ್ಲ. ಬಹುಶಃ ಅವನು ಮನೆಯಲ್ಲಿರಲಿಕ್ಕಿಲ್ಲ.

ಇದ್ದಕ್ಕಿದ್ದಂತೆ ಪಕ್ಕದ ಮನೆಯ ಬಾಗಿಲು ತೆಗೆದುಕೊಂಡು ಅವಳ ಕೆಲಸದ ಹುಡುಗನಾಗಿದ್ದ ಮುಂಡು ಅದರಿಂದ ಹೊರಬಂದ. ಅವಳನ್ನು ಒಂದು ರೀತಿಯ ತಿರಸ್ಕಾರದಿಂದ ನೋಡಿ ''ನಮಸ್ತೆ ಮೇಮ್‌ಸಾಬ್'' ಎಂದು ಹೇಳಿ ಅವಳನ್ನು ಹಾದು ಮೆಟ್ಟಿಲುಗಳ ಬಳಿ ಹೋದ.


ಲಿಫ್ಟ್ ಇನ್ನೂ ಅದೇ ಮಜಲಿನಲ್ಲಿ ಕಾಯುತ್ತಿತ್ತು. ತನ್ನೆಲ್ಲಾ ಧೈರ್ಯವನ್ನು ಕ್ರೋಢೀಕರಿಸಿ, ಬಾಗಿಲಿನ ಬೀಗವನ್ನು ತೆರೆದು, ಮೆತ್ತಗೆ ಮನೆಯೊಳಗೆ ಅಡಿಯಿಟ್ಟಳು. ಒಳಗೆ ಪ್ರವೇಶಿಸಿದ್ದೇ ಹಿಂಜರಿಕೆಯಿಂದ ಹಾಗೇ ನಿಂತುಬಿಟ್ಟಳು. ಎಲ್ಲಾ ಮೊದಲು ಅವಳು ಮನೆ ಬಿಟ್ಟಾಗ ಹೇಗಿತ್ತೋ ಹಾಗೇ ಕಂಡು ಬಂದವು. ಅಲ್ಲಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಆದಂತೆ ಕಂಡು ಬಂತು. ನೆಲದ ಮೇಲೆ ಬಿದ್ದಿದ್ದ ತಲೆದಿಂಬನ್ನು ಮೇಲೆತ್ತಿಡಲು ಬಗ್ಗಿದಾಗ ಸುಧೀರನ ರೂಮಿಂದ ಹೆಣ್ಣಿನ ನಗುವೊಂದು ತೂರಿ ಬಂತು. ಆ ಹೆಣ್ಣು ''ಸ್ವಲ್ಪ ಔಷಧಿ ನಿನ್ನ ಟಾನ್ಸಿಲ್ಸ್‌ಗೆ ಹಚ್ಚಲಿಕ್ಕೆ ಬಿಡೋ, ಪ್ಲೀಜ್. ಸರಿಯಾಗಿ ಹಚ್ಚಿಸ್ಕೋ. ಇಲ್ಲಾಂದ್ರೆ...'' ಎಂದು ಹೇಳುತ್ತಿತ್ತು.

ಅನಂತರ ಸುಧೀರನ ಕೆಮ್ಮು ಮತ್ತು ಅವಳ ನಗು ತೂರಿ ಬಂದವು. ಸೀಮಾ ನಿಧಾನಕ್ಕೆ ಹಿಂತಿರುಗಿ, ಬಾಗಿಲನ್ನು ಮುಚ್ಚಿ, ಲಿಫ್ಟ್ ಬಳಿ ನುಗ್ಗಿದಳು. ಲಿಫ್ಟ್ ಕೆಳಗಿಳಿಯಲಾರಂಭಿಸಿದಾಗ ಅವಳಿಗೆ ತಾನು ಕೀಲಿ ಕೈಯನ್ನು ಬಾಗಿಲಿಗೇ ಮರೆತು ಬಂದಿದ್ದು ನೆನಪಾಯ್ತು! ಕೊನೆಗೂ ಅದು ಎಲ್ಲಿ ಸೇರಬೇಕೋ ಅಲ್ಲಿ ಸೇರಿಯಾಗಿತ್ತು. ಮತ್ತೆ ಅವಳು ತನ್ನ ಪರ್ಸಿನಲ್ಲಿ ಕೈ ಹಾಕಿದಾಗ ಅದು ಕೈಗೆ ತಾಕುತ್ತದೆಂಬ ಆತಂಕವಿನ್ನಿಲ್ಲ!



ಸೂತಕವಿತ್ತೆ ಅವರ ಮುಖಗಳಲ್ಲಿ

ಹೆಣ ಸುಟ್ಟು ಬಂದ ಸೂತಕವಿತ್ತೆ
ಅವರ ಮುಖಗಳಲ್ಲಿ
ಮಳೆ ನಿಂತ ಮೇಲೆ ಗಾಳಿಗೆ
ಅಲುಗದೆ ನಿಂತಿವೆ ಮರಗಳು
ಇಡೀ ವ್ಯೋಮ ಮಂಡಲವನೆ
ಆವರಿಸಿರುವ ಅಖಂಡ ನಿರ್ಲಿಪ್ತವೆ
ಮನೆ ಮಾಡಿನಿಂದಿಳಿದ
ಕೊನೆಯ ಮಳೆ ಹನಿಗಳಿಗೆ
ಅವರ ನೀರವ ಮುಖಗಳನೆ
ತೋಯಿಸಬೇಕೆಂದಿರಲಿಲ್ಲ
ತುಯ್ಯುವ ಮಳೆಗಾಳಿಯಲ್ಲಿ
ಬರಿ ಮೈಗಳಲ್ಲಿ ಅವರೆಲ್ಲ
ಬಂದಾಗ ಉಳಿದವರು
ಕರುಳಬಳ್ಳಿ ಕತ್ತರಿಸಿಟ್ಟಂತೆ
ಯಾಕೆ ಬಿಡದೆ ಹುಯಿಲಿಟ್ಟರು?
ಹೆಗಲಿಗೆತ್ತಿದಾಗ ಅತ್ತ ತಾಯಿ
ಸುಟ್ಟು ಮರಳಿ ಬಂದವರ ಮುಖಗಳ
ಸುಮ್ಮನೆ ದಿಟ್ಟಿಸಿದಳು.
ಬಂದವರೆಲ್ಲ ಮಿಂದು
ಆರಿಸಿಕೊಂಡರು ದಾವರಗಳ
ತಣಿಸಿಕೊಂಡರು ದಣಿವು
ಉಂಡು ಬಿಸಿಗಂಜಿ,
ಉಪ್ಪಿನಕಾಯಿ
ಸೂತಕವಿತ್ತೆ ಅವರ ಮುಖಗಳಲ್ಲಿ
ಕೂತ ಎಲ್ಲರ ಕಣ್ಣಿಗೂ ಆಚೆ
ರಸ್ತೆಯ ಕೊನೆಯ ಸಾಲು ಮರಗಳು
ನಿಂತಿವೆ ಶ್ರಾವಣದ ಮಳೆಗೆ ಮಿಂದು




ಸಂದೀಪ ನಾಯಕ


ತಾಯಿಯಂತೆ

ಮಗನ ರಕ್ತ ಸುರಿವ ಗಾಯಕ್ಕೆ
ಹಚ್ಚಿದ ತೆಂಗಿನೆಣ್ಣೆಯ ಮದ್ದು
ಸೀರೆ ಹರಿದು ಕಟ್ಟಿದ ಬಟ್ಟೆ

ತಾಯಿ ಸತ್ತು ವರ್ಷಗಳಾದರೂ
ಮಾಯ್ದ ಗಾಯದ ಕಲೆಯೊಂದಿಗೆ
ನೋವಾಗಿ ಉಳಿದುಕೊಂಡಿದೆ.

ನೆನಪಾದಾಗಲೆಲ್ಲ ಅದ
ಮುಟ್ಟಿ ನೇವರಿಸುವನು
ಆ ಗಾಯ ಈಗ ತಾಯಿಯಂತೆ





ಅವಳಿದ್ದಲ್ಲಿಗೆ

ನಿಂತಿದ್ದಾಳೆ ರಸ್ತೆ ಪಕ್ಕದ
ಮರಕ್ಕೆ ಒರಗಿ
ಸಡಿಲ ಕೂದಲ ಎತ್ತರದ ಹುಡುಗಿ
ಅವಳಿಂದ ದೂರ
ಸರಿಯಲಾರೆವು ಎಂಬಂತೆ
ಸುತ್ತಲಿನ ಜನ
ಒಂದು ಚಣ, ಎಂದರೆ
ಒಂದೇ ಚಣ ನಿಂತು
ಮುಂದೆ ಚಲಿಸಿದರು

ಸ್ಪರ್ಶ


ಕೂತಲ್ಲಿ ಕೂರದೆ ಅತ್ತಿತ್ತ ಹಾರಿ
ಬೇಲಿಯ ಮೇಲೆ ತೇಲಿ
ಇಳಿಯಿತು ಪಂಚರಂಗಿ ಚಿಟ್ಟೆ


ಅದು ಕೂರುವವರೆಗೆ
ಸದ್ದು ಮಾಡದೆ ಕಾದ ತರಳೆ
ರೆಕ್ಕೆಯ ನೋವಾಗದಂತೆ
ಹಿಡಿದಳು ಎರಡೇ ಬೆರಳಲ್ಲಿ

ಅವಳ ಮೈಯ ಮೇಲಿನ ಕಪ್ಪು
ಮಚ್ಚೆಯ ಚಿಕ್ಕ ಗೋಲಗಳು-
ಕೈಯ ಬೆರಳುಗಳ ನುಣುಪು-
ಚಿಟ್ಟೆಯ ಚಡಪಡಿಸುವ ರೆಕ್ಕೆಗಳಿಗೆ

ಸಡಿಲ ಬೆರಳುಗಳ ನಡುವಿನಿಂದ
ಯಾವ ಮಾಯದಲ್ಲೋ
ಜಾರಿ ತಪ್ಪಿಸಿಕೊಂಡ ಚಿಟ್ಟೆ
ಉಳಿಸಿಹೋಯಿತು ಅದೇ
ಬಣ್ಣದ ಗಳಿಗೆ

ಅವಳ ಮೈಯಲ್ಲೀಗ
ಚಿಟ್ಟೆಯ ಚಂಚಲತೆ






ಜಾವೇದ್ ಅಖ್ತರ್




"ನಿಜವಾದ ಖುಷಿ, ಸರಿ ಇರುವುದರಲ್ಲಿ ಇದೆ"



'ಹಾಥಿ ಮೇರೆ ಸಾಥಿ' 'ದೀವಾರ್' 'ಶೋಲೆ' ಚಿತ್ರಗಳ ಕಥೆ, ಚಿತ್ರಕಥೆ, ಸಂಭಾಷಣೆಗೆ ಹೆಸರಾದ 'ಸಲೀಂ - ಜಾವೇದ್' ಜೋಡಿಯ ಜಾವೇದ್ ಅಖ್ತರ್ ಕ್ರಮೇಣ ಬೇರೆಯಾಗಿ 'ಸಾಗರ್', 'ಬೇತಾಬ್'ಗಳನ್ನು ಬರೆದರು. ತೊಂಬತ್ತರ ದಶಕದಲ್ಲಿ ಹಠಾತ್ತನೆ ''1942 ಎ ಲವ್ ಸ್ಟೋರಿ'- ಯಿಂದ ಯಶಸ್ವಿ ಗೀತರಚನಾಕಾರರಾಗಿ ಮಿಂಚುತ್ತಿದ್ದಾರೆ. ಅತ್ಯುತ್ತಮ ಕವಿಯಾಗಿದ್ದ ಜಾನಿಸಾರ್ ಅಖ್ತರ್ ಅವರ ಮಗ ಜಾವೇದ್ ಕಳೆದ ವರ್ಷ 'ತರ್ಕಶ್' ಎಂಬ ಕವನ ಸಂಗ್ರಹ ಹೊರತಂದರು. ಸಿನಿಮಾ ಮಾಧ್ಯಮದಲ್ಲಿ ಅಷ್ಟಾಗಿ ಅಭಿವ್ಯಕ್ತಗೊಳ್ಳದ ಅವರ ಕಾವ್ಯ ವ್ಯಕ್ತಿತ್ವ ಈ ಸಂಕಲನದಲ್ಲಿ ಪ್ರಕಟಗೊಂಡಿತು.

ಅಖ್ತರ್ ಕವನಗಳನ್ನು ಕನ್ನಡಕ್ಕೆ ಅನುವಾದಿಸಿರುವ ಡಾ.ಮ. ಕನಕ ಇಲ್ಲಿ ಕವಿಯ ಜೊತೆ ಮಾತನಾಡಿದ್ದಾರೆ. ಮುಂಬಯಿ ನಿವಾಸಿಯಾಗಿರುವ, ಮಲೆನಾಡಿನ ಕನಕ ಹಿಂದಿ, ಕನ್ನಡ ರಂಗಭೂಮಿ ಮತ್ತು ಟೆಲಿವಿಜನ್‌ಗಳಲ್ಲಿ ಸಕ್ರಿಯರಾಗಿರುವ ಕಲಾವಿದೆ. ಅವರ ಎರಡು ಕವನ ಸಂಕಲನಗಳು ಪ್ರಕಟವಾಗಿವೆ.



ನೀವೊಬ್ಬ ಹೆಸರುವಾಸಿಯಾದ ಸಿನೆಮಾ ಬರಹಗಾರರು ಜೊತೆಗೆ ಸೂಕ್ಷ್ಮ ಸಂವೇದನೆಯ ಕವಿ ಕೂಡಾ. ಈ ಎರಡು ಮುಖಗಳಲ್ಲಿ ನಿಮಗೆ ಯಾವುದು ಹೆಚ್ಚು ತೃಪ್ತಿಕರವಾಗಿದೆ?

ಮೊದಲನೆಯದಾಗಿ ನಾವು ತಿಳಿಯಬೇಕಾದ್ದು ಏನೆಂದರೆ ಬದುಕಿನಲ್ಲಿ ಪ್ರತಿಯೊಬ್ಬರೂ ಹಲವು ಪಾತ್ರಗಳನ್ನು ನಿರ್ವಹಿಸುತ್ತಿರುತ್ತೇವೆ. ಸಂಗೀತ ರಚನಾಕಾರ, ಕವಿ ಮತ್ತು ಈ ಎರಡಲ್ಲದೆ ಇನ್ನೂ ಹಲವು ಪಾತ್ರಗಳನ್ನು ನಾನು ನಿರ್ವಹಿಸುತ್ತೇನೆ. ಎರಡೂ ಒಟ್ಟಿಗೆ ಆಗಿರುವುದು ಒಂದು ಅಸಾಮಾನ್ಯ ಕ್ಲಿಷ್ಟತೆಯುಳ್ಳ ಅಥವಾ ವಿರೋಧಾಭಾಸದ ಸನ್ನಿವೇಶವೆಂದು ಪರಿಗಣಿಸಬೇಕಾಗಿಲ್ಲ.

ಈ ಪಾತ್ರಗಳು ಒಂದಕ್ಕೊಂದು ವಿರುದ್ಧವಲ್ಲದೆ ಬದ್ಧವಾಗಿರುವುದರಿಂದ ತೃಪ್ತಿ ಯಾವ ಹೊತ್ತಿನಲ್ಲಿ ಏನನ್ನು ಮಾಡುತ್ತಿರುವೆವೋ ಅದರಲ್ಲಿದೆ. ನನಗೆ ಅನ್ನಿಸುತ್ತದೆ, ಏನನ್ನು ಮಾಡುತ್ತೇವೆ ಎನ್ನುವುದಕ್ಕಿಂತ ಹೇಗೆ ಮಾಡುತ್ತೇವೆ ಎನ್ನುವುದು ನಮ್ಮ ತೃಪ್ತಿಯನ್ನು ನಿರ್ಧರಿಸುತ್ತದೆ.

ಜನಪ್ರಿಯ ಸಿನಿಮಾದ ಮುಖ್ಯ ಧಾರೆಯಲ್ಲಿ ನಿಮಗೆ ರಾಜಿ ಮಾಡಿಕೊಳ್ಳಬೇಕಾಗುತ್ತದೆಯೇ?

ಪ್ರಾಮಾಣಿಕವಾಗಿ ಹೇಳಬೇಕೆಂದರೆ ಹೌದು. ಆದರೆ ನಾನು ಅದಕ್ಕೆ ಅಷ್ಟೇ ಪ್ರಾಮಾಣಿಕತೆಯಿಂದ ಸೇರಿಸುವುದೇನೆಂದರೆ ನೀವು ಸಮೂಹ ಮಾಧ್ಯಮವಾದ ಮುಖ್ಯಧಾರೆ ಸಿನಿಮಾದಲ್ಲಿರುವಾಗ ನಿಮ್ಮಿಂದ ಕೇಳುಗರ, ಓದುಗರ, ದರ್ಶಕರ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವನ್ನು ಕಡೆಗಣಿಸಲಾಗುವುದಿಲ್ಲ.

ನೀವಿಲ್ಲಿ ವಿಭಿನ್ನ ದೃಷ್ಟಿಕೋನದ ವಿವಿಧ ಜನರೊಂದಿಗೆ ಏಕಕಾಲಕ್ಕೆ ಸಂವಾದದಲ್ಲಿ ತೊಡಗಿರುತ್ತೀರಿ ಮತ್ತು ಹೇಗೆ ಹೇಳಲಿದ್ದೀರಿ ಎಂಬ ಬಗ್ಗೆ ಆಲೋಚಿಸಬೇಕಾಗುತ್ತದೆ. ಅದರಿಂದ ಕೆಲವೊಂದು ಯೋಚನೆಗಳು ನಿಮಗೆ ತುಂಬಾ ಕ್ಲಿಷ್ಟವಾಗಿ ಕಾಣಬಹುದು, ಕೆಲವೊಂದು ತುಂಬಾ ತೊಡಕಾಗಿರಬಹುದು, ತುಂಬಾ ಅಮೂರ್ತವಾಗಿರಬಹುದು ಅಥವಾ ತುಂಬಾ ಸೂಕ್ಷ್ಮವಾಗಿರಬಹುದು. ನೀವು ಅವನ್ನೇ ತುಂಬಾ ಸರಳವಾಗಿಸಿ, sugar coated pills ಆಗಿ ಕೊಡಬಹುದು.

ನಿಮ್ಮ ಹೆಚ್ಚಿನ ಕವಿತೆಗಳಲ್ಲಿ ಒಂಟಿತನದ ವಿಷಾದ ಸ್ಥಾಯಿಭಾವವಾಗಿದೆ. ಇದು ನಿಮ್ಮ ಒಳದನಿಯೋ ಅಥವಾ ಪ್ರಯತ್ನಪೂರ್ವಕವೋ?

ನಾನು ವೃತ್ತಿಲೇಖಕನಾಗಿರುವುದರಿಂದ ಕೊಟ್ಟಂತಹ ಸಂದರ್ಭಕ್ಕೆ ಸರಿಯಾಗಿ ಮತ್ತು ಸಂಗೀತ ನಿರ್ದೇಶಕರು ಕೊಟ್ಟಂತಹ Tuneಗೆ ಸರಿಯಾಗಿ ಹಾಡುಗಳನ್ನು ಬರೆಯಬೇಕಾಗುತ್ತದೆ. ಈ ಸಾಹಿತ್ಯವನ್ನು ಬರೆಯುವಾಗ ಜನಸಾಮಾನ್ಯನಿಗೆ ನನ್ನ ಭಾಷೆ, ರೂಪಕ, ಉಪಮೆಗಳು ತಲುಪುತ್ತದೆಯೋ ಇಲ್ಲವೋ ಎಂಬುದನ್ನು ಗಮನದಲ್ಲಿಡಬೇಕಾಗುತ್ತದೆ. ಆಗೆಲ್ಲಾ ನಾನು ಇತರ ಎಲ್ಲಾ ವಿಷಯಗಳನ್ನೂ

ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಹಾಗಾಗಿ ನಾನು ನನ್ನ ಕವಿತೆಗಳನ್ನು ಬರೆಯುವಾಗ ಮಾತ್ರಾ ಪೂರ್ತಿ ನಾನಾ ಬರೆಯುವ ಹಕ್ಕನ್ನು ಪಡೆದಿದ್ದೇನೆ ಎಂದು ನಾನಂದುಕೊಂಡಿದ್ದೇನೆ. ಆಗ ನಾನು ನಾನಾಗಿಯೇ ಇರುತ್ತೇನೆ.

ಹೆಚ್ಚಾಗಿ ಸೃಜನಶೀಲ ಲೇಖಕರು ಮುಖ್ಯಧಾರೆ ಸಿನಿಮಾಕ್ಕೆ ಬರೆಯಲು ಸಂಕೋಚಪಡುತ್ತಾ ನೀವು ಈ ಥರದ ದ್ವಂದ್ವವನ್ನು ನಿಮ್ಮ ವೃತ್ತಿಜೀವನದಲ್ಲಿ ಎಂದಾದರೂ ಎದುರಿಸಿದ್ದೀರಾ?

ನನ್ನ ವಿಷಯದಲ್ಲಿ ಇದು ಪೂರ್ತಿ ಹಿಂದುಮುಂದಾಗಿದೆ. ನಾನು ತುಂಬಾ ಮೊದಲೇ ಕಮರ್ಶಿಯಲ ಬರಹಗಾರನಾಗಿಬಿಟ್ಟೆ. ನನ್ನ 'ಸೀರಿಯಸ್' ಬರವಣಿಗೆಯನ್ನು ತುಂಬಾ ನಂತರ ಶುರುಮಾಡಿದೆ. ಹಾಗಾ ನನ್ನ ಕೇಸಿನಲ್ಲಿ ಒಬ್ಬ ವೃತ್ತಿಬರಹಗಾರ ಸಾಹಿತ್ಯದತ್ತ ಬಂದಂತಾಯಿತು. ಇದಕ್ಕೆ ನಾನು ಕೊಡುವ ಒಂದ ಉದಾಹರಣೆ ಈಗ ನೆನಪಿಗೆ ಬರುತ್ತಾ ಇರುವುದು ಹೆಸರಾಂತ ಸಣ್ಣ ಕಥೆಗಾರ ಸಾದತ್ ಅಲೀ ಮಂಟೋ ಅವರು ಸ್ಕ್ರೀನ್ ಪ್ಲೇ ಬರವಣಿಗೆಯನ್ನು ತುಂಬಾ ಮೊದಲೇ ಪ್ರಾರಂಭಿಸಿದ್ದರು ಮತ್ತು ಸಾಹಿತ್ಯ ಬರಹಗಾರರಾದದ್ದು ನಂತರದಲ್ಲಿ.

ಜಾವೇದ್ ಅಖ್ತರ್ ಕವನಗಳು

ಒಗಟು


ನಾವಿಬ್ಬರೂ ಅಕ್ಷರವಾಗಿದ್ದೆವು
ಸಿಕ್ಕೆವು ಒಂದು ದಿನ
ಪದವಾಯಿತು
ಒಂದು ಅರ್ಥ ಪಡೆದೆವು
ನಂತರ ಏನಾಯಿತೋ ನಮ್ಮ ನಡುವೆ
ಈಗ ಹೇಗೆಂದರೆ
ಖಾನೆಯೊಳಗೊಂದು ಅಕ್ಷರ ನೀನು
ಇನ್ನೊಂದರೊಳಗೆ ಅಕ್ಷರ ನಾನು
ನಡುವೆ ಇವೆ ಅವೆಷ್ಟು ಖಾಲಿ
ಕ್ಷಣಗಳ ಖಾನೆಗಳು
ಮತ್ತೊಮ್ಮೆ ಯಾವುದೋ ಪದ ಹಬ್ಬಲಿ
ಮತ್ತೆ ನಾವಿಬ್ಬರೂ ಅರ್ಥ ಪಡೆಯೋಣ
ಅದು ಸಾಧ್ಯವಿದೆ
ಆದರೆ
ಯೋಚಿಸಬೇಕು
ಈ ಖಾಲಿ ಖಾನೆಗಳಲ್ಲಿ ಏನು ತುಂಬುವುದು

ನನ್ನ ಅಂಗಳ, ನನ್ನ ಮರ

ನನ್ನ ಅಂಗಳ
ಎಷ್ಟು ಹರವಾಗಿತ್ತು ಎಷ್ಟು ದೊಡ್ಡ
ಅದರಲ್ಲಿ
ನನ್ನೆಲ್ಲಾ ಆಟ
ರಾಶಿ ಆಗುತ್ತಿತ್ತು
ಅಂಗಳದ ಎದುರಿನ ಆ ಮರ
ಇತ್ತು ನನ್ನಿಂದ ತುಂಬಾ ಎತ್ತರ
ನನಗೆ ಭರವಸೆ ಇತ್ತು
ದೊಡ್ಡವನಾದಾಗ ನಾನು
ಈ ಮರದ ತುಟ್ಟತುದಿಯನ್ನು ಮುಟ್ಟುವೆ
ವರುಷಗಳ ಬಳಿಕ
ಮರಳಿದ್ದೇನೆ ಮನೆಗೆ
ನೋಡುತ್ತಿದ್ದೇನೆ
ಈ ಅಂಗಳ
ಎಷ್ಟು ಸಣ್ಣಗಿದೆ

ಸಂಗೀತ ರಚನಾಕಾರರಿಗೂ ಸಮಾಜದತ್ತ ಒಂದು ನೈತಿಕ ಜವಾಬ್ದಾರಿ ಎಂಬುದಿದೆ ಎಂದಾದರೆ, ಇಂದಿನ ಸಂಗೀತ ರಚನಾಕಾರರಿಗೆ ಸಧ್ಯದ ಪರಿಸ್ಥಿತಿಯಲ್ಲಿ ನೀವೇನು ಸಲಹೆ ಕೊಡುತ್ತೀರಿ?

ನಮಗೆಲ್ಲರಿಗೂ ಸಮಾಜದತ್ತ ಕೆಲವು ಜವಾಬ್ದಾರಿಗಳಿರುತ್ತವೆ. ಕಲಾವಿದರಿಗೆ ಈ ಜವಾಬ್ದಾರಿ ಹೆಚ್ಚಿರುತ್ತದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಯಾಕೆಂದರೆ ಜನರನ್ನು ತನ್ನತ್ತ ಸೆಳೆಯುವಂಥಾ, ತನ್ನನ್ನು ಕೇಳುವಂಥಾ, ನೋಡುವಂಥಾ ಮತ್ತು ಅವರು ಯೋಚಿಸುವಂತೆ ಮಾಡುವಂಥಾ ಪ್ರತಿಭೆ ಆತನಲ್ಲಿ ಇರುತ್ತದೆ. ಯಾವುದೇ ಶೀಘ್ರ, ಲಾಭಕ್ಕಾಗಿ ನಾವು ಅಭಿರುಚಿ ಇಲ್ಲದ, ಘನತೆ ಇಲ್ಲದ ಏನನ್ನೇ ಮಾಡಿದರೂ ಅದು ನಮಗೆ ನಿಜವಾದ ಖುಷಿಯನ್ನು ಕೊಡುವುದಿಲ್ಲ. ಹಾಗಾಗಿ ಇದು ತುಂಬಾ ಸರಳ. ನಿಜವಾದ ಖುಷಿ, ಸರಿ ಇರುವುದರಲ್ಲಿದೆ. ನಾನು ನನ್ನ ಎಲ್ಲಾ ಗೆಳೆಯರಲ್ಲಿ ನಿಜವಾದ ಖುಷಿಯನ್ನು ಬಯಸಬೇಕೆಂದು ಹೇಳುತ್ತೇನೆ, ಅದು ಅವರವರ ಆತ್ಮಸಾಕ್ಷಿಗೆ ವಿರುದ್ಧವಾದ ಕೆಲಸವನ್ನು ಮಾಡುವುದರಲ್ಲಿ ಖಂಡಿತವಾಗಿಯೂ ಇಲ್ಲ.




ದಂಗೆಯ ಮೊದಲು

ಇಂದು ಈ ನಗರದಲ್ಲಿ
ಪ್ರತಿಯೊಬ್ಬನೂ ಹೆದರಿರುವನೇಕೆ
ಮುಖವೇಕೆ ಪೇಲವ
ಗಲ್ಲಿಗಲ್ಲಿಗಳಲ್ಲಿ ಮೌನ
ಬೆಚ್ಚಿನ ಗಾಳಿ ಸಂಚಾರ
ಏಕೆ ಪರಿಚಿತ ಕಣ್ಣುಗಳಲ್ಲೂ ಈ
ಅಪರಿಚಿತ ಕ್ಷೀಣ ಪರದೆ
ನೀರವತೆಯ ಸರಪಳಿಯಲ್ಲಿ
ಬಿಗಿದಿಟ್ಟ ಅಪರಾಧಿಯಂತೆ ಈ ನಗರ
ಅಲ್ಲೊಬ್ಬ ಇಲ್ಲೊಬ್ಬ ದಾರಿಹೋಕ
ಸರಿದು ಹೋಗುತ್ತಾನೆ
ಭಯದ ಧೂಳಿನಲ್ಲಿ
ಮುಬ್ಬಾಗಿವೆ ಏಕೆ ನೋಟಗಳು
ಸಂಜೆ ಕೂಳಿಗೆ ಗೇಯಲು
ಮನೆಯಿಂದ ಹೊರಬಿದ್ದ ಕೆಲಮಂದಿ
ಮನೆಯತ್ತ ತಿರುಗಿ ನೋಡುವರೇಕೆ
ಇಂದು ಬಜಾರಿನಲ್ಲೂ
ಪರಿಚಯದ ಆ ಗುಲ್ಲಿಲ್ಲ
ಈ ನೆಲ ಗಾಜಿನದೆಂಬಂತೆ
ನಡೆಯುವರು ಎಲ್ಲ
ಕಣ್ಣು ತಪ್ಪಿಸುವರೇಕೆ ಒಬ್ಬರಿಗೊಬ್ಬರು
ನಿರ್ಭಿಡೆಯ ಮಾತಿಲ್ಲ
ಉಸಿರು ಬಿಗಿಹಿಡಿದಂತೆ
ಇಂದು ಈ ನಗರ
ಭಯಗೊಂಡ ಮಗುವಂತೆ
ತನ್ನ ನೆರಳಿಗೇ ಹೆದರಿದೆ

ಪಂಚಾಂಗ ನೋಡಿ
ಇಂದೇನೋ
ಹಬ್ಬವಿರಬೇಕು

ಕನ್ನಡಕ್ಕೆ: ಕನಕ



ಜಯಶ್ರೀ


ದೋಣಿ


ಮನೆಯಂಗಳದಿ ಮೋಡ
ಮಳೆ ಸುರಿಸಿದಾಗಮ್ಮ
ತೇಲಿ ಬಿಟ್ಟಳು ಪುಟ್ಟ ಕಾಗದದ ದೋಣಿ
ನನ್ನ ಹೆಸರಿಟ್ಟು
ದೀಪ ಸಣ್ಣದು ಮಾಡಿ
ಬಿಚ್ಚಿ ಕುಳಿತಳು
ಹಗಲು ಕಟ್ಟಿಟ್ಟ ಚಿಕ್ಕಿ ಗಂಟು.
ಕರುಣೆ ಕೆನೆಗಟ್ಟಿದಂಥ ಕಣ್ಣಿನ ಹಿಂದೆ
ಅಪ್ಪಳಿಸಿ ಭೋರ್ಗರೆವ
ಕೊನೆಯಿರದುಷ್ಟು ಕಡಲನು ಕಂಡ
ಚಿಕ್ಕ ನಾವೆಗೆ ನನ್ನ ಹೆಸರಿತ್ತು
ಆ ನಾವೆ
ನನ್ನೆದೆಯ ತಳಕಿಳಿಯಿತಿಂದು
ಅರಿವಿನಂತಃಸಾಕ್ಷಿ ಮೌನವಾಯ್ತು.

ಅಕ್ಕ

ಅಂದು ಹಾದಿ ಬದಿ ಹುಣಚೆ ಹೂವಿ
ಹೊಡೆದಾಡಿ
ಮತ್ತೊಮ್ಮೆ ಮನೆಗೆಲಸಕ್ಕೆ ಜಗಳ ಹೂಡಿ
ಅಪ್ಪನ ಮಧ್ಯಸ್ಥಿಕೆಯಲಿ ಪೆಟ್ಟು ತಿಂದ ಈ ಅಕ್ಕ
ಇಂದು ತವರಿಗೆ ಬಂದಾಗ ಮಿಂದು
ಮೊದಲೊಮ್ಮೆ ತಾಯಿ ಪೂಜಿಸಿದ ಗೌರಿ
ದೀಪವಿಟ್ಟು
ತಲೆಬಾಗಿ ಮುಖವೆತ್ತಿದಾಗ
ಆಗಷ್ಟೆ ತಿಕ್ಕಿ ತೊಳೆದಿಟ್ಟ
ಬಿಂದಿಗೆಯ ತುಂಬ ಹೊಳೆವ ಸೀನೀರು.
ನಸು ನರೆತ ಮುಂದಲೆಗೆ
ತುಂಬು ಕುಂಕುಮದೊಳಗೆ
ಸಕಲ ಬಳಗವ ಪೊರೆವ
ತಾಯ್ತನದ ಹಿರಿಮೆ
ತೊಡೆದಿರುವ ಅರಿಷಿಣದ ಕೆನ್ನೆಯಲಿ ಕಣ್ಣನಲಿ
ಸರ್ವ ಕ್ಷೇಮಕ್ಕಾಗಿ ಮೊರೆವ ಕರುಣೆ
ಹುಟ್ಟಿ ಬೆಳೆದಿಹ ಮನೆಯ
ಹುಲ್ಲಿಗೂ ಸಹಿತಾಗಿ
ಶುಭ ಬೇಡುತಿರುವ ಛಾಯೆ
ಮತ್ತೆ ಬಂದಿರುವಳೆ ಮಡಿದ ತಾಯಿ!

ಮನಸು ನಿಬ್ಬೆರಗಾಗಿ
ನಮಿಸಿ ನಿಂತಿತು ಜೀವ
ಪಕ್ವತೆಯ ಪಡೆವ ಪರಿಗೆ.





ಅಂಚು

ಸವೆಸವೆದು ಪಿಸಿಯಿತು
ಬೆಟ್ಟವನಿಳಿದು ಬರುವಾಗುಟ್ಟ ಸೀರೆ
ಸೆರಗಿನಲಿ ಅಂಚಿನಲಿ ಒಡಲಿನಲಿ
ಚಂದಿ ಚೂರಾಯಿತು
ಮದರಂಗಿ ಬೆರಳ್ಚಿಣೆದ ಮೂಕ ನವಿಲು
ತೊಟ್ಟಿಲಿನ ಕೊನೆಗೆ
ಜೀವ ಹಿಡಿದಿತ್ತೊಂದು ಚೂರು.

ನಾನೀಗ ನನ್ನ ಹೆಸರು ದನಿ
ಮಾಟ ನೋಟ ಮಾತು ಬಣ್ಣಗಳ
ಹುಗಿದುಕೊಂಡಿರುವ ಗೋರಿ
ನಾನೀಗ ನನ್ನದೇ ಗೋರಿ
ನಿನ್ನ ಪ್ರೀತಿಯ ವೃಕ್ಷ
ಸುರಿಸುವುದು ಹೂವುಗಳ
ದಿನಾ ಎಲ್ಲೆ ಮೀರಿ.


ಹನಿ

ಉದುರಿದ ಗರಿಯೊಳಗಿತ್ತೀ
ಹಾಡಿನ ನಿಃಶಬ್ದ
ಇಟ್ಟ ಹೆಜ್ಜೆಯಲಿತ್ತೀ
ಚಡಪಡಿಸುವ ನೆಲವು
ಉರುಳಿದ ಹನಿಯೊಳಗಿತ್ತೀ
ಬದುಕಿನ ಭಾರ.

ಸಾಂಪ್ರತ

ಮತ್ತೇನಕ್ಕಾ ಸಮಾಚಾರ ಹೇಗಿದ್ದೀಯಾ?
ಮುದ್ದುಗಳ ಹೊಂವರ್ಕು
ಪರೀಕ್ಷೆಯಲಿ ರ್‍ಯಾಂಕು
ಸಿಕ್ಕು ಬಿದ್ದಿದ್ದೀಯಾ
ಅಥವಾ ಎದ್ದಿದ್ದೀಯಾ
ಬರಲಿ ಬಿಡು ಕಡಿಮೆ ಗುಣ ಒಂದೆರಡು
ಅಂಜಿಸದಿರು ಅಪರಂಜಿಯನು
ಮಡಿಕೆ ಕೆಟ್ಟಿಲ್ಲವಲ್ಲ ಭಾವನುಡುಪು?
ಕ್ಷೇಮವೆ ಸೋಪು ಶಾಂಪು?
ಅಕ್ಕಾ ಕೋಪಿಸದಿರು
ಇರದೆ ಉಂಟೆ
ಈ ಸರಕೆಲ್ಲ ನಮ್ಮ ಗಾಡಿಯಲೂ

ಮತ್ತೇನು ದೊಡ್ಡಕ್ಕನ ಸಮಾಚಾರ?
ನಿನಗವಳೇ ಸ್ವಲ್ಪ ಸಮೀಪ
ನಾನು ನೀನೆಲ್ಲ ಮುದ್ದಿಸಿದ ಅವಳ ಗೊಂಬೆಗಳು
ಗಣಕ ಯಂತ್ರಗಳನೇರಿ
ಹೊರಟಿವೆಯಂತಲ್ಲ, ನಾಗಾಲೋಟ?
ಅಪ್ಪನ ಪತ್ರಿಕೆಯಲಿ
ಪ್ರಕಟವಾಗುತ್ತವೆ ಈ ಸುದ್ದಿಗಳೆಲ್ಲ
ಅಲ್ಲದಿರೆ ನನಗಾದರೂ
ಹೇಗೆ ಗೊತ್ತಾದೀತು ಇದೆಲ್ಲ?



ನಿಜವೇನೆ ಅಕ್ಕಾ
ಆಯಿತಂತೆ ಆರ್.ಸಿ.ಸಿ. ಗೋಡೆ
ನಿನ್ನ ಬಂಗಾರವೆಲ್ಲ ಇಟ್ಟಂಗಿ ಉಸುಕು
ಕಬ್ಬಿಣ ಸಿಮೆಂಟಾಯಿತಂತೆ
ನಿನ್ನ ಸಿಂಗಾರವೆಲ್ಲ
ಇರಲಿ ಬಿಡು ಏನಾದರೂ
ಆಗುತ್ತಿರುತ್ತದಲ್ಲಾ ಪರವಾ ಇಲ್ಲಾ.



ಶಬ್ದ ತೀರ

ಕಥೆಯ ಜೀವಸ್ವರ

ಜಾದೂಗಾರ, ಬಣ್ಣಬಣ್ಣದ ಕಾಗದಗಳ ಚೂರುಗಳನ್ನು ಬಿಡಿಬಿಡಿಯಾಗಿ ಜಗಿದು ನುಂಗುತ್ತಾನೆ. ನಂತರ ಬಾಯಿಂದ ಎಳೆಯೊಂದನ್ನು ಹಿಡಿದು ಸರಸರ ಎಳೆದಾಗ ಮೀಟರುಗಟ್ಟಲೆ ಬಣ್ಣದ ಚಂದದ ಕಾಗದದ ಸುರುಳಿ ಹೊರಬರುತ್ತಲೇ ಹೋಗುತ್ತದೆ.

ಬರವಣಿಗೆಯ ವಿಸ್ಮಯವೂ ಇಂಥದೇ. ಅಂತಃಕರಣವನ್ನು ಕಲಕಿದ, ಸಂವೇದನೆಯನ್ನು ಹಿಗ್ಗಿಸಿದ ಸಂಗತಿಗಳೆಲ್ಲ ಮನಸ್ಸಿನ ಮೂಸೆಯಲ್ಲಿ ತೆಪ್ಪಗೆ ಮಾಗುತ್ತಿರುತ್ತವೆ. ಕಂಡ, ಕೇಳಿದ ಸಂಗತಿಗಳೂ ಇಲ್ಲಿ ಪಾಕಗೊಳ್ಳುತ್ತಿರುತ್ತವೆ. ವಿಭಿನ್ನ ಅನುಭವಗಳ ಚಿಂದಿಗಳನ್ನಾಯುವ ಈ ಕಾಯಕ ಗುಪ್ತವಾಗಿ ಸಂವೇದನೆಯ ಹದದಲ್ಲಿ ನಡೆಯುತ್ತದೆ. ನಂತರ ಯಾವುದೋ ಪ್ರೇರಣೆಗೆ ಕೆರಳಲ್ಪಟ್ಟ ಎಳೆಯೊಂದನ್ನು ಹಿಡಿದೆಳೆದರೆ ಸಾಕು, ಆ ನೋಟದ ವಿನ್ಯಾಸಕ್ಕೆ ಸಂಬಂಧಪಟ್ಟ ವಿಭಿನ್ನ ವಿವರಗಳೆಲ್ಲ ಜಾದೂಗಾರನ ಕಾಗದದ ಸುರುಳಿಯಂತೆ ಹೊಂದಿಕೊಂಡು ಹೊರಬರತೊಡಗುತ್ತವೆ. ತರ್ಕಾತೀತವಾದ ಒಂದು ಬಂಧದಲ್ಲಿ ಈ ವಿವರಗಳು ಸೆರೆಯಾಗಿರುತ್ತವೆ. ಲೇಖಕ ನಡುವೆ ತಲೆಹಾಕಿದರೆ ಈ ಎಳೆ ತುಂಡಾಗಲೂ ಬಹುದು. ಆಗ ಮತ್ತೆ, ಹುರಿಹಾಕುವ ಕೆಲಸ.

ಕಥೆಗೆ ಅದರ ಸ್ವರ ಒದಗಿಬರುವುದು ಹೇಗೆ?

ಸುಮಾರಾಗಿ ಹೇಳುವುದಾದರೆ ನಮ್ಮ ಮನಸ್ಸಿ
ಬರಲು ವಿವರಗಳಿಗೆ ಎರಡು ದಾರಿಗಳಿವ
ಒಂದು, ತಲೆಯ ಮುಖಾಂತರ. ಹೀಗೆ ಬಂದ
ಒಂದು ಬಗೆಯ ವೃತ್ತ ಪತ್ರಿಕೆಯ ಸುದ್ದಿಯ
ರೂಪದಲ್ಲಿರುತ್ತವೆ. ಈ ಮಾರ್ಗ ಎಲ್ಲಾ ವಿದ್ಯಮಾ
ಗಳನ್ನು ಅತ್ಯಂತ ಎಚ್ಚರದಿಂದ 'ಬೌದ್ಧಿಕ ಮಾಹಿ
ಯಾಗಿಸುತ್ತಿರುತ್ತದೆ. ಕಂಬಾಲಪಳ್ಳಿಯಲ್ಲಿ ಸತ್ತವ
ಸಂಖ್ಯೆ, ಕೊಂದವರ ಜಾತಿ, ಭಸ್ಮಗೊಂಡ ಆ
ಪಾಸ್ತಿಯ ಕರಾರುವಾಕ್ಕಾದ ಬೆಲೆ, ಸಂತಾ
ಸೂಚಿಸಲು ಬಂದವರ ಹೇಳಿಕೆಗಳು... ಇತ್ಯಾದಿ.

ಇನ್ನೊಂದು, ಒಳ ದಾರಿ. ಇಲ್ಲಿ ಒಂದ
ಸನ್ನಿವೇಶ, ಸಂಗತಿ ಅಥವಾ ವಿಚಾರವನ್ನು ಮಾನ
ವೀಯ ನೆಲೆಯಲ್ಲಿ 'ಅನುಭವಿ'ಸುತ್ತೇವೆ. ಕಂಬಾ
ಪಳ್ಳಿಯಲ್ಲಿ, ಗತಿಸಿದ ಗಂಡನ ಅಂಗಿಯೊಂದನ
ಎದೆಗವಚಿಕೊಂಡು ಮೌನವಾಗಿ ಕೂತಿರು
ಹೆಂಗಸು, ಸಂತಾಪ ಸೂಚಿಸಲೆಂದು ಬಂದವರ
ಬೆವರು ಒರೆಸಲೆಂದು ಕರ್ಚೀಫಿಗಾಗಿ ಜೇಬಿ
ಕೈಹಾಕಿದಾಗ-ವಿಚಿತ್ರವಾದ ಆಸೆಯಿಂದ ಚುರು
ಕಾಗುವ ಸಂತ್ರಸ್ತರ ಕಣ್ಣುಗಳು... ನಮ್ಮನ್ನು ಕಾಡು
ಸಂಗತಿಗಳಾಗುತ್ತವೆ. ವಿಸ್ತೃತ ಮಾನವೀಯ
ತಳಮಳದಲ್ಲಿ ನಮ್ಮನ್ನು ಅಲ್ಲಾಡಿಸಿಬಿಡುವ ಈ
ದೃಶ್ಯಗಳು ಬರೇ ವಿವರಗಳಾಗುವುದಿಲ್ಲ, ನಮ

ಒಳಬಾಳುವೆಯ ಭಾಗವಾಗತೊಡಗುತ್ತವೆ. ಇವು ತಕ್ಕ ಕಾಲಕ್ಕೆ, ತಕ್ಕ ಪ್ರೇರಣೆಗೆ ಮೇಲೆದ್ದು ಒದಗಿ ಬಂದು ನಮ್ಮ ಬರವಣಿಗೆಗೆ ಭಾವಾರ್ಥ ತುಂಬಿ ಜೀವಂತವಾಗಿಸುತ್ತವೆ.

ಪ್ರವಾಸಿಗರಿಗೆ ತೋರಿಸುತ್ತಿರುವಾಗ ತಾನೂ ಮೊದಲ ಬಾರಿಗೆ ನೋಡುತ್ತಿರುವ ಟೂರಿಸ್ಟ್ ಗೈಡ್‌ನಂತೆ ಇರುತ್ತಾನೆ, ಕತೆಗಾರ. ಈತ ಈಸು ಕಲಿಯು ತ್ತಲೇ ನದಿ ದಾಟುವ ಈಜುಗಾರ. ಈತ ವಿನಮ್ರನಾದಷ್ಟೂ, ಪರವಶನಾದಷ್ಟೂ ಒಳ ಬಾಗಿಲುಗಳು ತೆರೆಯತೊಡಗುತ್ತವೆ. ಅನಾಮಿಕ ನಾದಷ್ಟೂ ಅವನ ವಿಶ್ವ ವಿಶಾಲವಾಗುತ್ತದೆ.

ಇತ್ತೀಚಿನ ಕತೆಗಳನ್ನು ನೋಡಿದಾಗ 'ಕತೆಗಳ ಫಾರ್ಮುಲಾ' ಒಂದು ತಯಾರಾಗಿಹೋಗಿದೆ ಎಂಬ ಆತಂಕವಾಗುತ್ತಿದೆ. ಒಣ ವೈಚಾರಿಕತೆಯಿಂದ ವೃತ್ತಪತ್ರಿಕೆಯ ಸುದ್ದಿಯ ನೆಲೆಯಲ್ಲಿ ಬದುಕನ್ನು ನೋಡುವುದೇ 'ಸಾಮಾಜಿಕತೆ', ಸರಳತೆ-ಸ್ಪಷ್ಟತೆ ಗಳನ್ನು ಬೇಕೆಂತಲೇ ತ್ಯಜಿಸಿ ಭಾಷಿಕ ನೆಲೆಯಲ್ಲಿ ಗಹನವಾಗಿ ಬರೆಯುವುದೇ 'ಗಹನತೆ', ಸೂಕ್ಷ್ಮ-ಸರಳ ಸಂಗತಿಗಳನ್ನು ಬರೆದರೆ ಅದು 'ಭಾವುಕತೆ'– ಎಂಬಂಥ ಕೆಲ ಮೂಢನಂಬಿಕೆಗಳು ನೆಲೆಯೂರು ತ್ತಿರುವಂತೆ ತೋರುತ್ತಿದೆ. ಒಬ್ಬ ನಡುವಯಸ್ಸಿನ ಪಾಲಕನಿಗೆ ಶಾಲೆಗೆ ಹೋಗುತ್ತಿರುವ ತನ್ನ ಮಕ್ಕಳ ಕುರಿತಾಗಿ ಇರುವ ಮಮತೆಯನ್ನೋ, ಭ್ರಷ್ಟ ತಂದೆತಾಯಿಗಳಿಂದಾಗಿ ಮನೆಯ ರೂಪವೇ ಬದ ಲಾಗುವಾಗ ಹದಿಹರೆಯದ ಮಕ್ಕಳು ಅನುಭವಿಸುವ ಮೂಕ ತಳಮಳವನ್ನೋ- ಬಿಂಬಿಸುವ ಕತೆಗಳ್ಯಾಕೆ ಬರುತ್ತಿಲ್ಲ? ಇಡೀ ದಿನ ಕ್ರಿಮಿನಲ್‌ಗಳ ಜೊತೆಗೇ ಇದ್ದು ಪ್ರತೀ ಸಂಜೆ ತನ್ನ ಕುಟುಂಬಕ್ಕೆ ಮರಳುವ ಪೊಲೀಸನೊಬ್ಬನ ದಾರುಣ ದ್ವಂದ್ವಗಳೇಕೆ ನಮ್ಮ ಕಥೆಗಳಿಗೆ ವಸ್ತುವಾಗುತ್ತಿಲ್ಲ? ತೀವ್ರವಾದ ಒಳ ಬಾಳಿನಿಂದ ಹೊಮ್ಮಬೇಕಾದ ಸಾಹಿತ್ಯ ಬರೇ ತಲೆಯಿಂದ ಹೊರಟಿದ್ದರಿಂದ ಹೀಗಾಯಿತೆ? ಅಥವಾ ಒಳದಾರಿಗಳನ್ನು ನಾವು ಬೇಕೆಂತಲೇ ಮುಚ್ಚಿಕೊಂಡಿದ್ದೇವೆಯೆ?

ಬದುಕಿನಲ್ಲಿ ನಮ್ಮ ರುಚಿ, ಬೆರಗು, ಮನೋಮೌನ ಹೆಚ್ಚಿದಾಗಲೇ ನಮ್ಮ ಬರವಣಿ ಗೆಯ ಗುಣಮಟ್ಟ ಹೆಚ್ಚುವುದು ಸಾಧ್ಯ. ಪಿಕಾಸೋ ನನ್ನು ನಿನ್ನ ಆದರ್ಶ ಯಾರು ಅಂತ ಕೇಳಿದಾಗ 'ಮಗು'-ಎಂದನಂತೆ. ಚಾಪ್ಲಿನ್ ''ಮಗುವಿಗೆ ಒಂದು ಬಕೆಟ್ ನೀರು, ಸಾಬೂನು ಕೊಡಿ ಮತ್ತು ಬಚ್ಚಲಲ್ಲಿ ಬಿಟ್ಟುಬಿಡಿ. ಆಗ ನೋಡಿ ನೊರೆಯಲ್ಲಿ ಮೂರು ಲೋಕವನ್ನೂ ಸೂರೆ ಮಾಡಬಲ್ಲ ಅದ್ಭುತ ಕಲಾವಿದನನ್ನು'' ಎಂದನಂತೆ.

ಕತೆಗಾರ ಬರವಣಿಗೆಯ ಹಂಗಿಲ್ಲದೆ ತೀವ್ರ ವಾಗಿ, ತನ್ನ ಇರವನ್ನು 'ಅನುಭವಿ'ಸಬೇಕಾದ್ದು ಮುಖ್ಯ. ತನ್ನದೇ ಆದ ಒಂದು ನಚ್ಚುಗೆಯ restless ಭಾವಪ್ರಪಂಚವನ್ನು ಅತ್ಯಂತ ಏಕಾಂಗಿ ಯಾಗಿ ಆತ ಕಟ್ಟಿಕೊಳ್ಳಬೇಕು. ಸುತ್ತಣ ಜೀವ ಜಾಲ ದೊಂದಿಗೆ ಅತ್ಯಂತ ಖಾಸಗಿಯಾದ, ಮೌನದ ನಂಟೊಂದು ಆತನೊಳಗೆ ರೂಪುಗೊಳ್ಳಬೇಕು. ನಂತರವೇ ಒಳಗಿನ ಸಹಜಸ್ವರಗಳು ಅವನ ಬರವಣಿಗೆಯಲ್ಲೂ ಹೊಮ್ಮಿಯಾವು.

ಜಯಂತ ಕಾಯ್ಕಿಣಿ



ಜೇಮ್ಸ್ ಥರ್ಬರ್



ಅಮೆರಿಕದ ಖ್ಯಾತ ಹಾಸ್ಯ ಸಾಹಿತಿ, ಪತ್ರಕರ್ತ, ರೇಖಾಚಿತ್ರ ಕಲಾವಿದ ಜೇಮ್ಸ್ ಥರ್ಬರ್ (1894-1961) ಸಮಾಜವನ್ನು ವಿಮರ್ಶಿಸಲು ವಿಡಂಬನೆ (Satyr)ಯ ಮಾರ್ಗ ಆಯ್ದುಕೊಂಡವನು. ಥರ್ಬರ್‌ನ ಪ್ರಾಣಿ ಜಗತ್ತಿನಲ್ಲಿ ನಾಯಿಗಳಿಗೆ ವಿಶೇಷ ಸ್ಥಾನ; ಆನಂತರ ಹೆಂಗಸರು, ಗಂಡಸರು ಮತ್ತಿತರ ಪ್ರಾಣಿಗಳು. ಗಂಡು-ಹೆಣ್ಣಿನ ಸಂಬಂಧದ ಬಗ್ಗೆ ಥರ್ಬರ್‌ನ ಅಂತರ್ದೃಷ್ಟಿ ಅಪೂರ್ವವಾದುದು. ಹೆಚ್ಚೂ ಕಡಿಮೆ ಇವನ ಬರಹಗಳಲ್ಲೆಲ್ಲ ಲೈಂಗಿಕ ಸಂಬಂಧಮೂಲದ ವಿಷಣ್ಣತೆ ಮತ್ತು ಪ್ರಾಣಿಪ್ರಸಕ್ತಿ ಮೂಲಧಾತುವಾಗಿರುತ್ತದೆಂದು ಹೇಳಬಹುದು. 'ಅಲಾರ್ಮ್ಸ್ ಅಂಡ್ ಡೈವರ್ಷನ್ಸ್.' 'ದಿ ಬೀಸ್ಟ್ ಇನ್ ಮಿ ಅಂಡ್ ಅದರ್ ಅನಿಮಲ್ಸ್', 'ಫರ್ದರ್ ಫೇಬಲ್ಸ್ ಫಾರ್ ಅವರ್ ಟೈಂ', 'ದಿ ಥರ್ಬರ್ ಆಲ್ಬಂ', 'ದಿ ಥರ್ಬರ್ ಕಾರ್ನಿವಾಲ್' 'ಥರ್ಬರ್ ಕಂಟ್ರಿ' 'ಥರ್ಬರ್ಸ್ ಡಾಗ್ಸ್', 'ದಿ ವೈಟ್ ಡೀರ್ ಮತ್ತು ಇ.ಬಿ. ವೈಟ್ ಜೊತೆ ಬರೆದ 'ಈಸ್ ಸೆಕ್ಸ್ ನೆಸಸರಿ?' ಇವುಗಳೊಂದಿಗೆ ಥರ್ಬರ್ 'ನ್ಯೂಯಾರ್ಕರ್'ನ ಸಂಸ್ಥಾಪಕ ಹೆರಾಲ್ಡ್ ರಾಸ್‌ನ ವೈಶಿಷ್ಟ್ಯಪೂರ್ಣ ಜೀವನ ಚರಿತ್ರೆ 'ದಿ ಇಯರ್ಸ್ ವಿತ್ ರಾಸ್' ಕೂಡ ಬರೆದಿದ್ದಾನೆ.

ವಾಲ್ಟರ್ ಮಿಟ್ಟಿ ಥರ್ಬರ್ ಸೃಷ್ಟಿಸಿದ ಪ್ರಖ್ಯಾತ ವ್ಯಕ್ತಿ; 'ದಿ ಸೀಕ್ರೆಟ್ ಲೈಫ್ ಆಫ್ ವಾಲ್ಟರ್ ಮಿಟ್ಟಿ' ಕತೆಯಲ್ಲಿ ಮಹಾ ಪೈಪೋಟಿಯ ವಾಸ್ತವ ಜಗತ್ತಿನಲ್ಲಿ ಸಂಕೋಚ ಸ್ವಭಾದವನೂ, ಮುಖ ಹೇಡಿಯೂ ಆದ ಮಿಟ್ಟಿ ಕೂತಲ್ಲಿ, ನಿಂತಲ್ಲಿ ಹಗಲುಕನಸುಗಳನ್ನು ಕಾಣುತ್ತಾ ಹೋಗುತ್ತಾನೆ. ಹೆಂಡತಿಯನ್ನು ಹೇರ್‌ಡ್ರೆಸ್ಸಿಂಗ್‌ಗೆಂದು ಪೇಟೆಗೆ ಕರೆದೊಯ್ಯುವ 'ಪಾಪದ ಗಂಡ'ನಾಗಿರುತ್ತಲೇ ದೊಡ್ಡ ಹಡಗಿನ ಕಮಾಂಡರನಾದಂತೆ, ಮಹಾಸ್ಪೆಷಲಿಸ್ಟ್ ವೈದ್ಯನಾದಂತೆ, ವೈರಿಪಡೆ ಹಿಮ್ಮೆಟ್ಟಿಸುವ ವೀರಯೋಧನಾದಂತೆ ಭ್ರಮಾಲೋಕದಲ್ಲಿ ತೇಲುತ್ತಾನೆ. ಈ ವೈನೋದಿಕ ಪ್ರಸಂಗಗಳನ್ನು ಥರ್ಬರ್ ಕಟ್ಟಿಕೊಡುವ ಬಗೆ ಅಪೂರ್ವ.

ಥರ್ಬರ್‌ನನ್ನು ಕನ್ನಡಕ್ಕೆ ಅನುವಾದಿಸಿರುವ ಎಂ.ಎಸ್.ಕೆ.ಪ್ರಭು ಸಹ ಈ ಬಗೆಯ ಫ್ಯಾಂಟಸಿ ತಂತ್ರಕ್ಕೆ, ಗಾಢ ವಿಷಣ್ಣತೆ ಹುದುಗಿಸಿಕೊಂಡಿರುವ ವಿನೋದದ ಶೈಲಿಗೆ ಮಾರುಹೋದವರು.

ಜೇಮ್ಸ್ ಥರ್ಬರ್

ವಾಲ್ಟರ್ ಮಿಟ್ಟಿಯ ರಹಸ್ಯ ಜೀವನ





"ನಾವೀಗ ಮುನ್ನುಗ್ಗುತ್ತಿದ್ದೇವೆ!" ಕಮಾಂಡರನ ಧ್ವನಿ ತೆಳುವಾದ ಮಂಜಿನಲ್ಲಿ ಹಲ್ಲಿಯನ್ನು ಮುರಿದಂತಿತ್ತು. ಅವನು ತನ್ನ ಸಂಪೂರ್ಣ ಸಮವಸ್ತ್ರವನ್ನು ಧರಿಸಿದ್ದ, ಒತ್ತೊತ್ತಾದ ಹೆಣಿಗೆಯಿಂದ ಅಲಂಕೃತವಾದ ಅವನ ಟೋಪಿ ಓರೆಯಾಗಿ ಬಾಗಿ ಅವನ ಬೂದು ಬಣ್ಣದ ಶೀತಲ ಕಣ್ಣಿನ ಮೇಲೆ ವಾಲಿತ್ತು. "ನನ್ನನ್ನು ಕೇಳಿದರೆ, ಈ ಬಿರುಗಾಳಿಯ ದೆಸೆಯಿಂದ ಮುಂದೆ ಹೋಗುವುದು ಅಸಾಧ್ಯ." "ನಾನು ನಿನ್ನನ್ನು ಕೇಳುತ್ತಾ ಇಲ್ಲ, ಲೆಫ್ಟ್‌ನೆಂಟ್ ಬೆರ್ಗ್" ಎಂದ ಕಮಾಂಡರ್. "ಪವರ್ ಲೈಟ್‌ಗಳನ್ನು ತಿರುಗಿಸಿ 8500ರವರೆಗೆ ಹೆಚ್ಚಿಸಿ ನಾವು ಮುನ್ನುಗ್ಗುತ್ತಿದ್ದೇವೆ! ಸಿಡಿಗುಂಡುಗಳ ಹೊಡೆತ ಹೆಚ್ಚುತ್ತಿತ್ತು. ಟ-ಪೊಕೆಟಾ - ಪೊಕೆಟಾ - ಪೊಕೆಟಾ- ಪೊಕೆಟಾ. ಪೈಲಟಿನ ಕಿಟಕಿಯ ಮೇಲೆ ಪಸರಿಸಿ ಹೆಪ್ಪುಗಟ್ಟುತ್ತಿದ್ದ ಮಂಜಿನತ್ತ ಕಮಾಂಡರ್ ದುರುಗುಟ್ಟಿಕೊಂಡು ನೋಡಿದ. ಅವನು ನಡೆದು ಬಂದು ಸಂಕೀರ್ಣವಾದ ಸೂಚಿಫಲಕದ ಸಾಲೊಂದನ್ನು ತಿರುಚಿದ. "ಎಂಟನೇ ನಂಬರ್ ಆಕ್ಸಿಲರಿ ಚಾಲೂ ಆಗಲಿ!" ಎಂದು ಕಿರುಚಿದ. "ಎಂಟನೇ ನಂಬರ್ ಆಕ್ಸಿಲರಿ ಚಾಲೂ ಆಗಲಿ!" ಲೆಫ್ಟಿನೆಂಟ್ ಬೆರ್ಗ್ ಪುನರುಚ್ಚಾರಣೆ ಮಾಡಿದ. ಮೂರನೇ ನಂಬರ್ ಫಿರಂಗಿ ಪೂರಾ ಸಾಮರ್ಥ್ಯದಿಂದ ಸಜ್ಜಾಗಲಿ!" ನೌಕಾಬಲದ ಎಂಟು ಎಂಜಿನ್‌ಗಳ ಹೈಡ್ರೋಪ್ಲೇನ್‌ನನ್ನು ರಭಸದಿಂದ ಹಾರಿಸುತ್ತಾ ಪಡೆಯ ಸದಸ್ಯರು ತಮ್ಮ ತಮ್ಮ ಕರ್ತವ್ಯಗಳಲ್ಲಿ ತೊಡಗಿ ಒಬ್ಬರನ್ನೊಬ್ಬರು ನೋಡುತ್ತಾ ಹಲ್ಲುಕಿರಿದರು. "ಈ ಖದೀಮ ಬಿಡೋದಿಲ್ಲ, ನಮ್ಮನ್ನು ನುಗ್ಗಿಸೇ ಬಿಡ್ತಾನೆ," ಎಂದು ಒಬ್ಬರಿಗೊಬ್ಬರು ಹೇಳಿಕೊಂಡರು. "ಈ ಖದೀಮ ಯಾವ ನರಕಕ್ಕೂ ಹೆದರೋ ಪ್ರಾಣಿ ಅಲ್ಲ."

"ಅಷ್ಟು ವೇಗವಾಗಿ ನಡೆಸಬೇಡ! ನೀನು ತುಂಬಾ ವೇಗವಾಗಿ ನಡೆಸ್ತಿದೀಯಾ, "ಮಿಸೆಸ್ ಮಿಟ್ಟಿ ಹೇಳಿದಳು. "ಅದ್ಯಾಕಷ್ಟೊಂದು ವೇಗವಾಗಿ ನಡೆಸ್ತಿದೀಯಾ?"


"ಹಾಂ?" ಎಂದ ವಾಲ್ಟರ್ ಮಿಟ್ಟಿ. ಅವನು ಪಕ್ಕದ ಸೀಟಿನಲ್ಲಿದ್ದ ತನ್ನ ಹೆಂಡತಿಯನ್ನು ಗಾಬರಿ, ಆಶ್ಚರ್ಯಗಳಿಂದ ನೋಡಿದ. ಅವಳು ಶುದ್ಧಾಂಗವಾಗಿ ಅಪರಿಚಿತಳಂತೆ, ಒಂದು ಗುಂಪಿನಲ್ಲಿ ನಿಂತು ತನ್ನತ್ತ ಅರುಚಿದ ಹೆಂಗಸೊಬ್ಬಳಂತೆ ಅವನಿಗೆ ಕಂಡುಬಂದಳು. "ಐವತ್ತೈದರವರೆಗೆ ಹೋಗಿದ್ದೆ ನೀನು" ಎಂದಳು ಅವಳು. "ನಲವತ್ತಕ್ಕಿಂತ ಜಾಸ್ತಿ ಹೋದರೆ ನನಗಾಗುವುದಿಲ್ಲ ಅನ್ನೋದು ನಿನಗೆ ಗೊತ್ತು.

ನೀನು ಐವತ್ತೈದನ್ನು ಮುಟ್ಟಿದ್ದೆ.'' ವಾಲ್ಟರ್ ಮಿಟ್ಟಿ, ಅವನ ಮನಸ್ಸಿನೊಳಗಡಗಿದ್ದ ಚಿರಪರಿಚಿತವಾದ ಆಕಾಶಯಾನ ಮಾರ್ಗದಲ್ಲಿ ಭೋರ್ಗರೆಯುವ ಎಸ್ ಎನ್ 202 ಹಾರಾಟದ ಇಪ್ಪತ್ತು ವರ್ಷಗಳ ಅನುಭವದ ಅರಿವಿನಲ್ಲಿ, ಮೌನವಾಗಿ ವಾಟರ್‌ಬರಿಯತ್ತ ಕಾರನ್ನು ಬಿಟ್ಟ. ''ನೀನು ಮತ್ತೆ ಉದ್ವಿಗ್ನನಾಗಿದ್ದೀ,'' ಎಂದಳು ಮಿಸೆಸ್ ಮಿಟ್ಟಿ. ಈಪೊತ್ತು ಡಾಕ್ಟರ್ ನಿನ್ನನ್ನು ನೋಡುವ ದಿನ. ಡಾ.ರೆನ್‌ಶಾ ಅವರಿಗೆ ನೀನು ತೋರಿಸಿ ಕೊಳ್ಳುವುದು ಒಳ್ಳೇದು ಅನ್ನಿಸುತ್ತೆ ನನಗೆ.'' ಅವನ ಹೆಂಡತಿ ಕೇಶಾಲಂಕಾರ ಮಾಡಿಸಿಕೊಳ್ಳುವ ಸ್ಥಳ ವಾದ ಒಂದು ಕಟ್ಟಡದ ಮುಂಭಾಗದಲ್ಲಿ ವಾಲ್ಟರ್ ಮಿಟ್ಟಿ ಕಾರನ್ನು ನಿಲ್ಲಿಸಿದ.

''ನಾನು ಹೇರ್ ಡ್ರೆಸ್ ಮಾಡಿಸಿಕೊಳ್ಳು ವಷ್ಟರಲ್ಲಿ ನೀನು ಹೋಗಿ ಓವರ್ ಶೂಗಳನ್ನು ತರೋದನ್ನು ಮರೀಬೇಡ'' ಎಂದಳು. ''ನನಗೆ ಓವರ್ ಶೂಗಳ ಅವಶ್ಯಕತೆಯೇನಿಲ್ಲ'' ಎಂದ ಮಿಟ್ಟಿ. ಅವಳು ತನ್ನ ಕನ್ನಡಿಯನ್ನು ಕೈ ಚೀಲದೊಳಕ್ಕೆ ಸೇರಿಸಿದಳು. ''ನಾವು ಅದನ್ನೆಲ್ಲಾ ಮಾತಾಡಿ ಮುಗಿಸಿಯಾಗಿದೆ,'' ಕಾರಿನಿಂದ ಹೊರ ಗಿಳಿಯುತ್ತಾ ಅವಳು ಹೇಳಿದಳು. ''ನೀನಿನ್ನೂ ಯುವಕ ಅಂದುಕೊಂಡಿದ್ದೀಯಾ?'' ಅವನು ಎಂಜಿನ್ನನ್ನು ಸ್ವಲ್ಪ ಜೋರು ಮಾಡಿದ. ''ನೀನು ಕೈಗವಸುಗಳನ್ನು ಯಾಕೆ ಹಾಕಿಕೊಳ್ಳುವುದಿಲ್ಲ ಅಂತೀನಿ? ನಿನ್ನ ಕೈಗವಸುಗಳನ್ನು ಕಳೆದುಕೊಂಡು ಬಿಟ್ಟಿದೀಯಾ?'' ವಾಲ್ಟರ್ ಮಿಟ್ಟಿ ಜೇಬಿಗೆ ಕೈಹಾಕಿ ಕೈಗವಸುಗಳನ್ನು ಹೊರಕ್ಕೆಳೆದು ಧರಿಸಿದ. ಅವಳು ರಸ್ತೆಯಲ್ಲಿ ತಿರುಗಿ ಕಟ್ಟಡದೊಳಹೊಕ್ಕಿ ದಾಗ ಅವನು ಕಾರನ್ನು ಮುಂದೆ ನಡೆಸಿ ಕೆಂಪು ದೀಪವೊಂದು ಬಂದಾಗ ನಿಲ್ಲಿಸಿ, ಕೈಗವಸುಗಳನ್ನು ಬಿಚ್ಚಿಹಾಕಿದ. ''ಹಾಕ್ಕೊಳ್ಳಪ್ಪ, ಅಣ್ಣಾ'' ಎಂದು ಪೋಲೀಸನೊಬ್ಬ ದೀಪದ ನಿಶಾನೆ ಬದಲಾದಾಗ ಹೇಳಿದಾಗ ಮಿಟ್ಟಿ ಲಗುಬಗೆಯಿಂದ ಮತ್ತೆ ಕೈಗವಸುಗಳನ್ನು ತೊಡಿಸಿಕೊಂಡು ತತ್ತರಿಸುತ್ತಾ ಗಾಡಿಯನ್ನು ಮುಂದಕ್ಕೆ ನಡೆಸಿದ. ಸ್ವಲ್ಪ ಹೊತ್ತು ಗೊತ್ತುಗುರಿಯಿಲ್ಲದೆ ಸುತ್ತಾಡಿದ ಬಳಿಕ ಅವನು ಪಾರ್ಕಿಂಗ್ ಜಾಗವನ್ನು ತಲುಪುವ ಮುನ್ನ ಆಸ್ಪತ್ರೆಯ ಮುಂದೆ ಹಾದು ಬಂದ.

....''ಮಿಲಿಯನೇರ್ ಬ್ಯಾಂಕರ್ ವೆಲ್ಲಿಂಗ್ ಟನ್ ಮ್ಯಾಕ್‌ಮಿಲನ್ ಅಡ್ಮಿಟ್ ಆಗಿರೋದು'' ಎಂದಳು ಚೆಲುವೆ ನರ್ಸ್. ''ಹೌದಾ?'' ಎಂದ ವಾಲ್ಟರ್ ಮಿಟ್ಟಿ ಸಾವಕಾಶವಾಗಿ ಕೈಗವಸುಗಳನ್ನು ತೆಗೆಯುತ್ತಾ ''ಕೇಸ್‌ನ ಯಾರು ನೋಡ್ತಿ ರೋದು?'' ಡಾ. ರೇನ್‌ಶಾ ಮತ್ತು ಡಾ. ಬೆನಬೋ, ಆದರೆ ಇಬ್ಬರು ಸ್ಪೆಶಲಿಸ್ಟಗಳೂ ಬಂದಿದ್ದಾರೆ. ನ್ಯೂಯಾರ್ಕ್‌ನಿಂದ ಡಾ. ರೆಮಿಂಗ್‌ಟನ್ ಮತ್ತು ಲಂಡನ್‌ನಿಂದ ಡಾ. ಪ್ರಿಚಾರ್ಡ್-ಮಿಟ್‌ಫರ್ಡ್. ವಿಮಾನದಲ್ಲಿ ಬಂದರು. ''ಒಂದು ಉದ್ದವಾದ, ತಂಪಾದ ಕಾರಿಡಾರಿನ ಬಾಗಿಲು ತೆಗೆದು ಡಾ. ರೆನ್‌ಶಾ ಹೊರಬಂದರು. ಕಳವಳದಿಂದ ಅವರ ಮುಖ ಕಂಗೆಟ್ಟಿತ್ತು. ''ಹಲ್ಲೋ ಮಿಟ್ಟಿ'' ಎಂದರು ಅವರು. ''ಮಿಲಿಯನೇರ್ ಬ್ಯಾಂಕರ್, ರೂಸ್‌ವೆಲ್ಟ್‌ನ ಆಪ್ತಮಿತ್ರ, ಮ್ಯಾಕ್‌ಮಿಲನ್. ತುಂಬಾ ಹೈರಾಣಾಗಿ ಹೋಗಿದೀವಿ. ಡಕ್ಟಲ್ ಟ್ರ್ಯಾಕ್ಟ್‌ನ ಅಬ್‌ಸ್ಟ್ರಿ ಯೋಸಿಸ್ ಟರ್‌ಷಿಯರಿ ಹಂತ -ನೀವು ಒಂದು ಸಲ ಅವರನ್ನು ನೋಡಿದರೆ ಆದೀತು'' ''ಸಂತೋಷ, ನೋಡ್ತೀನಿ'' ಎಂದ ಮಿಟ್ಟಿ.

ಆಪರೇಷನ್ ರೂಮಿನಲ್ಲಿ ಪಿಸುಗುಟ್ಟುವ ದನಿಯಲ್ಲಿ ಪರಸ್ಪರ ಪರಿಚಯ ಮಾಡಿಕೊಡುವ ಮಾತುಗಳಾದವು: ''ಡಾ. ರೆಮಿಂಗ್‌ಟನ್, ಡಾ.ಮಿಟ್ಟಿ, ಡಾ. ಪ್ರಿಚಾರ್ಡ್-ಮಿಟ್‌ಫರ್ಡ್, ಡಾ.ಮಿಟ್ಟಿ. ''ಸ್ಟ್ರೆಪ್ಟೋಥ್ರಿಕೋಸಿಸ್ ಮೇಲೆ ನೀವು ಬರೆದಿರುವ ಪುಸ್ತಕಾನ ಓದಿದೀನಿ'' ಕೈಕುಲುಕುತ್ತಾ ಡಾ. ಪ್ರಿಚಾರ್ಡ್- ಮಿಟ್ ಫರ್ಡ್ ಹೇಳಿದರು. ''ಒಂದು ಅದ್ಭುತವಾದ ಕೆಲಸವನ್ನೇ ಮಾಡಿ ದ್ದೀರಿ.'' ''ಥ್ಯಾಂಕ್ ಯೂ'' ಎಂದ ವಾಲ್ಟರ್ ಮಿಟ್ಟಿ. ''ನೀವು ಸ್ಟೇಟ್ಸ್‌ನಲ್ಲಿದ್ದೀರಿ ಅಂತ ನನಗೆ



ಗೊತ್ತೇ ಇರಲಿಲ್ಲ, ಮಿಟ್ಟಿ'', ರೆಮಿಂಗ್‌ಟನ್ ಗೊಣಗುಟ್ಟಿದರು. ''ನ್ಯೂಕ್ಯಾಸಲ್‌ಗೆ ಕಲ್ಲಿದ್ದಲನ್ನು ಹೊತ್ತುಕೊಂಡು ಬಂದ ಹಾಗಾಯ್ತು, ಮಿಟ್ ಫರ್ಡರನ್ನೂ ನನ್ನನ್ನೂ ಒಂದು ಟರ್‌ಷಿಯರಿ ಕೇಸ್‌ಗೆ ಕರೆಸಿದ್ದು'' ''ಎಲ್ಲಾ ನಿಮ್ಮ ದಯೆ'' ಎಂದ ಮಿಟ್ಟಿ. ಆಪರೇಷನ್ ಟೇಬಲ್‌ಗೆ ಜೋಡಿಸಿದ್ದ ಅನೇಕ ನಳಿಕೆಗಳು, ತಂತಿಗಳಿದ್ದ ಒಂದು ದೊಡ್ಡ ಜಟಿಲವಾದ ಯಂತ್ರ, ಪೊಕೆಟಾ-ಪೊಕೆಟಾ-ಪೊಕೆಟಾ ಎಂದು ಶಬ್ದ ಮಾಡಲಾರಂಭಿಸಿತು. ''ಈ ಹೊಸ ಅನಸ್ತೆಟೈಸರ್ ಕೈ ಕೊಡ್ತಾ ಇದೆ'' ಎಂದು ಆಸ್ಪತ್ರೆಯ ವೈದ್ಯನೊಬ್ಬ ಕಿರುಚಿದ. ''ಈ ಪೂರ್ವಪ್ರಾಂತದಲ್ಲೇ ಇದನ್ನು ರಿಪೇರಿ ಮಾಡಬಲ್ಲವರು ಯಾರೂ ಇಲ್ಲ'' ''ಸುಮ್ಮನಿರಯ್ಯ!'' ಮೆಲುದನಿಯಲ್ಲಿ ಶಾಂತವಾಗಿ ಹೇಳಿದ ಮಿಟ್ಟಿ. ಪೊಕೆಟಾ-ಪೊಕೆಟಾ-ಕ್ವೀಪ್-ಪೊಕೆಟಾ-ಕ್ವೀಪ್ ಎಂದು ಶಬ್ದ ಮಾಡುತ್ತಿದ್ದ ಯಂತ್ರದ ಬಳಿಗೆ ಅವನು ಹಾರಿಬಂದ. ಅವನು ಅದರ ಮಿನುಗುವ ಸೂಚೀ ಫಲಕದ ಮೇಲೆ ಬೆರಳಾಡಿಸಿದ. ''ಒಂದು ಫೌಂಟನ್ ಪೆನ್ ಕೊಡಿ'' ಎಂದು ಚಟಕ್ಕನೆ ಕೇಳಿದ. ಯಾರೋ ಅವನ ಕೈಗೆ ಒಂದು ಫೌಂಟನ್ ಪೆನ್ ಕೊಟ್ಟರು. ಅವನು ಯಂತ್ರದ ದೋಷಪೂರ್ಣ ಪಿಸ್ಟನ್ ಒಂದನ್ನು ಹೊರಕ್ಕೆ ತೆಗೆದು ಅದರ ಜಾಗದಲ್ಲಿ ಪೆನ್ನನ್ನು ಸಿಕ್ಕಿಸಿದ. ''ಇದು ಹತ್ತು ನಿಮಿಷಗಳವರೆಗೆ ತಡೆಯುತ್ತದೆ'' ಎಂದ. ''ಆಪರೇಷನ್ ಶುರು ಮಾಡಿ''. ಒಬ್ಬಳು ನರ್ಸ್ ಆತುರಾತುರವಾಗಿ ಬಂದು ಕಂಗೆಟ್ಟ ರೆನ್‌ಶಾನ ಕಿವಿಯಲ್ಲಿ ಏನೋ ಪಿಸುಗುಟ್ಟಿದಳು. ''ಕೋರಿಯಾಪ್ಸಿಸ್ ಶುರುವಾಗಿದೆ''

ರೆನ್‌ಶಾ ಚಿತ್ತಕ್ಷೋಭೆಗೊಂಡು ಹೇಳಿದರು. ''ನೀವು ಈ ರೋಗಿಯನ್ನು ತೆಗೆದುಕೊಳ್ತೀರಾ, ಮಿಟ್ಟಿ?'' ಮಿಟ್ಟಿ ಪಕ್ಕಲ ರೆನ್‌ಶಾನತ್ತ ನೋಡಿದ. ಆಮೇಲೆ ಒಂದಿಷ್ಟು ಪಾನೀಯ ಗುಟುಕರಿಸಿದ. ಬೆನ್‌ಬೋನತ್ತ ಮತ್ತು ಇಬ್ಬರು ಮಹಾಸ್ಪೆಶಲಿಸ್ಟ್‌ಗಳ ಚಿಂತಾಕ್ರಾಂತವಾದ ಮತ್ತು ಸಂದಿಗ್ಧಭಾವದ ಮುಖಗಳನ್ನು ನೋಡಿ, ''ನೀವು ಹಾಗೆ ಇಷ್ಟಪಟ್ಟರೆ ಹಾಗೇ ಆಗಲಿ'' ಎಂದ. ಅವರು ಒಂದು ಬಿಳೀ ಗೌನನ್ನು ಅವನಿಗೆ ತೊಡಿಸಿದರು. ಅವನು ಒಂದು ಮುಖವಾಡವನ್ನು ಹಾಕಿಕೊಂಡು ಸರಿಹೊಂದಿಸಿಕೊಂಡು ತೆಳುವಾದ ಕೈಗವಸುಗಳನ್ನು ತೊಟ್ಟ; ನರ್ಸುಗಳು ಅವನ ಕೈಗೆ ಥಳಥಳಿಸುವ ಶಸ್ತ್ರಕ್ರಿಯಾ ಸಾಧನಗಳನ್ನು... ''ಏ ಮ್ಯಾಕ್ಸ್, ಸ್ವಲ್ಪ ಹಿಂದಕ್ಕೆ ಸರಿ! ಆ ಬ್ಯೂಕ್ ಬರ್‍ತಾ ಇದೆ ನೋಡು!'' ವಾಲ್ಟರ್ ಮಿಟ್ಟಿ ಬ್ರೇಕ್ ಅದುಮಿದ. ''ತಪ್ಪು ಲೇನ್‌ನಲ್ಲಿ ಬಂದಿದೀಯಾ ಮ್ಯಾಕ್,'' ಮಿಟ್ಟಿಯತ್ತ ದಿಟ್ಟಿಸಿ ನೋಡುತ್ತಾ ಪಾರ್ಕಿಂಗ್ ಪ್ರದೇಶದ ಚಾಕರ ಹೇಳಿದ. ''ಹೀ...ಹೌದಲ್ಲ'' ಎಂದು ಮಿಟ್ಟಿ ಗೊಣಗಿದ. 'ಹೊರಕ್ಕೆ ಮಾತ್ರ' ಎಂದು ಸೂಚಿತವಾಗಿದ್ದ ಲೇನ್‌ನಿಂದ ಮಿಟ್ಟಿ ಜಾಗರೂಕತೆಯಿಂದ ಹಿಂದೆ ಸರಿಯಲು ತೊಡಗಿದ. ''ನೀನು ಅದನ್ನು ಬಿಟ್ಟು ಅಲ್ಲಿ ಕೂರು, ನಾನು ಅದನ್ನು ದೂರ ಸರಿಸ್ತೇನೆ'' ಎಂದ ಚಾಕರ. ಮಿಟ್ಟಿ ಕಾರಿನಿಂದ ಇಳಿದ. ''ಹೇ, ಚಾವಿಯನ್ನು ಅಲ್ಲೇ ಬಿಡು''. ''ಓಹ್'' ಎಂದ ಮಿಟ್ಟಿ, ಇಗ್ನಿಷನ್ ಚಾವಿಯನ್ನು ಅವನ ಕೈಲಿಡುತ್ತಾ. ಚಾಕರ ಕಾರಿನೊಳಕ್ಕೆ ಸೊಕ್ಕಿನಿಂದ ನೆಗೆದು ಚಾಕಚಕ್ಯತೆಯಿಂದ ಅದನ್ನು ಹಿಂದು ಹಿಂದಕ್ಕೆ ನಡೆಸಿ ಸರಿಯಾದ ಜಾಡಿನಲ್ಲಿ ತಂದುಬಿಟ್ಟ.

ಈ ಹಾಳಾದೋರೆಲ್ಲಾ ಎಷ್ಟೊಂದು ಅಸಡ್ಡೆಯಿಂದಿರುತ್ತಾರೆ. ತಮಗೆ ಗೊತ್ತಿಲ್ಲದ್ದೇ ಇಲ್ಲ ಎಂದುಕೊಂಡಿರುತ್ತಾರೆ ಎಂದು ವಾಲ್ಟರ್ ಮಿಟ್ಟಿ ಮುಖ್ಯ ರಸ್ತೆಯಲ್ಲಿ ನಡೆದು ಬರುತ್ತಾ ಯೋಚಿಸಿದ. ಒಂದು ಸಲ ಅವನು ನ್ಯೂಮಿಲ್‌ಫೋರ್ಡ್‌ನ ಹೊರಭಾಗದಲ್ಲಿ ಸರಪಳಿಯನ್ನು ತೆಗೆಯಲು ಹೋಗಿ ಅದು ಆಕ್ಸಲ್‌ಗೆ ಸುತ್ತಿಹಾಕಿಕೊಂಡುಬಿಟ್ಟಿತ್ತು. ಆಮೇಲೆ ಗ್ಯಾರೇಜಿನಲ್ಲಿ ಕೆಲಸ ಮಾಡುವ ಒಬ್ಬ ಹುಡುಗ ಒಂದು ಲಡಕಾಸಿ ಕಾರಿನಲ್ಲಿ ಬಂದು ಬಿಚ್ಚಿ ತೆಗೆಯಬೇಕಾಯಿತು. ಅಂದಿನಿಂದಲಾಗಾಯ್ತು ಸರಪಳಿಯನ್ನು ತೆಗೆಯಲು ಅವನನ್ನು ಒಂದು ಗ್ಯಾರೇಜಿಗೆ ಕಳಿಸಲು ಮಿಸೆಸ್ ಮಿಟ್ಟಿ ಶುರು ಮಾಡಿದಳು. ಮುಂದಿನ ಸಲ ತನ್ನ ಬಲಗೈಯನ್ನು ಒಂದು ತೂಗುಪಟ್ಟಿಯಲ್ಲಿಟ್ಟುಕೊಂಡು ಹೋಗುತ್ತೇನೆಂದು ಅವನು ನಿರ್ಧರಿಸಿದ. ಆಗ ಅವನೇ ಸರಪಳಿಯನ್ನು ತೆಗೆಯಲು ಅಶಕ್ತನೆಂದು ಅವರಿಗೆ ಅನ್ನಿಸುತ್ತದೆ. ಅವನು ರಸ್ತೆ ಬದಿಯಲ್ಲಿದ್ದ ಕೆಸರನ್ನು ಒದೆದ. ''ಓವರ್ ಶೂಗಳು'' ಎಂದು ತನಗೇ ಹೇಳಿಕೊಂಡು ಶೂ ಅಂಗಡಿಯನ್ನು ಹುಡುಕಿಕೊಂಡು ನಡೆದ.

ಓವರ್‌ಶೂಗಳ ಪೆಟ್ಟಿಗೆಯನ್ನು ಕಂಕುಳಲ್ಲಿ ಇರುಕಿಕೊಂಡು ರಸ್ತೆಗಿಳಿದ ವಾಲ್ಟರ್ ಮಿಟ್ಟಿ, ಅವನ ಹೆಂಡತಿ ತರಲು ಹೇಳಿದ್ದ ಮತ್ತೊಂದು ಪದಾರ್ಥ ಏನಿರಬಹುದೆಂದು ಯೋಚಿಸತೊಡಗಿದ. ಮನೆಯಿಂದ ವಾಟರ್‌ಬರಿಗೆ ಹೊರಡುವ ಮುನ್ನ ಅವಳು ಎರಡೆರಡು ಸಲ ಹೇಳಿದ್ದಳು. ನಿಜ ಹೇಳಬೇಕೆಂದರೆ ವಾರವಾರವೂ ಹೀಗೆ ಪೇಟೆಗೆ ಹೋಗಿಬರುವುದೆಂದರೆ ಅವನಿಗೆ ಇನ್ನಿಲ್ಲದ ಹಿಂಸೆ - ಅವನು ಯಾವುದಾದರೂ ಒಂದು ತಪ್ಪು ಮಾಡುತ್ತಿದ್ದ. ಅವಳು ಹೇಳಿದ್ದು ಕ್ಲೀನೆಕ್ಸ್



ಇರಬಹುದೆ ಎಂದು ಯೋಚಿಸಿದ. ಸ್ಕ್ವಿಬ್, ರೇಜರ್ ಬ್ಲೇಡುಗಳೇ? ಉಹುಂ, ಟೂತ್‌ಪೇಸ್ಟ್, ಟೂತ್‌ಬ್ರಶ್, ಬೈಕಾರ್ಬೊನೇಟ್, ಕಾರ್ಬೊರಂಡಮ್, ಕಾರ್ಯಾರಂಭಶೀಲತೆ ಮತ್ತು ರೆಫರಂಡಮ್? ಅವನು ಯೋಚಿಸುವುದನ್ನು ಕೈಬಿಟ್ಟ. ಆದರೆ ಅದು ಅವಳಿಗೆ ಜ್ಞಾಪಕವಿರುತ್ತದೆ. "ನಾನು ಹೇಳಿದ್ನಲ್ಲ, ಅದೆಲ್ಲಿ?" ಎಂದು ಕೇಳುತ್ತಾಳೆ. "ಅದನ್ನು ಮರೆತುಬಿಟ್ಟೆತಾನೆ?" ಪೇಪರ್ ಮಾರುವ ಹುಡುಗನೊಬ್ಬ ವಾಟರ್ ಬರಿ ಹಗರಣದ ಬಗ್ಗೆ ಕೂಗುತ್ತಾ ಹೋದ.

...."ಬಹುಶಃ ಇದು ನಿನ್ನ ನೆನಪಿನ ಶಕ್ತಿಯನ್ನು ಕುದುರಿಸಬಹುದು" ಎನ್ನುತ್ತ ಡಿಸ್ಟ್ರಿಕ್ಟ್ ಅಟಾರ್ನಿ ಥಟ್ಟನೆ ಒಂದು ತೂಕವಾದ ಆಟೋಮ್ಯಾಟಿಕ್ ಪಿಸ್ತೂಲನ್ನು ಸಾಕ್ಷಿ ಕಟಕಟೆಯಲ್ಲಿ ಶಾಂತವಾಗಿ ನಿಂತಿದ್ದ ವ್ಯಕ್ತಿಯತ್ತ ಚಾಚಿ ಹಿಡಿದ. "ಇದನ್ನ ನೀನು ಈ ಮೊದಲು ಯಾವಾಗಲಾದರೂ ನೋಡಿದ್ದೀಯಾ?" ವಾಲ್ಟರ್ ಮಿಟ್ಟಿ ಪಿಸ್ತೂಲನ್ನು ತೆಗೆದುಕೊಂಡು ಒಳ್ಳೇ ಅನುಭವಸ್ಥನಂತೆ ಪರೀಕ್ಷಿಸಿದ. "ಇದು ನನ್ನ ವೆಬ್ಲಿ- ವಿಕರ್ಸ್ 50.80" ಎಂದು ಸಮಾಧಾನವಾಗಿ ಹೇಳಿದ. ನ್ಯಾಯಾಲಯದಲ್ಲೆಲ್ಲಾ ಉದ್ವೇಗಪೂರ್ಣವಾದ ಗುಜುಗುಜು ಶಬ್ದ ಪಸರಿಸಿತು. ಸದ್ದಡಗಿಸಲು ನ್ಯಾಯಾಧೀಶ ಮೇಜನ್ನು ಟಪಟಪ ಬಡಿದ. "ಎಂಥಾ ಆಯುಧವನ್ನಾದರೂ ಉಪಯೋಗಿಸೋದ್ರಲ್ಲಿ ನೀನೊಳ್ಳೆ ಪಳಗಿದ ಕೈ ಅಂತ ಕಾಣುತ್ತೆ" ಎಂದು ಡಿಸ್ಟ್ರಿಕ್ಟ್ ಅಟಾರ್ನಿ ವ್ಯಂಗ್ಯವಾಗಿ ನುಡಿದ. ಮಿಟ್ಟಿಯ ಅಟಾರ್ನಿ, 'ಅಬ್ಜೆಕ್ಷನ್' ಎಂದು ಕೂಗಿದ. "ಪ್ರತಿವಾದಿ ಗುಂಡು ಹಾರಿಸಿರೋದು ಅಶಕ್ಯ ಅಂತ ನಾವು ಆಗಲೇ ತೋರಿಸಿದೀವಿ. ಜುಲೈ ಹದಿನಾಲ್ಕರ ರಾತ್ರಿ ಅವನು ಬಲಗೈಗೆ ತೂಗುಪಟ್ಟಿಯನ್ನು ಹಾಕಿಕೊಂಡಿದ್ದ ಅಂತ ತೋರಿಸಿದೀವಿ" ವಾಲ್ಟರ್ ಮಿಟ್ಟಿ ತನ್ನ ಕೈಯನ್ನು ಸ್ವಲ್ಪ ಮೇಲಕ್ಕೆ ಎತ್ತಿ ಹಿಡಿದ, ವಾದವಿವಾದಗಳಲ್ಲಿ ತೊಡಗಿದ್ದ ಅಟಾರ್ನಿಗಳು ಬಾಯಿ ಮುಚ್ಚಿಕೊಂಡರು. "ಯಾವುದೇ ಪರಿಚಿತ ಕಂಪನಿಯ ಪಿಸ್ತೂಲಿನಿಂದ ನಾನು ಗ್ರಿಗೆರಿ ಫಿಟ್ಸ್‌ಹರ್ಟ್‌ನನ್ನು ಮುನ್ನೂರು ಅಡಿ ದೂರದಿಂದ ನನ್ನ ಎಡಗೈಲಿ ಗುಂಡು ಹಾರಿಸಿ ಕೊಲ್ಲಬಲ್ಲವನಾಗಿದ್ದೆ" ಎಂದು ನಿಸೂರಾಗಿ ಹೇಳಿದ. ನ್ಯಾಯಾಲಯದಲ್ಲಿ ಹುಯಿಲೋ ಹುಯಿಲು. ಒಬ್ಬ ಹೆಂಗಸು ಚೀರಿದ ಧ್ವನಿ ಆ ಗೊಂದಲದಿಂದ ಮೇಲೆದ್ದು ಕೇಳಿಸಿತು. ಕಪ್ಪು ಗೂದಲಿನ ಒಬ್ಬ ಸುಂದರ ಹುಡುಗಿ ಹಠಾತ್ತನೆ ಬಂದು ವಾಲ್ಟರ್ ಮಿಟ್ಟಿಯ ಅಪ್ಪುಗೆಯಲ್ಲಿ ಸಿಕ್ಕಿಬಿದ್ದಳು. ಡಿಸ್ಟ್ರಿಕ್ಟ್ ಅಟಾರ್ನಿ ಅವಳಿಗೆ ಬಲವಾಗಿ ಹೊಡೆದ. ತನ್ನ ಕುರ್ಚಿಯಿಂದೇಳದೆ ಮಿಟ್ಟಿ ಆ ಆಸಾಮಿಯ ಚೂಪುಗಲ್ಲದ ಮೇಲೆ ಸರಿಯಾಗಿ ಬಾರಿಸಿದ. "ದರಿದ್ರ ಕುನ್ನೀನ ತಂದು!"

"ಪಪ್ಪಿ ಬಿಸ್ಕತ್ತು" ಎಂದ ವಾಲ್ಟರ್ ಮಿಟ್ಟಿ. ಅವನು ತನ್ನ ನಡಿಗೆಯನ್ನು ನಿಲ್ಲಿಸಿದ, ಮಂಜು ಮುಸುಕಿದ ನ್ಯಾಯಾಲಯದ ವಾತಾವರಣದೊಳಗಿನಿಂದ ವಾಟರ್‌ಬರಿ ಕಟ್ಟಡಗಳು ತಲೆಯೆತ್ತಿ ಮತ್ತೆ ಅವನನ್ನು ಸುತ್ತುವರಿದವು. ಅವನ ಮುಂದೆ ಹಾದುಹೋದ ಹೆಂಗಸೊಬ್ಬಳು ನಕ್ಕಳು. "ಅವನು 'ಪಪ್ಪಿ ಬಿಸ್ಕತ್ತು' ಅಂದ" ಎಂದು ಅವಳು ತನ್ನ ಜೊತೆಗಾತಿಗೆ ಹೇಳಿದಳು. ವಾಲ್ಟರ್ ಮಿಟ್ಟಿ ಆತುರದಿಂದ ಹೆಜ್ಜೆ ಹಾಕಿದ. ಅವನೊಂದು ಎ ಅಂಡ್ ಸಿ ಅಂಗಡಿಯನ್ನು ಹೊಕ್ಕ. ಅದು ಅವನಿಗೆ ಸಿಕ್ಕ ಮೊದಲ ಅಂಗಡಿಯೇನಲ್ಲ, ರಸ್ತೆಯಲ್ಲಿ ಇನ್ನೂ ದೂರದಲ್ಲಿದ್ದ, ಮೊದಲು ಸಿಕ್ಕ ಅಂಗಡಿಗಿಂತ ಚಿಕ್ಕ ಅಂಗಡಿ. ಅವನು ಅಲ್ಲಿಯ ಗುಮಾಸ್ತನಿಗೆ ಹೇಳಿದ; "ಪುಟ್ಟ, ಎಳೇ ನಾಯಿಗಳಿಗೆ ಬಿಸ್ಕತ್ತು ಬೇಕು." "ಯಾವುದಾದರೂ ವಿಶೇಷವಾದ ಬ್ರಾಂಡೇ ಸರ್?" ಜಗತ್ತಿನಲ್ಲೇ ಅಪ್ರತಿಮ ಪಿಸ್ತೂಲ್ ಗುರಿಕಾರ ಒಂದು ಕ್ಷಣ ಯೋಚಿಸಿ ."ಪ್ಯಾಕೆಟ್ ಮೇಲೆ, 'ಪಪ್ಪಿಗಳು ಇದನ್ನು ಬೇಡಿ ಬೊಗಳುತ್ತವೆ' ಅಂತ ಇರುತ್ತೆ" ಎಂದ.

ಹೇರ್‌ಡ್ರೆಸರ್‌ನ ಬಳಿ ಅವನ ಹೆಂಡತಿಯ ಕೆಲಸ ಕೂದಲನ್ನು ಒಣಗಿಸುವಾಗ ತೊಂದರೆಯಾಗದಿದ್ದರೆ ಹದಿನೈದು ನಿಮಿಷಗಳಲ್ಲಿ ಮುಗಿದಿರುತ್ತೆ ಎಂದುಕೊಂಡು ಮಿಟ್ಟೆ ತನ್ನ ಕೈಗಡಿಯಾರ ನೋಡಿಕೊಂಡ. ಕೆಲವು ಸಲ ಕೂದಲನ್ನು ಒಣಗಿಸುವಾಗ ತೊಂದರೆಯಾದ ಸಂದರ್ಭಗಳಿದ್ದವು. ಹೋಟೆಲ್‌ಗೆ ಮೊದಲೇ ಬಂದು ಕಾದಿರಲು ಅವಳು ಇಷ್ಟಪಡುವುದಿಲ್ಲ. ಎಂದಿನಂತೆ ಅವನೇ ಮೊದಲು ಹೋಗಿ ಅವಳಿಗಾಗಿ ಕಾದಿರುವುದನ್ನು ಅವಳು ಬಯಸುತ್ತಿದ್ದಳು. ಹೋಟೆಲ್‌ನ ಮೊಗಸಾಲೆಯಲ್ಲಿ ಒಂದು ದೊಡ್ಡ ಚರ್ಮದ ಹೊದಿಕೆಯ ಕುರ್ಚಿ ಇತ್ತು. ಅವನು ಅದರ ಪಕ್ಕದಲ್ಲಿ ನೆಲದ ಮೇಲೆ ತನ್ನ ಓವರ್ ಶೂಗಳನ್ನು ಮತ್ತು ಪಪ್ಪಿ ಬಿಸ್ಕತ್ತನ್ನು ಇಟ್ಟ. 'ಲಿಬರ್ಟಿಯ ಒಂದು ಹಳೇ ಸಂಚಿಕೆಯನ್ನೆತ್ತಿಕೊಂಡು ಅವನು ಕುರ್ಚಿಯಲ್ಲಿ ಒರಗಿದ. ''ಜರ್ಮನಿ, ಆಕಾಶದ ಮೂಲಕ ಪ್ರಪಂಚವನ್ನು ಗೆಲ್ಲಲು ಸಾಧ್ಯವೆ?'' ಬಾಂಬುಗಳನ್ನು ಹಾಕುತ್ತಿರುವ ಮತ್ತು ಛಿದ್ರ ವಿಚ್ಛಿದ್ರಗೊಂಡ ರಸ್ತೆಗಳ ಚಿತ್ರಗಳನ್ನು ವಾಲ್ಟರ್ ಮಿಟ್ಟಿ ನೋಡಿದ.

.....''ಯುವಕ ರ‍್ಯಾಲಿ ಗುಂಡಿನ ಸುರಿಮಳೆಯಿಂದ ತುಂಬಾ ಬೆದರಿಬಿಟ್ಟಿದ್ದಾನೆ, ಸರ್'' ಎಂದ ಸಾರ್ಜೆಂಟ್. ತನ್ನ ಕೆದರಿದ ತಲೆಗೂದಲ ಸಂದಿಯಿಂದ ಅವನನ್ನು ಮುಖವೆತ್ತಿ ನೋಡುತ್ತಾ ಕ್ಯಾಪ್ಟನ್ ಮಿಟ್ಟಿ ಹೇಳಿದ ''ಬೇರೆಯವರ ಜೊತೆ ಅವನನ್ನು ಹಾಸಿಗೆಯಲ್ಲಿ ಮಲಗಿಸು. ನಾನೊಬ್ಬನೇ ವಿಮಾನ ಹಾರಿಸಿಕೊಂಡು ಹೋಗ್ತೀನಿ.'' ''ನಿಮ್ಮೊಬ್ಬರಿಗೇ ಅದು ಸಾಧ್ಯವಿಲ್ಲ ಸರ್'' ಎಂದು ಆತಂಕಗೊಂಡ ಸಾರ್ಜೆಂಟ್. ''ಆ ಬಾಂಬರ್ ವಿಮಾನನ ನಡೆಸೋಕೆ ಇಬ್ಬರು ಬೇಕು. ಆರ್ಚೀಗಳು ಎಡೆಬಿಡದೆ ಮೇಲಿನಿಂದ ಗುಂಡಿನ ಸುರಿಮಳೆಗರೀತಿದಾರೆ. ಇಲ್ಲಿಂದ ಸೌಲಿಯವರೆಗೆ ಹೋಗೋ ಮಾರ್ಗ ಮಧ್ಯದಲ್ಲಿದೆ ವಾನ್ ರಿಕ್ಟಮನ್ ಸರ್ಕಸ್!'' ''ಆ ಸಿಡಿಮದ್ದಿನ ದಾಸ್ತಾನನ್ನು ಯಾರಾದರೂ ತರಲೇಬೇಕು. ನಾನೇ ಹೋಗ್ತೀನಿ. ಒಂದಿಷ್ಟು ಬ್ರ್ಯಾಂಡಿ ತಗೋತೀಯಾ?'' ಎಂದು ಮಿಟ್ಟಿ ತನಗೂ ಸಾರ್ಜೆಂಟ್‌ಗೂ ಬ್ರ್ಯಾಂಡಿಯನ್ನು ಬಗ್ಗಿಸಿದ. ಯುದ್ಧ ಮಹಾ ಬಿರುಸಿನಿಂದ ನಡೆದು ಕಂದಕದ ಸುತ್ತಲೂ ಕಂಪ್‌ಗುಟ್ಟುತ್ತಾ ಅದರ ಶಬ್ದ ಬಾಗಿಲ ಮೇಲೆ ಅಪ್ಪಳಿಸುತ್ತಿತ್ತು. ಬಾಗಿಲ ಹಲಗೆ ಛಿದ್ರಗೊಂಡು ಚಕ್ಕೆಗಳು ಕೋಣೆಯಲ್ಲೆಲ್ಲಾ ಹಾರಾಡಿದವು. ''ಸ್ವಲ್ಪದರಲ್ಲೇ ಪಾರಾದಿವಿ,'' ಎಂದ ನಿರ್ಲಕ್ಷ್ಯದಿಂದ ಮಿಟ್ಟಿ. ''ಬಾಕ್ಸ್ ಬ್ಯಾರೇಜ್ ಹತ್ತಿರಾನೇ ಬರ್ತಿದೆ'' ಎಂದ ಸಾರ್ಜೆಂಟ್. ''ನಾವು ಬದುಕೋದು ಒಂದೇ ಸಲ, ಸಾರ್ಜೆಂಟ್,'' ಹೌದೋ ಅಲ್ಲವೋ ಅನ್ನುವಂಥ ತನ್ನ ಸೂಕ್ಷ್ಮವಾದ ಕ್ಷಣಿಕ ನಸುನಗೆಯನ್ನು ಬೀರಿ ಮಿಟ್ಟಿ ಹೇಳಿದ. ''ಅಥವಾ, ನಾವು ಒಂದೇ ಸಲ ಬದುಕ್ತೀವಾ?'' ಅವನು ಮತ್ತಷ್ಟು ಬ್ರ್ಯಾಂಡಿ ಬಗ್ಗಿಸಿಕೊಂಡು ಒಂದೇ ಏಟಿಗೆ ಗಟಗಟನೆ ಕುಡಿದ. ''ನಿಮ್ಮ ಹಾಗೆ ಬ್ರ್ಯಾಂಡಿ ಕುಡಿಯೋರನ್ನ ನಾನು ಕಂಡೇ ಇಲ್ಲ, ಸರ್,'' ಎಂದ ಸಾರ್ಜೆಂಟ್. ''ಕ್ಷಮಿಸಿ ಸರ್'' ಕ್ಯಾಪ್ಟನ್ ಮಿಟ್ಟಿ ಎದ್ದು ನಿಂತು ಅವನ ಭಾರಿ ವೆಬ್ಲಿ-ವಿಕರ್ಸ್ ಆಟೋಮ್ಯಾಟಿಕ್ ಪಿಸ್ತೂಲನ್ನು ಧರಿಸಿದ. ''ನರಕದಲ್ಲಿ ನಲವತ್ತು ಕಿಲೋಮೀಟರ್ ಹೋದಂತೆ, ಸರ್'' ಎಂದ ಸಾರ್ಜೆಂಟ್. ಮಿಟ್ಟಿ ಮತ್ತೊಂದು ಕೊನೇ ಗುಟುಕು ಬ್ರ್ಯಾಂಡಿಯನ್ನು ಇಳಿಸಿದ. ''ಏನೇ ಹೇಳಿದರೂ, ಯಾವುದು ನರಕ ಅಲ್ಲ ಹೇಳು'' ಎಂದ ಮೆದುವಾಗಿ. ಗುಂಡುಗಳ ಹೊಡೆತ ಹೆಚ್ಚಾಯಿತು. ಮೆಶೀನ್‌ಗನ್ನುಗಳ ರಟ್-ಟಟ್-ಟಟ್ ಸತತವಾಗಿ ಕೇಳಿ ಬರುತ್ತಿತ್ತು. ಎಲ್ಲಿಂದಲೋ ಜ್ವಾಲೆಗಳನ್ನೆರಚುವ ಹೊಸ ಯಂತ್ರಗಳ ಪೊಕೆಟಾ-ಪೊಕೆಟ-ಪೊಕೆಟ ಭಯಾನಕವಾಗಿ ಕೇಳಿ ಬಂತು. ವಾಲ್ಟರ್ ಮಿಟ್ಟಿ 'ಔಪ್ರೆಸ್ ದಮಾ ಬ್ಲಾಂಡ್' ಗುನುಗುಟ್ಟುತ್ತಾ ಕಂದಕದ ಬಾಗಿಲಿಗೆ ಬಂದ. ಅವನು ಹಿಂದೆ ತಿರುಗಿ




ನೋಡಿ ಸಾರ್ಜೆಂಟ್‌ಗೆ ಕೈ ಬೀಸಿದ. ''ಚೀರಿಯೋ!'' ಎಂದ ಅವನು....

ಅವನ ಹೆಗಲಿಗೆ ಏನೋ ಬಡಿಯಿತು. ''ನಾನು ನಿನ್ನನ್ನು ಹುಡುಕಿಕೊಂಡು ಹೊಟೆಲ್‌ನಲ್ಲಿ ಎಲ್ಲಾ ಕಡೆ ಅಲೆದಾಡಿದೆ'' ಎಂದಳು ಮಿಸೆಸ್ ಮಿಟ್ಟಿ. ''ನೀನು ಈ ಓಬೀರಾಯನ ಕಾಲದ ಕುರ್ಚೀಲಿ ಯಾಕೆ ಅಡಗಿಕೊಂಡಿದ್ದೀಯಾ? ನೀನು ಇಲ್ಲಿರ್ತೀಯಾ ಅಂತ ನಾನಾದರೂ ಹೇಗೆ ನಿರೀಕ್ಷಿಸಲಿ?'' ''ಎಲ್ಲಾ ಮುಕ್ತಾಯಕ್ಕೆ ಬರ್ತಾ ಇದೆ'' ಎಂದು ಅಸ್ಪಷ್ಟವಾಗಿ ಹೇಳಿದ ಮಿಟ್ಟಿ. ''ಏನು?'' ಎಂದಳು ಮಿಸೆಸ್ ಮಿಟ್ಟಿ. ''ನಾನು ಹೇಳಿದ್ನಲ್ಲ ಅದನ್ನು ತಂದೆಯಾ? ಪಪ್ಪಿ ಬಿಸ್ಕತ್ತು? ಈ ಪ್ಯಾಕೆಟ್‌ನಲ್ಲೇನಿದೆ?'' ''ಓವರ್‌ಶೂಸ್,'' ಎಂದ ಮಿಟ್ಟಿ. ''ಅಂಗಡೀಲೇ ಅದನ್ನು ಕಾಲಿಗೆ ಹಾಕಿಕೊಂಡು ಬರಬಾರದಾಗಿತ್ತೆ?'' ''ನಾನು ಯೋಚಿಸ್ತಿದ್ದೆ'' ಎಂದ ವಾಲ್ಟರ್ ಮಿಟ್ಟಿ. ''ಕೆಲವೊಂದು ಸಲ ನಾನು ಯೋಚಿಸ್ತೀನಿ ಅಂತ ನಿನಗೆ ತಿಳಿಯುತ್ತೇ?'' ಅವಳು ಅವನತ್ತ ನೋಡಿದಳು. ''ಮನೆಗೆ ಹೋದ ಮೇಲೆ ನಿನ್ನ ಟೆಂಪರೇಚರ್ ಎಷ್ಟಿದೆ ಅಂತ ನೋಡ್ತೀನಿ'' ಎಂದಳು.

ಅವರು ತಿರುಗಣೆ ಬಾಗಿಲ ಮೂಲಕ ಹೊರಕ್ಕೆ ನಡೆದರು. ನೂಕಿದಾಗ ಅದು ಅಸ್ಪಷ್ಟವಾಗಿ ಸಿಳ್ಳುಹಾಕಿ ಅಣಕಿಸಿದ ದನಿ ಮಾಡಿತು. ಪಾರ್ಕಿಂಗ್ ಪ್ರದೇಶ ತಲುಪಲು ಅವರು ಇನ್ನೂ ಎರಡು ಬ್ಲಾಕ್ ಕಟ್ಟಡಗಳನ್ನು ದಾಟಿ ಹೋಗಬೇಕಿತ್ತು. ರಸ್ತೆ ತಿರುವಿನಲ್ಲಿದ್ದ ಔಷಧದ ಅಂಗಡಿಯ ಮುಂದೆ ಅವಳು, ''ಸ್ವಲ್ಪ ತಡಿ, ಈಗ ಬಂದು ಬಿಡ್ತೀನಿ. ''ಏನೋ ಮರೆತುಬಿಟ್ಟಿದ್ದೆ. ಒಂದು ನಿಮಿಷದಲ್ಲಿ ಬಂದು ಬಿಡ್ತೀನಿ'' ಎಂದಳು. ಅವಳು ಒಂದು ನಿಮಿಷಕ್ಕೂ ಜಾಸ್ತಿ ಕಾಲ ತೆಗೆದುಕೊಂಡಳು. ವಾಲ್ಟರ್ ಮಿಟ್ಟಿ ಒಂದು ಸಿಗರೇಟ್ ಹಚ್ಚಿದ. ಮಳೆ ಬೀಳಲು ಶುರುವಾಯಿತು. ಆಲಿಕಲ್ಲು ಮಳೆ. ಅವನು ಸಿಗರೇಟ್ ಸೇದುತ್ತಾ ಔಷಧಿ ಅಂಗಡಿಯ ಗೋಡೆಗೊರಗಿ ನಿಂತ, ಅವನು ಭುಜಗಳ ಹಿಂಭಾಗವನ್ನು ಮುದುರಿ, ಪಾದಗಳನ್ನು ಜೋಡಿಸಿ ನಿಂತುಕೊಂಡ. ''ಹ್ಯಾಂಡ್‌ಕರ್ಚೀಫ್ ಮನೆ ಹಾಳಾಗ'' ಎಂದ ತಿರಸ್ಕಾರಪೂರ್ವಕವಾಗಿ. ಸಿಗರೇಟನ್ನು ಕೊನೆಯ ಬಾರಿಗೆ ಎಳೆದು ತುಂಡನ್ನು ಚಟಕ್ಕನೆ ದೂರ ಎಸೆದ. ಆ ಮೇಲೆ ತುಟಿಗಳ ಮೇಲೆ ಮೂಡಿದ ಸೂಕ್ಷ್ಮವಾದ ಕ್ಷಣಿಕವಾದ ನಸುನಗೆಯೊಂದಿಗೆ ಈಡುಗಾರರ ತುಕಡಿಯ ಮುಂದೆ ನೆಟ್ಟಗೆ, ಸ್ಥಿರವಾಗಿ, ಹೆಮ್ಮೆಯಿಂದ, ಅಸಡ್ಡೆಯಿಂದ ಕೊನೆಯವರೆಗೂ ಅಜೇಯನಾಗಿ, ಯಾರ ಕಣ್ಣಿಗೂ ಬೀಳದಂತೆ ನಿಂತ.

ಕನ್ನಡಕ್ಕೆ: ಎಂ.ಎಸ್.ಕೆ ಪ್ರಭು

ಮೂರು ತಿಂಗಳುಗಳ ಹಿಂದೆ ತೀರಿಹೋದ ಎಂ.ಎಸ್.ಕೆ. ಪ್ರಭು ಕನ್ನಡದ ಒಬ್ಬ ವಿಶಿಷ್ಟ ಬರಹಗಾರ. ಕತೆ, ನಾಟಕ, ಅನುವಾದ, ಹಾಸ್ಯ, ವಿಮರ್ಶಾ ಲೇಖನಗಳು, ಪ್ರಬಂಧ ಮುಂತಾಗಿ ಎಲ್ಲ ಕ್ಷೇತ್ರಗಳಲ್ಲೂ ಸಕ್ರಿಯರಾಗಿದ್ದ ಪ್ರಭು ಖ್ಯಾತ ಕಾದಂಬರಿಕಾರ ಎಸ್.ಎಲ್. ಭೈರಪ್ಪನವರ ನಿಕಟವರ್ತಿಯೆಂದು ಸಹ ಕನ್ನಡ ಸಾಹಿತ್ಯಾಸಕ್ತರಿಗೆ ಪರಿಚಿತರು. ಭೈರಪ್ಪನವರ ಎಲ್ಲಾ ಕೃತಿಗಳ ಹಸ್ತಪ್ರತಿಯ ಮೊದಲ ನಂಬಿಗಸ್ತ ಓದುಗರಾಗಿದ್ದ ಪ್ರಭು ಮಿತಿಯಿಲ್ಲದೇ ಓದಿಕೊಂಡವರು. ಸೂಕ್ಷ್ಮ ಮನೋಭಾವದ ಅವರಿಗೆ ಬದುಕಿನ ಕರಾಳತೆಯನ್ನು ಮರೆಮಾಚುವ ಫ್ಯಾಂಟಸಿ ಅತ್ಯಂತ ಮೆಚ್ಚು. ಸೂಕ್ಷ್ಮವಾದ ವಿನೋದ, ಗಾಢವಿಷಾದ ಅವರ ಟ್ರಂಪ್‌ಕಾರ್ಡ್. 'ಬೆತ್ತಲೆ ಅರಸನ ರಾಜರಹಸ್ಯ', 'ಮುಖಾಬಿಲೆ' 'ಕಥಾಸಂಗ್ರಹ', 'ಬಕ', 'ಮಹಾಪ್ರಸ್ಥಾನ' ನಾಟಕಗಳು, 'ಸಾಹಿತ್ಯದಲ್ಲಿ ಫ್ಯಾಂಟಸಿ' ಪ್ರಬಂಧ ಪ್ರಭು ಬರೆದ ಮುಖ್ಯ ಕೃತಿಗಳು. 'ಬಕ' ನಾಟಕಕ್ಕೆ ವರ್ಧಮಾನ ಪ್ರಶಸ್ತಿ ಸಿಕ್ಕಿದೆ. ಸಾಯುವ ಮುನ್ನಾ ದಿನವಷ್ಟೇ ಪತ್ರ ಬರೆದು ಪತ್ರಿಕೆಗೆ ಎಲ್ಲ ಯಶಸ್ಸು ಕೋರಿದ್ದ ಪ್ರಭುಗೆ ನಮ್ಮ ಗೌರವಪೂರ್ವಕ ಶ್ರದ್ಧಾಂಜಲಿ.






ಕುಮ್ಮಾಟಿ

ಕೇರಳದ ಒಂದು ಪುಟ್ಟ ಹಳ್ಳಿ. ಆ ಹಳ್ಳಿಗೆ ಪ್ರತಿ ವರುಷ ನಿಗದಿತ ಒಂದು ದಿನ ಒಬ್ಬ ಜಾದೂಗಾರ ಬರುತ್ತಿರುತ್ತಾನೆ. ಅವನ ಹೆಸರು ಕುಮ್ಮಾಟಿ. ಬಂದಾಗೆಲ್ಲ ಅವನೊಂದು ವಿಸ್ಮಯದ ಆಟ ಆಡುತ್ತಾನೆ. ಊರಿನ ಎಲ್ಲ ಮಕ್ಕಳಿಗೂ, ಪಾಲಕರಿಗೂ ಇದೊಂದು ಮೋಜಿನ ಪ್ರಸಂಗ. ಮಕ್ಕಳು ಅಜ್ಜಂದಿರೆನ್ನದೆ ಊರವರೆಲ್ಲರೂ ವರುಷದ ಆ ದಿನಕ್ಕೆ ಸದಾ ಕಾಯುತ್ತಿರುತ್ತಾರೆ.

ಪ್ರತಿಸಲ ನಡೆಯುವುದು ಹೀಗೆ. ನೆರೆದ ಸಮಸ್ತ ನಾಗರಿಕರೆದುರು ಮಕ್ಕಳೆಲ್ಲರನ್ನು ಒಬ್ಬೊಬ್ಬರಾಗೇ ಸನಿಹ ಕರೆದು ''ನಿನಗ್ಯಾವ ಪ್ರಾಣಿ ಇಷ್ಟ?'' ಅಂತ ಕೇಳ್ತಾನೆ ಕುಮ್ಮಾಟಿ. ಎಲ್ಲರೂ ತಮ್ಮ ಇಷ್ಟಾನುಸಾರ ಪ್ರಾಣಿಯ ಹೆಸರು ಹೇಳಿದ್ದೇ-ಝೂಂ ಝೂಂ ಅಂತ ಜಾದೂ ಮಾಡಿ ಪ್ರತಿ ಮಗುವನ್ನೂ ಅದರಿಷ್ಟದ ಪ್ರಾಣಿಯನ್ನಾಗಿ ಪರಿವರ್ತಿಸುತ್ತಾನೆ. ಕ್ಷಣಾರ್ಧದಲ್ಲಿ ಮಕ್ಕಳೆಲ್ಲ ಪಶುಪಕ್ಷಿಗಳಾಗಿ ಬಿಡುತ್ತವೆ. ಹಕ್ಕಿ, ಅಳಿಲು, ಪತಂಗ ಬೆಕ್ಕು.... ನಂತರ ಅವು ಇಡೀ ದಿನ ಆಡಿಕೊಂಡು ಸಂಜೆಯಾದದ್ದೇ ಮರಳಿ ಜಾದೂಗಾರನ ಬಳಿ ಓಡಿ ಬರುತ್ತವೆ. ಆಗ ಅವನು ಝೂಂ ಝೂಂ ಮಾಡಿ ಅವರೆಲ್ಲರನ್ನು ಮರಳಿ ಮೂಲರೂಪಕ್ಕೆ ಬರಿಸುತ್ತಾನೆ. ಮಕ್ಕಳೆಲ್ಲ ಹೋ ಎಂದು ಕುಣಿದು ತಮ್ಮ ತಂದೆತಾಯಂದಿರನ್ನು ಸೇರಿಕೊಳ್ಳುತ್ತವೆ. ಕುಮ್ಮಾಟಿ ಖುಷಿಯಿಂದ ಮುಂದಿನೂರಿಗೆ ಹೋಗ್ತಾನೆ. ಮತ್ತವನು ಬರುವುದು ಮುಂದಿನ ವರ್ಷ, ಅದೇ ದಿನ.



ಒಂದು ಸಲ ಏನಾಗುತ್ತದೆ ಅಂದರೆ ನಾಯಿಯಾಗಿ ಪರಿವರ್ತಿತಗೊಂಡ ಹುಡುಗನೊಬ್ಬ ಆಡುತ್ತ ಆಡುತ್ತ ಕಾಡಿನಲ್ಲಿ ಕಳೆದುಹೋಗಿ ಬಿಡುತ್ತಾನೆ. ಸಂಜೆಯಾಗುವ ತನಕ ಉಳಿದೆಲ್ಲ ಪ್ರಾಣಿಗಳು ಮರಳಿ ಬಂದು ಮಕ್ಕಳಾಗುತ್ತಾರೆ. ಅದೊಂದು ನಾಯಿ ಮಾತ್ರ ಬರುವುದಿಲ್ಲ. ಎಲ್ಲ ಮಕ್ಕಳೂ ಕಾಡಿನೆಡೆ ಮುಖಮಾಡಿ ಕಾಯುತ್ತಾರೆ. ಆ ತಂದೆತಾಯಿಗಳ ಪಾಡಂತೂ ಹೇಳತೀರದು. ಕುಮ್ಮಾಟಿಗೂ ತೀರ ವ್ಯಥೆ. ಹೊತ್ತು ಮುಳುಗುತ್ತದೆ. ಕುಮ್ಮಾಟಿಯ ಗಡುವು ಮುಗಿಯುತ್ತದೆ. ಭಾರವಾದ ಎದೆಯಿಂದ ಆತ ಹೋಗೇ ಬಿಡುತ್ತಾನೆ.

ಇತ್ತ ಕಾಡಿನಲ್ಲಿ ಮೈಮರೆತು ಹಾದಿತಪ್ಪಿದ ನಾಯಿ ಮೊದಮೊದಲು ಖುಷಿಯಿಂದಲೇ ಇದ್ದರೂ, ಕ್ರಮೇಣ ಕಂಗೆಡುತ್ತದೆ. ಕಾಡಿನ ಇತರ ನಾಯಿಗಳು ಅದನ್ನು ಬಿಗುಮಾನದಿಂದಲೇ ನೋಡುತ್ತವೆ. ಸನಿಹ ಬಿಟ್ಟುಕೊಳ್ಳುವುದೇ ಇಲ್ಲ. ಪಶುಪಕ್ಷಿಗಳಿಗೂ ಏನೋ ಗುಮಾನಿ- ಇದ್ಯಾವ ಹೊಸ ಪರದೇಸಿ ಅಂತ. ಕಾಡಿನಲ್ಲಿ ವಿಚಿತ್ರ ಹಗಲು ರಾತ್ರಿಗಳನ್ನು ಕಳೆದು ಕಂಗೆಟ್ಟ ಈ ನಾಯಿ ನಾಡನ್ನು ಅರಸುತ್ತಲೇ ಇರುತ್ತದೆ. ಅದರ ತಂದೆ ತಾಯಿಗಳೂ ಊರಿನವರೂ ಕಂದನನ್ನು ಹುಡುಕುತ್ತ ಕಾಡಿನಲ್ಲಿ ಅಲೆದೂ ಅಲೆದೂ ಸುಸ್ತಾಗಿ ಮರಳುತ್ತಾರೆ.

ನೀವೆಲ್ಲೋ ಓದಿದ ಕಾದಂಬರಿ, ನೋಡಿದ ನಾಟಕ, ಸಿನೆಮಾ, ಯಾರೋ ಹೇಳಿದ ದೃಷ್ಟಾಂತ... ನಿಮ್ಮ ಸಂವೇದನೆಯಲ್ಲಿ ಹೌದೋ ಅಲ್ಲವೋ ಎಂಬಂತೆ ನೆಲೆ ಊರಿದೆ. ಅದನ್ನು ನೀವು ಪುಟ್ಟ ಕತೆಯಾಗಿ ಹೇಳಬಲ್ಲಿರಿ. ಆಟ ಆಡಿ ಬಂದ ಮಗು ಸುದ್ದಿ ಹೇಳುವಂತೆ, ಬಸ್‌ಸ್ಟ್ಯಾಂಡಿನಲ್ಲಿ ಅಪರಿಚಿತನೊಬ್ಬ ಕತೆ ಹೇಳಿದಂತೆ. ಮೂಲದ ಸಾರವೆಲ್ಲ ಬೀಜವಾಗಿರುವ ಈ ಪುಟ್ಟ ಕತೆಗೆ ನಿಮ್ಮದೇ ಸ್ವರೂಪ ಬಂದಿರುತ್ತದೆ. ಒಬ್ಬರಿಗೊಬ್ಬರು ಕತೆ ಹೇಳುವ ಈ ವಿಧಾನ ಒಂದು ಆಧುನಿಕ ಜನಪದ. Today's pop is tomorrow's folk - ಎಂದು ಹೇಳುತ್ತಾರೆ. ನಿಮ್ಮ ಮನದಂಗಳದಲ್ಲಿ ಹಾಡಿ ಹೋದ ಹಕ್ಕಿಯೊಂದು ಉದುರಿಸಿದ ಪುಟ್ಟ ನವಿರಾದ ಗರಿ ಇದು. ಆ ಗರಿಯನ್ನು ಹಿಡಿಯಿರಿ ಮತ್ತು ನೋಡ ನೋಡುತ್ತ ಆ ಗರಿಯಿಂದ ಹಕ್ಕಿಯೊಂದು ಮೂಡಿ ಬರುವ ಪರಿ ನೋಡಿ. ಈಗ ನಿಮ್ಮಲ್ಲಿರುವ 'ಗರಿ'ಯೊಂದನ್ನು 'ಭಾವನಾ'ಕ್ಕೆ ಹಾರಿ ಬಿಡಬಾರದೇಕೆ?

ನೀವು ಓದಿದ, ನೋಡಿದ, ಕೇಳಿದ ಕತೆಯನ್ನು ನಮಗೆ ಚುಟುಕಾಗಿ ಹೇಳಿ. ಜತೆಗೆ ನಿಮ್ಮ ವಿವರ, ಭಾವಚಿತ್ರ ಕಳಿಸಿ. ನಿಮ್ಮ ಗರಿ ಹಾರುತ್ತಿರಲಿ ಓದುಗರಿಂದ ಓದುಗರಿಗೆ.

ಹಠಾತ್ತನೆ ಒಂದು ದಿನ ನಾಯಿ ಊರಿಗೆ ಮರಳಿ ಬರುತ್ತದೆ. ಊರಿಗೀಗ ಹಬ್ಬವೋ ಹಬ್ಬ. ಎಲ್ಲರೂ ಆ ನಾಯಿಯನ್ನು ಅದರ ಮೂಲ ಹೆಸರಿನಿಂದಲೇ ಕರೆದು ಆಡಿಸುತ್ತಾರೆ. ತಂದೆ ತಾಯಿಗಳಿಗಂತೂ ಭಾರೀ ಖುಷಿ. ಅಪೇಕ್ಷಿತ ತಿಂಡಿ ಕೊಟ್ಟು ಮುದ್ದಿಸುತ್ತಾರೆ. ಪ್ರತಿ ಮನೆಯಲ್ಲೂ ಆ ನಾಯಿಗೆ ಭಾರೀ ಮುದ್ದು ಉಪಚಾರ. ಆದರೆ ಒಂದೇ ಫಜೀತಿ ಆ ನಾಯಿ ಶಾಲೆಗೆ ಹೋಗುವಂತಿಲ್ಲ. ಗೆಳೆಯರೊಡನೆ ಮಾತಾಡುವಂತಿಲ್ಲ. ಬರೀ ಬಾಲ ಅಲ್ಲಾಡಿಸುತ್ತದೆ. ಎಲ್ಲರೂ ತುದಿಗಾಲಲ್ಲಿ ಕುಮ್ಮಾಟಿ ಬರುವುದನ್ನೇ ಕಾಯುತ್ತಾರೆ.

ಕೊನೆಗೂ ಆ ದಿನ ಬರುತ್ತದೆ. ಎಲ್ಲರೂ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಕಣಿವೆಯ ಬಾಯಿಯೆಡೆ ನೋಡುತ್ತಿದ್ದಾರೆ. ಸೂರ್ಯನ ಹೊಸ ಕಿರಣಗಳಲ್ಲಿ ಹೊಳೆಯುತ್ತ ಅದೋ 'ಕುಮ್ಮಾಟಿ' ಬಂದೇಬಿಟ್ಟ. ಹೋ ಎಂದು ಎಲ್ಲ ಮಕ್ಕಳು ಅವನೆಡೆ ಓಡುತ್ತಿದ್ದಾರೆ, ಹಿಂದೆ ನಮ್ಮ ಪುಟ್ಟ ನಾಯಿಯೂ.

ಸಮಸ್ತರ ಸಮ್ಮುಖದಲ್ಲಿ, ಈಗ ಆ ಮರಿಯ ಶಾಪವಿಮೋಚನೆ. ಕುಮ್ಮಾಟಿ ಝೂಂ ಝೂಂ ಅನ್ನುತ್ತಾನೆ. ಎಲ್ಲರ ಕಣ್ಣಿಗೆ ಹಬ್ಬವಾಗುವಂತೆ ಅದೋ ನಾಯಿಯಿಂದ-ಹುಡುಗ ಪ್ರತ್ಯಕ್ಷನಾಗೇಬಿಟ್ಟ! ನೆರೆದವರ ಕಂಗಳಲ್ಲಿ ಕಂಬನಿ. ಪ್ರಚಂಡ ಹರ್ಷೋದ್ಗಾರ, ಕರತಾಡನ.

ಮನುಷ್ಯ ರೂಪ ಸಿಕ್ಕಿದ್ದೇ; ಆ ಪೋರ ಮೊದಲು ಮಾಡುವುದೇನು ಗೊತ್ತೆ? ಮೂರು ಅಂತಸ್ತುಗಳ ತನ್ನ ಮನೆಯ ಮೆಟ್ಟಲುಗಳನ್ನು ಓಡುತ್ತ ಓಡುತ್ತ ಏರಿ, ತಾರಸಿಯಲ್ಲಿ ತೂಗು ಹಾಕಿರುವ ಗಿಳಿಯ ಪಂಜರವನ್ನು ನಿಲುಕಿ, ಅದರ ಬಾಗಿಲು ತೆರೆದು ಗಿಳಿಯನ್ನು ಹೊರಗೆ ಬಿಟ್ಟುಬಿಡುತ್ತಾನೆ. ಹಸಿರು ಬಾವುಟದಂತೆ ರೆಕ್ಕೆಗಳನ್ನು ಪಟಪಟಿಸುತ್ತ ಗಿಳಿ, ಗಗನದ ವಿಶಾಲ ನೀಲಿಯಲ್ಲಿ ಹಾರಿಹೋಗುತ್ತದೆ. •

ಮಣಿಭದ್ರ


(ವಿಶ್ವವಿಖ್ಯಾತ ಚಲನಚಿತ್ರ ನಿರ್ದೇಶಕ ಅರವಿಂದನ್ ಅವರ ಮಲಯಾಳೀ ಚಿತ್ರಪಟ 'ಕುಮ್ಮಾಟಿ'ಯನ್ನು ನೋಡಿಬಂದ ಗೆಳೆಯನೊಬ್ಬ ಹೇಳಿದ್ದು.)



ಮಹಾ ಗಾಳಿಪಟ

ಒಂದು ಊರಿನ ಮಕ್ಕಳೆಲ್ಲ ತಮ್ಮ ತಮ್ಮ ಮನೆಯಿಂದ ಸೀರೆ, ದಾವಣಿ, ಬಟ್ಟೆಯ ಚೂರುಗಳನ್ನು ತಂದು ಒಟ್ಟಾರೆ ಸೇರಿಸಿ ದೊಡ್ಡದೊಂದು ಗಾಳಿಪಟ ಮಾಡುತ್ತಿದ್ದರು. ಪ್ರತಿಯೊಬ್ಬರ ಬಟ್ಟೆಯ ಬಣ್ಣವೂ ವಿಭಿನ್ನ. ಹೀಗಾಗಿ ಅದು ಬಗೆಬಗೆ ಬಣ್ಣ, ವಿನ್ಯಾಸಗಳ 'ಬೃಹತ್ ಗಾಳಿಪಟವಾಗಿ ರೂಪುಗೊಂಡಿತು. ಊರಿನಲ್ಲೊಬ್ಬ ಕುಂಟ ಬಾಲಕ. ಅವನು ಓಡಲಾಗದೆ, ಮಾಡಲಾಗದೆ ಈ ಬೃಹತ್ ಗಾಳಿಪಟದ ತಯಾರಿಯಲ್ಲಿ ಹಿಗ್ಗಿ ನಿರತರಾಗಿರುವ ಎಲ್ಲಾ ಚಿಣ್ಣರನ್ನು ಮೈಮರೆತು ನೋಡುತ್ತಿದ್ದನು.

ಗಾಳಿಪಟ ತಯಾರಾಯಿತು. ಅದನ್ನು ಹಾರಿಬಿಡುವುದೆಲ್ಲಿಂದ? ಅಗೋ ಊರಾಚೆಯ ಹಸಿರುಗುಡ್ಡದ ನೆತ್ತಿಯಿಂದ. ''ಎತ್ತಿಕೊಳ್ಳಿ ಹೊರಡೋಣ'' ಕೂಗಿದನೊಬ್ಬ. ''ಮೆಲ್ಲಗೆ, ಹರಿದೀತು'' ಎಂದ ಮತ್ತೊಬ್ಬ. ಎಲ್ಲರೂ ಮೆಲ್ಲಗೆ ಈ ಬೃಹತ್ ಗಾಳಿಪಟವನ್ನು ಹೆಗಲಿಗೇರಿಸಿ ಕೊಂಡರು. ಮೆಲ್ಲಗೆ ಗುಡ್ಡದೆಡೆ ನಡೆಯ ತೊಡಗಿದರು. ಇರುವೆಗಳ ರಾಶಿಯೊಂದು ರೊಟ್ಟಿಚೂರು ಒಯ್ಯುವಂತೆ, ನೂರಾರು ಪುಟಾಣಿ ಮಕ್ಕಳ ಹೆಗಲ ಮೇಲೆ ಬಣ್ಣದ ಮಹಾ ಗಾಳಿಪಟ, ಅವರ ಜತೆಗೂಡಲಾಗದ ಕುಂಟ ಬಾಲಕ ಹಿಂದೆ ಹಿಂದೆಯೇ ಉಳಿದ.



ಮಹಾಪಟ ಹೊತ್ತ ಗುಂಪು ಇನ್ನೇನು ನೆತ್ತಿ ತಲುಪಬೇಕು, ಅಷ್ಟರಲ್ಲಿ ಬೀಸಿಬಂದ ದೊಡ್ಡ ಮಹಾಬಿರುಗಾಳಿ ಅನಾಮತ್ತು ರೊಂಯ್ ಎಂದು ಎತ್ತಿಬಿಟ್ಟಿತು ಗಗನಕ್ಕೆ ಗಾಳಿಪಟವನ್ನು, ಹಿಡಿದಿದ್ದ ಮಕ್ಕಳ ಸಮೇತ!

ಬಣ್ಣಬಣ್ಣದ ಮಹಾ ಗಾಳಿಪಟ ಮಕ್ಕಳೆಲ್ಲರ ಹೊತ್ತುಕೊಂಡು ಹಾರೇ ಹೋಯಿತು ಗಾಳಿಯಲ್ಲಿ, ಹಿಂದೆ ಉಳಿದ ಬಾಲಕನ ಕಣ್ಣಿನಿಂದ ಮರೆಯಾಗಿ.

ಊರಲ್ಲೀಗ ಮಕ್ಕಳೇ ಇಲ್ಲ. ಎಲ್ಲ ಪಾಲಕರಿಗೂ ಸುದ್ದಿ ಹೇಳಲು ಉಳಿದವನು ಇವನೊಬ್ಬನೇ ಪೋರ. ಮಹಾಪಟ ಮಾಡಿದ್ದು, ಎಲ್ಲರೂ ಅದನ್ನು ಹಿಡಿದು ಹೊರಟಿದ್ದು, ಗಾಳಿ ಬೀಸಿದ್ದೂ ಮತ್ತು ಭೋರೆಂದು ಗಗನಕ್ಕೆ ನೆಗೆದು ಮಕ್ಕಳೆಲ್ಲ ಪಟದೊಂದಿಗೇ ಹೋಗಿದ್ದು ಎಲ್ಲವನ್ನು ಆಲಿಸಿದ ಪಾಲಕರಿಗೀಗ ಚಿಂತೆ. ಭರಿಸಲಾಗದ ಅಳಲು.

ಊರಿಗೆ ಊರೇ ನೀರವ. ಪ್ರತಿ ಮನೆಯಲ್ಲೂ ಪ್ರತಿ ಪಾಲಕರೂ ಮಾಡುತ್ತಿದ್ದಾರೆ ಪುಟ್ಟದೊಂದು ಪುಟಾಣಿ ಗಾಳಿಪಟ. ಅಂಗೈಯಲ್ಲಿ ಹಿಡಿದು ಅಂಗಲಾಚುತ್ತಿದ್ದಾರೆ- ''ಬೇಗ ಹೋಗು ದಮ್ಮಯ್ಯ, ಕಂದನನ್ನು ಕರೆದು ತಾ. ಬೇಗ ಹೋಗು ದಮ್ಮಯ್ಯ, ಕಂದನನ್ನು ಕರೆದು ತಾ.''

ಮರುದಿನ ಊರಿನ ನೀಲಿ ಆಕಾಶದಲ್ಲಿ ಅಬಬ, ಅಬಬ ಅದೆಷ್ಟು ಬಣ್ಣ ಬಣ್ಣದ ಪುಟಾಣಿ ಪಟಗಳು! ಅವನ್ನು ಹಾರಿಸುತ್ತಾ ನಿಂತಿದ್ದಾರೆ, ಆರ್ತ ಪಾಲಕರು.

ಪಟಗಳೆಲ್ಲ ಹೋಗುತ್ತಿವೆ ದೂರ.

ಅವುಗಳು ಮರಳಿ ಬರುವತನಕ ಹಾಡೇ ಹಾಡುವಾ.

''ಪಟಗಳೆಲ್ಲ ಹಾರಿಹೋಗಿ, ದೊಡ್ಡ ಪಟವ ಸೋಲಿಸಿ, ನಮ್ಮ ನಮ್ಮ ಚಿಣ್ಣರನ್ನು ಮರಳಿ ತನ್ನಿರಿ.''

●

ಇಕ್ಬಾಲ್ ಅಹ್ಮದ್

(ಮಕ್ಕಳ ರಂಗಭೂಮಿಯನ್ನು ಜೀವಂತವಾಗಿರಿಸಲು ಸದಾ ಹೆಣಗಾಡುವ ಖ್ಯಾತ ನಿರ್ದೇಶಕ, ಚಿತ್ರ ಕಲಾವಿದ ಇಕ್ಬಾಲ್ ಅಹ್ಮದ್ ಹೇಳಿದ ಕಥೆ.)

ಶತಮಾನದ ಮೆಲುಕು - ಎರಡು

ಶ್ರೀನಿವಾಸ ಐರಣಿ

ಗಂಧ ಮತ್ತು ಕಲ್ಲು





ವಿಜಯ ಸಿಂಧೂರ್



"ಏ, ಜಾಸ್ತ ಬಾಯಿ ಬಿಟ್ಯಂದ್ರ ನೋಡು."

"ನೀವ್ಯಾರ್ರಿ ನನ್ನ ಬಾಯಿ ಹಿಡಿಯುವವರು? ಅಡಿಗೀ ಮನಿ ನನ್ನದದ. ಅದರೊಳಗ ನಿಮ್ಮದೇನೂ ಅಧಿಕಾರ ಇಲ್ಲ. ತಿಳೀತು."

"ಈ ಅಡಿಗಿ ಮನ್ಯಾಗಿನ ಸಾಮಾನ-ಸಟ್ಟು ನಿಮ್ಮಪ್ಪ ತಂದು ಹಾಕಿಲ್ಲ. ಅದರೊಳಗ ಏನರೆ ಸಾಮಾನ ಹಾಳಾದ್ರ ನನ್ನ ರಕ್ತ ಅಟ್ಟಿಸತದ. ಇ-ಇದೆಲ್ಲಾ ದಿಮಾಕ ಕಟ್ಟಿಡು."

"ನಮ್ಮ ಅಪ್ಪನ ಹೆಸರು ತಗೀಬ್ಯಾಡ್ರಿ! ಮೂರು ಮಕ್ಕಳ ತಂದಿ ಆದ್ರಿ. ಇನ್ನರೆ ಬಿಡ್ರಿ ಆ ಸುಟ್ಟ ಚಾಳಿ. ನಾ ನಿಮ್ಮ ಅವ್ವ, ಅಪ್ಪನ ಹೆಸರ ತಗದ್ರ ಹೆಂಗನಸತದ?"


"ನಿನ್, ನಿನ್ನಂಥಾಕೀ ಸಂಗಡ ಮಾತಾಡುವುದೇ ಮೂರ್ಖತನ."

-ಸಂದರ್ಭವನ್ನು ತಿಳಿಸದೆಯೆ ಒಂದು ಜಗಳದ ಮಾತನ್ನು ಹೀಗೆ ಎತ್ತಿ ಹೇಳಿದ್ದಕ್ಕೆ ಕ್ಷಮಿಸಬೇಕು. ಜಗಳಾಡಿದವರು ಓರ್ವ ಗಂಡ, ಹೆಂಡತಿ ಎಂಬುದನ್ನು ಯಾರೂ ತಿಳಿದುಕೊಂಡಾರು; ಆದರೆ ಆ ಜಗಳಾಡಿದವರು, ನಾವೇ ಗಂಡ-ಹೆಂಡತಿ. ಎಲ್ಲರ, ಇಲ್ಲವೆ ಅನೇಕರ ಮನೆಯಲ್ಲಿ ಈ ಜಗಳಗಳು ಇರತಕ್ಕುವೇ. ಇಷ್ಟೇ. ನಮ್ಮ ಮನೆಯಲ್ಲಿ ನಿತ್ಯವೂ ಇರುತ್ತಿದ್ದುದು ಮಾತ್ರ ವಿಶೇಷ ಸಂಗತಿ.

ಜಗಳದ ಕಾರಣ, ಮತ್ತೇನಿಲ್ಲ. ಪ್ರತಿ ದಿನವೂ ರಾತ್ರಿ ಅಡುಗೆಯನ್ನು ಹೆಚ್ಚು ಮಾಡಿ, ಅದು ಉಳಿಯಿತೆಂದು ಒಕ್ಕಲಗಿತ್ತಿಗೆ ಹಾಕುವುದು ನನಗೆ ಸರಿಬಾರದೇ ನಾನು ಆಕ್ಷೇಪಿಸಿದೆ. ಎರಡನೇದವರಿಗೆ ಹೀಗೆ ಈಡು ಮಾಡುವಷ್ಟು ಸೋವಿಯ ದಿನಗಳು ಈಗಿಲ್ಲವಷ್ಟೆ. (ಮೇಲಾಗಿ ನಾನೊಬ್ಬ ಸಾಮಾನ್ಯ ಕಾರಕೂನ.) ರಾತ್ರಿಯ ಅಡುಗೆಯನ್ನು ಒಂದು ಹಿಡಿ ಕಡಿಮೆ ಏಕೆ ಮಾಡಬಾರದೆಂದು ಆಕ್ಷೇಪಿಸಿ ಬೇಸತ್ತು ಆ ದಿನ ಜಗಳಾಡಬೇಕಾಯಿತು. ಮೂಲ ವಿಷಯ ಉಳಿದು, ಒಂದು ತಾಸಿನತನಕ ಅನವಶ್ಯಕ ಜಗಳದ ಮಾತುಗಳೆದ್ದುದರಿಂದ ತ್ರಸ್ತನಾಗಿ ನಾನೇ ಸುಮ್ಮನಾದೆ.

ಮದುವೆಯಾದ ಹೊಸತರಲ್ಲಿ, 3-4 ವರ್ಷ ಗಂಡಹೆಂಡಿರಲ್ಲಿ ಘರ್ಷಣೆ ಇರುವುದು ಸಹಜ. ಒಬ್ಬರ ಮಾತನ್ನೇ ಇನ್ನೊಬ್ಬರು ಕೇಳಬೇಕೆಂಬ ಪ್ರೇಮದ ಸತ್ತೆಯಿಂದ ಹಾಗಾಗುವುದು ಸ್ವಾಭಾವಿಕವೇ. ಆದರೆ 8-10 ವರ್ಷ ಸಂಸಾರ ನಡೆಸಿ ಮೂರು ಮಕ್ಕಳಾದಾಗಲೂ ಈ ಘರ್ಷಣೆ ಉಳಿದುಕೊಂಡು ಹೆಚ್ಚೆಚ್ಚಾಗುತ್ತ ನಡೆದರೆ ಅದು ದುರ್ದೈವದ ಸಂಗತಿಯಲ್ಲವೆ?

ಜಗಳದಲ್ಲಿ ನಾನು ಬೆಳಗಿನ ಚಹವನ್ನೇ ಕುಡಿದಿರಲಿಲ್ಲ. ಅರ್ಧತಾಸು ತಡೆದು ನನ್ನ ಹೆಂಡತಿಯು ಚಹದ ಕಪ್ಪನ್ನು ಹಿಡಿದುಕೊಂಡು ಪಡಸಾಲೆಗೆ, ನಾನು ಕುಳಿತಲ್ಲಿಗೆ ಬಂದಳು. ಮಕ್ಕಳು ಒಳಗೆ ತಮ್ಮ ಬೆಳಗಿನ ಫಲಹಾರದ ಗದ್ದಲದಲ್ಲಿಯೆ ಇದ್ದುವು. ನನ್ನ ಹೆಂಡತಿ ಅರ್ಧ ಸ್ವಗತ ಅರ್ಧ ನನಗಾಗಿ ಹೇಳತೊಡಗಿದಳು.



''ಝುಗಳಾ, ಝುಗಳಾ! ನನಗಂತೂ ಸಾಕಾಗಿ ಹೋಗೇದ. ನಿಮ್ಮಂತೇನೂ ಆಗಲಿ ಅಂತ ನಾ ಎಷ್ಟು ಸರೆ ನಿರ್ಧಾರ ಮಾಡಿರತೇನಿ. ಆದರ ನಿಮ್ಮಿಂದಾ ಒಂದು ಕೆಟ್ಟ ಮಾತು ಬಂದ್ರೂ ನನಗ ತಡಕೋಳಿಕ್ಕೆ ಆಗೂದಿಲ್ಲ; ನಾನರೆ ಏನು ಮಾಡಲಿ. ಮಂದೀ ಒಳಗ ಎಷ್ಟು ನಗ್ಗೇಡು. ಆಜೂ ಬಾಜೂ ಮನಿಯವರು ಕೊಂಕು ನಗೀ ನಕ್ಕೋತ ನಮ್ಮನೀ ಕಡೇನೂ ಕಿವಿ ಚಾಚಿರತಾರ. ಎಷ್ಟು ಅಸಹ್ಯ!.... ಮಕ್ಕಳ ಮುಂದ ಅರೆ ನಾವು ಇನ್ನ ಜಗಳಾಡೋದು ಬಿಡಬೇಕು. ನಾವು ವಾದ ಸತಿದ್ದಾಗ ಅವಕ್ಕ ದಿಕ್ಕೇ ತೋಚೂದಿಲ್ಲ. ಮನೀ ಒಳಗ ನಕ್ಕೋತ, ಆನಂದದ ವಾತಾವರಣ ಇದ್ರ ಹುಡುಗರೂ ಪ್ರಸನ್ನ ಆಗೇ ಬೆಳೀತಾವ. ಇಲ್ಲಾ ತಂದ್ರ ಅವೂ ಧುಸುಮುಸು ಹಾಯುವ ಕ್ಷುದ್ರ ಗುಣಾ ಕಲೀತಾವಲ್ಲಂತ ಚಿಂತಿ ಬಿದ್ದದ.''

ತನ್ನ ಈ ಆತ್ಮನಿರೀಕ್ಷಣೆಯಲ್ಲಿ ಆಕೆಯು ತನ್ನ ಸ್ವಭಾವ ದೋಷವನ್ನು ಅರಿತುಬಿಟ್ಟಿಕೊಂಡಳಲ್ಲ ಎಂದು ನನಗೆ ಸಮಾಧಾನವಾಯಿತು. ಉತ್ತೇಜಿತನಾಗಿ ಹೇಳಿದೆ.

''ಅದ ನಾನೂ ಅನ್ನೋದು. ಒಂದು ಸಾದಾ ಮಾತು ನಾವು ಆಡಲಿಕ್ಕೆ ಹೋದರೂ ಕಲ್ಲು ಘಟ್ಟಿಸಿದ್ಹಾಂಗ ಜಗಳದ ಕಿಡಿ ಏಳತಾವ. ಅದಕ್ಕ ನಾವು ಇನ್ನ ಮ್ಯಾಲ ಅದಷ್ಟು ಮಾತೇ ಕಡಿಮಿ ಮಾಡೋಣ. ಅಂದ್ರ ಏನರೆ ಪರಿಸ್ಥಿತಿ ಸುಧಾರಿಸೀತು.''

ನನ್ನ ಹೆಂಡತಿ ಕೆಲ ಕ್ಷಣ ಮೌನವಾಗಿದ್ದಳು. ಅಲ್ಲಿಂದ ಹೇಳಿದಳು.

''ಅದ್ಯಾಕ? ನಾ ಅಂತೇನಿ, ಮಾತೇ ಬಿಟ್ಟು ಬಿಡೋಣ ಅಂತ! ನಿಮಗ ತಿಳಿದ್ಹಂಗ ನೀವು ಮಾಡಿರಿ; ನನಗ ತಿಳಿದ್ಹಂಗ ನಾ ಮಾಡತೇನಿ. ಪರಸ್ಪರ ಕೆಲಸದೊಳಗೆ ಕೈ ಹಾಕೂಣು ಬ್ಯಾಡಾ.''

ಈಕೆ ಅತ್ಯಂತ ತಿಳುವಳಿಕಸ್ಥಳಂತೆ ಮಾತನಾಡಿದಳೆಂಬ ಸಮಾಧಾನದಲ್ಲಿ ನಾನು ಹೇಳಿದೆ-

''ಇದಕ್ಕ ನನ್ನ ಸಂಪೂರ್ಣ ಒಪ್ಪಿಗಿ ಅದ. ಕೆಲವು ದಿವಸ ಪ್ರಯೋಗ ಮಾಡಿ ನೋಡೋಣ. ಒಟ್ಟ ಮಾತು ಬಿಡಲಿಕ್ಕೆ ಆಗೂದಿಲ್ಲ. ಎಷ್ಟು ಅವಶ್ಯ ಅದನೊ ಅಷ್ಟೇ ಆಡೋಣ.''

''ಯಾಕ? ಮನಸು ಮಾಡಿದರ ಎಲ್ಲಾ ಆಗತದ. ಯಾವಾಗರೆ ಅದನ್ನ ಮಾತಾಡೋದು ಅಂತ ಇಟಗೊಂಡ್ರ, ಮುಂದ ಅದು ಬೆಳೀತ ಹೋಗಿ, ಕೆಲವು ದಿವಸ ಆದ ಮ್ಯಾಲೆ ಮೊದಲಿನ ಪರಿಸ್ಥಿತಿನೇ ಬರಬಹುದು. ಅದಕ್ಕ ಸಂಪೂರ್ಣs ಮಾತು ಬಿಟ್ಟುಬಿಡೋಣ'' ಎಂದಳು.


ಅದೂ ನಿಜವೆನಿಸಿತು ನನಗೆ. ತೀರ ನಿರ್ವಾಹ ಇಲ್ಲದ ಪ್ರಸಂಗ ಬಂದರೆ ನಮ್ಮ ಹಿರಿಯ ಮಗ ಏಳು ವರ್ಷದ ಮನಮೋಹನ, ಎರಡನೆಯ ಮಗಳು ಸುನಂದಾ ಇದ್ದೇ ಇದ್ದಾರಲ್ಲ, ಸಂದೇಶ ಮುಟ್ಟಿಸಲು ಎಂದು ಭಾವಿಸಿ 'ಹಾಗಿದ್ದರೆ ಒಂದು ವಾರ ಬಿಟ್ಟು ನೋಡೋಣ. ಆ ಪ್ರಯೋಗ ಯಶಸ್ವಿಯಾಗಿ ಮಾತಿನ ಚಕಮಕಿ ತಪ್ಪುವಂತಾದರೆ ಮುಂದುವರಿಸಿದರೂ ಆದೀತು' ಎಂದು ನುಡಿದೆ. ಹಾಗೆ ಹೇಳುವಾಗ ನಮ್ಮ ಸಂಸಾರ ಸಮಸ್ಯೆಗೆ ಹೊಸದೊಂದು ಪರಿಹಾರ ಮಾರ್ಗವನ್ನು ಹುಡುಕಿದೆನೆಂಬ ಆತ್ಮತೃಪ್ತಿ ನನ್ನಲ್ಲಿ ಮೂಡಿದ್ದಿತು.

ಸುಮ್ಮನೆ ಏನೋದಕ್ಕೆ ಲಘುವಾಗಿ ನಾವು ಆ ರೀತಿಯಾಗಿ ಚರ್ಚಿಸಲಿಲ್ಲವೆಂದು ಮೊದಲಿಗೇ ಸ್ಪಷ್ಟಪಡಿಸುತ್ತೇನೆ: ನಿಜವಾಗಿಯೇ ನಾವು ಈ ವಿಷಯದಲ್ಲಿ 'ಸೀರಿಯಸ್' ಆಗಿದ್ದೆವು. ನಮ್ಮ ನಿತ್ಯದ ರಸಗಸಿ ಬಡಿದಾಟಗಳು ಅಷ್ಟೊಂದು ರೋಸಿಗಿಡಿಸಿಬಿಟ್ಟಿದ್ದುವು.

ಮತ್ತೆ ತುಸು ಹೊತ್ತು ಮೌನವಾಗುಳಿದ ಆಕೆ ನಂತರ ಹೇಳಿದಳು. ''ಒಮ್ಮೆ ನಿರ್ಧರಿಸಿದ ಮ್ಯಾಲೆ ತಡ ಯ್ಯಾಕೆ? ಇವತ್ತೇ ಈಗಿನಿಂದಲೇ ಮಾತು ಬಿಡೋಣ. ಆದರ ಒಂದು ಕರಾರು. ನೀವು

ಶ್ರೀನಿವಾಸ ಐರಣಿ

ಹೊಸ ಕನ್ನಡ ಸಾಹಿತ್ಯದ ಪ್ರಮುಖ ಸಂಶೋಧಕರು, ನಾಡಿನ ಹೊರಗಿದ್ದುಕೊಂಡೇ ಸಾಹಿತ್ಯ ಪರಿಚಾರಿಕೆ ಸದ್ದಿಲ್ಲದೆ ನಡೆಸಿಕೊಂಡು ಬಂದವರೂ ಆದ ಶ್ರೀನಿವಾಸ ಹಾವನೂರು ಪ್ರಾಯಶಃ ಕನ್ನಡದ ಮೊಟ್ಟ ಮೊದಲ ನವ್ಯ ಕಥೆಗಾರರ ಅಗ್ರ ಪಂಕ್ತಿಯಲ್ಲಿ ಸೇರುತ್ತಾರೆ. ತಮ್ಮ ಕಥಾ ಸಂಕಲನವೊಂದಕ್ಕೆ ಆಧುನಿಕ ದಾಂಪತ್ಯದ 'ಶೃತಿ-ಅಪಶೃತಿ' ಎಂಬ ಉಪಶೀರ್ಷಿಕೆ ಕೊಟ್ಟ ಶ್ರೀನಿವಾಸ ಐರಣಿಯವರ ಕಥನ ಸ್ವಾರಸ್ಯಪೂರ್ಣ



1964ರಲ್ಲಿ ಲೇಖಕರು ಮಗಳು ನಿವೇದಿತಾ ಜೊತೆ.

ಸಂಭಾಷಣೆ, ನೈಜತೆಯ ಮೆರುಗಿನೊಂದಿಗೆ ಮಾರ್ಮಿಕ ಒಳನೋಟಗಳನ್ನು ಹೊಂದಿರುವಂತಹದ್ದು. 'ಗಂಧ ಮತ್ತು ಕಲ್ಲು' ಕಥೆಯಲ್ಲಿ ಗಂಡ-ಹೆಂಡಿರ ಮಾಮೂಲಿ ಜಗಳವಾಗಿ ಶುರುವಾದ ಪ್ರಕರಣ ಎಲ್ಲೋ ಹಳಿತಪ್ಪಿ ಗಾಢವಿಷಾದಕ್ಕೆ ಕಾರಣವಾಗುವುದನ್ನು ನಿರಾಯಾಸವಾಗಿ ಅವರು ಸಾಧಿಸಿದ್ದಾರೆ. ನೊಂದಷ್ಟೂ ಗಂಧದಂತೆ ಪರಿಮಳಿಸಬಲ್ಲ ಹೆಂಡತಿ, ಆಕೆಯ ಸೂಕ್ಷ್ಮ ಒಳತೋಟಿಗೆ ಸ್ಪಂದಿಸಲಾಗದೆ ಕಲ್ಲಾಗಿ ಉಳಿಯುವ ಗಂಡ ಇಂದಿನ ಜೀವನ ಸಂದರ್ಭದಲ್ಲಿಯೂ ಅತ್ಯಂತ ಸಹಜವಾಗುತ್ತಾರೆ.

ಯಾರ ಎದುರಿಗೂ ಇದರ ಬಗ್ಗೆ ಚಕಾರ ಶಬ್ದವನ್ನೂ ಎತ್ತಕೂಡದು. ಮನೆಯಲ್ಲಿಯ ಒಂದು ಸಣ್ಣ ಪ್ರಸಂಗವಿದ್ದರೂ ನೀವು ಹೋಗಿ ಆ ನಿಮ್ಮ ಗೆಳೆಯ-ವಿಠ್ಠಲ ಮಾಸ್ತರನೆದುರು ತೋಡಿಕೊಳ್ಳುವವರು.''

ಅವಳು ಹೇಳಿದ್ದು ನಿಜವಿದ್ದರೂ, ತನ್ನ ಮನಸ್ಸಿನ ದುಗುಡವನ್ನು ತೋಡಿಕೊಳ್ಳುವುದಕ್ಕೆ ಅವಳಿಗೂ ಅವಳ ಗೆಳತಿ ಇದ್ದಳು! ಆ ಮಾತನ್ನು ಎತ್ತಿದರೆ ಸುಮ್ಮನೆ ಹಂಗಿಸಿದ ಹಾಗಾಗುವುದೆಂದು ತಿಳಿದು, ಅವಳ ಕರಾರಿಗೆ ನಾನು 'ಅಸ್ತು' ಎಂದೆ.

ನಿತ್ಯದಂತೆ ನಮ್ಮ ನಮ್ಮ ಕೆಲಸದಲ್ಲಿ ತೊಡಗಿದೆವು. ನಾನು ದಾಡಿ ಮತ್ತು ಸ್ನಾನಗಳನ್ನು ಲಗುಬಗೆಯಿಂದ ಮುಗಿಸಿ, ಅರ್ಲ ಸ್ಟ್ಯಾನ್ಲೆ ಗಾರ್ಡನರನನ್ನು ಹಿಡಿದುಕೊಂಡು ಕುಳಿತೆ. ಆಕೆ ಮಕ್ಕಳಿಗೆ ಸ್ನಾನ ಮಾಡಿಸಿ, ಅಡುಗೆಗೆ ಕುಳಿತಳು.

''ಸುನಂದಾ, ಅಪ್ಪಾಗ ಕಾಯಿ ಒಡೆದು ಕೊಡಲಿಕ್ಕೆ ಹೇಳು.''

ನಮ್ಮ ಮೌನದ ಪ್ರಥಮ ಪ್ರಯೋಗದ ಆ ವಾಕ್ಯ ನನಗೂ ಕೇಳಿಸಿತು. ಸುನಂದೆ ಬಂದು ತನ್ನ ಮುದ್ದು ಮಾತಿನಲ್ಲಿ ಅದನ್ನು ಮರುನುಡಿಸಿದಳು. ನಾನು ಒಳಗೆ ಹೋಗಿ ಟೆಂಗಿನಕಾಯಿ ಒಡೆದು ಕೊಟ್ಟು ಬಂದೆ. ಈ ಮಧ್ಯೆ ತೊಟ್ಟಿಲಲ್ಲಿ ಮಲಗಿದ್ದ ನಮ್ಮ ಚಿಕ್ಕ ಮಗು ಎದ್ದು ಅಳತೊಡಗಿತು. ತನ್ನ ಕೈ ಖಾಲಿ ಇರದಿದ್ದರೆ, 'ಒಂದು ಸ್ವಲ್ಪು ಕೂಸಿನ್ನ ಕೈಯೊಳಗ ತಗೊಳ್ರಿ' ಎಂದು ಆಕೆ ಒದರಿ ಹೇಳುವುದು ರೂಢಿ. ಆ ದಿನ ಅದಕ್ಕಾಗಿ ನಾನು ಕಾಯದೆ, ನಾನೇ ಹೋಗಿ ತೊಟ್ಟಿಲು ತೂಗಿ ಮತ್ತೆ ಮಲಗಿಸಿದೆ.

ತುಸು ಹೊತ್ತಿನ ಮೇಲೆ ಹಾಲಿನವ ಬಂದ. ಈಕೆಯು ಒಳಗಿನಿಂದ ಪಾತ್ರೆಯನ್ನು ಹಿಡಿದುಕೊಂಡು ಹೊರಗೆ ಬಂದು ಹಾಲು ಹಾಕಿಸಿಕೊಂಡಳು. ತಿಂಗಳ ಮೊದಲ ವಾರವಾದ್ದರಿಂದ ಆತ ಹಾಲಿನ ಲೆಕ್ಕ ಕೇಳಿದ. ನಾವು ಮಾತನಾಡುವ ಒಂದು ಸಣ್ಣ ಸಂದರ್ಭ ಬಂದಿತ್ತು. ಮಾತನ್ನು

ಬಿಟ್ಟಿದ್ದೆವಾದ್ದರಿಂದ, ಆಕೆ 'ಅವರನ್ನೇ ಕೇಳು' ಎಂದು ಹಾಲಿನವನಿಗೆ ಹೇಳುತ್ತಾಳೆಂದು ನಾನು ಭಾವಿಸಿಕೊಂಡೆ. ಆಕೆ ಏನೂ ಹೇಳಲಿಲ್ಲ! ಅವಳು ಮಾಡಿದ್ದೇ ಸರಿ, ಎನಿಸಿತು. ಹಾಲಿನವ ಹಣ ಕೇಳಿದ್ದು ನನಗೆ ಕೇಳಿಸಿಯೇ ಇತ್ತಲ್ಲವೆ.

ಸರಿ; ಹತ್ತು ಹೊಡೆಯಿತು. ನಾನು ಒಮ್ಮೆ ಅಡಿಗೆಯ ಮನೆಗೆ ಹಾಯ್ದು ಬಂದೆ. ಜಗಳದ ಮೂಲಕ, ಅಡಿಗೆಯ ಕೆಲಸ ಹಿಂದುಳಿದಿದ್ದಿತು. ಸಾಮಾನ್ಯವಾಗಿ 'ವೇಳೆಯಾಯಿತು' ಎಂದು ನಾನು ಅವಸರಪಡಿಸುತ್ತಿದ್ದರೆಯೇ ಕಚೇರಿಯ ಹೊತ್ತಿಗೆ ಅಡಿಗೆಯು ಒದಗುತ್ತಿದ್ದಿತು. ಪರಸ್ಪರರಲ್ಲಿ ಮಾತು ಇಲ್ಲದಾಗ ಏನು ಮಾಡುವುದು? ನಾನು ಗಡಿಯಾರವನ್ನೆ ಎತ್ತಿ ಅವಳಿಗೆ ಕಾಣುವಂತೆ ಅಡುಗೆಯ ಮನೆಯಲ್ಲಿಟ್ಟೆ.

ಮುಂದೆ ಹತ್ತೇ ಮಿನಿಟಿನಲ್ಲಿ ಆಕೆ ತಾಟು ಮಣೆ ಹಾಕಿದಳು. ಒಂದರಲ್ಲಿ ಮಾತ್ರ ಬದಲಾವಣೆಯಾಗಿದ್ದಿತು. ಮಾಡಿದ ಅಡಿಗೆಯನ್ನೆಲ್ಲ ನನ್ನ ಮುಂದೆ ಇಟ್ಟಳಲ್ಲದೆ ತಾನು ಹಾಕುವ ಉಸಾಬರಿಗೆ ಹೋಗಲಿಲ್ಲ! ಅದರಿಂದ 'ಸಾಕೆ' 'ಬೇಕೆ' ಎಂದು ಕೇಳುವ ಪ್ರಮೇಯ ಬಾರದಷ್ಟೆ. ನನ್ನ ಹೆಂಡತಿಯ ಜಾಣ್ಮೆಗೆ ನಾನು ತುಸು ತಲೆದೂಗಿದೆನೆಂದರೂ ಸರಿ.

ಕಚೇರಿಯಲ್ಲಿ ನಾನು ಕೆಲಸದಲ್ಲಿ ನಿರತನಾದೆನೆಂದರೆ ನನಗೆ ಮನೆಯ ಯಾವುದೇ ವಿಚಾರ ಗಮನದಲ್ಲಿರುವುದಿಲ್ಲ. ಸಂಜೆಯ ಆರೂವರೆ ಗಂಟೆಗೆ ಮನೆಗೆ ಬಂದಾಗಲೇ ನನಗೆ ನಮ್ಮ ಬೆಳಗಿನ ಪಣದ ವಿಷಯ ಲಕ್ಷ್ಯಕ್ಕೆ ಬಂದಿತು.

ಯಾವ ಮಾತನ್ನಾಡದೇ ನಾನು ಕೈಕಾಲು ಮುಖ ತೊಳೆದುಕೊಂಡು ಪಡಸಾಲೆಗೆ ಬಂದಾಗ, ನನ್ನ ಮೇಜಿನ ಮೇಲೆ ಚಹದ ಕಪ್ಪನ್ನು ಇಡಲಾಗಿದ್ದಿತು. ಅದರ ಹೊಂದಿಗೇ, ನಾನು ಸರ್ಕ್ಯುಲೇಟಿಂಗ ಲೈಬ್ರರಿಯಿಂದ ತಂದಿದ್ದ ಪತ್ತೇದಾರೀ ಪುಸ್ತಕವನ್ನೂ ಇಟ್ಟಿದ್ದಳು.

ನನಗೆ ಅವಳ ಈ ಚೇಷ್ಟೆ (?) ಸರಿ ಬರಲಿಲ್ಲ. ಅಲ್ಲಿಯೆ ಇದ್ದ ದಿನ ಪತ್ರಿಕೆಯ ಮೇಲಿನ ಭಾಗದ ಬಿಳಿಯ ಪಟ್ಟಿಯನ್ನೇ ಉದ್ದಕ್ಕೆ ಹರಿದು, 'I dont like such nasty jokes. Ours is not mere observation of ಮೌನವ್ರತಮ್. I am really serious about our decision in being aloof as far as possible ಎಂದು ಇಂಗ್ಲೀಷಿನಲ್ಲಿಯೆ ಗೀಚಿದವನೆ ಅದೇ ಶಾಲೆಯಿಂದ ಒಳಗೆ ಕಾಲಿಡುತ್ತಿದ್ದ ಮನಮೋಹನನನ್ನು ಕರೆದು, 'ಇದನ್ನು ನಿಮ್ಮವ್ವನಿಗೆ ಕೊಡೆಂದು' ಕಳುಹಿಸಿಯೆ ಚಹದ ಕಪ್ಪನ್ನು ಕೈಗೆತ್ತಿಕೊಂಡೆ.

ನನಗಿದೇ ಆಶ್ಚರ್ಯ! ದಿನಬಿಟ್ಟು ದಿನ ಕಳೆದಂತೆ, ನಮ್ಮಾ ಮೌನಧಾರಣದಿಂದ ಯಾವ ರೀತಿಯಿಂದಲೂ ನಮ್ಮ ನಿತ್ಯ ವ್ಯವಹಾರದಲ್ಲಿ ಅಡೆತಡೆಯುಂಟಾದಂತೆ ಅನಿಸಲೇ ಇಲ್ಲ. ಮತ್ತೆ ಯಾರಿಗೂ ಹೊರಗಿನವರಿಗೆ ಅದರ ಕಲ್ಪನೆ ಕೂಡ ಬಂದಿರಲಿಲ್ಲ. ಅವಳ ದೈನಂದಿನ ಬೇಕು ಬೇಡಗಳನ್ನು ನೋಡಿಕೊಂಡು ನಾನಾಗಿಯೆ ಅದರಂತೆ ನಡೆಯುತ್ತಿದ್ದೆ. ನನ್ನ ವೇಳೆ-ಅವೇಳೆಗಳನ್ನೂ ಊಹಿಸಿಕೊಂಡು ತನ್ನ ಕರ್ತವ್ಯವನ್ನು ತಾನು ಮಾಡುತ್ತ ಆಕೆ ಇರತೊಡಗಿದಳು. ಎಲ್ಲವೂ ಯಥಾಸ್ಥಿತವಾಗಿ, ಅದೇಕೆ ಮೊದಲಿಗಿಂತ ಸರಾಗವಾಗಿ ಸಾಗಿತ್ತು. ಫಕ್ತ ಮಾತು ಒಂದೇ ಇರಲಿಲ್ಲ! ಅದರ ಜೊತೆಗೆ ಜಗಳವೂ ಹೊರಟು ಹೋಗಿತ್ತು.

ನಾವು ಗೊತ್ತುಮಾಡಿಕೊಂಡಿದ್ದ ಒಂದು ವಾರವು ಮುಗಿಯುತ್ತ ಬಂತು. ಇನ್ನು ಇದನ್ನು ಮುಂದುವರಿಸಬೇಕೆ, ಬೇಡವೆ ಎಂದು ನಾನು ಅವಳನ್ನು ಒಂದು ಮಾತು ಕೇಳುವ ಮಟ್ಟಿಗೆ ಮೌನಭಂಗ ಮಾಡಿದ್ದರೆ ನಡೆಯುತ್ತಿತ್ತು. 'ಅವಳೇ ಕೇಳುತ್ತಾಳೆ, ನಾನೇಕೆ ಅದರ ಉಸಾಬರಿ ಮಾಡಲಿ' ಎಂಬ ಭಾವನೆ ನನ್ನಲ್ಲಿ ಬಂದು ಸುಮ್ಮನಿದ್ದೆ. ಇಷ್ಟೇ, ಅವಳಿಗೆ ಈ ಪೀಠಿಕೆ ಹಾಕಲಿಕ್ಕೆ ಅನುಕೂಲವಾಗಬೇಕೆಂದು ಆ ದಿನ ನಾನು ಹೊರಗೇ ಹೋಗಲಿಲ್ಲ.

ಊಂಹು. ನನ್ನ ಎಣಿಕೆ ಸುಳ್ಳಾಯಿತು. ಅವಳೋ ಇದು ಒಂದು ವಾರದ ಪ್ರಯೋಗವಿತ್ತೆಂಬ ಮಾತನ್ನೆ ಮರೆತಂತೆ ವರ್ತಿಸತೊಡಗಿದಳು. ನನ್ನ ಹೆಂಡತಿಯ ಹಟವಾದೀ ಸ್ವಭಾವ ವಿಚಾರವು ಮರು ನೆನಪಿಗೆ ಬಂತು. 'ಇದರ ಕೊನೆಯೆಂತು? ಹೀಗೆ ನಾವು ದೂರ ದೂರವಿದ್ದರೆ ಮುಂದೇನು ಗತಿ' ಎಂದು ಚಿಂತಾಕುಲನಾದೆ.

ಈ ಮಧ್ಯೆ ನನ್ನ ಹೆಂಡತಿಯ ಅಕ್ಕನ ಗಂಡ, ತಮ್ಮ ಆಫೀಸಿನ ಕೆಲಸದ ನಿಮಿತ್ತ ನಾಲ್ಕು ದಿನ ನಮ್ಮಲ್ಲಿಗೇ ಬಂದು ಇಳಿಯುವವರಿದ್ದರು. ಹದಿನೈದು ದಿನ ಮೊದಲಿಗೇ ಹಾಗೆಂದು ಒಕ್ಕಣಿಸಿ, ಬರುವುದಕ್ಕೆ ಮುಂಚೆ ಇನ್ನೊಮ್ಮೆ ದಿನ, ಗಾಡಿಯ ವೇಳೆ ವಗೈರೆ ತಿಳಿಸುವೆನೆಂದು ಉಲ್ಲೇಖಿಸಿದ್ದರು. ಇನ್ನು ಅವರು ಬಂದಾಗ ನಮ್ಮ ಮೌನವ್ರತದ ಬೊಬ್ಬಾಟವಾಗಬಾರದಲ್ಲ; ಅವಳ ತವರಿನ ಬಳಗದಲ್ಲಿ ಇದೊಂದು ನಗೆಚಾಟಿಕೆಯ ವಿಷಯವಾಗಬಾರದಲ್ಲ ಎಂದು ಕಾಳಜಿಯಾಯಿತು. ಈ ಸಂದರ್ಭದಲ್ಲಿ ಇನ್ನು ಅವಳು ಮಾತಿಗೇ ತೊಡಗಿದರೆ, ಹೋಗಲಿ. ಸುಮ್ಮನೆ ನಾನು ಅದನ್ನು ಬೆಳೆಸುವುದೇನೂ ಸರಿಯಲ್ಲ ಎಂದು ಗೊತ್ತುಪಡಿಸಿಕೊಂಡೆ.

ಅವರು ತಿಳಿಸಿದ ದಿನ ಹತ್ತಿರ ಬಂತು. ಆದರೆ ಅವರ ಪತ್ರವೇ ಬಂದಿರಲಿಲ್ಲ. ಒಂದು ವೇಳೆ ನಾ ಮನೆಯಲ್ಲಿಲ್ಲದಾಗ ಅವರ ಪತ್ರ ಬಂದು, ತನ್ನ ತವರಿನ ವಿಷಯ 'ಇವರಿ'ಗೇಕೆ ಎಂದು ಅದನ್ನು ಬಚ್ಚಿ ಇಟ್ಟಿರಬಹುದೆ ಎಂಬ ಶಂಕೆಯೂ ಮೂಡಿತು. ಅವಳು ಮನೆಯಲ್ಲಿಲ್ಲದ ಸಮಯ ಸಾಧಿಸಿ, ಆ ಪತ್ರಕ್ಕಾಗಿ, ಎಲ್ಲ ಸಂದು-ಸ್ಥಳಗಳನ್ನು ಹುಡುಕಿದೆ. ಪತ್ರ ಸಿಗಲಿಲ್ಲ. ಏನೇ ಆಗಲಿ ಎಂದು ಆ ದಿನ ಎರಡು ತಾಸು ಆಫೀಸಿಗೆ ತಡವಾಗಿ ಬರುವೆನೆಂದು ಚೀಟಿ ಕಳಿಸಿ ಗಾಡಿ ಬರುವ ಹೊತ್ತಿಗೆ ಮನೆಯಲ್ಲೇ ಉಳಿದೆನು. ಹಾಗೆ ಉಳಿದದ್ದೇ ನೆಟ್ಟಗಾಯಿತು. ಅಡುಗೆಯ ಮನೆಯಲ್ಲಿಯ ವಿಶೇಷ ತಯಾರಿಯೂ ನನ್ನ ಅನುಮಾನವನ್ನು ದೃಢೀಕರಿಸಿತು.

ತುಸು ವೇಳೆಯಲ್ಲಿಯೆ ನಮ್ಮ 'ಷಡ್ಡಕ' ಮಹಾಶಯ ಬಂದ. ಕುಶಲ ಪ್ರಶ್ನೆಗಳಾದುವು. ಒಳಗೆ ಹಣಿಕಿ 'ಆರಾಮ ಇದ್ದೀರಾ' ಎಂಬುದಾಗಿ ಈಕೆಯನ್ನು ಕೇಳಿದ. ಅಡಿಗೆಯ ಅವಸರದಲ್ಲಿಯೆ ಈಕೆಯು ತನ್ನ ಅಕ್ಕನ, ಅಕ್ಕನ ಮಕ್ಕಳ ಸುದ್ದಿಯನ್ನು ಕೇಳಿಕೊಂಡಳು.



ಊಟಕ್ಕೆ ಕುಳಿತೆವು. ನನಗೆ ಆತುರವನ್ನು ತಡೆಯಲಾಗದೇ 'ಪತ್ರವನ್ನೇಕೆ ಹಾಕಲಿಲ್ಲ?' ಎಂದು ಅವರನ್ನು ಕೇಳಿದೆ.

''ಯಾಕೆ ನಮ್ಮ ಶ್ರೀಮತಿ ಬರೆದಿದ್ದಳಲ್ಲ?'' ಎಂದನಾತ.

ನನ್ನ ಸಂಶಯ ನಿಜವಾಯಿತು. 'ಹೂಂ. ಪತ್ರ ಬಂದದ್ದನ್ನು ಮುಚ್ಚಿಟ್ಟಿಳಲ್ಲವೆ' ಎಂಬ ಸಿಟ್ಟು ಉಕ್ಕೇರಿತು. ಆ ಭರದಲ್ಲಿ ದುರಗುಟ್ಟಿ ಅವಳ ಮುಖ ನೋಡಿದೆ. ಆದರೆ ಪತ್ರವನ್ನು ಬಚ್ಚಿ ಇಟ್ಟುದರ ಕೊಂಕಿನ ಮುಖಭಾವ ಅವಳಲ್ಲಿ ಕಾಣಿಸಲಿಲ್ಲ. ಅವಳ ನಿಃಶೂನ್ಯ ನೋಟವು ನನ್ನನ್ನು ತಣ್ಣಗೆ ಮಾಡಿತು. ಆ ಮೇಲೆ ವಿಚಾರ ಬಂತು. 'ಅಕ್ಕನ ಪತ್ರವೆಂದರೆ ಖಾಸಗಿ ವಿಷಯ ವಾಯಿತು. ಅಂತೇ ನನ್ನ ಕಣ್ಣಿಗೆ ಬೀಳಲಿಲ್ಲ' ವೆಂದು ಅರ್ಥಮಾಡಿಕೊಂಡೆ. ನನ್ನ ಹೆಂಡತಿ ಅದೆಷ್ಟೊಂದು ವ್ಯಾವಹಾರಿಕವಾಗಿ ವರ್ತಿಸ ತೊಡಗಿದ್ದಾಳಲ್ಲ ಎಂದು ಮನಸ್ಸಿಗೆ ಎಲ್ಲೊ ಒಂದು ಬದಿಯಲ್ಲಿ ನೋವೆನಿಸಿತು.

ಆ 3-4 ದಿನಗಳನ್ನು ನಾನು ದುಗುಡದಲ್ಲಿಯೆ ಕಳೆದೆ. ನಮ್ಮಿಬ್ಬರ ಮಾತಿನ ಪ್ರಸಂಗಗಳನ್ನು ಅತ್ಯಂತ ಸಹಜತೆಯಿಂದಲೇ ಆಕೆ ತಪ್ಪಿಸಿದ ಳೆಂದೊ ನಮ್ಮ ಅತಿಥಿಗೆ ಕಚೇರಿಯ ಕೆಲಸವೆ ಹೆಚ್ಚಾಗಿದ್ದಿತೆಂದೋ ಸ್ವತಃ ಅವರು ಅಷ್ಟು ಹುಷಾರ್ ಜಾತಿಯವರಲ್ಲವೆಂದೋ, ಅವರಿಗೆ ನಮ್ಮ ಪಣದ ಸುಳಿವು ಕೂಡ ಸಿಕ್ಕಿರಲಿಕ್ಕಿಲ್ಲ. ಆದರೆ ಊರು ಮುಟ್ಟಿದ ಮೇಲೆ ನಮ್ಮ ಆತಿಥ್ಯಕ್ಕಾಗಿ ಕೃತಜ್ಞತೆ ಯನ್ನು ವ್ಯಕ್ತಪಡಿಸುವ ತಮ್ಮ ಪತ್ರದಲ್ಲಿ ಮಾತ್ರ ಈ ಸಾಲನ್ನು ಒಕ್ಕಣಿಸಿದ್ದರು. 'Nevertheless I appreciated, before my dear wife that you two have once for all sunk all your differences and that peace prevails on your homefront.' ಐದು ಸ.ಪೈ.ಯ ಕಾರ್ಡಿನ ಮೇಲೆ ಗೀಚಿ ಬರೆದಿದ್ದ ಅದನ್ನು ಮೇಜಿನ ಮೇಲೆಯೆ ಇಟ್ಟು ಕಚೇರಿಗೆ ಹೋದೆ.

ಅದಾಗಿ ಮರು ಶನಿವಾರ. ಮಧ್ಯಾಹ್ನ ಮೂರು ಗಂಟೆಗೇ ಮನೆಗೆ ಬರಬೇಕಿತ್ತು. ಕೆಲಸದ ಮೂಲಕ ತಡವಾಯಿತು. ಮನೆಗೆ ಬಂದಾಗ ಐದು ಹೊಡೆದಿತ್ತು. ನಾನು ಒಳಗೆ ಕಾಲಿಡುವಾಗ, ಬಚ್ಚಲು ಮನೆಯಲ್ಲಿ ನನ್ನ ಹೆಂಡತಿ ಯಾರೊಡ ನೆಯೊ ಮಾತನಾಡುವುದು ಕೇಳಿಸಿತು.

''ತಾ ನೋಡಿದರ ಒಕ್ಕಲಗಿತ್ತಿ. ಎಷ್ಟು ಸೊಕ್ಕು ಈಕೀದು. ನಾ ಏನು ಕೈಲಾಗದಾಕಿ ಅಂತ ತಿಳದಾಳ. ಬಿಟ್ಟಿರ ಬಿಟಗೋ ಅಂತ ಹೇಳಿದೆ. ಈಗ ಯಾವದು ನಿಂತಿತೇನು ನೋಡ್ರಿ.''

''ಅರಿವೆ ಸಹಿತ ಒಗದಿದ್ದಿಲ್ಲೇನು?''

''ಅರಿವೆ ಹಂಗೇ ಹಿಂಡಿ ಇಟ್ಟಿದ್ಲು. ನಾನೇ ಎಲ್ಲಾ ಅರಿವಿ ಒಣಗ ಹಾಕಿದೆ. ಇವಷ್ಟು ಭಾಂಡಿ ಉಳದಾವ; ಏನು ಮಹಾ. ರೂಥಾ ಆಗೋ ತನಕಾ ಒಂದಿಷ್ಟು ತ್ರಾಸ. 'ಒಕ್ಕಲಗಿತ್ತೇರು ಸಹಿತ ಯಾರೂ, ನಿನ್ನ ಬಾಯಿ ಕಾಲಾಗ ನಿಂದ್ರೂದುಲ್ಲಾ' ಅಂತ 'ಇವರು' ಅಂತಿರತಾರ. ಅದಕ್ಕ ಇನ್ನ ಮ್ಯಾಲೆ ಒಕ್ಕಲಗಿತ್ತೀನೇ ಬ್ಯಾಡಾ ಅಂತ ಮಾಡೇನಿ.''

''ಅಲ್ಲಾ. ಆಕಿ ನಿಮಗ ಅಂದಳರೆ ಏನು?''

''ಏನ ಮಾಡತೀರಿ ತೊಗೊಂಡು. 'ಮಾಡಿ ಕೊಂಡ ಗಂಡಗs ಸಿಕ್ಕಂಗ ಅನ್ನವರಿಗೆ ನಮ್ಮಂಥ ವರ ದರದ ಎಲ್ಲ್ಯದ' ಅನಬೇಕ?''

''ಹೂಂ! ಏನು ಧೈರ್ಯಾರೆವಾ ಅಂತೀನಿ- ಇಷ್ಟು ತಿರುಗಿ ನಿಂತು ಮಾತಾಡಬೇಕಾದ್ರ.''

''ಎಲ್ಲೀ ಧೈರ್ಯಾ. ಅಷ್ಟು ಎದುರಾ ಎದುರಾ ಹೇಳಿದ್ರ, ಬಾಯಾಗಿನ ಹಲ್ಲು ಉದರಸತಿದ್ದೆ. ಭಾಂಡೀ ತಿಕ್ಕಲಿಕ್ಕೆ ತೊಗೊಂಡು ಒಯ್ಯುವಾಗ ವಟಾ ವಟಾ ಅನಕೋತ ಹೋದದ್ದು ಕೇಳಿಸಿತು. ಆಗೇ ಕೈ ತೊಗೊಂಡೆ.''

ಇಷ್ಟರಲ್ಲಿ ಆ ನೆರೆಮನೆಯಾಕೆಯ ಕಣ್ಣಿಗೆ ನಾ ಬಿದ್ದೆ. ಆದುದರಿಂದ ಆಕೆ-

''ಆತು. ಯಾವಾಕಿ ಅರೆ ಛಲೋ ಹೆಣ್ಣು ಮಗಳು ಕೆಲಸಕ್ಕ ಸಿಕ್ಕರ ನಾ ನೋಡತೇನಿ.



ಮನ್ಯಾಗ ಸಣ್ಣ ಸಣ್ಣ ಕಂದಮ್ಮಗಳು ನೀವರೆ ಏನು ಘಟ್ಟಿ? ವಿಶೇಷ ತ್ರಾಸ ಮಾಡಕೋಬ್ಯಾಡ್ರಿ'' ಎಂದು ಹೇಳುತ್ತ ಹಿತ್ತಿಲ ಬಾಗಿಲಿನಿಂದ ಜಾರಿದಳು.

'ಹ್ಹ. ಹ! ಅಂತೂ, ತನ್ನ ಉಗ್ರ ಸ್ವಭಾವದಿಂದಾಗಿ ಗಂಡನ ದರಕಾರವನ್ನೂ ಇಡಲಿಲ್ಲವಲ್ಲಾ ಎಂಬ ಮಾತನ್ನು ಒಕ್ಕಲಗಿತ್ತಿಯಂಥವಳಿಂದ ಅನ್ನಿಸಿಕೊಳ್ಳಬೇಕಾಯಿತಲ್ಲ' ಎಂಬುದಾಗಿ ನನಗೆ ಅಭಿಮಾನದ ಆನಂದ ಉಕ್ಕೇರಿತು. 'ಭೇಷ್ ಭೊಲೊ ಮಾಡಿದಳು ಒಕ್ಕಲಗಿತ್ತಿ' ಎಂದು ಮನದಲ್ಲಿಯೆ ಅವಳನ್ನು ಹೊಗಳಿದೆ.

ನಾನು ಬಟ್ಟೆಗಳನ್ನು ಬದಲು ಮಾಡುತ್ತ ಪಡಸಾಲೆಯಲ್ಲಿದ್ದಾಗ ನನ್ನ ಹೆಂಡತಿಯು ರಭಸದಿಂದ ಭಾಂಡಿಗಳನ್ನು ತಿಕ್ಕುವ ಸದ್ದು ಕೇಳಬರುತ್ತಲೇ ಇತ್ತು. ಬೆವೆತು ನೀರಿಳಿಯುವ ಅವಳ ಶೋಚನೀಯ ಮುಖವನ್ನು ನೋಡಿ ಯಾಕೆ ಅವಳನ್ನು ಸಂಕೋಚಗೊಳಿಸಬೇಕೆಂದು ನಾನು ತುಸು ತಡೆದೆ.

ಅವಳ ಕೆಲಸ ಮುಗಿದ ಮೇಲೆ ಒಳಗೆ ನಾನು ಕಾಲಿರಿಸಿದೆ. ಮಾನಸಿಕ ಹಾಗೂ ದೈಹಿಕ ಎರಡೂ ರೀತಿಯಲ್ಲಿ ಆಕೆ ಥಕಾಸಿದ್ದಳಾದ್ದರಿಂದ ಅವಳ ಸ್ಥಿತಿ ಕರುಣಾಜನಕವಾಗಿತ್ತು. ಒಂದೆರಡು ಸಾಂತ್ವನದ ಮಾತುಗಳನ್ನಾಡಿ, ಅವಳು ತನ್ನ ಮನಸ್ಸಿನ ದುಗುಡವನ್ನು ಪರಿಹರಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನನಗೆ ವಿಚಾರಬಂತು. ಆಗ ನನ್ನ ಮನಸ್ಸು ಅಂತಃಕರಣದ ಭಾವನೆಯಿಂದ ಅರಳಿದ್ದಿತು.

ಇತ್ತ ಆಕೆ ನನ್ನನ್ನು ಕಂಡು ಲಗುಬಗೆಯಿಂದ ಸ್ಟೋವನ್ನು ಹೊತ್ತಿಸುವುದಕ್ಕೆ ತೊಡಗಿದ್ದಳು. 'ನನಗೆ ಈಗ ಚಹ ಬೇಡ' ಎಂದು ಹೇಳಲೆಂದೆ. ಅದೀಗ ಹೊರಗೆ ನನ್ನ ಚಹ ಫಲಾಹಾರವಾಗಿದ್ದರಿಂದ ನನಗೆ ನಿಜವಾಗಿಯೇ ಬೇಡವಾಗಿತ್ತು. ಮನೆಯಲ್ಲಿ ದೂತರು, ಮಕ್ಕಳು ಇಬ್ಬರೂ ಇರಲಿಲ್ಲ. 'ನನಗೀಗ ಚಹ ಬೇಡ' ಎಂದು ಹೇಳಬೇಕೆಂದು ಎದ್ದ ನಾಲಗೆ ಮತ್ತೆ ಮುಗುಚಿಕೊಂಡುಬಿಟ್ಟಿತು.

ಯಾಕೆ ಹಾಗೆ ಆಯಿತು ಎಂಬುದೇ ನನಗೆ ತಿಳಿಯದು. ಹಾಗೆ ಹೇಳಿಬಿಟ್ಟು ಮಾತಿಗೆ ಪೀಠಿಕೆ ಹಾಕಿದ್ದರೆ ಎಷ್ಟೊಂದು, ಅದೆಷ್ಟೊಂದು ಒಳ್ಳೆಯದಾಗುತ್ತಿತ್ತು. ನನ್ನನ್ನು ನಂಬಿ ಬಂದ ಜೀವ ಒದ್ದಾಡುವಾಗ ನೆರೆಮನೆಯಾಕೆ ಸಾಂತ್ವನ ಮಾಡಬೇಕಾಯಿತು. ನನ್ನ ಒಂದು ಮಾತು ಅವಳಿಗೆ ಅದೆಷ್ಟು ಹಿತವನ್ನುಂಟುಮಾಡುತ್ತಿದ್ದಿತೊ ಏನೊ. ನಾನು ತಪ್ಪು ಮಾಡಿದೆ ಎಂದು ಅನಿಸತೊಡಗಿತು. ಮರುಕ್ಷಣಕ್ಕೆ 'ಯಾರು ಬಲ್ಲರು. ಅವಳಂತೂ ಹಟವಾದಿನಿ. ನಿರ್ಧಾರ ಬೇರೆ ಮಾಡಿಬಿಟ್ಟಿದ್ದಾಳೆ. ನಾ ಮಾತನಾಡ ಹೋಗಿದ್ದರೆ ಅಪಾರ್ಥ ಮಾಡಿಕೊಳ್ಳುವ ಸಂಭವವೂ ಇತ್ತು' ಎಂದು ನನಗೆಯೆ ಸಮಾಧಾನ ಹೇಳಿಕೊಂಡೆ.

ಏನಿದ್ದರೂ ಮನೆಯಲ್ಲಿಯ ಈ ಕೃತ್ರಿಮ ಶಾಂತ ವಾತಾವರಣ, ಉರಿಗಾಳಿಯನ್ನು ಬೀಸಿದಂತೆ ಆಗಿದ್ದ ಆ ಮಸಣ ಮೌನ ನನಗೆ ತೀರ ಅಸಹ್ಯಕ್ಕಿಟ್ಟುಕೊಂಡಿತು. ಅವಳು ಚಹ ತಂದಾಗ 'ಏನಾಯ್ತು' ಎಂದು ಇಷ್ಟು ಕೇಳಿಬಿಡುತ್ತೇನೆ ಎಂದು ನಿರ್ಧರಿಸಿ ಕುಳಿತೆ. ಆದರೆ ಚಹ ಹಿಡಿದು ಕೊಂಡು ಬಂದಾಗಿನ ಅವಳ, ಹಿಂದೆ ಎಂದೂ ಆಗಿರದ ಬಿಮ್ಮನೆಯ ಮುಖ ನೋಡಿದಾಗ, ಮತ್ತೆ ನನ್ನ ನಾಲಗೆ ಹಿಂಜರಿಯಿತು.

ಒಂದು ದಿನ. ಅವತ್ತು ನಾನು ಎಂದಿನಂತೆ ಸಂಜೆ ಮನೆಗೆ ಬಂದು ಹೊರಬೀಳುವುದರ ಬದಲು, ಮನೆಗೆಯೆ ಎಂಟು ಗಂಟೆಗೆ ಬಂದೆ. ಅದೇ ಒಂದು ಸಣ್ಣ ತಪ್ಪಾಯಿತೆಂಬಂತೆ ಪರಿಸ್ಥಿತಿ ಇತ್ತು. ಸುನಂದೆ - ನಮ್ಮಿಬ್ಬರ ಅತ್ಯಂತ ಅಚ್ಚೆಯ

ಮುದ್ದುಗುವರಿಗೆ ಜ್ವರವು ಏರಿ ಬಂದಿದ್ದಿತು. ಈಕೆ ಸುನಂದೆಯನ್ನು ತೊಡೆಯ ಮೇಲೆ ಮಲಗಿಸಿಕೊಂಡು ನಡುಮನೆಯಲ್ಲಿ ಕುಳಿತಿದ್ದಳು. ಒಂದು ಕ್ಷಣ ಆಕೆ ನನ್ನನ್ನು ನೋಡಿದಳು. ಅದೇ ಸಿಟ್ಟಿಕಾರವಾದ ಎಂದಿನ ಆ ನೋಟ. ತುಸು ಹೊತ್ತಿನ ಮೇಲೆ ಮಗುವಿನ ಬಗಲಲ್ಲಿ ಇಟ್ಟಿದ್ದ ಥರ್ಮಾಮೀಟರನ್ನು ಹೊರತೆಗೆದು ನೋಡಿದಳು. ಮಾತಿಲ್ಲ.

ಮಗುವಿಗೆ ಏನು ಜಡ್ಡಾಗಿದೆ ಎಂಬ ಮಾತು ಹಡೆದ ತಂದೆಗೂ ತಿಳಿಯದ ಸ್ಥಿತಿಯೆ? ನನ್ನಲ್ಲಿ ಈ ಅಸಹಾಯ ಸಿಟ್ಟು ಹೊಗೆಯಾಡುತ್ತಿದ್ದಾಗಲೇ ಲಗುಬಗೆಯಿಂದ ಬಟ್ಟೆ ಬದಲಾಯಿಸಿ, ಕೈಕಾಲು ತೊಳೆದುಕೊಂಡವನೆ ಮಗುವಿನ ಹಣೆಯನ್ನು ಮುಟ್ಟಿ ನೋಡಿದೆ. ಸುಡುತ್ತಿತ್ತು. ಥರ್ಮಾಮೀಟರ 102 ಡಿಗ್ರಿಯನ್ನು ತೋರಿಸುತ್ತಿತ್ತು. ಈಕೆ ಬಹು ಹೊತ್ತು ಇಲ್ಲಿಯೆ ಕುಳಿತಿರುವಳೆಂದೂ, ಅಡಿಗೆಯ ಮನೆಯ ಕೆಲಸವಾವುದೂ ಆಗಿಲ್ಲವೆಂದೂ ಕಂಡುಬಂತು. ಕೂಡಲೇ ಒಳಬಂದು ನಾನಾಗಿ ಅವಳ ತೊಡೆಯಿಂದ ಮಗುವನ್ನು ಎತ್ತಿಕೊಂಡು, ನನ್ನ ತೊಡೆಯ ಮೇಲೆ ಮಲಗಿಸಿಕೊಂಡೆ. ಸುನಂದೆಗೆ ನಾನು ಬಂದದ್ದು ತಿಳಿದಾಗ, ಆನಂದದ ನಿಮ್ನ ರೇಖೆಯು ಅವಳ ನಿತ್ರಾಣವಾದ ಎಳೆಯ ಮುಖದಲ್ಲಿ ಮಿನುಗಿತು. ಮಗುವನ್ನು ತಬ್ಬಿ, ಚುಕ್ಕು ಬಡಿದೆ. ಆ ಗುಂಗಿನಲ್ಲಿ ಸುನಂದೆ ನಿದೆ ಮಾಡತೊಡಗಿದಳು. ಅವಳನ್ನು ಮೆಲ್ಲನೆ ಹಾಸುಗೆಯ ಮೇಲೆ ಮಲಗಿಸಿ, ಡಾಕ್ಟರರ ಮನೆಗೆ ಓಡಿದೆ.

ಡಾಕ್ಟರರ ಮನೆಯೆಂದರೆ ನಾವಿರುವ ಓಣಿಯಲ್ಲಿಯೇ ಕೊನೆಯಲ್ಲಿದೆ. ಅವರು ಹೊಸದಾಗಿ ಪ್ರಾಕ್ಟೀಸು ಸುರುವು ಮಾಡಿದ್ದರಿಂದ ಮನೆಗೆ 9 ಗಂಟೆಯ ಒಳಗೇ ಬಂದುಬಿಡುತ್ತಿದ್ದರು. ನಾನು ಮನೆಗೆ ಹೋದಾಗ ಅವರಿನ್ನೂ ಬಂದಿರಲಿಲ್ಲ. ಮಗುವಿಗೆ ಗುಣವಿಲ್ಲವೆಂದೂ, ಮನೆಗೆ ಬಂದೊಡನೆಯೆ ಕೂಡಲೇ ಬಂದು ನೋಡಿಕೊಂಡು ಹೋಗಬೇಕೆಂದೂ ಅವರ ಪತ್ನಿಗೆ ತಿಳಿಸಿ ಬಂದೆ.

ನಾನು ಡಾಕ್ಟರರಲ್ಲಿಗೇ ಹೋಗಿದ್ದೆನೆಂದು ಅವಳು ಊಹಿಸಿರಲು ಸಾಕು ಎಂದು ಅನಿಸಿತು. ಏನಿದ್ದರೂ ಮನೆಗೆ ಬಂದು ಡಾಕ್ಟರರ ಸುದ್ದಿಯನ್ನು ನಾನಾಗಿ ಅವಳೆದುರು ಎತ್ತುವ ನೆವದಲ್ಲಿ ನಮ್ಮ ಪಣವನ್ನು ಮುರಿಯಬೇಕೆಂದು ನಿರ್ಧರಿಸಿದೆ. ಮನೆಯ ಯಜಮಾನನಾಗಿ ನನ್ನ ಕರ್ತವ್ಯದಲ್ಲಿ ನಾನು ದೂರವಿರುವಂತಾಗಬಾರದು ಎಂಬ ಅಳುಕು ನನ್ನಲ್ಲಿ ಜಾಗ್ರತವಾಗಿತ್ತು. ಮನೆಯ ಒಳಗೆ ಕಾಲಿರಿಸಿದೊಡನೆಯೇ, ಊಟಕ್ಕೆ ಕುಳಿತಿದ್ದ ಮನಮೋಹನನು, 'ಅಪ್ಪಾ, ಎಲ್ಲಿಗೆ ಹೋಗಿದ್ದೀ?' ಎಂದು ಕೇಳಿದ.

''ಡಾಕ್ಟರರ ಕಡೆಗೆ ಹೋಗಿದ್ದೆ. ಮನೀಗೆ ಬಂದಕೂಡಲೇ ಕಳಿಸಿಕೊಡ್ರಿ, ಅಂತ ಹೇಣ್ತಿಗೆ ಹೇಳಿ ಬಂದೆ'' ಎಂದೆ ನಾನು.

ಆದದ್ದೇನು? ಅದರಿಂದ ನಾನಾಗಿ ಈಕೆಯೊಡನೆ ಮಾತನಾಡುವ ಪ್ರಸಂಗ ತಪ್ಪಿ ಬಿಟ್ಟಿತು. ಇವಳದಾದರೂ ಎಷ್ಟು ಹಟ ಎಂದು ಬೇಸರವೂ ಆಯಿತು. ದಿನದಂತೆ ಹಾಕಿದ ತಾಟಿನ ಮೇಲೆ ನಾನೂ ಬಂದು ಕುಳಿತೆ. ಮೂವರೂ ಊಟದ ಶಾಸ್ತ್ರ ಮುಗಿಸಿದೆವು. ಮಧ್ಯದಲ್ಲಿ ತೊದಲು ನುಡಿಯನ್ನು ಆಡುತ್ತ ರಂಜಿಸುವ ಸುನಂದೆ ಊಟದ ವೇಳೆಗೆ ಬಳಿಯಲ್ಲಿ ಇರಲಿಲ್ಲ.

ಮಗುವಿನ ಜ್ವರ ಹಾಗೇ ಇತ್ತು. ಗಂಟಲು ಒಣಗಿದೆಯೆಂದು ಈಕೆಯು ಗ್ಲುಕೋಸ ನೀರನ್ನು ಕುಡಿಸಿದಳು. ಡಾಕ್ಟರರು ಇನ್ನೂ ಬರಲಿಲ್ಲ. ಬಹಳ ದಾರೀ ಕಾಯ್ದು ಬೇಸತ್ತು ನಾನು ಇನ್ನೊಮ್ಮೆ ಅವರ



ನೆಗೆ ಹೋದೆ. ಆಗೂ ಅವರು ಬಂದಿಲ್ಲ ಂದು ತಿಳಿದು, ಅವರ ಪತ್ನಿಯಂತೆ ನನಗೂ ಚ್ಚರಿ ಎನಿಸಿತು.

ಮನೆಯಲ್ಲಿ ಯಾರಿಗಾದರೂ ಸಣ್ಣ ಜಡ್ಡು ಂದರೂ ಸಾಕು. 'ಈಕೆ'ಯು ಬಲು ಗಾಬರಿ ಯಾಗುತ್ತಾಳೆ. ಎಷ್ಟೋ ಸಲ, ನೆರೆಯವರು, ದೇಕೆ ಸ್ವತಃ ಅವಳ ತವರು ಮನೆಯವರೂ ಡ ಅವಳ ಈ ಅತಿಯಾದ ಪುಕ್ಕಲುತನಕ್ಕೆ ಹಾಸ್ಯ ಮಾಡಿದ್ದುಂಟು. ಈಗ ಮಾತ್ರ ಆ ಸಂದರ್ಭ ರಲಿಲ್ಲ. ಎಳೆಯ ಮಗು ಜ್ವರದಲ್ಲಿ ಅಖಂಡ ಯುತ್ತಿತ್ತು. ಅಯ್ಯೋ, ಅವಳೆಷ್ಟು ಗಾಬರಿ ಯಾಗಿದ್ದಾಳೊ ಎಂದು ಒಂದೇ ಸಮನೆ ಮಿಡುಕಿದೆ.

ನಾನು ಹೊರಗಿನ ಕೆಟ್ಟ ಥಂಡಿಯಲ್ಲಿಯೆ ಗರೇಟನ್ನು ಎಳೆದು ಪೂರ್ಣ ಮುಗಿಸಿ ಮನೆಗೆ ಂದಾಗ ಈಕೆಯು ಮುದ್ದೆಯಾಗಿ ಮಲಗಿ ಕೊಂಡಿದ್ದಳು. ನಿದ್ದೆ ಹತ್ತಿದ್ದಿತು. ಅವಳನ್ನು ಎಬ್ಬಿಸ ಹೋಗದೇ ಅಲ್ಲಿಯೆ ರಗ್ಗನ್ನು ಹೊಚ್ಚಿ, ದೀಪವನ್ನು ಆರಿಸಿದೆ. ನಸುಕಿನಲ್ಲಾದರೂ ಡಾಕ್ಟರರನ್ನು ಕರ ತರಲೇಬೇಕು ಎಂದುಕೊಳ್ಳುತ್ತ ಮುಸುಗೆಳೆದೆ.

ಪ್ರತಿ ನಿತ್ಯದ ನಿಯಮದಂತೆ ರಾತ್ರಿ ಎರಡು ಗಂಟೆಯ ಸುಮಾರಿಗೆ ಎಚ್ಚರವಾಗಿ ನಾನು ಕಣ್ಣು ತೆರೆದಾಗ ಮೇಲೆ ದೀಪ ಉರಿಯುತ್ತಿತ್ತು. ನನಗೊ ಅದನ್ನು ಆರಿಸಿದ ಹಾಗೆ ನೆನಪು. ಹೊರಳಿ ನೋಡಿದೆ. ಈಕೆಯು ಎದ್ದು ಕುಳಿತು ಮಗುವಿನ ಹಣೆಗೆ ತಣ್ಣೀರಿನ ಪಟ್ಟಿ ಇಡುತ್ತಿದ್ದಳು. ನಾನು ಗಡ ಬಡಿಸಿ ಎದ್ದೆ. ಅವಳು ಹಚ್ಚಿ ನೋಡಿ ಇಟ್ಟಿದ್ದ ಥರ್ಮಾಮೀಟರನ್ನು ನೋಡಿದೆ. ಜ್ವರ 103 ರ ಗೆರೆಯನ್ನು ದಾಟಿಬಿಟ್ಟಿದ್ದಿತು.

ನಾನೂ ಬಳಿಯಲ್ಲಿ ಕುಳಿತು ಮಗುವಿನ ಹಣೆಗೆ ತಣ್ಣೀರಿನ ಪಟ್ಟಿಯನ್ನು ಇಡುತ್ತಲೂ ಆಕೆ ಅಲ್ಲಿಂದ ಎದ್ದಳು. ಜ್ವರ ಇಳಿಯುವುದಕ್ಕೆ ಅನ್ಯ ಉಪಾಯವಿರಲೇ ಇಲ್ಲ. ಯಾವಾಗ ಬೆಳ ಗಾದೀತೊ ಎಂದು ಎಣಿಸುತ್ತಿದ್ದೆ. ನನ್ನ ಲಕ್ಷ್ಯವೆಲ್ಲ ಮಗುವಿನ ಕಡೆಗೆ ಇರುವಾಗ, ಹೊರಗೆ ಚಪ್ಪಲಿಯ ಸಪ್ಪಳವಾಯಿತು. ಎದ್ದು ನೋಡಿದೆ. ಈಕೆಯು ಕೊರಳಿಗೆ ಸ್ಕಾರ್ಫ ಸುತ್ತಿಕೊಂಡು ಹೊರಗಿನ ಬಾಗಿಲಿನ ಕೊಂಡಿಯನ್ನು ತೆರೆಯು ತ್ತಿದ್ದಳು. ನಾನೇನು ಮಾಡಬೇಕು? ಮೊದಲು ಅವಳನ್ನು ಪ್ರತಿಬಂಧಿಸಿ ನಾನೇ ಡಾಕ್ಟರರ ಕಡೆಗೆ ಹೋಗಬೇಕೆಂದು ನಿರ್ಧರಿಸಿದೆ. ಮಗುವಿನ ಮೈಮೇಲೆ ಬಟ್ಟೆಯನ್ನು ಹೊದಿಸಿ ಬರಬೇಕೆನ್ನು ವಾಗಲೇ ಆಕೆ ಹೊರಗೆ ಕಾಲಿರಿಸಿದ್ದಳು. ಆದರೂ ಧಾವಿಸಿದೆ.

ಆದರೆ ಅವಳು ಹೋಗುವಾಗ ಹೊರಗಿನ ಕೊಂಡಿಯನ್ನು ಎಳೆದುಕೊಂಡು ಹೋಗಿದ್ದಳು! ಯಾಕೆ? ನಾನು ಪ್ರತಿಬಂಧಿಸಬಾರದೆಂದೆ? ಗಾಳಿಗೆ ಬಾಗಿಲು ತೆರೆದೀತು ಎಂಬ ಕಾರಣ ದಿಂದೆಯೆ? ಅಸಹಾಯಕ ಮನಸ್ಥಿತಿಯಲ್ಲಿ ನಾನು ಮತ್ತೆ ಮಗುವಿನ ಬಳಿಗೆ ಬಂದೆ. ಲಕ್ಷ್ಯವೆಲ್ಲ ಹೆಂಡತಿಯ ಕಡೆಗೇ ಇದ್ದಿತು. ಮಧ್ಯರಾತ್ರಿಯಲ್ಲಿ ಏಕಾಕಿಯಾಗಿ, ಯಾರೂ ದಿಕ್ಕಿಲ್ಲವೆಂಬಂತೆ ನನ್ನ ಹೆಂಡತಿ ಡಾಕ್ಟರರನ್ನು ಕರತರಲು ಉದ್ಯುಕ್ತ ಳಾಗಬೇಕಾಯಿತೆ? ಈ ಮನೆಯಲ್ಲಿ ನನ್ನ ಸ್ಥಾನ ಏನು? ಹೊರಗಿನವನಂತೆ, ಸಂಬಂಧವಿಲ್ಲ ದವನಂತೆ ನಾನು ಇರಬೇಕಾಯಿತೆ? ಮಾತನಾಡಲೇ ಕೂಡದೆಂಬ ಇವಳ ಹಟವಾದರೂ ಎಷ್ಟು. ಎಲ್ಲ ವನ್ನೂ ತಾನೇ ಮಾಡಿಕೊಳ್ಳುವ ಇವಳ ಧಿಮಾ ಕನ್ನು ಸಡಲಿಸದೆ ಹೋದರೆ ನನ್ನ ಹೆಸರೇ ಅಲ್ಲ. ಮಾಡುತ್ತೇನೆ. ಚೆನ್ನಾಗಿ ಇವಳಿಗೆ ದಂಡಿಸುತ್ತೇನೆ...

ಆಗಿನ ಪ್ರತಿಯೊಂದು ಮಿನಿಟನಲ್ಲಿಯೂ ನಾನು ಉದ್ವಿಗ್ನತೆಯಿಂದ ಬೇಯುತ್ತಿರುವಾಗ ಡಾಕ್ಟರು ಬಂದರು. ಅವರು ಕೂಡಲೇ ಮಗು ವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಮಗುವಿನ ಎದೆ, ಬೆನ್ನು ಹೊಟ್ಟೆಗಳ ಮೇಲೆಯೂ ಒದ್ದೆಯ ಪಟ್ಟಿಯಾಡಿಸಿದರು. ಫ್ಲೂ ಜ್ವರವೆಂದೂ ಗಾಬರಿಗೆ ಕಾರಣವಿಲ್ಲೆಂದೂ ತಿಳಿಸಿದರು. ಅದು, ಇದು ಮಾತನಾಡುತ್ತ ನಾವು ಒಂದು ತಾಸು ವೇಳೆ ಕಳೆದೆವು. ಮಗುವಿನ ಜ್ವರ 101ರ ಗೆರೆಯನ್ನು

ಇಳಿಯತೊಡಗಿತ್ತು. ಅವರ ಸಲಹೆಯ ಮೇರೆಗೆ, ಬೆಚ್ಚಗಿನ ಹಾಲನ್ನು ಕುಡಿಸಿ ಮಲಗಿಸಿದೆವು.

ಮುಂದಿನ ದಿನಗಳಲ್ಲಂತೂ ನಾವು ಮಾತನಾಡದೇ ಇರುವುದು ಒಂದು ಸಹಜ ಸಿದ್ಧ ನಡವಳಿಕೆ ಎಂಬಂತಾಗಿಬಿಟ್ಟಿತು. ಅದರ ಬಗ್ಗೆ ನಾನು ಯೋಚನೆ ಮಾಡುವುದನ್ನೇ ಬಿಟ್ಟಿದ್ದೆ. ಸ್ಪಷ್ಟವಾಗಿ ಹೇಳಬೇಕೆಂದರೆ ಅವಳೊಡನೆಯ ಮಾತಿನ ಜರೂರಿ ನನಗೇನೂ ಇರಲಿಲ್ಲ.

ಆ ದಿನ ಬಂತು. ಯಥಾಪ್ರಕಾರ ಅಂದು ಬೆಳಗಿನ ಆಲ್ಪಸ್ವಲ್ಪ ಮನೆಗೆಲಸಕ್ಕೆ ನೆರವಾದಂತೆ ಮಾಡಿ, ಸ್ನಾನ ಮುಗಿಸಿ ಪೇಪರನ್ನು ಓದುತ್ತ ಕುಳಿತಿದ್ದೆ.

''ಚಹಕ್ಕೆ ಸಕ್ಕರಿ ಹಾಕೇದೋ ಇಲ್ಲೋ ನೋಡ್ರಿ'' ಎಂಬ ಮಾತು ಕೇಳಿಸಿತು. ದನಿ ಹೆಂಡತಿಯದೆಂದೆನಿಸಿದರೂ, ಆಕೆ ಬಾಯಿ ಬಿಟ್ಟರೆ ಅದು ನನಗಾಗಿ ಅಲ್ಲ, ನನಗೆ ಸಂಬಂಧಿಸಿದ್ದೇ ಅಲ್ಲ, ಎಂಬ ಸರಣಿಯು ಬಲು ಚೆನ್ನಾಗಿ ರೂಢಿಯಾಗಿದ್ದಾಗ ಆಕೆ ನನ್ನನ್ನು ಕುರಿತೇ ಆ ಮಾತನ್ನಾಡಿದ್ದಳೆಂದು ನಾನು ತಿಳಿಯಬೇಕಾದರೆ, ಆಕೆ ಅದನ್ನು ಪುನರುಚ್ಚರಿಸಬೇಕಾಯಿತು.

ದಿಙ್ಮೂಢನಾಗಿ ಆಕೆಯನ್ನು ನೋಡತೊಡಗಿದೆ. ಚಹದ ಕಪ್ಪನ್ನು ಹಿಡಿದುಕೊಂಡೇ ನಿಂತಿದ್ದಳು. ಹೌದು ಅವಳೇ ಮಾತನಾಡಿದವಳು! ನನ್ನೊಡನೆ ಮಾತನಾಡಿದ್ದಳು! ಎಲ್ಲ ಬಿಟ್ಟು ಈಗೇಕೆ ಮಾತನಾಡಿದಳು. ಆಡುವ ಪ್ರಸಂಗ ಕುತ್ತಿಗೆಯವರೆಗೆ ಬಂದಾಗ ಆಡಿರಲಿಲ್ಲ. ಈಗ ಏಕೆ? ಅದೂ ಇಷ್ಟು ದಿನ ಬಿಟ್ಟು! ಎಷ್ಟು ದಿನ...?

''ಇವತ್ತಿಗೆ, ಈ ಘಳಿಗೆಗೆ ಬರೋಬ್ಬರಿ ಒಂದು ತಿಂಗಳಾತು ನಾವು ಮಾತುಬಿಟ್ಟು. ನಾ ಮಾತ ಬಿಟ್ಟಪ್ಪರಿಂದ ನಿಮಗ ಏನು ಕೊರತಿ ಆಗಲಿಲ್ಲ. ಕೂಸಿಗೆ 103 ಡಿಗ್ರಿ ಜ್ವರಾ ಬಂದು ಕುದೀತಿದ್ರೂ, ನಿಮಗ, ಅಲ್ಲ ನನಗೂ ನಿಮ್ಮ ಮಾತಿನ ಜರೂರಿ ಬೀಳಲಿಲ್ಲ. ಇನ್ನ ಅದನ್ನ ಕಡಿತನಕಾ ಬಿಡಬಲ್ಲೆ, ಅಂತ ಅನಿಸ್ತು.''

ಕಡೆಯ ವಾಕ್ಯ ನನ್ನನ್ನು ಶಲ್ಯದಂತೆ ತಿ
ಯಿತು. ಆಕೆ ಮುಂದುವರಿಸಿದಳು.

''ಏನೊ ನನ್ನದು ಅಂತ ಹಚಿಗೊಂಡಿದ್ದ
ಅಂತ ಮುಗಿಬಿದ್ದು, ಸ್ವಲ್ಪ ಹೆಚ್ಚು ಕಡಿಮೆ ಆಡತಿದ್ದ
ನಿಮ್ಮ ಮ್ಯಾಲೆ ನನಗ ಏನೊ ಅಧಿಕಾರ ಅದ ಅಂ
ನನ್ನ ಭಾವನಾ ಆಗಿತ್ತು. ನಿಮಗ ಅದು ಸರಿಬ
ಲಿಲ್ಲ. ಜಗಳಾಗತಾವ ಅಂತ ಮಾತುಬಿಡೋ
ಅಂದ್ರಿ. ಸುಧಾರಿಸಿಗೊಂಡು ಇರೋಣ - ಅಂ
ಅನ್ನಲಿಲ್ಲ! ಹೆಂಗ ಇರಬೇಕು ಅನ್ನೋದನ್ನ ನೀ
ನನಗ ತಿಳಿಸಿಕೊಡ್ತೋ ಪ್ರಯತ್ನ ಮಾಡಲಿಲ್ಲ.'

ನನ್ನ ಸಮಸ್ತ ಇಂದ್ರಿಯಗಳೂ ನಿರ್ಜೀ
ವಾಗಿ, ಶ್ರವಣ ಕಾರ್ಯವೊಂದರಲ್ಲಿಯೇ ನ
ಶಕ್ತಿಯೆಲ್ಲ ಕೇಂದ್ರೀಕೃತವಾಗಿ ನಾನು ಅವ
ಮಾತನ್ನು ಕೇಳುತ್ತಲಿದ್ದೆ.


''ಕೂಸು ಅಳತಿದ್ರ, ಕಚೇರಿಗೆ ಹೊತ್ತಾತ
ಅಂತ ಸೆಪಾ ಮಾಡಿ ಭರಕ್ಕನ ನೀವು ಹೋ
ಬಹುದು. ಆದರ ನನಗ ಅದು ಬೇಡಿ ಬಯಸಿ
ಬಿಡದ ಕರ್ಮ. ನಿಮಗ ಬ್ಯಾಡ ಆಗಿ, ನಿಮ್ಮ ವಿಶ
ಸದ ಅಧಿಕಾರ ಕಳಕೊಂಡರೂ, ಈ ಮಕ್ಕಳಿಂ
ನನಗ ಈ ಮನ್ಯಾಗ ಬದುಕುವ ಅಧಿಕಾ
ಉಳಿದದ ಅಂತ ಇಲ್ಲಿ ಇದ್ದೇನಿ. ಇಷ್ಟು, ನಿಮ
ತಿಳಿದಷ್ಟು ದುಡ್ಡು ತಂದು ಹಾಕುವ ಕರ್ತವ್ಯ ನೀ
ಮಾಡತೀರಿ.ಅದು ನನ್ನ ಪುಣ್ಯ. ಮತ್ತ ಈಗ್ಯಾ
ಮಾತಾಡಿಸಿದೆ ಅಂತ ನೀವು ಕೇಳಬಹುದು. ನ
ಹಿಂಗ ವಿಚಾರ ಮಾಡಿದೆ; ನನ್ನಷ್ಟಕ್ಕ ನಾನು
ನಿಮ್ಮಷ್ಟಕ್ಕ ನೀವು, ಸಂಸಾರಕ್ಕ ಮಕ್ಕಳಿಗೆ ಎಷ್ಟ
ಅವಶ್ಯ ಅದನೋ ಅಷ್ಟೇ ನಾವೂ ನೀವು
ಇರಲಿಕ್ಕೆ ಬರತಿದ್ರ, ತೋರಿಕೆಗೆ ಮಾತು ಬಿಡೊ
ಅಗತ್ಯ ಎಲ್ಲಿ ಉಳೀತು? 'ಸುನಂದಾ, ಅಪ್ಪ
ಊಟಕ್ಕ ಕರಿ' ಅಂತ ಹೇಳೂದಕ್ಕೂ, 'ತಾಟ
ಹಾಕೇದ ಊಟಕ್ಕ ಬರ್ರಿ', ಅಂತ ನಾ ಕ
ಯೂದಕ್ಕೂ ಏನು ಫರಕದ ಹೇಳ್ರಿ? ನನಗ ಈ
ಮಾತಿನ ಜರೂರಿ ಬಿತ್ತೂ ಅಂತ ಈಗ ನಾ ನಿಮ

ತೆ ಬರಲಿಲ್ಲ. ಆದರ ಮಾತು ಆಡದೇ ಇರೂ
ರೂರಿ ಉಳೀಲಿಲ್ಲ ಅಂತ ನಾನು ಬಂದೆ.''

ಅಸಹಾಯಕತೆ, ಸಿಟ್ಟು ಎರಡೂ ಎದುರು
ದುರು ನಿಂತು ನನ್ನ ಕಪಾಳಗಳಿಗೆ ಹಾಂಗೊಮ್ಮೆ
ಂಗೊಮ್ಮೆ ತಾಡಿಸುವಂತೆ ನನ್ನ ಪರಿಸ್ಥಿತಿ
ಾಗಿತ್ತು. ಉತ್ತರ ಹೇಳಲು ಬುದ್ಧಿ ಧಾವಿ
ತ್ತಿದ್ದರೂ, ಸಮರ್ಪಕವಾಗಿ ಏನು ಹೇಳ
ೇಕೆಂದು ತಿಳಿಯದೇ ಸುಮ್ಮನೆ ಚಹದ ಕಪ್ಪನ್ನು
ೆತ್ತಿಕೊಂಡೆ. ಚಹ ಕಹಿಯೇನಿರಲಿಲ್ಲ. ಆದರೆ
ನ್ನ ಮುಖ ಕಪ್ಪಿಟ್ಟದ್ದು ನೋಡಿ ಆಕೆ ತಾನು ಸಕ್ಕರೆ
ಾಕಿಲ್ಲವೆಂದು ಭಾವಿಸಿದಳೊ ಏನೊ; 'ಸಕ್ಕರೆ
ರುತ್ತೇನೆ' ಎನ್ನುತ್ತ ಒಳಗೆ ಹೋದಳು.

ಮನೆಯ ವಾತಾವರಣವು ಉಸಿರುಗಟ್ಟು
ಷ್ಟು ಅತ್ಯಸಹ್ಯವಾಗಿದ್ದಾಗ ನಾನು ಕೂಡಲೇ
ಉಟ್ಟ ಧೋತರದ ಮೇಲೆಯೇ ಹೊರಬಿದ್ದೆ. ನನಗದೇ ಯೋಚನೆ: ಇಂದೇ ಏಕೆ ಮಾತನಾಡಿಸಿದಳು? ಅವಳೇ ಮೊದಲು ಆಡಿದರೂ, 'ನೀನೇ ಸೋತೆ... ನೀನೆ!' ಎಂದು ಮನಸ್ಸು ಸಾರುತ್ತಿತ್ತು. ಕಾಯಾ-ವಾಚಾ-ಮನಸಾ ಒಂದು ತಿಂಗಳ ಕಾಲ ದೂರವಿರುವಾಗ ಆಕೆಯಾಗಿಯೆ ಏಕೆ, ಅದೇಕೆ ಮೌನವನ್ನು ಮುರಿದಳು. ಅಲ್ಲ, ಅವಳ ಮಾತಿನಲ್ಲಿ ಅದೇನು ಸತ್ವ! ಅದೆಂಥ ಅಗಾಧ ತಿಳುವಳಿಕೆಯುಳ್ಳವಳಂತೆ ಆಡಿದಳಲ್ಲ....

ನನಗರಿಯದಂತೆಯೇ ನನ್ನ ಕಾಲುಗಳು ಗೆಳೆಯ ವಿಠ್ಠಲಮಾಸ್ತರನ ಮನೆಗೆ ಕರೆದೊಯ್ದುವು.






ಬಾನು ಮುಷ್ತಾಕ್

ಎದೆಯ ಹಣತೆ

ಅರೆ ತೆರೆದಿದ್ದ ಬಾಗಿಲನ್ನು ಸ್ವಲ್ಪ ಸರಿಸಿ, ಮೆಹರುನ್ ಒಳಗೆ ಕಾಲಿಟ್ಟಳೋ ಇಲ್ಲವೋ ಹಜಾರದಲ್ಲಿದ್ದ ದೀವಾನ್ ಕಾಟ್‌ನ ಮೇಲೆ ಅಡ್ಡಾಗಿದ್ದ ಅವಳ ತಂದೆ, ಅವರೊಡನೆ ಯಾವುದೋ ವಿಷಯವನ್ನು ಮೆಲುದನಿಯಲ್ಲಿ ಮಾತನಾಡುತ್ತಿದ್ದ ದೊಡ್ಡಣ್ಣ ಇಬ್ಬರೂ ಗಪ್ಪೆಂದು ಬಾಯಿಮುಚ್ಚಿ ಅವಳನ್ನೇ ನೋಡಲಾರಂಭಿಸಿದರು. ಒಳಗಿನಿಂದ ಓಡಿಬಂದ ಎರಡನೆ ಅಣ್ಣ ಅಮಾನ್‌ನ ಮಗಳು ರಾಜಿಯ 'ಮೆಹರುನ್ ಫುಪ್ಪು (ಅತ್ತೆ) ಬಂದರು' ಎಂಬ ಕೂಗು ಹಾಕಿದ್ದೇ ತಡ ತನ್ನ ಕೋಣೆಯಲ್ಲಿದ್ದ ಅಮಾನ್ ಶೇವ್ ಮಾಡಲು ಸಾಬೂನಿನ ನೊರೆ ಹಚ್ಚಿದ್ದ ಗಲ್ಲದೊಡನೆ ಕೈಯಲ್ಲಿ ಬ್ರಷ್ ಹಿಡಿದಿದ್ದಂತೆಯೇ ಹಜಾರಕ್ಕೆ ಬಂದು ನಂಬಲಾರದವನಂತೆ ನೋಡತೊಡಗಿದ. ತಮ್ಮ ಕೋಣೆಯಲ್ಲಿ ಮಕ್ಕಳಿಗೆ ರಾಗವಾಗಿ ಕುರ್ ಆನ್ ಹೇಳಿಕೊಡುತ್ತಿದ್ದ ಅವಳ ದೊಡ್ಡ ಅತ್ತಿಗೆ ತಲೆಯ ಮೇಲಿನ ಸೆರಗು ಜಾರುತ್ತಿರುವುದರ ಪರಿವೆಯೂ ಇಲ್ಲದೆ ಹಜಾರಕ್ಕೆ ಬಂದು ನಿಂತು ದಿಟ್ಟಿಸತೊಡಗಿದಳು. ಕೃಶವಾದ ಕೈಗಳ ಅವಳ ತಾಯಿ ತಸ್‌ಬೀಹ್ (ಜಪಮಾಲೆ) ಹಿಡಿದಿದ್ದಂತೆಯೆ ಬಂದು 'ನಿಜವೇ? ಇದು ನಿಜವೇ?' ಎನ್ನುವಂತೆ ದೃಷ್ಟಿ ಹಾಯಿಸಿ ಗರಬಡಿದವಳಂತೆ ನಿಂತಳು. ತವದ ಮೇಲಿನ ಚಪಾತಿ ಸುಟ್ಟು ಕರಕಲಾಗುತ್ತಿರುವ ಪರಿವೆಯೂ ಇಲ್ಲದೆ ಹಜಾರದ ಬಾಗಿಲಿನ ಹಿಂಬದಿಯಿಂದ ಅವಳ ತಂಗಿಯರಿಬ್ಬರು-ರೇಹಾನ ಮತ್ತು ಸಬೀಹ-ಇಣುಕುತ್ತಿದ್ದರು. ಸದ್ಯ ತಮ್ಮ ಅಲ್ತಾಫ್ ಮನೆಯಲ್ಲಿರಲಿಲ್ಲ. ಒಟ್ಟಿನಲ್ಲಿ ಆ ಕ್ಷಣದಲ್ಲಿ.... ಇಡೀ ಮನೆಯೇ ಸ್ತಬ್ಧವಾಗಿಬಿಟ್ಟಿತು. ಅಚೇತನವಾದ ಆ ಮನೆ ಅವಳಿಗೆ ಅಪರಿಚಿತವೆನಿಸತೊಡಗಿತು. ಒಂಬತ್ತು ತಿಂಗಳು ಹೊಟ್ಟೆಯಲ್ಲಿಟ್ಟುಕೊಂಡು ಸಾಕಿದ ತಾಯಿ, ''ಬಂದೆಯಾ... ಬಾ ಮಗಳೇ'' ಅನ್ನಲಿಲ್ಲ. ತನ್ನ ಹರವಾದ ಎದೆಯ ಮೇಲೆ ಕುಣಿದು ಕುಪ್ಪಳಿಸುತ್ತಿದ್ದ ಬಾಲೆಯಿಂದ ಮುದಗೊಳ್ಳುತ್ತಿದ್ದ ತಂದೆ ಕಿರುನಗೆ ಬೀರಲಿಲ್ಲ. ಯಾವಾಗಲೂ ಮೈದಡವಿ 'ನನ್ನ ಪರಿ' (ಗಂಧರ್ವ ಕನ್ಯೆ) ಎಂದು ಬೀಗುತ್ತಿದ್ದ ದೊಡ್ಡಣ್ಣನಾಗಲೀ, ಅವಳನ್ನು ಕಾಲೇಜಿಗೆ ಕಳಿಸಲೇಬೇಕೆಂದು ಹಟ ಮಾಡಿದ್ದ ಅಮಾನ್‌ನಾಗಲೀ ಅವಳನ್ನು ಸ್ವಾಗತಿಸಲಿಲ್ಲ. ಅವರ ಹೆಂಡತಿಯರಿಬ್ಬರೂ ಬೇರೆ ಗ್ರಹದ ವಿಲಕ್ಷಣ ಜೀವಿಯನ್ನು ನೋಡುವಂತೆ ಅವಳನ್ನು ನಿಟ್ಟಿಸುತ್ತಿದ್ದರು.

ಮೆಹರ್‌ಳ ಹೃದಯ ಕುಸಿಯಿತು. ಕಂಕುಳಲ್ಲಿದ್ದ ಒಂಬತ್ತು ತಿಂಗಳ ಮುದ್ದಾದ ಹೆಣ್ಣುಕೂಸು ಕಿಟಾರನೆ ಕಿರುಚಿದಾಗಲೇ ಎಲ್ಲರೂ ಎಚ್ಚರಗೊಂಡದ್ದು. ದೊಡ್ಡಣ್ಣ



ದೊಡ್ಡ ಗಂಟಲಿನಲ್ಲಿಯೇ ಕೇಳಿದ ''ಇನಾಯತ್ ಎಲ್ಲಿ?'' ಅವಳು ತಲೆತಗ್ಗಿಸಿ ಅಪರಾಧಿನಿಯಂತೆ ನುಡಿದಳು.

''ಅವರು ಊರಲ್ಲಿಲ್ಲ.''

''ಮತ್ತೆ ಯಾರ ಜೊತೆ ಬಂದೆ?''

''ನಾನೊಬ್ಬಳೇ...''

''ಒಬ್ಬಳೇ...?'' ಸುತ್ತಲಿಂದ ಹೊರಟ ಉದ್ಗಾರಗಳು ಅವಳನ್ನು ಅಚೇತನಗೊಳಿಸಿದವು. ಇನ್ನೂ ಅವಳು ಹೊಸಿಲ ಬಳಿಯೇ ಇದ್ದಳು.

''ಪಾರೂಕ್.... ಅವಳನ್ನು ರೂಮೊಳಗೆ ಕರೆದುಕೊಂಡು ನಡಿ'' ಅವಳ ಭಾರವಾದ ಹೆಜ್ಜೆಗಳು ತಡವರಿಸುತ್ತ ಕೋಣೆಯತ್ತ ನಡೆದವು. ಒಳಕೋಣೆಯಲ್ಲಿ ನ್ಯಾಯಾಲಯವೇರ್ಪಟ್ಟಿತ್ತು; ಅವಳ ಕೂಸು ಕಿರಿಚತೊಡಗಿತು. ಬುರ್ಕ ಕೂಡ ತೆಗೆಯದೆ, ಅದರ ನಿಕಾಬ್ (ಮೇಲುವಸ್ತ್ರ) ಮಾತ್ರ ಮೇಲಕ್ಕೆ ಸರಿಸಿ, ತಂದೆಯ ಮಂಚದ ಮೇಲೆ ಸ್ವಲ್ಪ ಓರೆಯಾಗಿ ಕುಳಿತು ಮಗುವಿನ ಬಾಯಿಗೆ ಮೊಲೆಯನ್ನಿತ್ತಳು. ಅವಳು ಮುಖ ತೊಳೆದಿರಲಿಲ್ಲ. ಮಗುವು ಹಾಲನ್ನು ಚೀಪಿದಂತೆ ಅವಳ ಹೊಟ್ಟೆಯಲ್ಲಿ ಉರಿಯಾಗುತ್ತಿತ್ತು. ರಾತ್ರಿಯೂ ಅವಳು ಊಟ ಮಾಡಿರಲಿಲ್ಲ. ಈ ಸಭೆಗೆ ಅವಳ ತಾಯಿಯೊಬ್ಬಳ ಹೊರತು

ಇನ್ಯಾರೂ ಹೆಂಗಸರು ಬರುವಂತಿರಲಿಲ್ಲ. ಆದರೆ ವಯಸ್ಸಿನಿಂದ ನಿತ್ರಾಣಗೊಂಡಿದ್ದ ತಂದೆ ಮಂಚದ ಮೇಲೆ ಒರಗಿ ಕುಳಿತಿದ್ದರು. ಎಂದಿನಿಂದಲೂ ದರ್ಪದ ಅಪರಾವತಾರವೇ ಆಗಿದ್ದ ದೊಡ್ಡಣ್ಣ ಕುರ್ಚಿಯ ಮೇಲೆ ಕುಳಿತಿದ್ದ. ಮದುವೆಗೆ ಮೊದಲು ಬಂಡಾಯಗಾರನಾಗಿದ್ದು ತನ್ನ ಪ್ರೀತಿಯ ವ್ಯವಹಾರವನ್ನು ಅತ್ಯಂತ ಗೌಪ್ಯ ವಾಗಿಟ್ಟು ಮೆಹರುನ್‌ಳ ಸಹಾಯದಿಂದ ಮನೆಯ ಹಿರಿಯರಿಂದಲೇ ಮದುವೆಯ ಆದೇಶ ಬರು ವಂತೆ ಜಾಣಾಕ್ಷತನ ಮೆರೆದು ಸಂತೃಪ್ತನಾಗಿದ್ದ ಅಮಾನ್ ಕೈಕಟ್ಟಿ ಗೋಡೆಗಾನಿಸಿ ನಿಂತಿದ್ದ. ಒಬ್ಬೊಬ್ಬರೂ ಗಂಭೀರ ಮುಖ ಮುದ್ರೆಗಳಿಂದ ಆ ಕೋಣೆಯ ಉಷ್ಣಾಂಶವನ್ನು ಹೆಚ್ಚಿಸಿದ್ದರು. ಗಾಳಿ ಕೂಡ ಒಳಗೆ ಕಾಲಿಡಲು ಹೆದರಿ ಹೊರ ಗೊರಗೇ ಸುಳಿದಾಡುತ್ತಿತ್ತು.

"ಮೆಹರ್.. ಮನೆಯಲ್ಲಿ ಹೇಳಿ ಬಂದೆಯಾ?"

"ಇಲ್ಲ..."

"ಯಾಕೆ?... ಯಾಕೆ ಹೇಳಿ ಬಂದಿಲ್ಲ? ನಮ್ಮ ಮರ್ಯಾದೆ ಕಳೀಬೇಕೂಂತ ಪೂರ್ತ ಮನಸ್ಸು ಮಾಡಿರೋಹಾಗಿದೆ ನೀನು."

"ಯಾರಿಗೆ ಹೇಳಿ ಬರಬೇಕಿತ್ತು? ಯಾರಿದಾರೆ ಅಲ್ಲಿ? ಅವರು ಮನೆಗೆ ಬಾರದೆ ಒಂದು ವಾರ ಆಯಿತು. ಇಂಥ ಕಡೆ ಹೋಗ್ತೀನಿ ಅಂತಾನೂ ಹೇಳಿ ಹೋಗಿಲ್ಲ. ನಿಮಗೆ ಕಾಗದ ಬರೆದಿದ್ದೆನಲ್ಲ; ನೀವು ಕೂಡ ನನ್ನನ್ನ ಸತ್ತೆಯಾ ಬದುಕಿದೆಯಾ ಅಂತ ಕೇಳ್ಲಿಲ್ಲ.."

"ನಿನ್ ಗಂಡ ಯಾವಳೋ ನರ್ಸಿನ ಹಿಂದೆ ಹೋಗಿದಾನೆ ಅಂತ ಬರೆದಿದೀಯಲ್ಲ ಅದನ್ನ ನಂಬಬೇಕೇನು ನಾವು?"

"ನಂಬಿಕೆ ಬರದೆ ಇದ್ರೆ ಬಂದು ವಿಚಾರಿಸ ಬೇಕಿತ್ತು. ಕಂಡವರಿದ್ದಾರೆ ಅವಳ ಸಹವಾಸದಲ್ಲಿ ಅವರಿದ್ದದ್ದನ್ನ."

"ಕಂಡೇನು ಮಾಡಬೇಕಾಗಿದೆ? ಅವನನ್ನ ನಾವು ಕೇಳಿದ್ವಿ ಅಂತಿಟ್ಕೊ... ಹೌದು... ನಿಜ... ಅಂತಾನೆ. ನಾವೇನು ಮಾಡೋ ಹಾಗಿದೀವಿ? ಮಸೀದಿಗೆ ಅರ್ಜಿ ಕೊಡೋಣ್ವೆ? ತಪ್ಪಾಗಿದೆ... ಅವಳ್ನ ಮುಸ್ಲಿಮಳನ್ನಾಗಿ ಮಾಡ್ಕೊಂಡು ನಿಕಾಹ್ ಮಾಡ್ಕೊತೀನಿ ಅಂತಾನೆ. ಅಲ್ಲಿಗೆ ಒಬ್ಳು ಪರ್ಮ ನೆಂಟಾಗಿ ಸವತಿ ಆಗ್ತಾಳೆ ನಿಂಗೆ. ಇನ್ನೂ ಜೋರು ಮಾಡಿದ್ವಿ ಅಂತಿಟ್ಕೊ. ಈ ಮೆಹರ್ ಅನ್ನೋ ಹೆಂಗಸು ನನಗೆ ಬೇಕಿಲ್ಲ, ತಲಾಕ್ ಕೊಡ್ತೀನಿ ಅಂತಾನೆ. ನಾವೇನ್ ಮಾಡೋಹಾಗಿದೀವಿ...?"

ಇಷ್ಟು ಹೊತ್ತಿಗಾಗಲೇ ಅವಳು ಬಿಕ್ಕಳಿಸ ತೊಡಗಿದಳು. ಮಗುವನ್ನು ಇನ್ನೊಂದು ಕಡೆ ಬದಲಾಯಿಸಿ ಹಾಲೂಡಿಸುತ್ತ ಬುರ್ಕದೊಳ ಗಿಂದ ಸೀರೆಯ ಸೆರಗನ್ನು ಹೊರಗೆಳೆದು ಕಣ್ಣು, ಮೂಗು ಒರೆಸಿಕೊಳ್ಳತೊಡಗಿದಳು. ಕ್ಷಣಕಾಲ ನೀರವ.

"ಹಾಗಾದ್ರೆ....ನೀವೇನೂ ಮಾಡೋ ಸ್ಥಿತೀಲಿಲ್ಲ... ಅಲ್ವ?"



ಯಾರೊಬ್ಬರೂ ಮಾತನಾಡಲಿಲ್ಲ. ಆದರೆ ಅವಳ ಪ್ರಶ್ನೆಗಳು....? ಅವಳೇ ಮುಂದುವರಿಸಿದಳು. ''ಮದುವೆ ಬೇಡ ಅಂತ ನಿಮ್ಮೆಲ್ಲರ ಕಾಲ್ ಕಟ್ಕೊಂಡೆ; ಕೇಳಿದ್ರ? ಬುರ್ಕ ಹಾಕಿಕೊಂಡೇ ಕಾಲೇಜಿಗೆ ಹೋಗ್ತೀನಿ... ಓದು ನಿಲ್ಲಿಸ ಬೇಡೀಂತ ಗೋಗರೆದೆ. ನನ್ನ ಜೊತೆಯೋರು ಇನ್ನೂ ಮದುವೆಯಾಗಿಲ್ಲ, ನಾನು ಮುದುಕಿಯಾದೆ. ಸಾಲಾಗಿ ಐದು ಮಕ್ಕಳು ಹೊರೆಯಾಗಿ ನನ್ನೆದೆ ಮೇಲೆ ಕೂತಿವೆ. ಅವರಪ್ಪ ಅಂತ ಅನ್ನಿಸ್ಕೊಂಡವ್ರು ನಾಯಿಯ ಹಾಗೆ ಕಂಡೋರ ಹಿಂದೆ ಅಲೀತಿದಾರೆ. ಇಂಥ ಹರಾಮ್ ಕೆಲಸ ಮಾಡುತ್ತಿರೋ ಗಂಡ್ಸಿಗೆ ಹೀಗ್ಯಾಕ್ ಮಾಡ್ತಿದೀಯ ಅಂತ ಕೇಳೋಕೆ ಸಾಧ್ಯವಿಲ್ವ ನಿಮ್ಗೆ?.....''

''ಸಾಕು ಮೆಹರ್ ಸಾಕು....'' ಅವಳ ತಾಯಿ ಕಣ್ಣುಮುಚ್ಚಿ ತಲೆಕೊಡವಿದಳು.

''ಹೌದಮ್ಮ... ನನಗೂ ಸಾಕಾಗಿದೆ, ಮೊದ ಮೊದಲು ಜನರು ಗುಸಗುಸ ಎಂದ್ರು, ನಂತರ ಥಿಯೇಟರ್‌ನಲ್ಲಿ, ಹೋಟೆಲ್ ರೂಮುಗಳಲ್ಲಿ ಅವರನ್ನ ನೋಡಿದೋರು ಬಂದು ನನ್ನೆದುರಿಗೇ ಹೇಳಿದರು. ಆಮೇಲೆ ರಾಜಾರೋಷವಾಗಿ ಅವಳ ಮನೆಗೇ ಹೋಗೋಕೆ ಆರಂಭಿಸಿದರು. ಜನರೆಲ್ಲಾ ಸಾಕಷ್ಟು ಉಗಿದ ಮೇಲೆ ಬೆಂಗಳೂರಿಗೆ ಹೋಗಿ ಸಾವಿರಾರು ರೂ. ಚೆಲ್ಲಿ ಅವಳಿಗೆ ಟ್ರಾನ್ಸ್‌ಫರ್ ಮಾಡಿಸಿಕೊಂಡು ಬಂದಿದಾರೆ. ಈಗ ಎಂಟು ದಿನಗಳಿಂದ ಅವಳ ಜೊತೆಯಲ್ಲೇ ಹಾಳಾಗಿ ಹೋಗಿದಾರೆ. ಎಷ್ಟು ದಿನಾಂತ ಸಹಿಸಲೀ? ಹ್ಯಾಗೆ ಜೀವಿಸ್ಲೀ....''

''ಸಹನೆ ತಂದ್ಕೋ ಮಗಳೇ, ಪ್ರೀತಿಯಿಂದ ಅವನನ್ನ ಸರಿ ದಾರಿಗೆ ತರೋಕ್ಕೆ ಪ್ರಯತ್ನ ಪಡಬೇಕು.''

''ಅಮ್ಮಾ.... ಈ ಮಾತುಗಳು ಬೇರೆ. ಬದುಕು ಬೇರೆ. ನನಗೂ ಮನಸ್ಸು ಅನ್ನೋದಿಲ್ವೆ... ಭಾವನೆಗಳಿಲ್ವೆ... ನನ್ನನ್ನು ತೊರೆದು ಯಾವಳ ಹಿಂದೇನೋ ಅಲೆದ ಮನುಷ್ಯನ್ನ ನಾನು ಗಂಡ ಅಂತ ಗೌರವಿಸೋಕ್ಕೆ ಸಾಧ್ಯವಿಲ್ಲ. ಅವನನ್ನು ನೋಡಿದರೆ ಸಾಕು ನನ್ನ ಮೈಯೆಲ್ಲ ಉರಿಯುತ್ತೆ. ಇನ್ನು ಪ್ರೀತಿಸೋ ಮಾತು ದೂರವೇ ಉಳೀತು. ತಲಾಕ್ ಅವರು ಕೊಡೋದಲ್ಲ; ನಾನೇ ತಗೋತೀನಿ, ನಾನಿನ್ನು ಆ ಮನೆಗೆ ಹೋಗೋದಿಲ್ಲ.''

''ಮೆಹರ್... ಏನು ಮಾತಾಡ್ತಿದೀಯ... ನಿಂದು ಅತಿಯಾಯ್ತು, ಏನೋ ಗಂಡ್ಸು... ಕೊಚ್ಚೆ ತುಳಿದಿದಾನೆ; ನೀರಿರೋ ಕಡೆ ತೊಳ್ಕೊಂಡ್ ಒಳಗ್ ಬರ್ತಾನೆ. ಅವನಿಗ್ಯಾವ ಕಳಂಕಾನೂ ಇಲ್ಲ....'' ಅಮ್ಮನ ದುರ್ಬಲ ಉಪದೇಶ.

ಅವಳು ಉತ್ತರಿಸೋದಕ್ಕೆ ಮೊದಲೇ ಅಮಾನ್ ಅಸಹನೆಯಿಂದ ನುಡಿದ, ''ನಮ್ಮೆದುರಿಗೇ ಎಷ್ಟೊಂದ್ ಮಾತಾಡ್ತಿದಾಳೆ ನೋಡಿ. ಅವನೆದುರೂ ಹೀಗೆ ಬಾಯಿ ಮಾಡಿರ್ಬೇಕು, ಅದಕ್ಕೇ ಅವನು ರೋಸಿಹೋಗಿರೋದು...'' ಸ್ವಲ್ಪ ತಡೆದು ಮೆಲುದನಿಯಲ್ಲಿ ಅವನೆಂದ ''ಇನ್ನು ಈ ಎಲ್ಲವನ್ನೂ ಈ ಮನೆಯ ಸೊಸೆಯರೂ ಕಲಿತರೆ ಚೆನ್ನ....!'' ಅವಳ ದುಃಖ ರೋಷವಾಗಿ ಮಾರ್ಪಟ್ಟು ವಿಷಾದದ ಭಾವ ತಾಳಿತು.

''ವಾದ ಚೆನ್ನಾಗಿ ಮಾಡ್ತೀಯಣ್ಣ. ದೇವ್ರು ನಿಂಗೆ ಚೆನ್ನಾಗಿಟ್ಟಿರ್ಲಿ. ನಾನೇ ಕೆಟ್ಟವಳು ನಿಜ. ನನ್ನ ಕೆಟ್ಟತನ ಏನೂಂತ ಈಗ ಗೊತ್ತಾಗಿದೆ. ಬುರ್ಕ ಬಿಟ್ಟು ಹೊರಗೆ ಬರಲಿಲ್ಲ. ಅವರು ಬುರ್ಕ ತೆಗೆದು ಹಾಕಿ, ಹೊಕ್ಕಳ ಕೆಳಗೆ ಸೀರೆ ಉಟ್ಕೊಂಡ್ ಕೈಲಿ ಕೈ ಹಾಕ್ಕೊಂಡ್ ಮೆರಿ ಅಂತ್ಹೇಳಿದ್ರು. ನೀವು ನನ್ನನ್ನ ಮೊದಲಿನಿಂದ ಬುರ್ಕದಲ್ಲಿ ಮುಚ್ಚಿ ಮುಚ್ಚಿ ತಲೆ ಮೇಲಿನ ಸೆರಗು ಜಾರಿಸದ ಹಾಗೆ ಬೆಳೆಸಿದ್ದಿರಲ್ಲ....ನಂಗೆ ಅದನ್ನ ತೆಗೆದ್ರೆ ಬೆತ್ತಲೆ ನಿಂತ್ಹಂಗಾಗ್ತಿತ್ತು. ಅಲ್ಲಾಹ್‌ನ ಭಯವನ್ನೂ ತುಂಬಿದ್ರಿ. ನಾನು ಹಾಗೆಲ್ಲ ಮಾಡಲು ಒಪ್ಲಿಲ್ಲ. ಅವರ ತಾಳಕ್ಕೆ ತಕ್ಕ ಹಾಗೆ ಕುಣಿಯೋವ್ಳನ್ನ ಕಟ್ಕೊಂಡ್ರು. ಈಗ ನಿಮಗೆಲ್ಲಾ ಅವ್ರು ಬಿಟ್ಬಿಟ್ರೆ ನಿಮ್ ಮೇಲೆ ನಾನು ಹೊರೆಯಾಗ್ತೀನಿ ಅಂತ

ಭಯ. ಅದಕ್ಕೇ ಸಹಿಸ್ಕೊ ಅಂತೀರಿ. ನೀವು ಹೇಳೋದಕ್ಕೆ ಮೊದಲೇ ನನ್ನ ಶಕ್ತಿ ಮೀರಿ ಸಹಿಸ್ಕೊಂಡೆ. ಆದರೆ, ಈಗ ಸಾಧ್ಯವಿಲ್ಲ. ಜೀವಂತ ನರಕದಲ್ಲಿ ಬೇಯೋದಕ್ಕಿಂತ ಎಲ್ಲಾದ್ರೂ ನನ್ ಮಕ್ಕಳ್ ಜೊತೆ ಕೂಲಿ ಮಾಡ್ಕೊಂಡ್ ಹೊಟ್ಟೆ ಹೊರ್ಕೊಳ್ತೀನಿ. ನಿಮಗೆ ಭಾರವಾಗೊಲ್ಲ...

''ಮೆಹರ್.... ಬಳ್ಳಿಗೆ ಕಾಯಿ ಭಾರಾನೆ? ವಿಚಿತ್ರವಾಗಿ ಮಾತಾಡ್ಬೇಡ...'' ಅವಳ ತಾಯಿಯ ಪ್ರತಿಭಟನೆ.

ದೊಡ್ಡಣ್ಣ ಗಂಭೀರ ಧ್ವನಿಯಲ್ಲಿ ಹೇಳಿದ ''ಆ ಮನೆಗೆ ಹೋಗದಿದ್ರೆ.... ಇನ್ನು ಯಾವ ಮನೆ ಇದೆ ನಿನಗೆ? ಅಮ್ಮಾ.... ಇವಳ್ನ ಒಳಗೆ ಕರಕೊಂಡ್ಹೋಗಿ ತಿಂಡಿ ಕೊಡು. ನಾವು ಇನ್ನು ಹತ್ ನಿಮಿಷದಲ್ಲಿ ಚಿಕ್ಕಮಂಗಳೂರಿಗೆ ಹೊರಡ್ತಿದೀವಿ. ಬಸ್ ಇದ್ರೆ ಬಸ್... ಇಲ್ಲಾಂದ್ರೆ ಟ್ಯಾಕ್ಸಿ ತರ್ತೀನಿ. ಇವಳು ಹೇಳಿದ ಹಾಗೆ ನಾವು ಕುಣಿಯೋಕಾಗಲ್ಲ.''

''ನಾನು ನಿಮ್ಮ ಮನೇಲಿ ಒಂದ್ ಹನಿ ನೀರೂ ಕುಡಿಯೋಲ್ಲ. ನಾನು ಚಿಕ್ಕಮಂಗಳೂರಿಗೂ ಹೋಗೋಲ್ಲ. ಮತ್ತೇನಾದರೂ ಜುಲುಮೆಯಿಂದ ನನ್ನನ್ನ ಅಲ್ಲಿಗೆ ಕರ್ಕೊಂಡ್ ಹೋದ್ರೆ, ನಾನು ಬೆಂಕಿ ಹಚ್ಕೊಂಡ್ ಸಾಯ್ತೀನಿ'' ಅಂತ ಅವಳು ಹೇಳಿದರೂ ಒಂದೇ ಕ್ಷಣದಲ್ಲಿ ಅವಳಿಗೆ ಅರ್ಥವಾಗಿ ಹೋಯಿತು. ಇಲ್ಲಿ ತನಗೆ ಯಾವುದೇ ಬೆಲೆ ಇಲ್ಲ, ನೆಲೆಯೂ ಇಲ್ಲ. ಯಾವ ಮನೆ ತನ್ನದು? ಸುತ್ತಲಿಂದಲೂ ನೂರಾರು ಬಾರಿ ಅದೇ ಪ್ರಶ್ನೆ ಪ್ರತಿಧ್ವನಿಸಲಾರಂಭಿಸಿತು. ತಲೆಯಲ್ಲಿ ಅಪ್ಪಳಿಸುತ್ತಿದ್ದ ಅವುಗಳ ಘಾತಕ್ಕೆ ಅವಳು ತತ್ತರಿಸಿ ಒಂದು ಕ್ಷಣ ಕಣ್ಣುಕತ್ತಲಿಟ್ಟಳು. ಅವಳ ಗಂಟಲ ಪಸೆಯಾರಿತು. ತುಟಿಗಳು ಬಿಳುಪೇರಿದವು. ಅವಳ ಹತಾಶ ಸ್ಥಿತಿಯಲ್ಲಿ ಮಗುವಿನ ಬಾಯಿಂದ ಮೊಲೆ ಜಾರಿತು. ಮಗು ಮತ್ತೊಮ್ಮೆ ಚೀರಿತು. ವಿಸ್ಮೃತಿಯ ಆಳದೊಳಗಿಂದ ಪ್ರಜ್ಞೆಯ ಆವರಣದ ಸ್ಪರ್ಶವಾದಾಗ ಅವಳಿಗೆ ಕೇಳಿ ಬಂದದ್ದು ದೊಡ್ಡಣ್ಣನ ಅಧಿಕಾರವಾಣಿ.

''ಅತಿಯಾಯ್ತು ಮೆಹರ್. ಸಾಯೋ... ರ್ಯಾರೂ ಹೇಳ್ಕೊಂಡ್ ತಿರುಗಲ್ಲ. ವಂಶದ ಮರ್ಯಾದೆಯ ಪ್ರಶ್ನೆ ಇದ್ದಿದ್ರೆ.... ನೀನು ಇಲ್ಲಿಗೆ ಬರೋ ಬದ್ಲು ಅದ್ನೇ ಮಾಡ್ತಿದ್ದೆ. ಯಾವ ಮನೆಗೆ ನಿನ್ನ ಡೋಲಿ (ವಧುವನ್ನು ಹೊತ್ತೊಯ್ಯುವ ಪಲ್ಲಕ್ಕಿ) ಹೋಯಿತೋ ಅದೇ ಮನೆಯಿಂದ ನಿನ್ನ ಡೋಲ (ಶವವಾಹಕ) ಹೊರಬರಬೇಕು. ಅದು ಮಾನವಂತ ಹೆಣ್ಣಿನ ಬದುಕು. ಹೈಸ್ಕೂಲಲ್ಲಿರೋ ಮಗಳಿದ್ದಾಳೆ ನಿನಗೆ, ಮದುವೆಗೆ ಸಿದ್ಧವಾಗಿರೋ ಇಬ್ಬರು ತಂಗಿಯರಿದ್ದಾರೆ, ನಿನ್ನ ಒಂದು ತಪ್ಪು ಹೆಜ್ಜೆಯಿಂದ ಅವರ ಭವಿಷ್ಯತ್ತಿಗೆ ತಡೆಯಾಗಬೇಕು ಅನ್ನುತ್ತೀಯ... ಮತ್ತೆ ನಿನ್ನ ಬಾಲಿಶ ಮಾತುಗಳನ್ನು ಕೇಳ್ಕೊಂಡು ನಾವು ಅವನ ಜೊತೆ ಕಾದಾಡಬೇಕೂಂತೀಯ....ನಮಗೂ ಹೆಂಡಿರು ಮಕ್ಕಳಿದ್ದಾರೆ... ಹೋಗು ಒಳಗೆ ತಿಂಡಿ ಮಾಡಿ ಬಾ. ಅಮಾನ್ ಓಡು ನೀನು ಬಸ್ ಇದೆಯಾ ನೋಡು... ಇಲ್ಲದಿದ್ರೆ ಟ್ಯಾಕ್ಸಿ ತಗೊಂಬಾ. ಹಾಗೇ... ಮೆಹರ್! ಹುಷಾರ್! ಇಲ್ಲಿಗೆ ಬಂದಿದ್ದರ ಬಗ್ಗೆ ಚಕಾರ ಎತ್ತಕೂಡದು ನೀನು. ನಿನ್ನ ಮಕ್ಕಳೋ, ಅಕ್ಕಪಕ್ಕದವರೋ ವಿಚಾರಿಸಿದರೆ ಆಸ್ಪತ್ರೆಗೋ ಮತ್ತೆಲ್ಲಿಗೋ ಮಗುವನ್ನು ಕರ್ಕೊಂಡ್ ಹೋಗಿದ್ದೆ ಅಂತ ಹೇಳು. ಎಷ್ಟೊತ್ತಿಗೆ ಹೊರಟೆ ಅಲ್ಲಿಂದ...?''

ಅವಳು ಮಾತನಾಡಲಿಲ್ಲ.


''ಈಗ ಒಂಬತ್ತು ಘಂಟೆ. ಅವಳು ಬಂದದ್ದು ಏಳೂವರೆಗೆ. ಒಂದೂವರೆ ಘಂಟೆಯ ಪ್ರಯಾಣ. ಬೆಳಿಗ್ಗೆ ಆರು ಘಂಟೆಗೆ ಹೊರಟಿರಬಹುದು'' ಅಮಾನ್ ನುಡಿದ.

''ನಾವು ಈಗಿಂದೀಗ್ಲೆ ಹೊರಟ್ರೆ ಹನ್ನೊಂದರವರೆಗೆ ಅಲ್ಲಿರಬಹುದು....'' ಅವಳು ಕುಳಿತಲ್ಲಿಂದ ಕದಲಲಿಲ್ಲ. ಏನನ್ನೂ ತಿನ್ನಲಿಲ್ಲ.

ಅವಳ ತಾಯಿ, ತಂಗಿಯರು ಪರಿಪರಿಯಾಗಿ ಬೇಡಿದರು. ಅಣ್ಣಂದಿರೊಡನೆ ಹೊರಟಾಗ ಯಾರಿಂದಲೂ ಬೀಳ್ಕೊಡಲಿಲ್ಲ. ಮೆಟ್ಟಿಲಿಳಿಯುವಾಗ ಒಮ್ಮೆ ಹಿಂದಿರುಗಿ, ತಾನು ಹುಟ್ಟಿ ಬೆಳೆದ ಮನೆಯನ್ನು ನೋಡಿ ಕಣ್ತುಂಬ ನೀರು ತುಂಬಿಕೊಂಡಳು. ಅವಳ ತಂದೆ ಕೆಮ್ಮುತ್ತ ಎದೆ ಹಿಡಿದುಕೊಂಡರು, ಕ್ಷಣದಲ್ಲಿ ಅವರಿಗೆ ತೇಲುಗಣ್ಣು ಮೇಲುಗಣ್ಣಾಯಿತು. ಅವಳ ತಾಯಿ, ಬಿಕ್ಕುತ್ತ ಒಮ್ಮೆ ಮಗಳತ್ತ ನೋಡುತ್ತ, ಇನ್ನೊಮ್ಮೆ ಗಂಡನನ್ನು ಮಲಗಿಸಿ, ಗಾಳಿ ಹಾಕುತ್ತಾ, ನೀರು ತಟ್ಟುತ್ತಾ ತನ್ನಲ್ಲಿ ತಾನೇ ಆರ್ತಳಾಗಿ ಬೇಡಿಕೊಳ್ಳುತ್ತಿದ್ದಳು. ''ದೇವರೆ! ನನ್ನ ಇಡೀ ಬದುಕಿನ ಯಾವುದಾದರೂ ಪುಣ್ಯವಿದ್ದರೆ..... ನನ್ನ ಮಗಳ ಬದುಕನ್ನು ನೇರಗೊಳಿಸು....''

ಅಮಾನ್ ಕಾರಿನ ಬಾಗಿಲನ್ನು ತೆರೆಯುತ್ತಾ, ಒಳಹೋಗಿ ಕೂರುವಂತೆ ಮೆಹರುನ್‌ಗೆ ಕಣ್ಣಿನಲ್ಲಿಯೇ ಆದೇಶ ನೀಡುತ್ತಾ ಕೆಳದನಿಯಲ್ಲಿ ತನ್ನಷ್ಟಕ್ಕೆ ತಾನೇ ಗೊಣಗಿಕೊಳ್ಳುತ್ತಿದ್ದ. ಅವಳ ಅನಿರೀಕ್ಷಿತ ಆಗಮನ ಅವನಿಗೆ ಒಂದಿನಿತೂ ಒಪ್ಪಿಗೆಯಾಗಿರಲಿಲ್ಲವೆಂಬುದು ಅವನ ಮುಖಭಾವದಿಂದಲೇ ಪ್ರಕಟವಾಗುತ್ತಿತ್ತು. ಮೆಹರುನ್‌ಳ ಚೈತನ್ಯವೆಲ್ಲವೂ ಸೋರಿಹೋಗಿತ್ತು. ಗಂಡನ ವರ್ತನೆಯಿಂದ ಬೇಸತ್ತು ಬಂದ ತನಗೆ ತವರಿನಲ್ಲಿ ಆಸರೆ ಸಿಗುವುದೆಂಬ ಅವಳ ನಿರೀಕ್ಷೆ ಹುಸಿಯಾಗಿತ್ತು. ಅವಳ ಅಣ್ಣಂದಿರ ಮೇಲೆ ಅವಳಿಗಿದ್ದ ಅಭಿಮಾನವನ್ನು ಒಮ್ಮೊಮ್ಮೆ ಅವಳು ಹೊರಗೆಡವುತ್ತಿದ್ದಳು, ಅವಳ ಗಂಡ ಇನಾಯತ್ ಮೇಲೆ ಕೋಪಗೊಂಡಾಗ ಇಲ್ಲವೇ ನಗೆ ಚಾಟಿಕೆಯಲ್ಲಿ. ಅವಳು ಆತನನ್ನು ಹೆದರಿಸುತ್ತಿದ್ದುದೂ ಉಂಟು.

'ಏನ್ ತಿಳ್ದಿದೀರಿ ನೀವು – ಶೇರ್-ಎ-ಬಬ್ಬರ್ (ಹೆಬ್ಬುಲಿಗಳಂತೆ) ನಂತಿದಾರೆ ನನ್ನ ಅಣ್ಣಂದಿರು! ನೀವು ಹೀಗೇ ಆಡ್ತಿದ್ರೆ.... ನಿಮ್ಮನ್ನ ಅವ್ರು ಒಂದಿನ ಕೊಚ್ಚಿ ಎಸೀತಾರೆ.... ಹುಷಾರ್'



ಅವಳ ಈ ಪ್ರತಾಪ... ಹೀಗೆ ನೀರ್ಗುಳ್ಳೆಯಂತೆ ಕ್ಷಣಿಕವಾದದ್ದು.... ಅಣ್ಣ ಹೇಳಿದ್ದು ಅವಳ ಕಿವಿಗಳಲ್ಲಿ ಗುಂಯ್‌ಗುಡುತ್ತಿತ್ತು. ವಂಶದ ಮರ್ಯಾದೆ ಉಳಿಸುವ ಪ್ರಜ್ಞೆ ಇದ್ದಿದ್ದರಲ್ಲಿ... ಬೆಂಕಿ ಹಚ್ಕೊಂಡು ಸಾಯಬೇಕಿತ್ತು. ಇಲ್ಲಿಗೆ ಬರ ಬಾರದಿತ್ತು... ಛೀ! ತನ್ನದೂ ಒಂದು ಬಾಳು. ಕಾರಿನಲ್ಲಿ ಕೂರುವಾಗಲಾಗಲೀ, ಕುಳಿತ ಮೇಲಾ ಗಲೀ ಅವಳು ಒಮ್ಮೆಯೂ ತನ್ನ ತವರು ಮನೆ ಯತ್ತ ತಿರುಗಿ ನೋಡಲಿಲ್ಲ.... ಕೊನೆಗೆ ಕಿಟಕಿಯಿಂದ ಇಣುಕುತ್ತಿದ್ದ ತಾಯಿಯ ನ್ನಾಗಲೀ..... ಪರದೆಯ ಹಿಂದಿನಿಂದ ಇಣುಕು ತ್ತಿದ್ದ ತಂಗಿಯರನ್ನಾಗಲೀ... ಅತ್ತಿಗೆಯರಂತೂ ತಮ್ಮ ಕೆಲಸದಲ್ಲಿ ನಿರತರಾಗಿರಬಹುದು. ಮುಖದ ಮೇಲೆ ಬಿದ್ದಿದ್ದ ಬುರ್ಖಾದ ತೆರೆಯ ಹಿಂದಿನಿಂದ ಕಣ್ಣೀರ ಕೋಡಿಯೇ ಹರಿಯುತ್ತಿತ್ತು. ಬಿಕ್ಕಳಿಕೆ ಯನ್ನು ಮಾತ್ರ ಅವಳು ತುಟಿಕಚ್ಚಿ ಒಳಗೇ ನುಂಗಿದಳು. ಕಾರು ವೇಗವಾಗಿ ಓಡುತ್ತಿತ್ತು. ಯಾರೊಬ್ಬರೂ ಮಾತನಾಡಲಿಲ್ಲ. ಅಮಾನ್ ಮುಂದಿನ ಸೀಟಿನಲ್ಲಿ ಕುಳಿತಿದ್ದ. ಡ್ರೈವರ್ ಮೊಹಲ್ಲದವನೇ.... ಪರಿಚಿತ ಹುಡುಗ; ಆತನೆದುರು ಸಂಸಾರದ ಗುಟ್ಟನ್ನು ತೋರಗೆಡವು ವುದೆಂತು? ಮೌನ ಪಯಣ ಸಾಗಿತು.

ಇಡೀ ಹದಿನಾರು ವರ್ಷಗಳ ಕಾಲ ಅವನ ಕಾಮಪ್ರೇಮದಾಟದ ದಾಳವಾಗಿದ್ದಕ್ಕೆ.... ಕೊನೆಗೂ ಅವನು ಅವಳ ಹೆಣ್ತನಕ್ಕೆ ಅವಮಾನ ಮಾಡಿದ್ದ. 'ಹೆಣದಂತೆ ಬಿದ್ಕೊಳ್ತೀಯ... ನಿನ್ನಿಂದ ಯಾವ ಸುಖ ಪಡಕೊಂಡೆ?' ಎಂದು ತನ್ನನ್ನೇ ಪ್ರಶ್ನೆಗೆ ಒಡ್ಡಿದ್ದ. ಅವಳನ್ನು ಹೀಗಳೆದು ಅವಳ ಸ್ವಾಭಿಮಾನವನ್ನು ಛಿದ್ರಗೊಳಿಸಿದ್ದ. 'ಹೆಣ್ಣಾ ದವಳಿಗೆ ಎಲ್ಲಿಯ ಸ್ವಾಭಿಮಾನ? ಏನು ಕಡಿಮೆ ಮಾಡಿದೀನಿ ನಿನಗೆ? ಉಡಲು... ಉಣ್ಣಲು ನಿನ್ನನ್ನು ಯಾರು ತಡೆಯುವವರು? ನನ್ನ ಸುಖಕ್ಕೆ ಬೇಕಾದವಳನ್ನು ಕಂಡ್ಕೊಂಡಿದೀನಿ' ಎಂದಿದ್ದ ನವ. ಒಡಹುಟ್ಟಿದವರು ಅದೇ ಧ್ವನಿಯಲ್ಲಿ, ಡೋಲಿ ಹೋದ ಮನೆಯಿಂದಲೇ ಡೋಲ ಹೋಗ್ಬೇಕು... ಇಲ್ಯಾಕೆ ಬಂದೆ?.... ನಡಿಯಾಚೆ ಎಂದರು. ಮತ್ತೊಮ್ಮೆ ಕಣ್ಣೀರ ಮಹಾಪೂರ ಹರಿಯಿತು. ಇದೇ ಆಲೋಚನೆಗಳಲ್ಲಿ ಓಡುತ್ತಿದ್ದ ಮರಗಿಡ, ರಸ್ತೆ ಯಾವುದೂ ಕಂಡು ಬರಲಿಲ್ಲ. ಕಾರು ಒಮ್ಮೆಲೇ ನಿಂತಾಗ ಅವಳು ಅನಾಸಕ್ತಿ ಯಿಂದ ಕಣ್ಣು ಹಾಯಿಸಿದಾಗ.... ಅದೋ! ಅವಳದೇ ಎಂದು ಹೇಳುವ ಮನೆ... ಬಾಗಿಲಿನಲ್ಲಿ ಬಾಡಿದ್ದ ಮೊಗದ ಬಾಲೆಯೊಬ್ಬಳು. ಒಮ್ಮೆಲೇ ಅವಳು ನೆಗೆದು ಕಾರಿನ ಬಳಿಬಂದು, "ಅಮ್ಮಾ..." ಎಂದವಳೇ ಆಕೆಯ ಕೈಯಲ್ಲಿದ್ದ ಮಗುವನ್ನೆತ್ತಿ ಕೊಂಡು ಮನೆಯೊಳಗೆ ನಡೆದಳು.

ಮೆಹರುನ್ ನಿಧಾನವಾಗಿ ಅಡಿಯಿಡುತ್ತಾ ಮನೆಯೊಳಗೆ ಬಂದಳು. ಮನೆ ಬಿಕೋ ಅನ್ನುತ್ತಿತ್ತು. ಅವನಿಲ್ಲ...! ಮಕ್ಕಳು ಶಾಲೆಗೆ ಹೋಗಿದ್ದರು. ತಾಯಿಯ ದುಃಖದ ತೀವ್ರ ತೆಯನ್ನು ಆಕೆಯೊಡನೆ ಅನುಭವಿಸುತ್ತಿದ್ದ ಹಿರಿ ಮಗಳು ಹದಿನಾರರ ಎಳೆಯ ವಯಸ್ಸಿನ ಸಲ್ಮಾ ಅಂದು ಹಿರಿಯಳಾಗಿ ತಾನು ಶಾಲೆಗೂ ಹೋಗದೆ... ತಮ್ಮಂದಿರನ್ನು ತಂಗಿಯರನ್ನು ಶಾಲೆಗೆ ಕಳಿಸಿ ತಾನು ಮಾತ್ರ ಒಮ್ಮೆಲೇ ಹೊರಟು ಹೋದ ತಾಯಿಯ ಆಗಮನವನ್ನು ಎದುರು ನೋಡುತ್ತಾ... ಆತಂಕಪಡುತ್ತಿದ್ದವಳು ಜೊತೆಯಲ್ಲಿ ಮಾವಂದಿರನ್ನು ನೋಡಿ, ಸಮಾಧಾನದ ನಿಟ್ಟುಸಿ ರನ್ನು ಹೊರಚೆಲ್ಲಿದಳು.

ಮಾವಂದಿರನ್ನು ನೋಡಿಯೇ ಅವಳು ಚುರುಕಾದಳು, ಹೇಗೂ ಬಂದಿರುವವರು ತನ್ನ ಅಪ್ಪನಿಗೆ ಬುದ್ಧಿವಾದ ಹೇಳಿಯೇ ಹೇಳುತ್ತಾರೆ. ಆ ಹೆಂಗಸಿನ ಜುಟ್ಟು ಹಿಡಿದು ಹೊರಗೋಡಿಸಿ, ತಂದೆಗೂ ತನ್ನಮ್ಮನಿಗೂ ರಾಜಿ ಮಾಡ್ತಾರೆ, ಮತ್ತೆ ಹಿಂದಿನಂತೆ ಈ ಮನೆ ನೆಮ್ಮದಿಯ ಬೀಡಾಗ ಬಹುದು...

ಅವಳು ಚಿಗರೆಯಂತೆ ಓಡಾಡಿದಳು. ಮಾವಂದಿರಿಗೆ ತಿಂಡಿ ತಂದಿಟ್ಟಳು. ಟೀ

ಕಾಸಿದಳು. ಕೋಣೆಯಲ್ಲಿ ಮಂಚದ ಮೇಲೆ ಬಿದ್ದುಕೊಂಡಿದ್ದ ತಾಯಿಯ ಕಣ್ಣೀರೊರೆಸಿ ಒಂದೊಂದೇ ತುತ್ತನ್ನು ಅವಳು ಬಾಯಿಗಿರಿಸಿ, ಎಂಜಲು ತಟ್ಟೆಯನ್ನು ತೆಗೆದುಕೊಂಡು ಹೊರಬರುತ್ತಿದ್ದಂತೆಯೇ ಚಿರಪರಿಚಿತ ಧ್ವನಿಯೊಂದು ಕೇಳಿಬರಬೇಕೆ?

ಅವಳು ಒಂದೇ ನೆಗೆತಕ್ಕೆ ಮೆಹರುನ್ ಬಳಿ ಓಡಿ ಬಂದಳು. ''ಅಮ್ಮಿ.... ಅಮ್ಮಿ... ಅಬ್ಬಾ ಬಂದಿದಾರೆ...'' ಮೆಹರುನ್ ತನಗೆ ಆ ಮಾತು ಕೇಳಿಸಲೇ ಇಲ್ಲವೆಂಬಂತೆ ಹೊದಿಕೆಯೊಳಗೆ ಸೇರಿದ್ದವಳು ಮುದುಡಿಕೊಂಡು ಮಲಗಿದಳು. ಅವಳ ತಲೆಯ ನರಗಳು ಸಿಡಿಯುತ್ತಿದ್ದವು.

ಹೊರಗೆ... ಹಜಾರದಲ್ಲಿ.... ಸಲ್ಮಾ ಕಿವಿಗೊಟ್ಟು ಆಲಿಸಿದಳು. ಮಾತುಕತೆ.... ನಗು... ಸಲಾಮ್... ಪಯಾಮ್... ''ಅರೇ! ಭಯ್ಯ.... ಯಾವಾಗ ಬಂದಿರ?'' ಇನಾಯತ್, ಮೆಹರುನ್‌ಳ ಗಂಡ ಆತ್ಮೀಯತೆಯಿಂದ ವಿಚಾರಿಸುತ್ತಿದ್ದ. ''ಈಗ ತಾನೇ ಬಂದಿದೀವಿ. ನೀವು ಹೇಗಿದೀರಿ?'' ''ಓಹೋ! ಚೆನ್ನಾಗಿದೀನಿ, ದೇವರ ದಯ. ತಮ್ಮೆಲ್ಲರ ದುವಾ (ಆಶೀರ್ವಾದ).

ಅಮಾನ್‌ನ ಸ್ವರ ''ಎಲ್ಲಿಂದ ಬರ್‍ತಾ ಇದೀರಿ ಇನಾಯತ್?''

''ಇಲ್ಲೇ... ಹೀಗೇ ಇರ್‍ತಾವಲ್ಲ... ವ್ಯವಹಾರಗಳು... ಎಷ್ಟೇ ಆದ್ರೂ... ಬೆಳಗೆದ್ದು ನಾವು ಮನೇಲಿ ಕೂರೋಕಾಗೋದಿಲ್ವಲ್ಲ... ಹಿಹ್ಹಿ ಸಲ್ಮಾ... ಸಲ್ಮಾ... ಅಮ್ಮಾ ಎಲ್ಲಿ? ಇಲ್ಲಿ ನೋಡು ಯಾರು ಬಂದಿದಾರೆ... ಬರಹೇಳು ಅಮ್ಮಿಯನ್ನು...''

ಒಳಗಡೆಯಿಂದ 'ಓ ಇಲ್ಲ.. ಸೋ... ಇಲ್ಲ...' ಈಗ ಮಾತ್ರ ಇನಾಯತ್ ಎಚ್ಚೆತ್ತುಕೊಂಡ ''ಓ! ಇವಳೆಲ್ಲೋ.... ಮಗುವಿನ ಜೊತೆ ಒಳಸೇರಿಕೊಂಡಿರಬೇಕು... ಕರೀತೀನಿ ತಾಳಿ...'' ಅವನು ಒಳಬಂದ. ಎದುರಿಗಿದ್ದ ಮಗಳನ್ನು ನೋಡಿ, ಕೆಳದನಿಯಲ್ಲಿ ಕೇಳಿದ ''ಇವರೆಲ್ಲಾ ಯಾವಾಗ ಬಂದರು?... ನಿನ್ನ ಅಮ್ಮ ಎಲ್ಲಿ...?''

ಸಂಶಯದ ಎಳೆಯೊಂದು ಅವನ ಮನದಲ್ಲಿ ಪುಟಿದೇಳುತ್ತಿತ್ತು.

'ಈಕೆಯೇ... ಕಾಗದ ಬರೆದು ಅಣ್ಣಂದಿರನ್ನ ಕರೆಸಿಕೊಂಡಿರಬಹುದೇ? ಅವರಿಗೆ ಏನಾದರೂ ತಿಳಿದಿದೆಯೇ? ಅಂದ ಹಾಗೆ ಕಾರಿನಲ್ಲಿ ಅವರು ಏಕೆ ಬಂದರು?'

''ಮಾವಂದಿರು ಈಗ ತಾನೇ ಬಂದರು. ಅಮ್ಮಿ ಇನ್ನೂ ಎದ್ದಿಲ್ಲ. ಮಲಗಿಯೇ ಇದ್ದಾರೆ'' ಸಲ್ಮಾ ಬುದ್ಧಿವಂತಿಕೆಯಿಂದ ಉತ್ತರಿಸಿದಳು. ಸಮಾಧಾನದ ಒಂದು ನಿಟ್ಟುಸಿರು.



''ಇನ್ನೂ... ಎದ್ದಿಲ್ಲ... ಏನಾಗಿದೆ ಅವಳಿಗೆ?'' ಅವನು ಅವಳು ಮಲಗಿದ್ದ ಕೋಣೆಯ ಬಾಗಿಲಿಗೆ ಬಂದುನಿಂತ. ಮುದುಡಿ ಮಲಗಿದ್ದ ಅವಳ ಭಂಗಿಯೇ ಅವನಿಗೆ ಅಸಹ್ಯವೆನಿಸಿತು. ತನ್ನ ಮಕ್ಕಳ ತಾಯಿ ಎಂಬುದೊಂದೇ ಅವಳಿಗಿದ್ದ ಅರ್ಹತೆ. ಅವನು ಬಯಸಿದರೂ ಅವನ ಕಾಲುಗಳು ಅವನನ್ನು ಒಳಗೆ ಕೊಂಡೊಯ್ಯಲಿಲ್ಲ.

ಮುಸುಕಿನೊಳಗಿಂದಲೇ ಎಲ್ಲಾ ಸಂಭಾಷಣೆಗಳೂ ಮತ್ತು ಅವನು ಬಂದು ಬಾಗಿಲಿಗೆ ಅಡ್ಡವಾಗಿ ನಿಂತಿರಬಹುದಾದ ಭಂಗಿ ಎಲ್ಲವೂ ಅವಳ ಕಣ್ಣಿಗೆ ಕಟ್ಟಿದವು.

ಅವನ ಬಟ್ಟೆಬರೆ, ಸಿಗರೇಟಿನ ವಾಸನೆ, ಬೆವರಿನ ವಾಸನೆ, ಸೋತ ದೇಹ, ಬಳಲಿದ ಕಣ್ಣುಗಳು.... ಆ ವ್ಯಕ್ತಿಯನ್ನು ಮಲಗಿದಲ್ಲಿಂದಲೇ ಅವಳು ಕಲ್ಪಿಸಿಕೊಂಡಳು. ಅವಳ ನರನಾಡಿಗಳಲ್ಲೂ ತನ್ನ ಛಾಪನ್ನು ಒತ್ತಿದ್ದ ವ್ಯಕ್ತಿ ಇಂದು ಅವಳಿಗೆ ಅತ್ಯಂತ ಅಪರಿಚಿತನಾಗಿ ಕಂಡ. ಅವಳು ಜಗಿದುಕೊಂಡೇ ಮಲಗಿದ್ದಳು. ಅವನ ಧ್ವನಿ ಮತ್ತೊಮ್ಮೆ ಮೂಡಿ ಬಂತು.

''ಸಲ್ಮಾ.... ಬಾ ಇಲ್ಲಿ. ಈ ನಾಟಕ ಸಾಕು ಮಾಡು ಎಂದು ಅವಳಿಗೆ ಹೇಳು. ಈಗೇನಾದರೂ ಪಂಚಾಯ್ತಿಗೇಂತ ಅವಳ ಅಣ್ಣಂದಿರನ್ನು ಕರೆದಿದ್ದರೆ, ಅವಳೇ ಉರುಳು ಹಾಕಿಕೊಂಡಂತಾಗುತ್ತೆ. ನಾನು ಒಂದೇ ಉಸಿರಿನಲ್ಲಿ ಒಂದು... ಎರಡು... ಮೂರು ಅಂತ ಹೇಳಿ ಮುಗಿಸಿಬಿಡ್ತೀನಿ ಅಂತ ಹೇಳು... ಆಮೇಲೆ ಅವಳಿಗೇ



ರಾಕ್ ಆಗಿ ಬಿಟ್ಟ ಮೇಲೆ ಅವಳ ತಂಗಿಯರ ಗಲೀ ಅವಳ ಹೆಣ್ಣು ಮಕ್ಕಳನ್ನಾಗಲೀ ಹೇಗೆ ಟಿಸುತ್ತಾಳೆನ್ನುವುದನ್ನು ನಾನೂ ನೋಡ್ತೀನಿ ತ್ತೀಳು.... ಬಂದವರೆದುರು ಮರ್ಯಾದೆ ದು ಮನೆಯ ಮಾನ ಮರ್ಯಾದೇನಾ ರಾಜು ಹಾಕ್ತಿದಾಳಲ್ಲ... ನಿನ್ನ ತಾಯಿ... ಅವಳಿಗೆ ಳು.... ಅವಳಣ್ಣಂದಿರನ್ನ ಮಾತಾಡಿಸಿ ಬರ್ಲಿ... ಕನ್ ಬೇಕೋ ಮಟನ್ ಬೇಕೋ.... ಕೇಳು... ಗಾಗಲೇ ಹನ್ನೆರಡು ಗಂಟೆಯಾಗ್ತಾ ಬಂತು... ಗ ಬೇಗ ಅಡಿಗೆ ಮಾಡೋದಿಕ್ಕೆ ಹೇಳು....'' ಲ್ಲೆಲ್ಲೂ ಇಲ್ಲದ ಸಲ್ಮಾಳನ್ನು ಉದ್ದೇಶಿಸಿ ಎಲ್ಲಾ ಷವನ್ನೂ ಕಕ್ಕಿ ಮತ್ತೆ ಮಾಮೂಲಿನಂತೆ ಅವ ರನಡೆದ ಭಾವಂದಿರೊಡನೆ ಮಾತುಕತೆ ಡಲು! ಕಾಫಿ ಬೆಲೆಯ ಕುರಿತು.... ಕಾಶ್ಮೀರ ನಾವಣೆಯ ಕುರಿತು... ಹತ್ತಿರದ ಮನೆ ೊಂದರಲ್ಲಿ ಕೊಲೆಯಾದ ವೃದ್ಧ ದಂಪತಿಗಳ ನಿಖೆಯ ಕುರಿತು... ಹಿಂದು ಹುಡುಗನೊಡನೆ ಜಿಸ್ಟರ್ ಮದುವೆ ಮಾಡಿಕೊಂಡ ಮೊಹಲ್ಲಾದ ಹುಡುಗಿಯ ಕುರಿತು.... ಹೀಗೆಯೇ... ಇನ್ನೇ ನೇನೋ... ಮಾತು ಲೋಕಾಭಿರಾಮವಾಗಿ ಮುಂದುವರಿಯುತ್ತಿದ್ದಂತೆಯೇ ಚಿಕನ್ ಬಂದಿತು. ಕ್ಕರ್ ಕೂಗಿತು. ಮಿಕ್ಸಿ ಅರೆಯಿತು. ಮಸಾಲೆಯ ವಾಸನೆ ಗಮ್ ಎಂದಿತು. ಊಟ ತಯಾರಾಯಿತು. ಸಲ್ಮಾ ಓಡಾಡುತ್ತಾ ಊಟವಿಕ್ಕಿದಳು. ಮೆಹರುನ್ ಮಾತ್ರ, ಗಂಡ ಮತ್ತು ಸಹೋದರರ ಎದುರಿಗೆ ಒಂದೆರಡು ಬಾರಿ ಸುಳಿದು ಹೋಗಿದ್ದಳಷ್ಟೇ.

ಹೊಟ್ಟೆ ತುಂಬಾ ಊಟ; ಬಾಯಿ ತುಂಬಾ ತಾಂಬೂಲ ಅಗಿಯುತ್ತಾ ಅವಳ ಅಣ್ಣಂದಿರು ಹೊರಟರು. ಹೋಗುವ ಮೊದಲು ಅಮಾನ್ ಮಾತ್ರ ಬಂದು ಅಡಿಗೆ ಮನೆಯ ಬಾಗಿಲಲ್ಲಿ ನಿಂತು, ''ಸ್ವಲ್ಪ ಬುದ್ಧಿವಂತಿಕೆಯಿಂದ ನಿಭಾಯಿಸಿಕೊಂಡು ಹೋಗು.... ನಾನು ಮುಂದಿನವಾರ ಬಂದು ಹೋಗ್ತೀನಿ. ಏನು ಮಾಡೋದು.... ಕೈಯಲ್ಲಿ ಸ್ವಲ್ಪ ದುಡ್ಡು ಸೇರಿದೆ, ಮೈಯಲ್ಲಿ ಕಸುವು ಇದೆ. ನಾಲ್ಕು ದಿನ ಹಂಗಾಡ್ತಾನೆ. ಆಮೇಲೆ ಅವನೇ ದಾರಿಗೆ ಬರ್ತಾನೆ. ನಿನಗಾದರೂ ಜವಾಬ್ದಾರಿ ಇರಬೇಕು, ಹೆಂಗಸರು ಎಂಥೆಂಥ ಕಷ್ಟದಲ್ಲಿರ್ತಾರೆ... ಕುಡುಕ ಗಂಡಂದಿರು, ಬರೆ ಎಳೆಯುವ ಅತ್ತೇರು... ಊಟಕ್ಕೂ ಗತಿ ಇಲ್ಲದಂಥ ಪರಿಸ್ಥಿತಿ. ದೇವರ ದಯೆಯಿಂದ ನೀನು ಚೆನ್ನಾಗಿದೀಯ. ಅವನಿಗೆ ಸ್ವಲ್ಪ ಬೇಜವಾಬ್ದಾರಿತನ ಇದೆ. ಅದೆಲ್ಲವನ್ನೂ ನೀನೇ ಸರಿ ತೂಗಿಸ್ಕೊಂಡ್ ಹೋಗ್ಬೇಕು'' ಎಂದು ಬುದ್ಧಿವಾದ ಹೇಳಿದ. ಕಾರು ಬರ್ರೆಂದಿತು. ಅವರುಗಳ ಹಿಂದೆಯೇ ಇನಾಯತ್ ಕೂಡ ಹಾರಿ ಹೊರಟ.

ಅವರೆಲ್ಲರ ವರ್ತನೆಗಳನ್ನು ಮೆಹರುನ್ ಗಮನಿಸಿದುದಕ್ಕಿಂತ ಹೆಚ್ಚು ಆಳವಾಗಿ ಸಲ್ಮಾ ಅನುಭವಿಸಿದಳು. ಗಳಿಗೆ ಗಳಿಗೆಗೆ ಅವಳು ತಾಯಿಯತ್ತ ನೋಡುವಳು. ಮಾವಂದಿರು ಹೋದದ್ದು ಅವಳಿಗೆ ಹಾಯೆನಿಸಿತು. ಅವರು ತನ್ನ ಅಮ್ಮನಿಗೆ ಯಾವುದೇ ರೀತಿಯಲ್ಲೂ ಸಮಾಧಾನವಾಗಲೀ, ಸಹಾಯವಾಗಲೀ ಮಾಡಲಿಲ್ಲ ಎನ್ನುವುದು ಅವಳಿಗೆ ಕಂಡು ಬಂದಿತ್ತು. ಅವರ ಈ ವರ್ತನೆಯಿಂದ ಹೆಚ್ಚಿನ ಆಘಾತ ಅವಳಿಗೆ ಆಗಿತ್ತು. ಹೀಗಾಗಿ ತಾಯಿಯ ದುಃಖಕ್ಕೆ ತಾನೇ ಮಿಡಿಯುತ್ತಿದ್ದಳು. ತಂದೆ ಹೊರ ನಡೆದಿದ್ದರಿಂದ ಅವಳಿಗೆ ದುಃಖ ಉಕ್ಕಿ ಬಂದಿತು. ಇಡೀ ಮನೆಯ ಮೇಲೆಯೇ ಮ್ಲಾನತೆ ಆಚ್ಛಾದಿತ ವಾದಂತೆನಿಸತೊಡಗಿತು. ಶಾಲೆಯಿಂದ ವಾಪಸ್ಸು ಬಂದ ಮಕ್ಕಳು ಕೂಡ ಆ ಮನೆಗೆ ಒಂದಿಷ್ಟು ಗೆಲುವಿನ ಸಂತಸದ ಕಳೆಯನ್ನು ಮೂಡಿಸಲಿಲ್ಲ. ಅವರವರ ಕೆಲಸ ಅವರವರಿಗೆ... ಅವರವರ ಪಾಡು ಅವರವರಿಗೆ.

ಸಂಜೆ ತನ್ನ ಕಂಪನ್ನು ಕ್ರಮೇಣ ಕಳೆದುಕೊಂಡು ಗಾಢಾಂಧಕಾರವಾಗುತ್ತ ನಡೆಯುತ್ತಿದ್ದಂತೆ ದೀಪಗಳು ಮಿನುಗತೊಡಗಿದವು. ಮೆಹರ್‌ಳ ಎದೆಯ ಹಣತೆ ಆರಿ ಬಹುಕಾಲ ಕಳೆದಿತ್ತು. ತಾನು ಯಾರಿಗಾಗಿ ಬದುಕಬೇಕು...

ಇಷ್ಟು ಅವಮಾನಗಳನ್ನು ಸಹಿಸಿ ಬದುಕುವ ಸಾರ್ಥಕತೆಯಾದರೂ ಏನು ಎಂಬುದು ಅವಳ ಮುಂದೆ ಇದ್ದ ಬೃಹದಾಕಾರದ ಪ್ರಶ್ನೆ. ಗೋಡೆಗಳು, ಛಾವಣಿ, ತಟ್ಟೆ, ಬಟ್ಟಲು, ಒಲೆ, ಹಾಸಿಗೆ, ಪಾತ್ರೆ, ಅಂಗಳದಲ್ಲಿದ್ದ ಗುಲಾಬಿ ಗಿಡ... ಯಾವುದೂ ಕೂಡ ಅವಳ ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥವಾಗಲಿಲ್ಲ. ಅವಳ ಸುತ್ತಮುತ್ತಲೇ ಸುತ್ತುತ್ತಿದ್ದ ಒಂದು ಜೊತೆ ಉದಾಸ ಕಣ್ಣುಗಳು, ಮಿಡಿಯುವ ಹೃದಯವನ್ನು ಅವಳು ಗುರುತಿಸಲಿಲ್ಲ.

ಸಲ್ಮಾ ಅಗಲವಾದ ತನ್ನ ಜಿಂಕೆ ಕಣ್ಣುಗಳನ್ನು ತಾಯಿಯ ಸುತ್ತಲೇ ಕಾವಲನ್ನಾಗಿಸಿದ್ದಳು. ಎಸ್ಸೆಸ್ಸೆಲ್ಸಿ ಪರೀಕ್ಷೆ ತಯಾರಿ ನಡೆಸುತ್ತಿದ್ದ ಆಕೆಗೆ ಪ್ರತಿಕ್ಷಣವೂ ಪುಸ್ತಕದಲ್ಲಿ ಹುದುಗಿಕೊಳ್ಳಬೇಕೆಂದೆನಿಸುತ್ತಿತ್ತು. ಆದರೆ ನುಡಿಯಲಸಾಧ್ಯವಾದ ತೀವ್ರ ಆತಂಕವೊಂದು ಆಕೆಯ ಸುಪ್ತಚೇತನವನ್ನು ಜಾಗೃತವಾಗಿರಿಸಿದ್ದರಿಂದ ತಾಯಿಯನ್ನು ತನ್ನ ನೋಟದ ವ್ಯಾಪ್ತಿಯಲ್ಲಿಯೇ ಇರಿಸಿದ್ದಳು. ಆಕೆಗೆ ಕೂಡ ಅತ್ಯಂತ ಹೆಚ್ಚಿನ ನಂಬಿಕೆ ಇದ್ದದ್ದು ಮಾವಂದಿರ ಮೇಲೆ. ಹೇಗಾದರೂ ಮಾಡಿ ತನ್ನ ಮಾವಂದಿರು ತಂದೆಯನ್ನು ಸರಿದಾರಿಗೆ ತಂದೇ ತೀರುವರು ಎಂಬ ನಂಬಿಕೆ ಈಗ ಹುಸಿಯಾಗಿತ್ತು. ತಂದೆ ದೂರವಾಗಿದ್ದ. ತಾಯಿ ಹತಾಶಳಾಗಿದ್ದಳು. ಅವಳ ಪರೀಕ್ಷೆ ಎದುರಿಗಿತ್ತು.

ರಾತ್ರಿಯ ನೀರವತೆಯಲ್ಲಿ ಮೆಹರುನ್ ತನ್ನ ಬದುಕಿನಷ್ಟೇ ಕಪ್ಪಗಿದ್ದ ಕತ್ತಲನ್ನು ದಿಟ್ಟಿಸಿ ನೋಡಿದಳು. ಮಕ್ಕಳೆಲ್ಲಾ ಮಲಗಿದ್ದರು. ಸಲ್ಮಾ ಮಾತ್ರ ಹಜಾರದಲ್ಲಿ ಪುಸ್ತಕವನ್ನು ಹಿಡಿದು ಕುಳಿತಿದ್ದಳು. ನೋಟ ಮಾತ್ರ ತಾಯಿಯ ಕೋಣೆಯ ಕಡೆಗೇ ಇತ್ತು. ಮೆಹರುನ್‌ಳ ನಿದ್ರೆ ಹಾರಿ ಹೋಗಿತ್ತು. ಸಾಕಷ್ಟು ರೋದಿಸಿದ್ದಳು. ಅನೇಕ ತಿಂಗಳುಗಳಿಂದ.... ತಾನೇ ಮೂಕ ವೇದನೆಯನ್ನನುಭವಿಸಿದ್ದಳು. ಎರಡನೇ ವರ್ಷದ ಬಿ.ಕಾಂಗೆ ಇನ್ನೇನು ಪರೀಕ್ಷೆ ಒಂದು ತಿಂಗಳಿದೆ



ಎನ್ನುವಾಗ ಅವಳ ಮದುವೆ ನಡೆದಿತ್ತು. ಆಗಲೆ
ಅವಳು ತನ್ನ ಪರೀಕ್ಷೆಗೆ ಹಾಜರಾಗಲು ಅವಕ
ಮಾಡಿಕೊಡುವಂತೆ ಬೇಡಿಕೊಂಡು ಅತ್ತಿದ್ದ
ಗೋಗರೆದಿದ್ದಳು. ಆದರೆ ಎಲ್ಲರೂ ಕಿವು
ಗಿದ್ದರು. ಮದುವೆಯಾದ ಒಂದೆರಡು ವಾ
ನಂತರ ಮೆಲ್ಲನೆ ಪತಿಯ ಬಳಿ ಪರೀಕ್ಷೆಯ ಮ
ನ್ನೆತ್ತಿದ್ದಳು. ಅವನು ಮಧುರವಾಗಿ ನಕ್ಕಿದ್ದ. ಚಿನ್
ರನ್ನಾ.... ಹೃದಯವೇ.... ಎಂದೆಲ್ಲಾ ಅವಳ
ಕರೆದಿದ್ದ. ನೀನಿಲ್ಲದಿದ್ದರೆ ನನ್ನ ಉಸಿ
ನಿಂತುಹೋಗುವುದಿಲ್ಲವೇ ಎಂದು ಪ್ರಶ್ನಿಸಿ
ತನ್ನ ರೋಮಭರಿತ ಬರಿದಾದ ಎದೆಯ ಮೇ
ಅವಳ ತಲೆಯನ್ನಿರಿಸಿ ಆಪ್ತವಾಗಿ, ಅವಳಿ
ಅಗಲಿದರೆ ಈ ಎದೆಯ ಬಡಿತವೇ ನಿಂ
ಹೋಗುತ್ತದೆ ಎಂದು ನುಡಿದಿದ್ದ. ಅವ
ತುಂಬಾ ಸಂತೋಷವಾಗಿ ಅವನನ್ನು ನಂಬಿದಳ
ಅವನ ಪ್ರತಿಯೊಂದು ಮಾತನ್ನೂ ಪಾಲಿಸಿದಳ
ಆ ನಂಬಿಕೆಯೊಂದರಿಂದಲೇ ಅವನ ಪ್ರೀತಿ
ಚೈತನ್ಯದಿಂದ ತುಂಬಿದ ಮನೆಯ ಹಿರಿ
ಸೊಸೆಯಾಗಿ ಹತ್ತು-ಹನ್ನೆರಡು ವರ್ಷಗಳವ
ಅವನ ಮನೆಯ ಹಣತೆಯಾಗಿ ಉರಿದಳ
ಅವನ ಮನವ ಬೆಳಗಿದಳು.

ಒಂದೆರಡು ವರ್ಷಗಳ ಹಿಂದೆ ಮಾ
ಅವಳಿಗೆ ತನ್ನವನೇ ಆಗಿದ್ದ ಗಂಡ ಸಿಕ್ಕಿದ್ದ.
ಮಾವ ಸತ್ತು ಹೋಗಿದ್ದರು. ನಾದಿನಿಯ
ಅವರವರ ಗಂಡಂದಿರೊಡನೆ, ಮೈದುನಂದಿ
ತಮ್ಮ ತಮ್ಮ ನೆಲೆ ಕಂಡುಕೊಂಡಿದ್ದರು.
ದೊಂದು ಮನೆಯ ಬಯಕೆ ಆಕೆಯ ಬ
ಕಾಲದ ಕನಸು. ಅದೀಗ ತಾನೇ ನನಸಾಗಿತ

ನ್ನ ಮಕ್ಕಳು, ತನ್ನ ಗಂಡ, ತನ್ನ ಮನೆ ಎಂದು ತನ್ನ ಸ್ತಿತ್ವವನ್ನು ಆಕೆ ಗುರುತಿಸುವ ಹಂತದಲ್ಲಿ ುಖದ ಚರ್ಮ ಸುಕ್ಕಾಗಿದ್ದು, ಕೈಗಳ ಮೇಲಿನ ರಗಳು ಎದ್ದುಕಂಡಿದ್ದು, ಕಣ್ಣ ಕೆಳಗೆ ತೆಳು ಪ್ರತೆರೆ ಮೂಡಿದ್ದು, ಹಿಮ್ಮಡಿ ಬಿರುಕು ಬಿಟ್ಟಿದ್ದು, ಂಗುರುಗಳ ಸಂದಿಯಲ್ಲಿ ಮಸಿ ಸೇರಿ ಅಂಕು-ಡೊಂಕಾಗಿದ್ದು, ತಲೆ ಕೂದಲು ತೆಳುವಾಗಿದ್ದು-ದ್ಯಾವುದೂ ಅವಳ ಗಮನಕ್ಕೆ ಬರಲೇ ಇಲ್ಲ. ನಾಯತ್‌ನ ಗಮನಕ್ಕೆ ಕೂಡ ಬಹುಶಃ ಇದು ರುತ್ತಿರಲಿಲ್ಲ. ಆದರೆ ಅವನ ಅಪೆಂಡಿಕ್ಸ್ ಪರೇಷನ್ ಆಯಿತಲ್ಲಾ..... ಆಗ ಖಾಸಗಿ ಸ್ಪತ್ರೆಯಲ್ಲಿ ಕಡಿಮೆ ಸಂಬಳ ಪಡೆಯುತ್ತಾ ಹೆಚ್ಚು ಲಸಮಾಡುತ್ತಾ ಕಣ್ಣಲ್ಲಿ ಸಾವಿರ ಆಕಾಂಕ್ಷೆಗಳ ಂಬಿಕೊಂಡು, ನಡೆಯುವಳೋ ಅಥವ ಲಿಯುತ್ತಿದ್ದಾಳೋ ಎಂಬ ಭ್ರಮೆ ಮೂಡಿ ುತ್ತಾ ಹೊಳಪಿನ ಚರ್ಮ, ಸುಳಿಯಂತೆ ಸೆಳೆದು ಾಳ್ಳುವಂತಿದ್ದ ಜೇನಿನ ಬಣ್ಣದ ಕಣ್ಣಿನ ಒಡತಿ, ೂವತ್ತರ ಇಳಿಜಾರಿನಲ್ಲಿ ತನ್ನ ಬದುಕಿನ ದ್ರತೆಗಾಗಿ, ಅತೃಪ್ತ ಆಕಾಂಕ್ಷೆಗಳ ಬಾಯಾರಿಕೆ ಣಿಸಲು ಏನನ್ನಾದರೂ ಮಾಡಲು ಸಿದ್ಧಳಿದ್ದ ಕೆ... ಆ ನರ್ಸ್ ಇದ್ದಳು. ಅವಳ ಗಂಡ ನಾಯತ್ ಆಸ್ಪತ್ರೆಯಲ್ಲಿದ್ದಷ್ಟು ದಿನವೂ ಕೆಯನ್ನು ಸಿಸ್ಟರ್ ಅನ್ನಲೇ ಇಲ್ಲ. ಹೆಸರಿನಿಂದಲೇ ರೆದ. ಅವಳ ಬಾಳಿಗೆ ಹಸಿರನ್ನೊದಗಿಸಿದ. ನ್ನನ್ನು ಬರಡನ್ನಾಗಿಸಿದ.

ಅವನ ವಂಶದ ಕುಡಿಗಳನ್ನು ಹೊತ್ತ ತನ್ನ ುಸಿರ ಅಪಮಾನ ಮಾಡಿದ. ಜೋಲು ಹೊಟ್ಟೆ ಂದ; ಅವನ ಮಕ್ಕಳ ಹಸಿವ ತಣಿಸಿದ ಅವಳ ೊಲೆಗಳನ್ನು ಹೋಲಿಸಿದ. ಅವಳ ದೇಹವನ್ನು ಮಾತ್ರವಲ್ಲ ಅವಳ ಆತ್ಮವನ್ನು ನಗ್ನಗೊಳಿಸಿದ. ೊನೆಗೊಂದು ದಿನ 'ನೀನು ನನ್ನ ತಾಯಿ ಸಮಾನ' ಎಂದು ಅವಳನ್ನು ಜೀವಂತ ಜ್ವಾಲೆಗೆ ಆಹುತಿಗೊಳಿಸಿದ. ಆ ಮಾತು ಅವನಿಂದ ಹೊರ ಬಂದು ಮೂರ್‍ನಾಲ್ಕು ತಿಂಗಳುಗಳೇ ಕಳೆದಿದ್ದವು. ಅಂದಿನಿಂದ ಉಣ್ಣುವ ಒಂದೊಂದು ಅಗುಳು ಕೂಡ ಪಾಪ ಎಂದು ಅವಳಿಗನ್ನಿಸತೊಡಗಿತ್ತು. ಆ ಮನೆಯಲ್ಲಿ ತಾನು ಪರಕೀಯಳು ಎಂಬುದು ಅವಳಿಗೆ ಪ್ರತಿಕ್ಷಣವೂ ಕಾಡತೊಡಗಿದಾಗ, ಅವಳು ಪರಿಹಾರ ಹುಡುಕತೊಡಗಿದಳು: ಆ ಅಪಮಾನದ ಬೆಂಕಿಯಿಂದ ಹೊರಬರಲು ಆಕೆ ಯೊಬ್ಬಳಿಗೇ ಸಾಮರ್ಥ್ಯವಿರಲಿಲ್ಲ. ಹಾಗಾಗಿ ತನ್ನ ತವರಿನ ಆಸರೆಗೆ ಕೈ ಚಾಚಿದ್ದಳು.

ಕತ್ತಲು ದಟ್ಟೈಸುತ್ತಿತ್ತು. ಅವಳ ಮನಸ್ಸಿನ ಕ್ಷೋಭೆಯೂ ಕೂಡ ಹೆಪ್ಪುಗಟ್ಟುತ್ತಿತ್ತು. ಆತ್ಮಗ್ಲಾನಿ ಯಿಂದ ಅವಳು ಹೊರಬರಲಾಗದೆ ಉಸಿರು ಸಿಕ್ಕಿ ಕೊಂಡವಳಂತೆ ಚಡಪಡಿಸುತ್ತಿದ್ದಳು. ಅವಳು ಎಂದೂ ಇಷ್ಟೊಂದು ಏಕಾಂಗಿಯಾಗಿರಲಿಲ್ಲ. ಕಂಬನಿಯ ಮಹಾಪೂರವೇ ಹರಿದು ಹೋಗಿತ್ತು. ಅವಳಿಗೆ ಯಾವುದರ ಅಪೇಕ್ಷೆಯೂ ಉಳಿದಿರ ಲಿಲ್ಲ. ಬದುಕು ಭಾರವಾಗತೊಡಗಿತ್ತು. ಮಲಗಿ ದಾಕೆ ಎದ್ದು ಕುಳಿತಳು. ಅವಳನ್ನು ಕೇಳುವವರು ಯಾರೂ ಇರಲಿಲ್ಲ. ಛೇಡಿಸುವವರೂ ಇರಲಿಲ್ಲ; ಅಪ್ಪಿ ಮುತ್ತಿಕ್ಕುವವನು ಯಾರದೋ ಪಾಲಾಗಿದ್ದ. ಬದುಕಿಗೊಂದು ಆಯಾಮ ಇರಲೇ ಇಲ್ಲ. ಅವಳ ಹಿಂದಿನಿಂದ ಬಂದ ಫಳಾರ್ ಎಂಬ ಸದ್ದನ್ನು ಕೇಳಿಯೂ ಅವಳು ವಿಚಲಿತಳಾಗಲಿಲ್ಲ. ಅವಳಿಗೆ ಗೊತ್ತಿತ್ತು, ಚಿತ್ರಪಟ ಬಿದ್ದಿತ್ತು. ಗಾಜು ಚೂರಾಗಿತ್ತು. ಚೌಕಟ್ಟು ಒಡೆದಿತ್ತು. ಚಿತ್ರ ಬೇರೆಯಾಗಿತ್ತು. ಅವಳಲ್ಲಿ ಯಾವುದೋ ಆವೇಶ ಮನೆಮಾಡಿತ್ತು. ಅವಳು ನಿಧಾನವಾಗಿ ಮಂಚ ದಿಂದ ಇಳಿದಳು. ತನ್ನ ಹಸುಗೂಸನ್ನು ಕಣ್ತುಂಬ ನೋಡಿ ಹೊರಗೆ ಬಂದಳು. ಅವಳ ಪುಟ್ಟ ಪುಟ್ಟ ಕಂದಮ್ಮಗಳು ನಿದ್ರಿಸಿದ್ದವು. ಅವಳು ಮೆಲುವಾಗಿ ಹಜಾರದಲ್ಲಿ ಬಂದಾಗ ಸಲ್ಮಾ ಓದುತ್ತಾ.... ಓದುತ್ತಾ.... ಟೇಬಲ್ ಮೇಲೆ ತಲೆಯಿಟ್ಟು ಅಲ್ಲೇ ನಿದ್ರೆಗೆ ಶರಣಾಗಿದ್ದು ಕಂಡುಬಂದಿತು. ನಿದ್ರಿ ಸುತ್ತಿದ್ದ ತನ್ನ ಮಗಳ ಬಳಿ ನಿಂತ ಅವಳು ಒಂದು ಕ್ಷಣ ಭಾವಾವೇಗದಿಂದ ಕಂಪಿಸಿದಳು. ಭಾವನೆ

ಗಳೇ ಸತ್ತು ಹೋಗಿವೆ ಎಂದುಕೊಂಡಿದ್ದ ಅವಳಿಗೆ ಸಲ್ಮಾಳನ್ನು ಕಂಡಾಗ ಹತ್ತಿಕ್ಕಲಾರದ ಭಾವನೆಗಳ ಒತ್ತಡ ಉಂಟಾಗಿ ಅಲ್ಲಿಯೇ ಕುಸಿಯುವಂತಾಯಿತು. ಅವಳನ್ನು ಮುಟ್ಟಬೇಕು ಎನ್ನುವ ತನ್ನ ಅದಮ್ಯ ಆಸೆಯನ್ನು ಬದಿಗೆ ಒತ್ತಿ ಅವಳು ಮನದಲ್ಲೇ ಮಗಳನ್ನು ಬೇಡಿಕೊಂಡಳು: ''ಅನಾಥರಾಗುತ್ತಿರುವ ಈ ಕೂಸುಗಳಿಗೆ ನೀನೇ ತಾಯಿ ನನ್ನ ಕಂದಾ...'' ಎಂದು ಮನಸ್ಸಿನಲ್ಲಿಯೇ ತನ್ನ ಮಕ್ಕಳ ಜವಾಬ್ದಾರಿಯೆಲ್ಲಾ ಸಲ್ಮಾಳ ಎಳೆ ಭುಜಗಳ ಮೇಲೆ ಹೊರಿಸಿದಳು.

ಅವಳ ಹೆಜ್ಜೆಗಳು ನಿಧಾನವಾಗಿ ಚಲಿಸತೊಡಗಿದವು. ಅವಳು ಮನೆಯ ಬಾಗಿಲನ್ನು ತೆರೆದು ಅಂಗಳಕ್ಕೆ ಕಾಲಿಟ್ಟಳು. ಅಲ್ಲಿ ಅವಳೇ ಬೆಳೆಸಿದ್ದ ನಾಲ್ಕಾರು ಮರ ಗಿಡಗಳು ತಬ್ಬಲಿಗಳಂತೆ ನಿಂತು ಕಣ್ಣೀರು ಹರಿಸುತ್ತಿದ್ದಂತೆ ಒಮ್ಮೆ ಕಂಡರೆ, ಇನ್ನೊಮ್ಮೆ ಭೇಷ್.... ಭೇಷ್ ನಿನ್ನ ತೀರ್ಮಾನವೇ ಸರಿ ಎಂದು ತಲೆ ಅಲುಗಿಸಿದಂತೆ ಕಂಡು ಬಂದಿತು. ಅವಳಿಗೆ ಭಯವಾಗಿ ಕದವಿಕ್ಕಿ ಒಳಬಂದಳು. ನಂತರ ಏನನ್ನೋ ನಿಶ್ಚಯಿಸಿ ಅಡಿಗೆಯ ಮನೆಯ ಒಳಹೋಗಿ ಸೀಮೆ ಎಣ್ಣೆಯ ಕ್ಯಾನನ್ನು ಎತ್ತಿಕೊಂಡು ಇಡೀ ಮನೆಯನ್ನೆಲ್ಲಾ ಒಮ್ಮೆ ಸುತ್ತಿದಳು. ಎಲ್ಲಿ ಹೊಯ್ದುಕೊಳ್ಳಬೇಕು ಎಂಬುದರ ಬಗ್ಗೆ ಅವಳು ಯಾವುದೇ ನಿಶ್ಚಯಕ್ಕೆ ಬಾರದೆ ಮತ್ತೊಮ್ಮೆ ಮಕ್ಕಳೆಲ್ಲರನ್ನು ಕಣ್ಣುತುಂಬಾ ನೋಡಿ ಹಜಾರಕ್ಕೆ ಬಂದಳು. ಸಲ್ಮಾಳತ್ತ ಅವಳು ಯಾವುದೇ ದೃಷ್ಟಿಯನ್ನು ಹಾಯಿಸಲಿಲ್ಲ. ಹಾಗೊಂದು ವೇಳೆ ಅವಳತ್ತ ನೋಡಿದಲ್ಲಿ ತನ್ನ ನಿರ್ಧಾರ ಎಲ್ಲಿ ಸಡಿಲವಾಗುತ್ತದೋ ಎಂದು ಹೆದರಿದ್ದಳಾಕೆ. ಮತ್ತೊಮ್ಮೆ ವೇಗವಾಗಿ ನಡೆಯುತ್ತಾ ಅಡಿಗೆ ಮನೆಗೆ ಕಾಲಿಟ್ಟು ಅಲ್ಲಿದ್ದ ಬೆಂಕಿ ಪೆಟ್ಟಿಗೆಯನ್ನು ತನ್ನ ಬಲಗೈಯಲ್ಲಿ ಬಲವಾಗಿ ಅದುಮಿ, ಮೆಲ್ಲನೆ ಅಗುಳಿಯನ್ನು ಸರಿಸಿ ಅಂಗಳಕ್ಕೆ ಕಾಲಿಟ್ಟಳು. ತನ್ನ ಪಾಲಿಗೆ ಯಾರೂ ಇಲ್ಲದ ತಾನು ಯಾರಿಗೂ ಬೇಕಿಲ್ಲದ ಅಭಾಗಿನಿ.
ಅಂಗಳದಲ್ಲಿ ನಿಂತು ಕತ್ತಲನ್ನು ದಿಟ್ಟಿಸು
ಸೀಮೆಎಣ್ಣೆಯನ್ನು ತನ್ನ ಮೈಮೇಲೆ ಸುರಿ
ಕೊಂಡಳು. ಆಕೆಯ ಅಂಕೆಗೆ ಒಳಪಡದ ಅತ್ಯ
ಉನ್ಮತ್ತ ಶಕ್ತಿಯೊಂದು ಅವಳನ್ನು ತನ್ನ ವಶದಲ್ಲಿ
ಕೊಂಡಂತೆ ನಿಗೂಢವಾಗಿ ಅವಳು ಸುತ್ತ
ಒಮ್ಮೆ ಕಣ್ಣು ಹಾಯಿಸಿದಳು. ಯಾವ ಸದ್ದುಗ
ಅವಳನ್ನು ತಲುಪುತ್ತಿರಲಿಲ್ಲ. ಯಾವ ಸ್ಪರ್ಶಗ
ಅವಳನ್ನು ತಾಕುತ್ತಿರಲಿಲ್ಲ. ಯಾವ ನೆನಪುಗ
ಅವಳಲ್ಲಿ ಉಳಿದಿರಲಿಲ್ಲ ಯಾವ ಸಂಬಂಧಗ
ಅವಳನ್ನು ಬಾಧಿಸುತ್ತಿರಲಿಲ್ಲ. ಅವಳ ಇರ
ಅವಳ ಪ್ರಜ್ಞೆಯಲ್ಲಿ ಇರಲಿಲ್ಲ.

ಆದರೆ ಮನೆಯೊಳಗಿನ ವ್ಯವಹಾರ
ಬೇರೆ ಆಗಿತ್ತು. ಹಸುಗೂಸಿನ ಅಳುವು ತ
ಕಕ್ಕೇರಿ ನಿದ್ರೆಯ ಸಮ್ಮೋಹನದ ಆಳ ಸುಳಿಯ
ತೇಲಿಹೋಗಿದ್ದ ಸಲ್ಮಾ ಗಾಬರಿಯಿಂದ ಎಚ್ಚ
ಒಂದೇ ಉಸಿರಿಗೆ ಹಾರಿ ಆ ಮಗುವನ್ನು
ಗವಚಿಕೊಂಡು 'ಅಮ್ಮೀ.... ಅಮ್ಮೀ....' ಎಂ
ಕೂಗುತ್ತಾ ಮಕ್ಕಳು ಮಲಗಿದಲ್ಲಿಂದ ದಾಟು
ತಾಯಿಯನ್ನು ಕಾಣದೆ ಇಡೀ ಮನೆಯ ಒಂ
ಸುತ್ತು ಹಾಕಿದಳು. ಆ ವೇಳೆಯಲ್ಲಿ ತೆ
ಅಂಗಳದ ಬಾಗಿಲನ್ನು ಕಂಡು ಭಯದಿ
ಒಂದು ಕ್ಷಣ ತತ್ತರಿಸಿದಳು. ಒಂದೇ ಉಸಿ
ಓಡಿ ಅಂಗಳವನ್ನು ತಲುಪಿದಾಗ ಅಸ್ಪಷ್ಟ ಕ
ಯಲ್ಲಿ ಕೂಡ ಅವಳು ತಾಯಿಯ ಆಕೃತಿ ಮ
ಸೀಮೆಎಣ್ಣೆ ವಾಸನೆಯನ್ನು ಗ್ರಹಿಸಬಲ್ಲವ
ಗಿದ್ದಳು. ಯಾವುದೇ ಪೂರ್ವಾಪರ ವಿವೇ
ಯನ್ನು ಕೂಡ ಮಾಡದೇ ಒಮ್ಮೆಲೇ ಹಸುಗೂ
ನೊಡನೆ ಧಾವಿಸಿ ತಾಯಿಯನ್ನು ಬಿಗಿದಪ್ಪಿದ
ಬೆಂಕಿ ಪೆಟ್ಟಿಗೆಯನ್ನು ಕೈಯಲ್ಲಿ ಹಿಡಿ
ಮೆಹರುನ್ ಹುಚ್ಚಿಯಂತೆ ಯಾರನ್ನೋ ನಿರುಕಿ
ವಂತೆ ತನ್ನನ್ನು ಬಿಗಿದಪ್ಪಿದವಳನ್ನು ನೋಡು
ಅಚೇತನಳಾದಳು. ಸಲ್ಮಾ ಮಗುವನ್ನು ನೆ
ಮೇಲೆ ಉರುಳಿಸಿ ಬಿಟ್ಟು, 'ಅಮ್ಮೀ.... ಅಮ್ಮೀ
ನಮ್ಮನ್ನು ಬಿಟ್ಟುಹೋಗಬೇಡಿ' ಎಂದು ತಾಯಿ


ಕಾಲುಗಳನ್ನು ಬಿಗಿದಪ್ಪಿದಳು. ಬಿಕ್ಕಿಬಿಕ್ಕಿ ಅಳುತ್ತಿದ್ದ ಸಲ್ಮಾ.... ನೆಲದಲ್ಲೇ ರೋದಿಸುತ್ತಿದ್ದ ಹಸುಗೂಸು.... ಇವರನ್ನು ಕಂಡು ಮೆಹರುನ್ ತನ್ನನ್ನು ಆವರಿಸಿದ್ದ ಅದೃಶ್ಯ ಶಕ್ತಿಯಿಂದ ಬಿಡುಗಡೆ ಹೊಂದಲು ಅತೀವ ಪ್ರಯತ್ನವನ್ನು ಮಾಡುತ್ತಾ, ಯಾವುದೋ ನಿದ್ರಾಲೋಕದಿಂದ ಕಣ್ಣು ತೆರೆದಂತೆ ಹೊರಜಗತ್ತಿಗೆ ಬಂದಳು. ಕ್ರಮೇಣ ಅವಳು ಜಾಗೃತಾವಸ್ಥೆಗೆ ಬರುತ್ತಿದ್ದಂತೇ ಅವಳ ಕೈಯಿಂದ ಬೆಂಕಿ ಪೆಟ್ಟಿಗೆ ಕೆಳಗೆ ಬಿತ್ತು. ಸಲ್ಮಾ.... ತಾಯಿಯ ಕಾಲುಗಳನ್ನು ಬಿಟ್ಟಿರಲಿಲ್ಲ. ''ಅಮ್ಮಿ... ಅವರೊಬ್ಬರನ್ನು ಕಳೆದುಕೊಂಡ ರೋಷದಲ್ಲಿ ನಮ್ಮೆಲ್ಲರನ್ನೂ ಅವಳ ಕಾಲ ಬುಡಕ್ಕೆ ಎಸೆಯುವುದು ಸರಿಯಾ? ಅಬ್ಬಾಗೋಸ್ಕರ ಸಾಯಲು ಸಿದ್ಧಳಾಗಿರುವ ನೀನು ನಮಗಾಗಿ ಬದುಕಲು ಸಾಧ್ಯವಿಲ್ಲವೇ? ನಮ್ಮನ್ನೆಲ್ಲ ನೀನು ಹೇಗೆ ತಬ್ಬಲಿಗಳನ್ನಾಗಿ ಮಾಡಲು ಸಾಧ್ಯ ಅಮ್ಮಿ.... ನಮಗೆ ನೀನು ಬೇಕು....'' ಅವಳ ಮಾತಿಗಿಂತ ಹೆಚ್ಚಾಗಿ ಅವಳ ಸ್ಪರ್ಶದಿಂದ ಮೆಹರುನ್ ಆರ್ದ್ರವಾದಳು. ಹೆಪ್ಪುಗಟ್ಟಿದ್ದ ಎಲ್ಲವೂ ಒಮ್ಮೆಯೇ.... ಕೊಚ್ಚಿಕೊಂಡು ಹೋದಂತಾಗಿ ಅವಳು ಅಲುಗಿಹೋದಳು. ಉಸಿರುಗಟ್ಟಿದಂತೆ ಅಳುತ್ತಿದ್ದ ಹಸುಗೂಸನ್ನು ಎತ್ತಿದ ಮೆಹರುನ್ ಸಲ್ಮಾಳನ್ನು ಎದೆಗವಚಿದಾಗ ತನ್ನ ಎತ್ತರಕ್ಕೆ ಬೆಳೆದಿದ್ದ ಗೆಳತಿಯೊಬ್ಬಳ ಸಾಂತ್ವನ, ಸ್ಪರ್ಶ, ಸಮಾನಭಾವ ಕೂಡಿ ಕಣ್ಣುಗಳೆರಡೂ ಭಾರವಾಗಿ ಬೇರೆ ಏನನ್ನೂ ನುಡಿಯದೆ 'ಕ್ಷಮಿಸು ಕಂದಾ' ಎಂದಳು. ಕತ್ತಲು ಹರಿಯುತ್ತಿತ್ತು. ಅವಳ ಎದೆಯ ಹಣತೆ ಎಂದೋ ಆರಿ ಹೋಗಿತ್ತು. ಆದರೆ ಪ್ರಭಾತದ ಬೆಳಕು ಮಂದವಾಗಿ ಪಸರಿಸುತ್ತಿತ್ತು.

"ನನ್ನ ಪಾಲಿಗೆ ಕಥೆ ಎಂದರೆ ಮನೋ ಲೋಕದ ಮಾಯಾನಗರಿ. ಸಪ್ತ ಸಾಗರದಾಳದಿಂದ ಹೆಕ್ಕುವ ಮುತ್ತು ರತ್ನ ಹವಳಗಳಂತೆ; ಮಿಡಿಯುವ ಭಾವಗಳ ಆಪ್ತ ಸಂವಾದ.





ಮಾನಸೋಲ್ಲಾಸ



ಸಂತೋಷಕುಮಾರ ಗುಲ್ವಾಡಿ

ಜೀವನದಲ್ಲಿ ನಾವೆಲ್ಲರೂ ಇಷ್ಟು ಚಡಪಡಿಸುವುದು, ಹುಚ್ಚು ಓಡಾಟ ಮಾಡುವುದು ಮತ್ತು ಏನೇನೆಲ್ಲ ಚಟುವಟಿಕೆಗಳಲ್ಲಿ ನಿರತರಾಗುವುದು, ಇವುಗಳೆಲ್ಲದರ ಒಟ್ಟು ಉದ್ದೇಶ, ಗುರಿ, ಅರ್ಥ ಒಂದೇ-ಮಾನಸೋಲ್ಲಾಸ. ಮನಸ್ಸಿಗೆ ಆನಂದ ಕೊಡಲಿಕ್ಕಾಗಿಯೇ ಇಷ್ಟೆಲ್ಲ ಸಾಧನೆ, ಬೋಧನೆ, ಶೋಧನೆ, ಪ್ರಲೋಭನೆ, ಯೋಚನೆ, ಯೋಜನೆ, ಯಾಚನೆ........

ಮಾನಸೋಲ್ಲಾಸ ಎಂಬುದು ಕರ್ನಾಟಕದ ಕಲ್ಯಾಣ ಚಾಲುಕ್ಯರ ವಿಕ್ರಮಾದಿತ್ಯನ ಮಗ ಮೂರನೆಯ ಸೋಮೇಶ್ವರ (ಕ್ರಿ.ಶ. 1126-38) ಎಂಬ ಅರಸನಿಂದ ರಚಿತವಾದ ಜಗತ್ತಿನ ಮೊತ್ತ ಮೊದಲ ಸಾಂಸ್ಕೃತಿಕ ವಿಶ್ವಕೋಶ. ಈ ಮಹಾನ್ ಗ್ರಂಥಕ್ಕೆ **ಅಭಿಲಾಷಿತಾರ್ಥಚಿಂತಾಮಣಿ** ಎಂಬ ಹೆಸರು ಕೂಡ ಇದೆ. ಸೋಮೇಶ್ವರನು ಚತುರಸ್ರ ವಿದ್ವಾಂಸ. ಅವನಿಗೆ 'ಸರ್ವಜ್ಞ ಭೂಪ' ಎಂಬ ಬಿರುದು ಕೂಡ ಇತ್ತು. ಸಾಹಿತ್ಯ, ಸಂಗೀತ, ಕಲೆ, ಶಿಲ್ಪಗಳಲ್ಲಿ ಅವನಿಗೆ ವಿಶೇಷ ಆಸಕ್ತಿ. ಅವನು ಕ್ರಿ.ಶ. 1126ರಲ್ಲಿ ಸಿಂಹಾಸನವೇರಿದನು. ಅವನ ಆಸ್ಥಾನದಲ್ಲಿ ಹಲವಾರು ಚತುರ ಪಂಡಿತರು, ಕಲಾವಿದರು, ಸಂಗೀತಗಾರರು, ಶಿಲ್ಪಿಗಳು ಪ್ರೋತ್ಸಾಹ ಪಡೆದರು. ಈ ಮಹಾಕಲಾ-ಸಂಸ್ಕೃತಿ ವಿಶ್ವಕೋಶ ಸೋಮೇಶ್ವರನ ಹೆಸರಲ್ಲಿ ಇದ್ದರೂ ಅದರಲ್ಲಿ ಅವನ ಕಾಲದ ವಿದ್ವಾಂಸರೂ ಸೇರಿ ಬರೆದಿರಬೇಕು.

ಸಾಹಿತ್ಯ, ಸಂಗೀತ, ಕಲೆ, ಶಿಲ್ಪ ಅಲ್ಲದೆ ಮನುಷ್ಯನ ಸುಖಕ್ಕಾಗಿ ಅವನು ಏನೇನು ಅನ್ವೇಷಿಸುತ್ತಿದ್ದಾನೆಯೋ ಅದೆಲ್ಲ ಇಲ್ಲಿದೆ. ಸುಮಾರು 850-900 ವರ್ಷಗಳ ಹಿಂದಿನ ಈ ಗ್ರಂಥದಲ್ಲಿ ವಸ್ತ್ರಭೋಗ, ಪುತ್ರೋಪಭೋಗ, ಅನ್ನಭೋಗ, ಆಲೇಖ್ಯಕರ್ಮ, ನೃಪಗೇಹ, ಆಸ್ಥಾಭೋಗ, ರಾಷ್ಟ್ರಪಾಲನ ಮೊದಲಾದ ಪೂರಕ ವಿಷಯಗಳ ಕುರಿತು ಕೂಡ ವಿವರಗಳಿವೆ. ಮೂರು ಅಧ್ಯಾಯಗಳಲ್ಲಿ ಗಾಯನ, ವಾದನ, ನರ್ತನಗಳ ಕುರಿತು ವಿಶ್ಲೇಷಣೆಯಿದೆ.

ಜೀವನೋಲ್ಲಾಸ ಕೊಡುವ ಕಲೆ, ಸಂಗೀತಗಳ ಕುರಿತಾಗಿರುವ 'ಮಾನಸೋಲ್ಲಾಸ' ಕ್ಕೊಂದು ಬೆಳಕಿಂಡಿ ಈ ಅಂಕಣ.



ತೋಡಿ ರಾಗಿಣಿ-ಪಹಾಡೀ ಶೈ
(ತೋಡಿ ಬೆಳಗ್ಗಿನ ಜಾವ ಹಾಡು
ದುಃಖರಸದ ರಾಗ

ರಾಗ

ಜಗತ್ತಿಗೆ ಭಾರತ ಕೊಟ್ಟ ಹಲವು ವಿಶಿಷ್ಟ, ಶ್ರೇಷ್ಠ ಕೊಡುಗೆಗಳಲ್ಲಿ ನಮ್ಮ ಸಂಗೀತವೂ ಒಂದು. ಸಾಮವೇದ ಕಾಲದಿಂದಲೂ ಪ್ರಕೃತಿಯೊಂದಿಗೆ ಮಾನವನು ತಾದಾತ್ಮ್ಯ ಹೊಂದಿದಂತೆ ಸಂಗೀತದ ಹೊಸ ಹೊಸ ಹೊಳಹುಗಳು ಅವನಿಗೆ ಅನುಭವಕ್ಕೆ ಬಂದುವು. ಅವನಲ್ಲೇ ಮೂಲಭೂತವಾಗಿರುವ ನಾದ, ಸ್ವರಗಳು ಪ್ರಕೃತಿಯೊಂದಿಗೆ ಒಂದಾದಾಗ ಶ್ರುತಿ ಹೊರಟಿತು. ಅದನ್ನು ಕೇಳುತ್ತ ಕೇಳುತ್ತ ಅವನು ತಲ್ಲೀನನಾದ. ಗೀತ-ವಾದ್ಯ-ನೃತ್ಯತ್ರಯಗಳನ್ನೆಲ್ಲ ನಾವು ಸಂಗೀತವೆಂದು ಪರಿಗಣಿಸಿದೆವು. ಇಲ್ಲಿ ವ್ಯಕ್ತಿಗೆ, ಅವನ ಸತ್ವಕ್ಕೆ ಮಹತ್ವ. ಹಾಗಾಗಿ ನಮ್ಮಲ್ಲಿ ಏಕಕಲಾವಿದ ಸಂಗೀತ ಕಚೇರಿಗಳೇ ಹೆಚ್ಚು.

ಭಾರತೀಯ ಸಂಗೀತದ ಪ್ರಕಾರ ಸ್ವರಗಳೆಲ್ಲ ಪ್ರಕೃತಿಜನ್ಯ-

ಸ ಷಡ್ಜ - ನವಿಲು, ರೆ ಋಷಭ - ಎತ್ತಿನ ಸ್ವರ, ಗ ಗಂಧಾರ - ಮೇಕೆ, ಮ ಮಧ್ಯಮ - ಕ್ರೌಂಚ, ಪ ಪಂಚಮ - ಕೋಗಿಲೆ, ಧ ಧೈವತ - ಕುದುರೆ, ನಿ ನಿಷಾದ - ಆನೆ.

ಅವುಗಳಿಗೆ ಕಲಾತ್ಮಕ ರೂಪಕೊಟ್ಟು, ಅದರ ನಾದ ಕಂಪನ, ಆಲಾಪಗಳಲ್ಲಿ ಹೊಸ ಹೊಸ ಅನ್ವೇಷಣೆಗಳನ್ನು ಮಾಡಿಕೊಂಡೇ ಬಂದಿದ್ದಾನೆ ಭಾರತೀಯ ಸಂಗೀತರಸಿಕ. ಈ ಸೃಜನಶೀಲತೆಯ ಹುಡುಕಾಟದಲ್ಲಿ, ದೊರೆಯುವ ಅನುಭವದ ಆನಂದಕ್ಕೆ ಬೆಲೆ ಕಟ್ಟಲಾದೀತೆ? ಅದರದ್ದು ಸಾರ್ವಕಾಲಿಕ ಮೌಲ್ಯಮಹತ್ತ್ವ.

ಭಾರತೀಯ ಸಂಗೀತದ ಜೀವಾಳ ಹಾಗೂ ಅದರ ಸಂಯೋಜನೆ, ಸಾದರ ಸೃಷ್ಟಿಕ್ರಿಯೆ, ವೈಯಕ್ತಿಕ ಛಾಪಿನ ಶೈಲಿ, ಹೆಗ್ಗುರುತು ಧ್ವನಿ ವಿಶೇಷವೆನಿಸಿದ ರಾಗ. ಜನರ ಮನಸ್ಸಿಗೆ ರಂಜನೆ ಕೊಡುವುದೇ ರಾಗ. ರಾಗ ಅಂದರೆ ಬಣ್ಣ, ಮನಸ್ಸಿನ ಹಲವು ಭಾವನೆಗಳು, ಕಲ್ಪನೆಗಳು, ಕನಸುಗಳು. ಅದು ವ್ಯಷ್ಟಿ-ಸಮಷ್ಟಿಗಳೆರಡರಲ್ಲೂ ಸ್ಪಂದಿಸುವ ಜೀವಭಾವ. ಈ ಕುರಿತು ನೂರಾರು ಗ್ರಂಥಗಳಲ್ಲಿ ಸಂಗೀತ ಶಾಸ್ತ್ರಜ್ಞರು ವಿಶ್ಲೇಷಣೆ ಮಾಡಿರುವುದೂ ಒಂದು ಸ್ವಾರಸ್ಯಕರ ಬೆಳವಣಿಗೆ.

ನಮ್ಮ ರಾಗಗಳಿಗೂ, ನಿಸರ್ಗಕ್ಕೂ ಬಲು ಹತ್ತಿರದ ನಂಟು. ರಾಗ ವರ್ಣನೆ, ರಾಗ ವಿವರಣೆ, ರಾಗ ಲಕ್ಷಣ, ರಾಗ-ದಾಂಪತ್ಯ, ರಾಗ ಕುಟುಂಬ, ಗಂಡು ರಾಗ, ಹೆಣ್ಣು ರಾಗ, ಲಿಂಗ ಭೇದವಿಲ್ಲದ ರಾಗಗಳು, ಸಂಪೂರ್ಣ ರಾಗಗಳು, ಆರು ಸ್ವರಗಳ ಷಾಡವ ರಾಗಗಳು, ಐದು ಸ್ವರಗಳ ಔಡವ ರಾಗಗಳು, ಬೆಳಗ್ಗೆ ಹಾಡುವ ರಾಗಗಳು, ಮಧ್ಯಾಹ್ನ ಹಾಡುವ ರಾಗಗಳು, ಸಂಜೆ, ರಾತ್ರಿ, ಬೇರೆ ಬೇರೆ ಪ್ರಹರಗಳಲ್ಲಿ, ಸೂರ್ಯೋದಯ-ಸೂರ್ಯಾಸ್ತದ ಸಂಧಿ ಪ್ರಕಾಶ ರಾಗಗಳು, ಬೇರೆ ಬೇರೆ ಋತುಗಳಲ್ಲಿ ಹಾಡುವ ರಾಗಗಳು, ಸುಖ, ದುಃಖ, ವಿರಹ, ಉಲ್ಲಾಸ, ಕಾಮ-ಪ್ರೇಮಗಳಲ್ಲಿ ಹೊರ ಹೊಮ್ಮುವ ರಾಗಗಳು-ಹೀಗೆ ಈ ಪಟ್ಟಿ ಬೆಳೆಯುತ್ತಲೇ ಇದೆ. ಇಂದಿಗೂ ಅನೇಕ ಸಂಗೀತಗಾರರು ಹೊಸ ಹೊಸ ರಾಗ ಸಂಯೋಜಿಸುತ್ತಲೇ ಇದ್ದಾರೆ. ಇದು ನಿರಂತರ ಬೆಳವಣಿಗೆಯ ಲಕ್ಷಣ.

ಬಸವಣ್ಣನವರು ಹೇಳಿದ್ದ 32 (ಬತ್ತೀಸರಾಗ) ರಾಗ ಉತ್ತರ ಭಾರತದ ಶಬ್ದ. ರಾಗಗಳು ಎರಡು ಪದ್ಧತಿಗಳಲ್ಲೂ ಹೆಚ್ಚು ಕಡಿಮೆ ಒಂದೇ ಮೂಲದಿಂದ ಬಂದರೂ ಅನಂತರ ಕ್ರಮೇಣ ಮನೋಧರ್ಮದಿಂದ, ಉತ್ತರ ಭಾರತದಲ್ಲಿ ನಡೆದ ಮುಘಲ್ ಆಕ್ರಮಣ, ಪರ್ಶಿಯನ್ ಮತ್ತು ಅರೇಬಿಯಾ ಪ್ರಭಾವಗಳಿಂದ ಭಿನ್ನವಾದವು.

■

ಜಯಂತ

ಸತ್ವಶಾಲಿ ರೇಖಕ ಎಸ್.ರಮೇಶ್



ಮಡದಿ, ಮೊಮ್ಮಗು ಜೊತೆ
ಎಸ್. ರಮೇಶ್




ಕಾಗದದ ಮೇಲಿಟ್ಟ ಕುಂಚದ ತುದಿಚುಕ್ಕಿಯೊಂದು ಭಾವನೆಗಳ ಕಾಂತತ್ವಕ್ಕೆ ಸಿಕ್ಕು ರೇಖೆಯಾಗಿ ಅರಳುವ ಪವಾಡವನ್ನು, ಕಥೆಗಳಿಗೆ ರೇಖಾಚಿತ್ರ ಬಿಡಿಸುವ ಕಲೆಗಾರನೇ ಬಲ್ಲ. ಕತೆಗಾರನ ಕಲ್ಪಕತೆಗೆ ತನ್ನ ಕಲೆಯನ್ನು ಧಾರೆಯೆರೆಯುವ ನಿಸ್ವಾರ್ಥಿ ಈತ. ಯಾವುದೇ ಪತ್ರಿಕೆಗಳನ್ನು ತೆಗೆದುಕೊಳ್ಳಿ ಕತೆಕಾದಂಬರಿಗಳ ಚಿತ್ರಗಳು ಓದಿನ ಅಂಗವೇ ಆಗುತ್ತವೆ. ಕಥೆಗಳ ಆಶಯಕ್ಕೋ ಪಾತ್ರಕ್ಕೋ ಒಂದು ಮೂರ್ತ ರೂಪಕೊಟ್ಟು ಅಂದಗೊಳಿಸುವ ಈ ಚಿತ್ರಗಳು ವಾಚನಾಭಿರುಚಿಯ ಜತೆ ವಾಚಕನ ದೃಶ್ಯಾಭಿರುಚಿಯನ್ನೂ ಬೆಳೆಸುತ್ತ ಬಂದಿವೆ.

ಆದರೆ ಹೊಳೆ ದಾಟಿದ ನಂತರ ನಾವಿಕನನ್ನು ಮರೆಯುವಂತೆ ನಾವು ಈ ಕಲೆಗಾರರನ್ನು ಮರೆಯುತ್ತಲೇ ಬಂದಿದ್ದೇವೆ. ಮನಸ್ಸು ಮಾಡಿದ್ದರೆ, ಅದೃಷ್ಟ ಒಲಿದಿದ್ದರೆ, 'ಪೇಂಟಿಂಗ್' ಮಾಡಿ ದೇಶವಿದೇಶಗಳ ಖ್ಯಾತಿ, ಮನ್ನಣೆ, ಹಣ ಎಲ್ಲವನ್ನು ಗಳಿಸಬಲ್ಲ ಕಲಾವಿದರಾಗಬಹುದಾಗಿದ್ದ ಈ ರೇಖಾವಿನ್ಯಾಸಗಾರರು ('ರೇಖಕ'ರು!) ದಿನಗೂಲಿಯ ಕಾರ್ಮಿಕರಂತೆ ಎಷ್ಟೆಲ್ಲ ಪತ್ರಿಕೆಗಳ ಕಾರ್ಯಾಲಯಗಳಲ್ಲಿ ತಲೆತಗ್ಗಿಸಿ ಚಿತ್ರ ರಚಿಸುತ್ತಲೇ ಇದ್ದಾರೆ. ಕಲೆಯ ಗಂಧಗಾಳಿ ಇಲ್ಲದ ವರಿಷ್ಠರಿಂದ ತಿದ್ದುಪಡಿ ಸೂಚನೆಗಳನ್ನು ಪಡೆಯುತ್ತ ಮೌನದಲ್ಲೇ ಮತ್ತೆ ಮತ್ತೆ ಬ್ರಶ್ಶು ತೊಳೆಯುತ್ತಾ ಹೊಸ ಖಾಲಿ ಕ್ಯಾನ್‌ವಾಸುಗಳನ್ನು ತೆರೆಯುತಿದ್ದಾರೆ.

ಕಳೆದ ಮೂರ್‍ನಾಲ್ಕು ದಶಕಗಳಲ್ಲಿ ಬೆಳೆದು ಬಂದಿರುವ ಇಂಥ ಎಲ್ಲ ಪತ್ರಿಕಾ ರೇಖಾ ವಿನ್ಯಾಸಕಾರರ ಅಣ್ಣನಂತಿರುವ ಎಸ್. ರಮೇಶ್, ಸತ್ವಶಾಲಿ ರೇಖಾಲಾವಣ್ಯ ಮತ್ತು ವಿಶಿಷ್ಟ ಛಾಪಿನ ಅಪರೂಪದ ಹಿರಿಯ ಕಲಾವಿದ. ಅಚ್ಚಿನ ಟೈಪುಗಳಿಂದ ತೀರ ಭಿನ್ನವಾದ ಅಕ್ಷರಗಳು, ಕೆಲವೇ ರೂಹುಗಳಲ್ಲಿ ಅಂಗಸೌಷ್ಠವವನ್ನು ಅಚ್ಚಳಿಯದಂತೆ ಮೂಡಿಸುವ ಪ್ರಮಾಣಬದ್ಧತೆ ಮತ್ತು ಜೀವಂತ ರೇಖೆಗಳು.... ಇವು ರಮೇಶ್‌ರ ವೈಶಿಷ್ಟ್ಯ. 'ಎಡಕಲ್ಲು ಗುಡ್ಡದ ಮೇಲೆ' ಧಾರಾವಾಹಿ ಕಾದಂಬರಿಗೆ ಅವರು ವಾರಗಟ್ಟಲೆ ರೇಖಿಸುತ್ತಿದ್ದ ಚಿತ್ರಗಳ ವೈವಿಧ್ಯ, ಚಹರೆಗಳ ಖಚಿತತೆ ಸತ್ಯಕಾಮರ ಪೌರಾಣಿಕ ಪ್ರಸಂಗಗಳ ಎಲೆ, ಹೂವು, ಕೊಳಗಳ ನೀರೆಯರ ಅಂದ ಇನ್ನೂ ಓದುಗರ ಮನಸಿನಲ್ಲಿದೆ.

1959ರಿಂದ ಹಿಡಿದು 1992ರಲ್ಲಿ ನಿವೃತ್ತರಾಗುವತನಕ, ಪ್ರಜಾವಾಣಿಯ ವಾರ್ಷಿಕ ದೀಪಾ







ವಳಿ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಕಥೆಯ ಚಿತ್ರ ವಿನ್ಯಾಸ ಮಾಡುವ ಗೌರವ ರಮೇಶ್‌ರದೇ ಆಗಿತ್ತು.

ಇಂದಿನ ಪ್ರತಿಭಾವಂತ ಲೇಖಕ ಪ.ಸ. ಕುಮಾರ್ ಅವರು ಹೇಳುವಂತೆ - ''ಅಜಂತಾ ಎಲ್ಲೋರಾ ಶೈಲಿಯಲ್ಲಿ ಚಿತ್ರರಚನೆ ಮಾಡುತ್ತಿದ್ದ ಎಸ್.ಆರ್.ಸ್ವಾಮಿ ಮತ್ತು ಚಂದಮಾಮ ಕಲಾವಿದರೆಂದೇ ಪ್ರಖ್ಯಾತರಾದ ಎಂ.ಟಿ.ವಿ. ಆಚಾರ್ಯರು ರೂಢಿಸಿದ್ದ ಶೈಲಿಯಿಂದ ಭಿನ್ನವಾದ ಶೈಲಿಯನ್ನು ಕನ್ನಡ ಪತ್ರಿಕಾ ರಂಗಕ್ಕೆ ಕೊಟ್ಟವರು ರಮೇಶ್. ರಂಗುರಂಗಿನ ಇಂದಿನ ಪತ್ರಿಕೆಗಳ ರೂಪಾವಿಷ್ಕಾರದ ಹಿಂದೆ ರಮೇಶ್‌ರ ಚಿಂತನೆ, ಶ್ರಮ ಇವೆ.''

ಆಂಧ್ರದ ವಿಶಾಖಪಟ್ಟಣದಲ್ಲಿ ಹುಟ್ಟಿದ ರಮೇಶ್ ಕಾಕಿನಾಡದಲ್ಲಿ ಇಂಟರ್‌ಮೀಡಿಯೇಟ್ ಮುಗಿಸಿ, ರಾಜಮಹೇಂದ್ರಿಯ ಪ್ರಖ್ಯಾತ ಕಲಾಗುರು ವರದವೆಂಕಟರತ್ನಂ ಮತ್ತು ಮದ್ರಾಸಿನ ರಾಮಗೋಪಾಲ್ ಅವರ ಬಳಿ ಕಲಾಭ್ಯಾಸ ನಡೆಸಿದರು. ಮದರಾಸಿನಲ್ಲಿ ಸಿನಿಮಾ ಮತ್ತು ಜಾಹಿರಾತು ವಿಭಾಗದಲ್ಲಿ ಕೆಲಸವನ್ನು ಆರಂಭಿಸಿದರು. ಆದಾಗಲೇ ಮದ್ರಾಸಿನ ಇಂಗ್ಲಿಷ್ ಮತ್ತು ತಮಿಳು ದೈನಿಕಗಳಿಗೆ ರಾಜಕೀಯ ಪಾಕೆಟ್ ಕಾರ್ಟೂನ್ ಬರೆಯುತ್ತಿದ್ದರು. ಆಗ ಬೆಂಗಳೂರಿನಲ್ಲಿ ಕಲಾವಿದರಿಗೆ ತಕ್ಕ ವಾತಾವರಣ ಇರಲಿಲ್ಲವಾದ್ದರಿಂದ ಅ.ನ.ಕೃ., ಮ. ರಾಮಮೂರ್ತಿಯಂಥ ಲೇಖಕರು ಮದ್ರಾಸಿಗೆ ಹೋಗಿ ತಮ್ಮ ಪುಸ್ತಕಗಳಿಗೆ ಹೊದಿಕೆ ಚಿತ್ರ ಮಾಡಿಸಿಕೊಂಡು ಬರುತ್ತಿದ್ದರು.

ಹೀಗೆ ಮದ್ರಾಸಿಗೆ ಬರುತ್ತಿದ್ದ ಅ.ನ.ಕೃ ಮತ್ತು



ಸತ್ಯಕಾಮರ ಕಾದಂಬರಿಗೆ



ಸತ್ಯಕಾಮರ ಕಾದಂಬರಿಗೆ

ಮ.ರಾಮಮೂರ್ತಿಯವರ ಪ್ರೀತಿಯ ಒತ್ತಾಯ, ಬೆಂಬಲಕ್ಕೆ ಕಟ್ಟುಬಿದ್ದ ರಮೇಶ್ 1953ರಲ್ಲಿ ಬೆಂಗಳೂರಿಗೆ ಬಂದರು. ಇಲ್ಲಿ ಶೇಷಪ್ಪನವರ 'ಕಿಡಿ' ಮತ್ತು 'ಜ್ವಾಲೆ' ಪತ್ರಿಕೆಗಳಿಗೆ, ವ್ಯಂಗ್ಯ ಚಿತ್ರ ಬರೆದರು. ತರಾಸು, ನಿರಂಜನ, ಬೀಚಿ, ಅ.ನ.ಕೃ.ರ ನೂರಾರು ಪುಸ್ತಕಗಳಿಗೆ ಚಂದದ ಹೊದಿಕೆ ಬಿಡಿಸಿದರು. ಮತ್ತು ಟಿ.ಎಸ್.ಆರ್. ಅವರ ಆಣತಿಯಂತೆ 1959ರಲ್ಲಿ ಪ್ರಜಾವಾಣಿ ಬಳಗ ಸೇರಿದರು.

''ಆಗ ಇಲ್ಲಿ ಕಲೆಗೆ ಸಂಬಂಧಪಟ್ಟ ಸಾಮಗ್ರಿ ಏನೇನೂ ಸಿಗ್ತಿರಲಿಲ್ಲ. ಮುಂಬಯಿಗೆ ಹೋಗಿ ತರಬೇಕಾಗ್ತಿತ್ತು. ಈಗಿನ ಹಾಗೆ ಕಂಪ್ಯೂಟರ್‌ನ ನೆರವಿರಲಿಲ್ಲ. ಎಲ್ಲವನ್ನು ಕೈಯಿಂದ ಮಾಡಿ, ಕತ್ತರಿಸಿ, ಅಂಟಿಸಿ, ವಿನ್ಯಾಸ ಮಾಡಬೇಕಾಗುತ್ತಿತ್ತು. ಪ್ರೆಸ್ಸಿನ ಜತೆ ಟ್ಯೂನಿಂಗ್ ಬಹಳ ಮುಖ್ಯವಿತ್ತು'' ಎನ್ನುತ್ತಾರೆ ರಮೇಶ್. 1969ರಿಂದ ಕಲಾ ವಿಭಾಗದ ಮುಖ್ಯಸ್ಥರಾಗಿ ಸುಧಾ, ಮಯೂರಗಳ ಜತೆಗೆ ವಿಶೇಷಾಂಕಗಳ ರೂಪಲಾವಣ್ಯಗಳ ಆದ್ಯ ವಿನ್ಯಾಸಕಾರರಾಗಿ ಅವರು ಕೆಲಸ ಮಾಡಿದರು.

1992ರಲ್ಲಿ ನಿವೃತ್ತರಾಗಿ ತಮ್ಮ ಕುಟುಂಬದೊಂದಿಗೆ ಬೆಂಗಳೂರಿನ ಜೆಪಿ ನಗರದಲ್ಲಿ ವಾಸಿಸುತ್ತಿರುವ ರಮೇಶ್‌ಗೆ ತೆಲುಗಿನ ವಿಖ್ಯಾತ ಕಲೆಗಾರ 'ಬಾಪು' ತುಂಬ ಇಷ್ಟದ ರೇಖಕ. ಪತ್ರಿಕೆಯ ಕೆಲಸದ ಜತೆಗೆ ಜಾಹಿರಾತು, ಪುಸ್ತಕದ ಹೊದಿಕೆಗಳನ್ನೂ ಚಿತ್ರಿಸುತ್ತಿದ್ದ ರಮೇಶ್, 'ಕಾಡು' ಚಲನಚಿತ್ರದ ಶೀರ್ಷಿಕೆಗಳನ್ನು, 'ಕರಾವಳಿ' ಚಿತ್ರದ ಪೋಸ್ಟರುಗಳನ್ನು ರೂಪಿಸಿದ್ದಾರೆ. ''ನೀವ್ಯಾಕೆ 'ಪೇಂಟಿಂಗ್'ಗೆ ಹೋಗಲಿಲ್ಲ?'' ಎಂದರೆ ''ಟೈಂ ಸಾಕಾಗ್ತಿರಲಿಲ್ಲ, ಮೇಲಾಗಿ ನಾನು, ನನ್ನ ಬಳಿ ಎಷ್ಟು ಸಾಧ್ಯನೋ, ಅಷ್ಟೇ ಕೆಲಸ ಕೈಗೆತ್ತಿಕೊಳ್ತಾ ಇದ್ದೆ. ನನಗೆ 'ಲೇಝೀ ಆರ್ಟಿಸ್ಟ್' ಅಂತ ಕೂಡ ಬಿರುದು ಸಿಕ್ಕಿ ಬಿಟ್ಟಿತ್ತು.'' ಎನ್ನುತ್ತಾರೆ.

ರಮೇಶ್ ಛಾಪಿನ ಅಕ್ಷರ ಶೈಲಿ

ಹೌದು,
ಕಾಲ ಬರಬೇಕು
ವಾಸುದೇವರಾಯರ
ಜೀವನದಲ್ಲಿ
ಎಂದು ಬಂದೀತು?




'ಎಡಕಲ್ಲು ಗುಡ್ಡದ ಮೇಲೆ' ಧಾರಾವಾಹಿಗೆ

''ನಿಮ್ಮೆಲ್ಲ ತನ್ಮಯತೆಯನ್ನೆರೆದು ರಚಿಸಿದ ರೇಖಾಚಿತ್ರಗಳು ಒಂದು ವಾರದಲ್ಲಿ ರದ್ದಿಯಾಗಿ ಬಿಡುವಾಗ ಬೇಸರವಾಗುತ್ತಿರಲಿಲ್ಲವೇ?'' ಎಂದಾಗ ''ಇಲ್ಲ ಏಕೆಂದರೆ ಆಗ ಮುಂದಿನ ಸಂಚಿಕೆಯ ಚಿತ್ರಗಳಲ್ಲಿ ತಲ್ಲೀನರಾಗುತ್ತಿದ್ದೆವು'' ಎನ್ನುವ ರಮೇಶ್ ತಮ್ಮೆಲ್ಲ ಮೂಲ ಚಿತ್ರಗಳನ್ನು ತಮ್ಮ ಬಳಿ ಜತನದಿಂದ ಇಟ್ಟುಕೊಂಡಿದ್ದಾರೆ. ಹಳೆಯ ನೆನಪುಗಳನ್ನು ಹೆಕ್ಕುವವರಂತೆ, ಪ್ಲಾಸ್ಟಿಕ್ ಹೊದಿಕೆ ಬಿಡಿಸಿ ಒಂದೊಂದೇ ತೆಗೆದು ತೋರಿಸುತ್ತಾರೆ.

ಈಗೊಂದು ವಿಸ್ಮಯ! ಏಕೆಂದರೆ ರಮೇಶ್‌ರು ಚಿತ್ರಿಸಿದ ಈ ಕಥೆಗಳೆಲ್ಲ ಕನ್ನಡದ ಕಥೆಗಾರಿಕೆಯ ಸುವರ್ಣಯುಗದ ಆಣಿಮುತ್ತುಗಳು! ಲಂಕೇಶ್‌ರ 'ನಿವೃತ್ತರು', ಆಲನಹಳ್ಳಿಯವರ 'ಕಾಗೆ' ಶ್ರೀಕಾಂತರ 'ವಿವೇಕಾನಂದರ ಭೂತ', 'ಎಸ್. ದಿವಾಕರ್‌ರ ಕ್ರೌರ್ಯ'.... ಒಂದೇ ಎರಡೆ, ಕನ್ನಡ ಕಥೆಗಳು ನಡೆದು ಬಂದ ಹಾದಿಯ ಸ್ಥಿರ ಚಿತ್ರಗಳಂತೆ ಈ ಚಿತ್ರಗಳು ಈಗಲೂ ಬೆಚ್ಚಗೆ ಒಟ್ಟಿಗೆ ಹೊರಬರುತ್ತಿವೆ. ಒಂದೊಂದೇ.....

ಬೇಕಾದ ಆಕಾರಗಳನ್ನು, ಬೇಕಾದ ಬಣ್ಣಗಳನ್ನು, ಬೇಕಾದ ಸ್ವರೂಪಗಳಿಗೆ ಗುಂಡಿಯೊತ್ತಿ ಹಿಗ್ಗಿಸಬಹುದಾದ ಕಂಪ್ಯೂಟರ್ ಕಲೆಯ ಈ ಕಾಲದಲ್ಲಿ ಹಾಳೆಗಳನ್ನು ಒಂದಕ್ಕೊಂದಂಟಿಸಿ ಪ್ರಮಾಣಬದ್ಧವಾಗಿ ಒಂದೇ ಬೀಸಿನಲ್ಲಿ ರಚಿಸಿದ್ದ ಮೂವತ್ತು ವರುಷಗಳ ಹಿಂದಿನ ಈ ಚಿತ್ರಗಳು ಅದೇ ಜೀವಂತಿಕೆಯಿಂದ ನಳನಳಿಸುತ್ತಿವೆ. ಅವರು





ಚಿತ್ರ ಬರೆದ ಕಥೆಗಳ 'ಇಂಟ್ರೋ' (ಅಂದರೆ ಕಥೆಗಳ ಇಣುಕುನೋಟ ಕೊಡುವ ಸಾಲುಗಳು)- ಅವರ ವಿಶಿಷ್ಟ ಸುಂದರ ಅಕ್ಷರಗಳಲ್ಲೇ ಸ್ಫುಟವಾಗಿವೆ.

1996ರಲ್ಲಿ ಕರ್ನಾಟಕ ಪತ್ರಿಕಾ ಅಕಾಡಮಿ ಪ್ರಶಸ್ತಿ ಪಡೆದಿರುವ ಎಸ್.ರಮೇಶ್ ತಮ್ಮ ನಿವೃತ್ತ ಜೀವನವನ್ನು, ತಾವೇ ವಿನ್ಯಾಸಮಾಡಿ ರಚಿಸಿದ ತಮ್ಮ ಮನೆಯಲ್ಲಿ ಕಳೆಯುತ್ತಿದ್ದಾರೆ. ಇಂಜಿನಿಯರ್ ಮಗ, ಸೊಸೆ, ಮೊಮ್ಮಗ- ಅಮೆರಿಕಾದಲ್ಲಿದ್ದಾರೆ. ಮಗಳು ಮತ್ತು ಮಡದಿಯ ಅಕ್ಕರೆಯ ಆರೈಕೆಯಲ್ಲಿರುವ ರಮೇಶ್ ಹೃದಯ ಚಿಕಿತ್ಸೆಯ ಆಸ್ಪತ್ರೆ ಭೇಟಿಗಳ ನಡುವೆಯೂ 'ಭಾವನಾ'ದ ಶೀರ್ಷಿಕೆಯ ಅಕ್ಷರಗಳನ್ನು ಬರೆದುಕೊಟ್ಟರು. ನಿಮ್ಮ ಕೆಲ ರೇಖಾಚಿತ್ರಗಳ ನಮೂನೆಗಳನ್ನು ಪ್ರಕಟಿಸಬಹುದೇ? ಎಂದಾಗ "ನೀವೇ ಕೇಳ್ತೀರೋದು ಹೀಗೆ ...ಇಲ್‌ದಿದ್ರೆ ಯಾರಿಗೆ ಬೇಕು ಈ ಹಳೇ ಇಲ್ಯುಸ್ಟ್ರೇಷನ್‌ಗಳು? ಬಳಸಿದ ಮೇಲೆ ತಂದು ಕೊಡಿ. ಐ ಟ್ರಸ್ಟ್ ಯೂ" ಎಂದು



ಲಂಕೇಶ್‌ರ ಕಥೆಗೆ

ಹೃದಯ ತುಂಬಿ ಹೇಳಿ, ಮಗುವಿನಂತೆ ನಗುತ್ತಾರೆ. ಕನ್ನಡ ಪತ್ರಿಕೆಗಳ ಒಪ್ಪ ಓರಣ, ಅಂದ ಚಂದಗಳ ಆದ್ಯಪ್ರವರ್ತಕ ರಮೇಶ್‌ಗೆ ಆಯುರಾರೋಗ್ಯವಿರಲಿ. ವಿಶ್ರಾಂತ ಜೀವನದ ಅವರ ಕ್ಯಾನ್‌ವಾಸುಗಳಲ್ಲಿ ಹೊಸ ರೇಖೆಗಳು ಮೂಡಲಿ.

■




ಈ ವ್ಯಂಗ್ಯ ಚಿತ್ರ ಈಗಲೂ ಪ್ರಸ್ತುತ !



ಅಮರೇಶ ನುಗಡೋಣಿ

ಆತ್ಮ ಸಂಗಾತಕ್ಕೆ ನೀನುಂಟೆ



ಪ್ರಿಯ ಶರಣ್,

ಈ ಸಲ ನಿನ್ನ ಬಳಿಗೆ ಬಂದೇ ತೀರಬೇಕೆಂದು ಎಷ್ಟು ಯತ್ನಿಸಿದ್ದೆ ಎಂದರೆ... ನನ್ನ ತೀವ್ರತೆಯನ್ನು ಯಾವ ಶಕ್ತಿಯೂ, ನನ್ನ ವಿಕ್ಷಿಪ್ತತೆಯೂ ತಡೆಯಲು ಅಸಾಧ್ಯವೆಂದು ಅನ್ನಿಸಿತ್ತು. ಆದರೆ ಹಾದಿ ಮಧ್ಯದಲ್ಲಿ ಮಾಯಾವಿಯೊಬ್ಬನ ಶಕ್ತಿ ನನ್ನನ್ನು ಹಿಡಿದು ನಿಲ್ಲಿಸಿತು. ಇದು ನೆಪವಲ್ಲ. ನಿನ್ನಲ್ಲಿ ಅನಾವಶ್ಯಕ ಕುತೂಹಲ ಮೂಡಿಸಿ ಆತಂಕ ಹೆಚ್ಚಿಸುವುದಕ್ಕಲ್ಲ. ನನ್ನ ಬದುಕಿನ ನಿರ್ಣಾಯಕ ಹಾದಿಯಲ್ಲಿದ್ದಾಗ ಇಂಥದ್ದನ್ನು ಎದುರುಗೊಳ್ಳುತ್ತೇನೆಂದು, ಅನುಭವಿಸುತ್ತೇನೆಂದು ಅಂದುಕೊಂಡಿರಲಿಲ್ಲ. ಶರಣ್, ಕನಸ್ಸು ಇಷ್ಟು ಚಂದ ಇರಲು ಸಾಧ್ಯವೆ?


ಈ ಸಮಾಜದಲ್ಲಿ ನಾನು, ನನ್ನೆಲ್ಲ ಇತಿಮಿತಿಗಳ ನಡುವೆ 'ಹೇಗೆ ಜೀವಿಸಬೇಕು' ಎಂದು ಹಲವು ನೆಲೆಯಲ್ಲಿ ಕನಸು ಕಟ್ಟಿದ್ದೆ. ಅಹಂಕಾರದಿಂದಲೂ, ಅಸಹಾಯಕತೆಯಿಂದಲೂ ಕಂಡ ಕನಸುಗಳೆಲ್ಲ ಬಾಳಿಗೆ ನೆಲೆ ಒದಗಿಸುವ ಲಕ್ಷಣವನ್ನೇ ತೋರಿಸಲಿಲ್ಲ. ತನಗೆ ತಾನೇ ಎಂಬಂತೆ ನಿಲುಗಡೆ ಎಂಬುದು ಬಾಳಿನಲ್ಲಿ ಕಾಣಿಸಿದಾಗ ನಿನ್ನ ಸಂಗಾತಿಯಾಗಲು ಆಶಿಸಿದೆ. ನೀನೂ ಸಮ್ಮತಿಸಿದ್ದಕ್ಕೆ ನಿನಗೆ ಋಣಿಯಾಗಿರುವೆ. ಯಾವ ಬಗೆಯ ವ್ಯವಸ್ಥೆಯನ್ನೂ ಒಪ್ಪದ ನಾನು, ನಿನ್ನಲ್ಲಿ ಒಂದಾಗುವ ಆಶೆಯ ಮೂಲಕ ಮತ್ತೊಂದು ವ್ಯವಸ್ಥೆಯನ್ನೇ ನಂಬುವ ನೆಲೆಗೆ ಬಂದಿದ್ದೆ. ಶರಣ್, ಈ ಹೊತ್ತಿನ ಆಧುನಿಕತೆ, ಹೆಣ್ಣಿನ ಬಗ್ಗೆ ಹುಟ್ಟುವ ಸಿದ್ಧಾಂತಗಳು ನನ್ನನ್ನು ಈ ಸ್ಥಿತಿಗೆ ತಂದವೋ ಅಥವಾ ನನ್ನ ವಿಲಕ್ಷಣ ಮನಸ್ಥಿತಿಯೇ ಇದಕ್ಕೆ ಕಾರಣವೋ ಎಂದು ತರ್ಕಕ್ಕೆ ಈಗ ಇಳಿಯುವುದಿಲ್ಲ. ಯಾಕೆಂದರೆ ಈಗ ನನ್ನಲ್ಲಿ ವಿವೇಚಿಸುವ ಚೈತನ್ಯ ಉಳಿದಿಲ್ಲ. ಹಾಗೆ ನೋಡಿದರೆ ನಾನು ನಿನ್ನನ್ನು ಮದುವೆಯಾಗಲು ಒಪ್ಪಿದ್ದು ನೆಪಕ್ಕಾಗಿಯೆ? ನನಗೇ ಗೊತ್ತಾಗುತ್ತಿಲ್ಲ. ಅದು ನಿನಗೆ ಗೊತ್ತಾಗಬೇಕು. ಒಟ್ಟಿನಲ್ಲಿ ಯಾವುದಕ್ಕೋ ದೂರದ ಹಳ್ಳಿಯಲ್ಲಿರುವ ನಿನ್ನ ಬಳಿಗೆ ಬರಲು ಪ್ರಯಾಣ ಕೈಗೊಂಡಿದ್ದೆ. ಆದರೆ ಚಂದ್ರ, ಹಾದಿ ಮಧ್ಯದಲ್ಲಿ ಘಟಿಸಿದ ಘಟನೆಯಿಂದ ಈಗ ನಿನ್ನ ಬಳಿಗೆ ಬರುವ ಚೈತನ್ಯ ಕಿಂಚಿತ್ತೂ ನನ್ನಲ್ಲಿ ಉಳಿದಿಲ್ಲ. ಕೊನೆಗೂ ನಮ್ಮ ಸಖ್ಯ ಏರ್ಪಡುತ್ತದೋ ಇಲ್ಲವೋ ಆ ದೇವರೇ ಬಲ್ಲ! ಆದರೆ ಶರಣ್, ಹಾದಿ ಮಧ್ಯೆ ತಡೆದ ಆ ಮಾಯಾವಿಯ ಜತೆಗಿನ ನನ್ನ ಕಥನ ಬರೆದು ನಿನಗೆ

ತಿಳಿಸದೇ ಹೋದರೆ ಖಂಡಿತ ನನಗೆ ಹುಚ್ಚು ಹಿಡಿದೀತೆಂಬ ಭಯದಿಂದ ಮೊದಲು ಈ ಪತ್ರ ಬರೆಯುತ್ತಿರುವೆ.

ವಾರವಿಡಿ ಕೆಲಸಕ್ಕೆ ರಜೆ ಹಾಕಿ ಶಬ್ದ ಸಾಗರದ ಈ ಊರು ಬಿಟ್ಟು, ನಿನ್ನೂರಿಗೆ ಬರಲು ರಾತ್ರಿ ಬಸ್ಸಿಗೆ ಹತ್ತಿದೆ. ಒಮ್ಮೆಯೂ ನಿನ್ನ ಹಳ್ಳಿಯನ್ನು ನೋಡಿರಲಿಲ್ಲ. ನೀನೇ ಹೇಳುತ್ತಿದ್ದ ನಿನ್ನ ಹಳ್ಳಿ, ಮನೆ, ಗದ್ದೆ, ಹಳ್ಳ, ಬೆಟ್ಟ ಅಲ್ಲಿ ಮೂಡಲು ಹರಿಯುವ, ಚಂದಿರ ಮೂಡುವ ಪವಾಡಗಳನ್ನು ಕಲ್ಪಿಸಿಕೊಳ್ಳುತ್ತಿದ್ದೆ. ಇಂಥ ಕಲ್ಪನೆ ಸೊಗಸಾಗಿರುತ್ತದೆ. ಕನಸು ಕಾಣುತ್ತ ದಣಿದು ನಿದ್ರೆಹೋದದ್ದೇ ಅರಿವಿಗೆ ಬರಲಿಲ್ಲ. ಮತ್ತೆ ಎಚ್ಚರವಾದಾಗ ಬಸ್ಸು ಕೆಟ್ಟು ನಿಂತಿತ್ತು. ಶರಣ್, ಇಲ್ಲಿಂದಲೇ ವಿಧಿ ನನ್ನ ಹಾದಿಯನ್ನು ಬದಲಿಸಿತು ಎಂದರೆ ತಪ್ಪಿಲ್ಲ. ನನ್ನ - ನಿನ್ನ ಮದುವೆ ಸರಳವಾಗಿ ನಡೆಯಬೇಕಾಗಿತ್ತಲ್ಲ.... ಅದನ್ನೇ ಆಲೋಚಿಸಿದೆ. ನಿನ್ನ ಬಯಕೆಯಂತೆ ನಿನ್ನ ಮನೆಮಂದಿ ತೋಟದಲ್ಲಿ ಸೇರಬಹುದು. ವನಭೋಜನಕ್ಕೆ ಬಂದಿರುತ್ತಾರಲ್ಲ ಹಾಗೆ. ಮದುವೆ ಶಾಸ್ತ್ರ ಐದು ನಿಮಿಷದಲ್ಲಿ ಮುಗಿಸಿ, ಊಟ ಮಾಡಿ ಮನೆ ಸೇರಬಹುದು. ಒಂದಷ್ಟು ಸಿಟ್ಟು, ಬೆರಗು, ನಿರ್ಲಿಪ್ತ ಮನಸ್ಥಿತಿಯಲ್ಲಿ ಮದುವೆ ಮುಗಿಯ ಬಹುದಿತ್ತು. ನಂತರ ಎರಡು ಮೂರು ದಿನ ನಿನ್ನ ಜತೆ ಕಾಲ ಕಳೆದು ಮರಳುವವಳಿದ್ದೆ ಎಂದು ನೆನೆಸಿಕೊಂಡೆ. ಖಾಸಗಿ ಬಸ್ಸಾದ್ದರಿಂದ ಬೇರೆ ಬಸ್ಸುಗಳಿಗೆ ವರ್ಗಾವಣೆ ಸುಲಭವಾಗಿ ನಡೆಯಲಿಲ್ಲ. ಬೇಗ ಬಸ್ಸು ರಿಪೇರಿಯಾಗಲಿಲ್ಲ. ಹೀಗಾಗಿ ನಿನ್ನ ಊರಿಗೆ ಸುಗಮವಾಗಿ ತಲುಪುವ ಬಸ್ಸುಗಳು ಸಿಗದೆ ಬೇಸರ ಬಂತು. ಹಾದಿ ಮಧ್ಯದ ಊರಿ ನಲ್ಲಿದ್ದ ಗೆಳತಿ ರಾಜೇಶ್ವರಿಯನ್ನು ಹುಡುಕಿಕೊಂಡು ಹೋದೆ. ಆಕೆ ನನ್ನನ್ನು ಕಂಡದ್ದೇ ತಡ ಹಿಗ್ಗಿ ನನಗೆ ಅಂಟಿಕೊಂಡಳು. ರಾಜೇಶ್ವರಿ ಅಧ್ಯಾಪಕಿ, ನನಗಿಂತ ಮೂರುವರ್ಷ ದೊಡ್ಡವಳು. ರಾತ್ರಿಯೆಲ್ಲ ತನ್ನ ಒಂಟಿತನದ ಕಥನ ಮಾಡಿದಳು. ಸಂಪ್ರದಾಯಸ್ಥಳಾದ ಅವಳ ಕಥೆಗೂ, ಆಧುನಿಕವಾಗಿದ್ದ ನನ್ನ ಕಥೆಗೂ ವ್ಯತ್ಯಾಸ ಇದೆ ಅಂದರೆ ಇದೆ. ಇಲ್ಲ ಎಂದರೆ ಇಲ್ಲ. ಭಿನ್ನ ಭಿನ್ನ ಮನಸ್ಥಿತಿಯಿಂದಾಗಿ, ಬೇರೆ ಬೇರೆ ವ್ಯವಸ್ಥೆಯಿಂದಾಗಿ ನಾವು ಆತಂಕವನ್ನು ಅನುಭವಿಸಿದ್ದೇವೆ. ಸಧ್ಯ ಇಬ್ಬರಿಗೂ ಮದುವೆಯಂತೂ ಆಗಿರಲಿಲ್ಲ. ಆದರೆ ಅವಳ ಕಥನ ಕೇಳಲು, ಪ್ರತಿಕ್ರಿಯಿಸಲು ನನಗೆ ಅಲರ್ಜಿಯಾಯಿತು. ನಮ್ಮಂಥವರಿಗೆ 'ಸ್ವಾತಂತ್ರ್ಯ' ಬೇಕು ಎಂದು, ಅದನ್ನು ಇನ್ಯಾರೋ ಕಸಿದುಕೊಳ್ಳುತ್ತಾರೆ ಎಂದು ಉರಿದು ಸಿಡಿದು ಮಾತಾಡಿದ್ದು ನಿಜ. ನನಗೆ ಬೇಕಾಗಿದ್ದ ಸ್ವಾತಂತ್ರ್ಯದ ಅರ್ಥವನ್ನು ನನ್ನ ಮಿತಿಯೊಳಗೆ ಅರಿತಿದ್ದರೆ ಹಿತವಾಗುತ್ತಿತ್ತೇನೋ. ಶರಣ್, ಈಗ ಇಂಥ ವಿಚಾರ ಬೇಡವೇ ಬೇಡ. ಅಂದು ರಾತ್ರಿ ಬೇಗ ಮಲಗಲಿಲ್ಲ. ಬೆಳಗ್ಗೆ ಬೇಗ ಏಳಲಾಗಲಿಲ್ಲ. ಎದ್ದಮೇಲೆ ನೋಡಿದರೆ ಮಳೆ-ಚಳಿ ಶುರುವಾಗಿತ್ತು. ಅದರ ಜತೆಗೆ ರಾಜೇಶ್ವರಿ ಕಾಲೇಜಿಗೆ ರಜೆ ಎಸೆದುಬಿಟ್ಟಿದ್ದಳು.

ಶರಣ್, ಅಂದು ಹನ್ನೊಂದು ಗಂಟೆಯಾಗಿರಬೇಕು, ಬೆಲ್ ಆಯಿತು. ರಾಜೇಶ್ವರಿ ಒಳಗಿದ್ದಳು. ಸರಿ, ಸಹಜವಾಗಿ ನಾನು ಬಾಗಿಲು ತೆರೆದೆ. ವ್ಯಕ್ತಿಯೊಬ್ಬ ನಿಂತಿದ್ದ. ನಾನು 'ಬನ್ನಿ' ಅನ್ನಲಿಲ್ಲ. ಬಂದವನೂ ಬಾಯಿಬಿಡಲಿಲ್ಲ. ಬದಲಾಗಿ ನನ್ನನ್ನು ವಿಚಿತ್ರವಾದ ಬೆರಗಿನಿಂದ ಅಷ್ಟೇ ಸೂಕ್ಷ್ಮವಾಗಿ ನೋಡಿದ. ನಾನು ನೋಡುತ್ತ ನಾಚಿದೆ. ಆ ನಾಚಿಕೆಯಲ್ಲಿ ಚೂರು ನಗೆಯಿತ್ತು. ಆದರೆ ಅದುವರೆಗೂ ಈ ಭೂಮಿಯ ಮೇಲಿನ ಯಾವ ಗಂಡಸೂ ನನ್ನಲ್ಲಿ ಇಂಥ ಸ್ಥಿತಿಯನ್ನು ಮೂಡಿಸಿರಲಿಲ್ಲ. ಭಯದ ಕಂಪನ ಎದೆಯಲ್ಲಿ ಮೂಡಿತು. ಅಷ್ಟರಲ್ಲಿ ರಾಜೇಶ್ವರಿಯೇ ಬಂದು 'ಅರೇ, ಬನ್ರೀ...' ಎಂದು ಸೋಫಾದ ಮೇಲೆ ಕೂಡಿಸಿದಳು. 'ಇವರು ಅರುಣಾ, ನನ್ನ ಗೆಳತಿ ದಾರಿ ತಪ್ಪಿ ಬಂದಿದ್ದಾಳೆ' ಎಂದಳಷ್ಟೇ. ಅವನ ಯಾವ ಶಿಷ್ಟಾಚಾರದ ಪ್ರತಿಕ್ರಿಯೆ ತೋರಿಸ


ನನ್ನನ್ನು ಪುನಃ ನೋಡಿ, ನಗು ತೇಲಿಸಿ 'ಸರಿ' ಅನ್ನುವಂತೆ ಸುಮ್ಮನಾದ. ನಾನೂ ಅವನಂತೆ ನಿರ್ಲಕ್ಷಿಸಲು ಯತ್ನಿಸಿದೆ, ಆಗಲಿಲ್ಲ. ಎದೆ ಹೊಡೆದುಕೊಂಡಿತು. ಅಯ್ಯೋ ನನ್ನ ಹೃದಯವೇ, ಎಂದೂ ತೋರಿಸದ ನಿನ್ನ ದೌರ್ಬಲ್ಯವನ್ನು ಇಂದು ಯಾಕೆ ಕಾಣಿಸಿದೆ? ಎಂದು ಕೇಳಿಕೊಳ್ಳಲೂ ಆಗಲಿಲ್ಲ. ಶರಣ್, ಶುರುವಾಯಿತು ನೋಡು ಈ ಧರೆಯ ಮೇಲಿನ ಪ್ರೀತಿ. ನನ್ನ ಮನವನ್ನು ನಾನು ಸಂತಯಿಸಿಕೊಳ್ಳಲಾರದಷ್ಟು ಸೋತುಹೋಗಿದ್ದೆ. ನಂತರ ರಾಜೇಶ್ವರಿ, 'ಅರುಣಾ, ಈಗ ಹೋದನಲ್ಲ ಅವನು ನಾಗಲಿಂಗ ಅಂತ. ಅವನಂಥ ಹುಚ್ಚನನ್ನು ನಾನು ಯಾವ ಕಥೆಯಲ್ಲೂ ಓದಿಲ್ಲ. ಯಾವ ಸಿನೆಮಾದಲ್ಲಿಯೂ ನೋಡಿಲ್ಲ. ಈ ನಾಗಲಿಂಗ



ನನ್ನು ಕಮಲಹಾಸನ್ ಏನಾದರೂ ನೋಡಿದರೆ, ಒಂದು ಸಿನೆಮಾವನ್ನು ತೆಗೆಯದೇ ಬಿಡುವುದಿಲ್ಲ. ನಾಗಲಿಂಗನ ಪಾತ್ರವನ್ನು ತಾನೇ ಅಭಿನಯಿಸಿ ಬಿಡುತ್ತಾನೆ!' ಅಂದಳು. ಆ ಹುಚ್ಚ ನನ್ನ ಹೃದಯಕ್ಕೆ ಮಾಡಿದ ಗಾಯವನ್ನು ರಾಜೇಶ್ವರಿ ಏನು ಬಲ್ಲಳು.

ಶರಣ್, ನಿನ್ನ ಬಳಿಗೆ ಬರುವ ತೀವ್ರತೆಯನ್ನು ಈ ಸೂರ್ಯಕಾಂತ ತಣ್ಣಗಾಗಿಸಿಬಿಟ್ಟ. ಇದು ನಿನ್ನ ಭಾಗ್ಯವೋ, ನನ್ನ ದುರ್ದೈವವೋ ನನಗೆ ತಿಳಿಯದು. ಅವನನ್ನು ನೋಡಬೇಕೆನಿಸಿತು. ಆದರೆ ನೋಡಲು ಭಯವಾಯಿತು. ರಾಜೇಶ್ವರಿಗೆ ಹೇಳಿದ್ದರೆ ಕರೆದುಕೊಂಡು ಹೋಗುತ್ತಿದ್ದಳೇನೋ. ಅವಳನ್ನು ಕೇಳಲು ನನಗೆ ನಾಚಿಕೆ.

ಹೌದು, ನಿಜವಾಗಿಯೂ ನನ್ನಲ್ಲಿ ನಾಚಿಕೆ ಮೂಡಿತ್ತು. 'ನಿನ್ನಂಥ ಹೆಂಗಸಿನಲ್ಲಿ ನಾಚಿಕೆಯನ್ನು ಬಿತ್ತುವ ಗಂಡಸು ಹುಟ್ಟಿಕೊಂಡನೆ?' ಎಂದು ನೀನು ಬೆರಗಾಗಬಹುದು. ಹೌದು, ನನ್ನಲ್ಲಿ 'ಹೆಣ್ಣುತನ' ಇದೆ ಎಂಬುದನ್ನು ನಾಗಲಿಂಗನೇ ಅರಿವಿಗೆ ತಂದಂತಿತ್ತು. ಆ ದಿನ ಅವನು ರಾಜೇಶ್ವರಿಯ ಮನೆಗೆ ಯಾಕೆ ಬಂದಿದ್ದನೆಂದರೆ, ಅವನೇ ನರ್ತಕಿಯೊಬ್ಬಳ ನೃತ್ಯಕಲಾ ಪ್ರದರ್ಶನವನ್ನು ಏರ್ಪಡಿಸಿದ್ದನಂತೆ, ಬರಬೇಕೆಂದು ಆಹ್ವಾನಿಸಲು ಬಂದಿದ್ದ. ಅವಳಿಗೆ ಆಸಕ್ತಿಯಿರಲಿಲ್ಲವೆಂದು ಹೋಗಲಿಲ್ಲ. ನಾನೂ ಹೋಗಲಿಲ್ಲ. ಶರಣ್, ಅವನನ್ನು ನೋಡಬೇಕೆಂಬ ಹುಚ್ಚು ಸಂಕಟ ಹೆಚ್ಚಾಯಿತು. ಎಲ್ಲಿ ನೋಡುವುದು? ಹೇಗೆ ಮಾತಾಡಿಸುವುದು? ಅದೇ ರಾತ್ರಿ, ಬೇಸರ ಬಂದು ಮನೆಯ ಮಾಳಿಗೆ ಮೇಲೆ ನಿಂತೆ. ಅವನನ್ನು ನೆನೆಯುತ್ತ ದಹಿಸುತ್ತಿದ್ದೆ. ನನ್ನ ಸ್ಥಿತಿಯ ಬಗ್ಗೆ ನನಗೇ ಮರುಕ ಬಂದಿತು. 'ನೃತ್ಯ ಕಾರ್ಯಕ್ರಮಕ್ಕೆ ಯಾಕೆ ಬರಲಿಲ್ಲ?' ಎಂಬ ದನಿ ಕೇಳಿಬಂತು. ನನ್ನ ಎದೆ ಒಳಗಿನಿಂದಲೇ ಕೇಳಿ ಬಂದಂತೆ! ನರನರಗಳಲ್ಲಿ ಭಯದ ಕಂಪನ! ಶರಣ್, ಅದು ಅವನದೇ ದನಿ ಎಂದು ಅನ್ನಿಸಿಬಿಟ್ಟಿತು. ಕಣ್ಣಿಗೆ ಬೀಳುವ ಮೊದಲೇ ಮನಕ್ಕೆ ಗೊತ್ತಾಗಿತ್ತು. ಅವನು ತನ್ನ ಮನೆಯ ಮಾಳಿಗೆ ಮೇಲೆ ನಿಂತಿದ್ದ. ಅಂದರೆ ನನ್ನ ಎದುರಿನ ಮನೆಯ ಮಾಳಿಗೆಯ ಮೇಲೆ. ನೋಡ



ಬೇಕೆಂದು ತಹತಹಿಸುತ್ತಿದ್ದೆನಲ್ಲ. ಆದರೆ ಎದುರಿಗಿದ್ದವನನ್ನು ನೋಡಲಾಗಲಿಲ್ಲ. ಹಿಮಾಲಯದಷ್ಟು ಲಜ್ಜೆ, ಭಯ ನನ್ನಲ್ಲಿ ಮೂಡಿತ್ತು! ಶರಣ್, ನನಗೆ ಆ ಹೊತ್ತಿನಲ್ಲಿ ಅರಿವು ಮಸುಕಾಗಿತ್ತು; ಭಯದ ಕಾರಣದಿಂದ. ಅರೆ ಪ್ರೀತಿಯೆಂದರೆ ಏನೆಂದು ತಿಳಿದ ಸಮಯ ಅದು! ಅವನ ಮಾತಿಗೆ ಯಾವ ಉತ್ತರವೂ ನೀಡದೆ ಕೆಳಗಿಳಿದು ಬಂದು ಕುಳಿತೆ. ಕೂಡಲು ಸಾಧ್ಯವೆ? ಕುದಿದು ಬೆಂದು ಹೋದೆ! ಶರಣ್, ನಾನು ಪ್ರೇಮ ಪ್ರಕರಣದ ಕಥೆಯನ್ನು ವಿವರಿಸಿ ನಿನಗೆ ಹೇಳುತ್ತಿಲ್ಲಪ್ಪ, ನನ್ನ ವಿರಹದ, ನನ್ನ ಪ್ರೀತಿಯ ತಳಮಳದ ಕಥೆಯನ್ನು ಬರೆಯುತ್ತಿರುವೆ, ಕೇಳು....

ಶರಣ್, ಅಂದು ನೇರವಾಗಿ ನಿನ್ನಲ್ಲಿಗೆ ಬರಬೇಕಾಗಿದ್ದ ನಿನ್ನ ಅರುಣ ದಾರಿ ತಪ್ಪಿ ಆ ಮಾಳಿಗೆ ಮೇಲೆ ಅವನಿಗಾಗಿ ಕಾಯುತ್ತ ನಿಂತಿದ್ದಳು. ನಿನ್ನೆ ರಾತ್ರಿ, ಅವನು ಕೇಳಿದ ಮಾತಿಗೆ ಮಾತಾಡದೆ ಬಂದಿದ್ದೆ ನೋಡು. ಮರುದಿನ ಅರುಣೋದಯಕ್ಕಿಂತ ಮುನ್ನವೇ ಚಳಿಯಲ್ಲಿ ಮಾಳಿಗೆ ಏರಿ ನಿಂತಿದ್ದೆ. ಪಾಪ ನಾನು ಅಲ್ಲಿ ನಿಂತದ್ದು ಅವನಿಗೇನು ಗೊತ್ತು? ಅವನಿಗೆ ಕನಸು ಬಿದ್ದಿರುತ್ತದೆಯೇ? ಚರಾಚರಗಳು ಶಬ್ದ ಕಳೆದುಕೊಂಡ ಸಮಯವದು. ಒಂಟಿಯಾಗಿ ನಿಂತಿದ್ದೆ. ಖಂಡಿತ ಚಳಿ ಇರಲಿಲ್ಲ. ಶರಣ್, ಅವನು ಅಲ್ಲಿಗೆ ನನ್ನ ಎದುರು ಮಾಳಿಗೆಯ ಮೇಲೆ ಬಂದ. ಬಂದು ಒಂದು ಮಾತು ಹೇಳಿದ. ಕೇಳಿ

ಬೆರಗಾದೆ. ರಾಜೇಶ್ವರಿ ಹೇಳಿದಂತೆ ಅವನ
ಹುಚ್ಚನೆ! ಅದರಲ್ಲಿ ಅನುಮಾನವಿಲ್ಲ. ಅಂದ
ಅವನು ಬಂದಾಗ ನಾನೇ ಬಾಗಿಲು ತೆರೆದಿದ್ದೆನಲ್ಲ
ಆಗ ನಾನು ನಾಚಿಕೊಂಡು ಚೂರು ನಗೆ ಅದು
ಮುಗುಳುನಗೆ ತೇಲಿಸಿದ್ದೆ ನೋಡು. ಆ ಮುಗು
ನಗೆಯಿಂದ ಹೊರಟ ಶಬ್ದವು ಅವನ
ಕಾಡತೊಡಗಿತಂತೆ. ಶರಣ, ನಿಶ್ಶಬ್ದವಾದ ನ
ಮುಗುಳುನಗೆಯಲ್ಲಿ ಯಾವ ಶಬ್ದವಿತ್ತೋ
ಮಾಯಾವಿಯೇ ಬಲ್ಲ. ಆ ಶಬ್ದದ ರುಚಿ ಕಂಡ
ಕೇಳಲು ಮಾಳಿಗೆಯ ಮೇಲೆ ಬಂ
ನಿಂತಿದ್ದನಂತೆ. ನನಗೆ ಹುಚ್ಚು ಹಿಡಿಯ
ಬಿಟ್ಟೀತೆ? ಶರಣ್, ನನ್ನ ಮುಗುಳುನಗೆಯಲ್ಲಿ ಶ
ಕಂಡೆನೆಂದು, ಕೇಳಿದೆನೆಂದು ಅವನೆಂದಾ
ನಾನು ಹುಚ್ಚಳಾಗಿ ಅಲ್ಲೇ ಗಿಡಮರಗಳಲ್ಲಿ ತಂಗಿ
ಹಕ್ಕಿಗಳೆಲ್ಲ ಬೆಚ್ಚಿ ಬೀಳುವಂತೆ ನಗತೊಡಗಿ
ಅವನೂ ನಕ್ಕ. ವಿಚಿತ್ರವೆಂದರೆ ಅವನ ನಗೆಯ
ಶಬ್ದವೇ ಇರಲಿಲ್ಲ. ಹೂವು ಅರಳುವಾಗ ಕೇಳಿ
ವಷ್ಟು ಶಬ್ದವೂ ಅವನ ನಗೆಯಲ್ಲಿರಲಿಲ್ಲ. ಮೌ
ಕ್ಕಿಂತಲೂ ಮೌನ ಅಲ್ಲಿ ಹೆಪ್ಪುಗಟ್ಟಿತ್ತೇನೋ?

ಶರಣ್, ನಡುರಾತ್ರಿ ಮಾಳಿಗೆ ಮೇ
ಹೋಗಿ ನಿಂತೆ. ಅವನಿಗಾಗಿ ಅಲ್ಲ ಎಂದು ಹೇ
ಹೇಳಲಿ? ನಾನು ಎಣಿಸಿದಂತೆ ನಡೆದಿದ್ದರೆ,
ಹೊತ್ತಿನಲ್ಲಿ ನಿನ್ನ ಬಳಿ ಇರಬೇಕಾಗಿತ್ತು. ಮದು
ಶಾಸ್ತ್ರವೂ ಮುಗಿದು, ಆ ರಾತ್ರಿ ನಿನ್ನ ತೋಟ
ಮನೆಯಲ್ಲಿ ಒಂದೇ ಹಾಸಿಗೆಯಲ್ಲಿ ಇರಬೇ
ಗಿತ್ತು. ಬದಲಾಗಿ ಮಾಯಾವಿ ನಾಗಲಿಂಗನಿಗಾ
ಕಾಯುತ್ತಿದ್ದೆ. ಅವನು ಬಂದೇ ಬರುತ್ತಾನೆ
ಭರವಸೆಯಿಂದಲ್ಲ. ವಿರಹ ತಾಳದೆ ತಂಗಾ
ಮೈ-ಮನ ಒಡ್ಡಿಕೊಂಡು ತಂಪಾಗಲು ನಿಂತಿ
ಶಬ್ದದೊಳಗಿನ ನಿಶ್ಶಬ್ದದ ರುಚಿಯನ್ನು ಸವಿ
ಬೇಕಾದರೆ ರಾತ್ರಿಯಲ್ಲಿ ಏಕಾಂಗಿಯಾಗಿ ನಿ
ಬೇಕು. ದೇವರಾಣೆಗೂ ಅವನು ಬಂದ. ಅ
ತನ್ನ ಮನೆಯ ಮಾಳಿಗೆಯ ಮೇಲೆ. ಅಂದರೆ
ಎದುರಿಗೆ. 'ನಾನು ಈ ಹೊತ್ತಿನಲ್ಲಿ ಬಂ

ನಿಂತದ್ದು ನಿನಗೆ ಹೇಗೆ ಗೊತ್ತಾಯಿತು?' ಎಂದು ಕುತೂಹಲಕ್ಕೂ, ಮಾತು ತೆಗೆಯಲೂ ಕೇಳಿದೆ. ಅವನು ನಿರ್ಲಿಪ್ತವಾಗಿ ಹೇಳಿದ: 'ಗಾಳಿಗೆ ಅಲು ಗಾಡುವ ನಿನ್ನ ಕೂದಲಿನ ಶಬ್ದ ಕೇಳಿ ಬಂದೆ' ಅಂದ. ಶರಣ್, ಅಕ್ಕನಿಗೆ ಚೆನ್ನಮಲ್ಲಿಕಾರ್ಜುನ ಸಿಕ್ಕಿದ್ದರೆ ಅಪ್ಪಿ ಹಿಂಡಿಬಿಡುತ್ತಿದ್ದಳಲ್ಲ... ಹಾಗೆ ನಾಗಲಿಂಗನನ್ನು ಅಪ್ಪಿ, 'ತೆಗೆದುಕೋ ಶಬ್ದ ಮಾಡುವ ಈ ದೇಹವನ್ನು ಹಿಂಡಿ ಶಬ್ದವಡಗಿಸು'' ಎಂದು ಅರ್ಪಿಸುತ್ತಿದ್ದೆ. ಆದರೆ ಶರಣ್, ಅವನು ಆ ಮಾಳಿಗೆ ಮೇಲಿದ್ದ. ನಾನು ಈ ಮಾಳಿಗೆ ಮೇಲಿದ್ದೆ. ನಡುವೆ ಕಂದರವಿತ್ತು. ಕೋಟಿ ಮೈಲು ಗಳ ಕಂದರವಿತ್ತು. ಆ ಸಮಯವಲ್ಲದ ಸಮಯ ದಲ್ಲಿ ಆ ಮಾಯಾವಿ ನಿಂತು, 'ನಿನ್ನ ಎದೆ ಬಡಿತ ದಲ್ಲಿ ಸಂಗೀತವಿದೆ' ಅಂದ. ಏನೇನೋ ಬೆಳ ದಿಂಗಳಂಥ ಮಾತಾಡಿದ. ಆದರೆ ಅವನ ಮಾತು ಗಳಲ್ಲಿ ಅಪಾರ ಮೌನವೇ ನನಗೆ ಕಾಣಿಸಿತು. ಆ ಸಮಯ ಕ್ಷಣಾರ್ಧದಲ್ಲಿ ಕರಗಿಹೋಯಿತು. ಗಿಡ ಮರಗಳಿಂದ ಚಿಂವ್‌ಗುಟ್ಟುತ್ತ ಹಕ್ಕಿಗಳು ಬಾನಿಗೆ ಬಿದ್ದು ಹಾರಾಡತೊಡಗಿದವು. ಮಾಯದ ಬೆಳಕು ಮೂಡಿತು. ಮೂಡಲು ಹರಿಯುವ ಪವಾಡ ನಡೆಯಿತು. ನಾನು ದಾವತಿ ಇಲ್ಲದೆ ದಣಿದಿದ್ದೆನಲ್ಲ ಆ ದಣಿವು ಗೂಡು ಸೇರಿತು. 'ಬೆಳಗಾಯಿತು' ಅಂದೆ. ''ಅದು ನನಗೆ ಯಾವಾಗಲೋ ಆಗಿದೆ' ಅಂದ. ದೇವರೇ, ಈ ಹುಚ್ಚನಿಂದ ಕಾಪಾಡು ಎಂದು ಪ್ರಾರ್ಥಿಸಬೇಕಾಯಿತು. ಶರಣ್, ಅದೇ ಹೊತ್ತಿಗೆ ನಿಂತಿದ್ದ ನಾಗಲಿಂಗನ ಬಳಿಗೆ ಹೆಂಗ ಸೊಂದು ಬರುವುದು ಕಂಡಿತು.

ಶರಣ್, ಒಂದು ಕ್ಷಣ ನಿನ್ನ ಬಳಿಗೆ ಬರ ಬೇಕೆಂದು ಮನಸ್ಸಿನಲ್ಲಿ ಮೂಡಿತು, ನಿಜ. ಆದರೆ ಕದಲಲಾಗಲಿಲ್ಲ. ತಣ್ಣಗೆ ರಾಜೇಶ್ವರಿಗೆ ಹೇಳಿದೆ. 'ಯಾಕೋ ಬೇಸರ. ಒಂದೆರಡು ಇರುಳು ಇಲ್ಲಿ ಕಳೆಯಬೇಕೆಂದಿದ್ದೇನೆ' ಅವಳು ಬೆಳಗಿನ ಚಹ ಕೊಡುತ್ತ, 'ಇರಪ್ಪ, ಆದರೆ ಶರಣ್‌ನನ್ನು ಭೇಟಿ ಮಾಡುವುದನ್ನು ಕೈ ಬಿಡಬೇಡ' ಅಂದಳು. ಅವಳ ಮಾತು ಎದೆ ತಟ್ಟಿತು. ಆ ಮಾಯಾವಿಯ ಸಾನಿಧ್ಯ ಬರೀ ಮಾಯೆಯಾಗಿ ಪರಿಣಮಿಸಬಹುದು! ಸಾಕು. ಇನ್ನು ಸಾಕು. ಶರಣ್, ಇದೋ ಬಂದೆ - ಎಂದು ಎದ್ದೆ. ಆ ಕ್ಷಣವೇ ಬೆಲ್ ಕರೆಯಿತು. ಎದೆಯಲ್ಲಿ ನಗಾರಿ ಶುರುವಾಯಿತು. ಕುಸಿದಂತಾ ಯಿತು. ನನಗೆ ಅಸ್ತಿತ್ವವೇ ಇಲ್ಲವೆನ್ನುವಷ್ಟು ಪಾತಾ ಳಕ್ಕೆ ಇಳಿದಂತೆ ಅನುಭವ. ರಾಜೇಶ್ವರಿಯೇ ಬಾಗಿಲು ತೆಗೆದಳು. ನಾಗಲಿಂಗ ಮಾಯಾವಿ ಬಂದಿರಲಿಲ್ಲ. ಬದಲಾಗಿ ಯಾವ ಗಂಡಸೂ ಅಭಿಮಾನಪಡುವಷ್ಟು ಅಂದದ ಹೆಂಗಸು ಬಾಗಿ ಲಲ್ಲಿ ನಿಂತಿದ್ದಳು. ನಾನು ಬೆರಗಾಗಿ ನೋಡಿದೆ. 'ಬನ್ನಿ ಬನ್ನಿ' ಎಂದು ಕರೆದು ಕೂಡಿಸುತ್ತ, 'ಅರುಣಾ, ನಾಗಲಿಂಗರ ಮಿಸೆಸ್ ಗಂಗಾ' ಅಂದಳು. ಶರಣ್, ನನ್ನ ಅನುಮಾನಿತ ಸತ್ಯ ಕೆಲವೇ ಕ್ಷಣಗಳಲ್ಲಿ ಸತ್ಯವಾಗಿತ್ತು.


ಶರಣ್, ನಾಗಲಿಂಗನ ಹೆಂಡತಿಯೇ ನನ್ನನ್ನು ತನ್ನ ಮನೆಗೆ ಅಂದರೆ ಆ ಹುಚ್ಚನ ಮನೆಗೆ ಕರೆತಂದಳು. ವಿಚಿತ್ರವೆಂದರೆ ನಾನು ವಿಚಲಿತ ಳಾಗಲಿಲ್ಲ. ದಾವತಿಯಿಲ್ಲದೆ ಆಗುತ್ತಿದ್ದ ದಣಿವೂ ಮಾಯವಾಗಿತ್ತು. ಮನೆಯ ಮುಂದೆ ಮೋಹಕ ವಾದ ಸ್ಯಾಂತ್ರೊ ಕಾರು ನಿಂತಿತ್ತು. ಬಾಗಿಲೊಳಗೆ ಕಾಲಿಟ್ಟೆ. ಮನೆ ಭಿನ್ನವಾಗಿ ಕಂಡಿತು. ಮನಕ್ಕೆ ಮುದವಾಗುವಂಥ ವಿಚಿತ್ರವಾದ ಆದರೆ ಸುಂದರವಾಗಿ ಕಾಣುವ ವಸ್ತುಗಳಿಂದ ಅಲಂಕಾರ ವಾಗಿತ್ತು. ನಾನು ನಿಂತಿದ್ದ ಹಾಲಿನಲ್ಲಿ ಒಂದು ಶೋಕೇಸ್ ಕಂಡಿತು. ನದಿಯಲ್ಲಿ ಸಿಗುವ ಚಂದದ ಕಲ್ಲುಗಳಿಂದ ಚಿಕ್ಕ ಬೆಟ್ಟದಂತೆ ಕಾಣುವ ಹಾಗೆ ಒಂದರ ಮೇಲೊಂದು ನಿಲ್ಲಿಸಿದ್ದು ನೋಡಿ ಮೂಕಳಾದೆ. ಅಲ್ಲಿದ್ದ ವಾತಾವರಣವನ್ನು ಸವಿ ಯಲು ನನಗಿದ್ದ ಎರಡು ಕಣ್ಣುಗಳ ಒಂದು ನೋಟಕ್ಕೆ, ಮನಸ್ಸಿಗೆ ಶಕ್ತಿ ಸಾಲದಾಯಿತು. ಗಂಗಾ ಒಳಗೆ ಕರೆದುಕೊಂಡು ಹೋಗಿ ತಿಂಡಿ, ಚಹ ಕೊಟ್ಟು ಉಪಚರಿಸಿದಳು. ನನ್ನ ಬಗ್ಗೆ ಒಂದು ಶಬ್ದವೂ ಕೇಳಲಿಲ್ಲ. ಗಂಗಾಳನ್ನು ನೋಡಿದರೆ

ತುಂಬಿಹರಿವ ನದಿಯನ್ನು ನೋಡಿದಂತಾಯಿತು. ನಾಗಲಿಂಗ-ಗಂಗಾ ಈ ಜೋಡಿಯನ್ನು ಶಿವ-ಪಾರ್ವತಿಗೆ, ಕೃಷ್ಣ-ರಾಧೆಗೆ ಹೋಲಿಸಲೇನು? 'ಹಾಗಾದರೆ ನಿನ್ನ ಸ್ಥಾನ ಎಲ್ಲಿ?' ಎಂದು ಕೇಳುತ್ತ ನಗಬೇಡ ಶರಣ್, ಅರುಣಾಳಿಂದ ಇಂಥ ಕಲ್ಪನೆ ಬರಲು ಸಾಧ್ಯವೇ? ಎಂದು ನಿನಗೆ ಬೆರಗಾಯಿತೆ? ಶರಣ್, ನಿನಗೆ ನನ್ನ ಸ್ಥಿತಿ ಅರ್ಥವಾದೀತು...

ಶರಣ್, ಗಂಗಾ ನನ್ನನ್ನು ಮೇಲಿನ ಹಾಲ್‌ಗೆ ಹೋಗಲು ಹೇಳಿದಳು. ನನಗೆ ನಂಬಲು ಸಾಧ್ಯವಾಗಲಿಲ್ಲ. ಮೆಟ್ಟಿಲುಗಳನ್ನು ಏರುತ್ತ ಹೋದೆ. ಅಲ್ಲೊಂದು ದೊಡ್ಡ ಹಾಲ್. ನಾಲ್ಕು ಗೋಡೆಗಳು ಬಿಳಿಬಿಳಿ. ಅಲ್ಲಿ ನಾಗಲಿಂಗ ಇದ್ದ. ಬಿಳಿ ಹಾಸಿಗೆಯ ಮಂಚದ ಮೇಲೆ ಕುಳಿತಿದ್ದ. ಹಿಮಾಲಯದಲ್ಲಿ ಶಿವ ಕುಳಿತಂತೆ. ಚಕ್ಸ್ ಅಂಗಿ ತೊಟ್ಟಿದ್ದ. ದೇವರೇ, ಈ ಸ್ವರ್ಗವನ್ನು ನನಗೆ ತೋರಿಸುವ ನಿನ್ನ ಉದ್ದೇಶವೇನು? ನಾಗಲಿಂಗ 'ಬಾ' ಎನ್ನುವಂತೆ ನಗೆ ತೇಲಿಸಿ ಸ್ವಾಗತಿಸಿದ. ಭಯದಿಂದ ಮೆಲ್ಲಗೆ ಅವನ ಮಂಚದ ಮೇಲೆ ಕುಳಿತೆ. ಹಿಮಾಲಯದಲ್ಲಿ ಕುಳಿತಂತೆ ಅನುಭವ. ಹಿಂದೂಸ್ತಾನಿ ಸಂಗೀತ ಕೇಳಿ ಬಂತು. ನನ್ನ ಹೃದಯದಿಂದಲೇ ಮೂಡಿ ಬಂದಂತೆ. 'ಮತ್ ಜಾ ಜೋಗಿ' ಭೈರವಿ ರಾಗ. ಮಲ್ಲಿಕಾರ್ಜುನ ಮನ್ಸೂರ್ ಹಾಡುತ್ತಿದ್ದ. ನಾನು ಸಮ್ಮೋಹನಕ್ಕೆ ವಶವಾದಂತೆ ಇದ್ದೆ. 'ಅರುಣಾ, ಯಾಕೋ ನಿನ್ನ ಎದೆಯಲ್ಲಿದ್ದ ಸಂಗೀತ ನಿಂತಂತೆ ಕಾಣುತ್ತದೆ? ಸಾಗರದ ಮೊರೆತ ಕಮ್ಮಿಯಾಗಿದೆ?' ಅಂದ. ನನಗೆ ವ್ಯಥೆಯಾಯಿತು. ಶರಣ್, ದೇವರನ್ನು ಬೇಡಿಕೊಂಡೆ: 'ನನ್ನ ಎದೆಯಿಂದ ನಾಗಲಿಂಗನಿಗೆ ಕೇಳಬೇಕಾಗಿದ್ದ ಶಬ್ದಕ್ಕೆ ಮುಪ್ಪು ತರಬೇಡ' ಊರ ಹೊರಗೆ ಬೆಟ್ಟಗಳ ಸಾಲುಗಳಿವೆ. ನೋಡಿ ಬರೋಣ ಅಂದ. ಆ ಅವಕಾಶಕ್ಕಾಗಿ ದೇವರಿಗೆ ಧನ್ಯವಾದಗಳನ್ನು ಹೇಳಿದೆ.

ಶರಣ್, ನಾನು ನಾಗಲಿಂಗನ ಮೋಹಕ

ವಾದ ಸ್ಯಾಂಟ್ರೊ ಕಾರಿನಲ್ಲಿ ಕುಳಿತೆ. ಗಂ
ನಮ್ಮನ್ನು ಬೀಳ್ಕೊಟ್ಟಳು. ಗಂಗಾ ಬೀಳ್ಕೊಡು
ಪರಿ ಕಂಡರೆ, ನಾಗಲಿಂಗನನ್ನು ನನ್ನ ಕೈಯಲ್ಲಿ
'ಕಾಪಾಡು' ಎಂಬಂತಿತ್ತು. ಊರಲ್ಲಿ ನಮ್ಮ ಕಾ
ಹಳ್ಳದಲ್ಲಿ ಹರಿವ ನೀರಿನಂತೆ ಹೊರಟು, ಊ
ದಾಟುತ್ತಿದ್ದಂತೆ ನದಿಯಂತೆ ಹರಿಯತೊಡಗಿತ
ನಾಗಲಿಂಗ ಕಾರ್ ಡ್ರೈವ್ ಮಾಡುವುದನ್ನು ಕಂ
ಖುಷಿಯಾಯಿತು. ಇದ್ದಕ್ಕಿದ್ದ ಹಾಗೆ ಭ
ಮೂಡಿತು. ಒಂದು ವೇಳೆ ನನ್ನ ಸ್ವವಿವರಗಳ
ಕೇಳಿದರೆ ಹೇಗೆ? ಚೂರು ಹೇಳುವುದಕ್ಕಾ
ರಿಹರ್ಸಲ್ ಮಾಡಿಕೊಳ್ಳತೊಡಗಿದೆ. 'ಯ
ಆತಂಕ?' ಎಂದ. 'ಹಾಂ.... ಇಲ್ಲ, ಏನಿ
ಎಂದು ಅಪರಾಧದ ನಗೆ ತೇಲಿಸಿದೆ. ಉದ್ವೇ
ದಿಂದ ಉಸಿರಾಟ ಹೆಚ್ಚಾಗಿ ಎದೆಯಲ್ಲಿ ಏರಿ
ವಾಯಿತು. ಅದಕ್ಕೆ ತಕ್ಕಂತೆ ಕಾರಿನ ವೇಗ
ತೂಗುಯ್ಯಾಲೆಯಾಗಿ ಮುದವಾಯಿತು. ನಾ
ಲಿಂಗ ಟೇಪ್ ಆನ್ ಮಾಡಿ, 'ಸಂಗೀತ ಕೇ
ಮಾಲಕಂಸ ರಾಗ. ಮಾಲಿನಿ ರಾಜೂರಕ
ಹಾಡಿದ್ದು' ಅಂದ. ಯಾವುದನ್ನೂ ಅನುಭ
ಸುವ ಸ್ಥಿತಿಯಲ್ಲಿ ನಾನು ಇರಲಿಲ್ಲ. ಶರಣ
ಸಾಲುಗುಡ್ಡಗಳ ಕೆಳಗೆ ಕಾರು ನಿಲ್ಲಿಸಿದ. 'ಮೆ
ಹತ್ತೋಣ ದಣಿವಾಗದಂತೆ' ಅಂದ. ಅವನ
ಹಿಂಬಾಲಿಸಿದೆ. ಸ್ವಲ್ಪಹೊತ್ತು ಅಂದರೆ ಒಂಬ
ಹೆಜ್ಜೆ ಹಾಕಿ ನಿಲ್ಲುತ್ತಿದ್ದ. ಆಗ ಅವನ ಮುಖದ
ಹೌದೋ ಅಲ್ಲವೋ ಎಂಬಷ್ಟು ದಣಿವು. ಪ
ಏರುತ್ತಿದ್ದ. ಬಹುಶಃ ಬೆಟ್ಟದ ಕೆಳಗಿನಿ
ನೋಡುತ್ತಿದ್ದರೆ ಬೆಳ್ಳಕ್ಕಿಯೊಂದು ನಡೆಯ
ದೆಯೋ ಎಂಬಂತೆ. ನನ್ನಲ್ಲಿ ಉದ್ವೇಗದಿ
ದಣಿವು ಮೂಡುತ್ತಿತ್ತೇ ಹೊರತು ಬೆಟ್ಟ ಹತ್ತ
ದಣಿವು ಇರಲಿಲ್ಲ. ಬೆಟ್ಟ ಹತ್ತಿ ತುದಿಗೆ ಬಂ
ಕುಳಿತ. ನಾನು ಸುತ್ತಲೂ ನೋಡಿದೆ. ಅ
ಸಾಮಾನ್ಯ ಪರಿಸರ. ಸಹಜವಾಗಿ ಕಂಡರೆ ತ
ನೋಡಿ ಮರೆತು ಬಿಡುವಂಥದ್ದು. ಆ
ನಾಗಲಿಂಗ ಇಲ್ಲಿಗೇಕೆ ಕರೆತಂದ ಎಂಬು



ಒಗಟಾಯಿತು. ''ಬೇಸರ ಬಂತೇನು?'' ಎಂದ. ''ಇಲ್ಲ'' ಎಂಬಂತೆ ತಲೆ ಹಾಕಿದೆ. ಹಾಗೆ ಮಾಡುವುದರಲ್ಲಿ ಮುಗುಳುನಗೆ ಕಾಣಿಸಿದ್ದೆ. ''ನನ್ನ ಮುಗುಳುನಗೆಯಲ್ಲಿ ಶಬ್ದವಿದೆ...' ಎಂದು ನಾನು ಹೇಳುತ್ತಿದ್ದಂತೆ ಅವನು ನಕ್ಕ. ಶರಣ್, ಅಷ್ಟು ಮೌನವಾದ ನಗುವನ್ನು ನಗಬಲ್ಲ ಗಂಡಸನ್ನು ನಾನು ಕಂಡಿರಲಿಲ್ಲ. ಆ ಮೌನವನ್ನು ಹಿಡಿದು ನನ್ನ ಮೈ-ಮನಸ್ಸಿನಲ್ಲಿ ತುಂಬಿಕೊಳ್ಳಲು ಯತ್ನಿಸಿದೆ. 'ಅರುಣಾ, ಬಾ ಇಲ್ಲಿ' ಅಂದ. ನನ್ನಲ್ಲಿ ಕೋಲಾಹಲ. ಆದರೆ ಅವನು ನಿರ್ಲಿಪ್ತವಾಗಿ ಕರೆದಿದ್ದ. ಬಳಿಗೆ ಸರಿದ ಮೇಲೆ, 'ಅಲ್ಲಿ.... ಮೊದಲ ಬೆಟ್ಟಗಳ ಸಾಲಿನ ಹಿಂದೆ ಮತ್ತೊಂದು ಸಾಲುಯಿದೆ ನೋಡು. ಮೊದಲ ಸಾಲಿನ ಆ ಬೆಟ್ಟದ ನಡುವೆ ಕಣ್ಣು ಹಾಯಿಸಿದರೆ, ಅದರ ಹಿಂದೆ ಕಾಣುತ್ತದಲ್ಲ... ಅದನ್ನು ನೋಡು ಅಂದ. ಉದ್ವೇಗದ ದಣಿವಿನ ನಡುವೆಯೇ ನೋಡಲು ಪ್ರಯತ್ನಿಸಿದೆ. ನೋಡು ನೋಡುತ್ತಿದ್ದಂತೆ ಅಲ್ಲೊಂದು ದೃಶ್ಯವೇ ಸೃಷ್ಟಿಯಾಯಿತು. ಶರಣ್, ಆಕಾಶಕ್ಕೆ ಮುಖಮಾಡಿ ಬೆತ್ತಲೆ ಮಲಗಿದ ಹೆಣ್ಣಿನ ಚಿತ್ರವೇ ಮೂಡಿತ್ತು! ಆಹಾ! ಧರೆಯ ಮೇಲಿನ ಯಾವ ಹೆಣ್ಣೂ ಪಡೆಯದಂಥ ಮಾಟದ ಮೊಲೆ, ಮೈಯಿ ಅಲ್ಲಿ ಮೂಡಿತ್ತು. ನಾನೇ ಬೆತ್ತಲಾಗಿ ಮಲಗಿದ್ದೇನೆಯೇ ಅನ್ನಿಸಿತು. ಆದರೆ ನನ್ನ ದೇಹವನ್ನು ನಾನೇ ನೋಡಿಕೊಳ್ಳುವುದರಲ್ಲಿ ಯಾವ ಸೊಗಸಿದೆ ಹೇಳು, ಶರಣ್? ಅದನ್ನು ಶೋಧಿಸಿ ತೋರಿಸಿದ ನಾಗಲಿಂಗನನ್ನು ನೋಡಿದೆ. ಅಮೃತಶಿಲೆಯ ಕಲ್ಲಿನಲ್ಲಿ ಕೆತ್ತಿದ ಮೂರ್ತಿಯಂತೆ ಕುಳಿತಿದ್ದ. ಆ ಚಿತ್ರಕ್ಕೂ, ಇವನಿಗೂ ಯಾವ ವ್ಯತ್ಯಾಸವಿದೆ? ನನ್ನನ್ನು ನಿರ್ಲಿಪ್ತವಾಗಿ ನೋಡಿದ. ನನಗೆ ಹಾಗೆ ನೋಡಲಾಗಲಿಲ್ಲ. ಮುಗುಳು ನಗಲು ಆಗಲಿಲ್ಲ. 'ನಾಗಲಿಂಗ, ನೀನು ರಕ್ತ ಮಾಂಸದ ಪುರುಷನೋ ಇಲ್ಲ ಮಾಯಾವಿಯೋ' ಎಂದು ಅರಚಬೇಕೆನಿಸಿತು. ನಾನು ಮತ್ತೆ ದಣಿಯತೊಡಗಿದ್ದೆ. ಆತ ಬೆಟ್ಟ ಇಳಿಯತೊಡಗಿದ್ದ. ಶರಣ್, ನನ್ನ ದಣಿವನ್ನು ನಾಗಲಿಂಗ ಅರಿತನೆ? ಅಕ್ಕನ ದಣಿವನ್ನು ಚನ್ನಮಲ್ಲಿಕಾರ್ಜುನ ಅರಿತು ಮೈದಡವಿ ಪರಿಹರಿಸಿದನೆ? ಇದನ್ನು ಯಾವ ಕವಿಯಾದರೂ ಬಲ್ಲರೇನು? ನನ್ನ ದಣಿವನ್ನು ನಾನೇ ಶಮನಗೊಳಿಸಿಕೊಂಡು ಸುಖದ ನಿಟ್ಟುಸಿರು ಬಿಡಲಾದೀತೆ?

ಹೇಗಿದೆ ನೋಡು ಸೃಷ್ಟಿಯ ಆಟ! ಶರಣ್, ನನಗೆ ಹುಚ್ಚು ಹಿಡಿದಿದೆ ಎಂದು ನಿನಗೆ ಮೆಲ್ಲನೆ ಅರಿವಾಗುತ್ತಿರಬಹುದು.

ಶರಣ್, ಮರುದಿನ ನಾಗಲಿಂಗನ ಮನೆಗೆ ಬಂದೆ. ಲೆಕ್ಕಾಚಾರದಂತೆ ನಡೆದಿದ್ದರೆ ಈ ಹೊತ್ತಿನಲ್ಲಿ ನಿನ್ನ ಸನ್ನಿಧಿಯಲ್ಲಿ ಇರುತ್ತಿದ್ದೆ. ನೀನು ನಿನ್ನ ತೋಟ, ಗಿಡಗಳನ್ನು, ಮಾಗಿಯ ಬಿಸಿಲನ್ನು, ಸೂರ್ಯಾಸ್ತವನ್ನು ತೋರಿಸುತ್ತಿದ್ದಿ. ನಾಗಲಿಂಗನ ಮನೆಗೆ ಬಂದಾಗ, ಅವನು ಗಂಗಾಳ ಜತೆ ಒಂದು ಕಡೆ ಸುಮ್ಮನೆ ಕುಳಿತಿದ್ದ. ಅದು ಕೂಡುವ ಸ್ಥಳವಲ್ಲವಾದರೂ ಅವರು ಕುಳಿತಿದ್ದರು. ದಿನದ ಬೆಳಗಿನ ಜತೆ ಅವರ ಚಟುವಟಿಕೆಗಳು ನಡೆದಂತೆ ಕಾಣಲಿಲ್ಲ. ನಾನೂ ಸೇರಿಕೊಂಡೆ. ಭಯ, ದಿಗ್ಭ್ರಮೆ ನನ್ನಲ್ಲಿ ಮೂಡಿತು. ನಾನು ಸೇರಿಕೊಂಡಾಗಲೂ ಅವರಿಬ್ಬರ ಮೌನ ಸಂವಾದದಲ್ಲಿ ಯಾವ ಬದಲಾವಣೆ ಕಾಣಲಿಲ್ಲ. ಆದರೆ ನನಗೆ ಆ ಪರಿಸರಕ್ಕೆ ಹೊಂದಿಕೊಳ್ಳಲು ಬಹು ಕಷ್ಟವಾಯಿತು. ಚಡಪಡಿಸಿದೆ. 'ಅರುಣಾ, ಏನಾದರೂ ತಿಂಡಿ ಮಾಡಿ ತಿನ್ನೋಣ' ಅಂದ. 'ಸರಿ' ಅಂದೆ. ನಾವು ಅಡಿಗೆ ಮನೆ ಸೇರಿದೆವು. ಶರಣ್, ಅದನ್ನು ಅಡಿಗೆ ಮನೆ ಅನ್ನಲು ಸಾಧ್ಯವೆ? ಯೋಗಿಯೂ ಇಷ್ಟಪಡುವಂಥ ಪ್ರಶಾಂತತೆ ಅಲ್ಲಿತ್ತು. ಏನು, ಯಾವ ತಿಂಡಿ ಮಾಡಬೇಕೆಂಬ ಬಗ್ಗೆ ಕಿಂಚಿತ್ ಚರ್ಚೆ ಯಾರೂ ಮಾಡಲಿಲ್ಲ. ಆಹಾ! ಹಕ್ಕಿಗಳು ತಿಂಡಿ ಮಾಡಿಕೊಂಡರೆ ಹೇಗೆ ಮಾಡಿಕೊಳ್ಳುತ್ತಿದ್ದವು? ಗಿಡಮರಗಳು ತೂಗಾಡಿದಂತೆ ಕಂಡಿತು. ತಿಂಡಿ ಸಿದ್ಧವಾಯಿತು. ಅದು ಯಾವುದು? ಅದಕ್ಕೆ ಏನೆಂದು ಕರೆಯುತ್ತಾರೆಂದು ನನಗೆ ತಿಳಿಯಲಿಲ್ಲ. ಭಿನ್ನವಾದ ರುಚಿಯಿತ್ತು. ತಿನ್ನುತ್ತಿದ್ದಂತೆ ನಾಗಲಿಂಗ 'ತಿರುಗಾಡಿಕೊಂಡು ಬರೋಣ' ಅಂದ. ಉಟ್ಟ ಉಡುಗೆಯಲ್ಲಿ ಎದ್ದರು. ಬಿಳಿ ಅಂಗಿ, ಲುಂಗಿ ತೊಟ್ಟಿದ್ದ ನಾಗಲಿಂಗ. ಗಂಗಾ ಕೂಡ ಜತೆಗೆ ಬಂದಳು. ಶರಣ್, ನೀನು ಗಂಗಾಳನ್ನು ಒಮ್ಮೆ ನೋಡಲೇ


ಬೇಕು. ಹಕ್ಕಿಯಂತೆ, ಮಗುವಿನಂತೆ, ಚೈತ್ರದ
ಚಿಗುರಿನಂತೆ, ಮೋಡದಂತೆ, ಮಳೆಯಂತೆ ನ
ನಳಿಸುವ ಆಕೆ ನಿಜವಾದ ಅರ್ಥದಲ್ಲಿ ಭುವನ
ಸುಂದರಿ.

ಅದ್ಯಾವುದೋ ದಾರಿಯಲ್ಲಿ ಕಾಲುನಡಿ
ಯಿಂದಲೇ ಬಹುಬೇಗ ಊರ ಹೊರ
ಬಂದೆವು. ಪುಟ್ಟ ಹೊಲಗಳು, ಬೇಲಿ, ಗಿಡಗ
ಗುಂಪು, ಕಾಲುದಾರಿ ಹೀಗೆ ಅತಿ ಸಾಮಾನ್ಯ
ಪರಿಸರಕ್ಕೆ ಬಂದೆವು. ಗಂಗಾ ಕಾಡಿನ ತುಳಸಿಗಾಗಿ
ಹುಡುಕಾಟ ನಡೆಸಿದಳು. ನಾಗಲಿಂಗನ ಶೋಧ
ನಡೆದಿತ್ತು. 'ಅರುಣಾ, ಇದು ನೋಡು' ಅಂದ
ಬೇಲಿಗೆ ಹಬ್ಬಿದ ಬಳ್ಳಿಯಲ್ಲಿ ಕಣ್ಣಿಗೆ ಕಾಣದಂ
ಹೂ. 'ಇದನ್ನು ನೋಡಿದರೆ ಏನು ನೆನಪಾಗ
ತ್ತದೆ?' ಕೇಳಿದ. ನಾನು ದಿಟ್ಟಿಸಿ ನೋಡಿದೆ. ನ
ಊಹೆ ನಿಜವಾಗುವುದೆ? ಎಂದು ಉದ್ವೇಗದಿಂ
'ಹಾಂ.... ಮೂಗುತಿ' ಅಂದೆ. 'ಸರಿ' ಅಂದ
ಬದುಕಿದೆ ಎಂದು ನಿಟ್ಟುಸಿರುಬಿಟ್ಟೆ. ಶರಣ್,
ದರಿದ್ರ ಬಯಲಿನಲ್ಲಿ ನಾಗಲಿಂಗ ಅದೇನೇನೊ
ತೋರಿಸಿ ಹುಚ್ಚು ಹಿಡಿಸಿದ ಮಾರಾಯ
ಬಂದುಕಡೆ ಚಿಗುರುವ ಚಿಗುರಿನ ಸುಳಿ ತೋರಿಸಿ
'ಇದು ಹೇಗೆ ಕಾಣುತ್ತದೆ' ಎಂದು ನಿರ್ಲಿಪ್ತವಾ
ಕೇಳಿದ. ನಾನು ಸ್ತಬ್ಧಳಾದೆ. ನನ್ನ ಕಲ್ಪನೆ
ಮೀರಿತ್ತು. ನನ್ನಲ್ಲಿ ನಾಚಿಕೆ ಮೂಡಿಸಿದ್ದೇ
ಮಾಯಾವಿ. ಶರಣ್, ಗಂಗಾ ಒಂದು ಕ
ಕುಳಿತುಬಿಟ್ಟಿದ್ದಳು.

ಶರಣ್, ಮರುದಿನ ನಾಗಲಿಂ
ರಾಜೇಶ್ವರಿಯ ಮನೆಗೆ ಬಂದ. ಗೆಳತಿಗೆ ನ
ಬಗ್ಗೆ ಅಸಮಾಧಾನ ಮೂಡಿತ್ತು. ನಾನ
ಅರಿತರೂ ಸುಮ್ಮನಿದ್ದೆ. 'ತುಂಗಾ ನದಿ ತೀರ
ಹೋಗಿ ಬರೋಣಾ?' ಎಂದು ಕೇಳಿದ. ನನ
ಅವನ ಸಂಗದಿಂದ ಕಿಂಚಿತ್ ಬೇಸರವಾಗಿರಲಿಲ್ಲ
ಅವನ ಪುಟ್ಟ ಸುಂದರ ಕಾರಿನಲ್ಲಿ ಕುಳಿತೆ. ಗಂಗ
ಕೈ ಬೀಸಿದಳು. ಕಾರು ಹೊರಟಿತು. ಗಾಳಿಯ
ತೇಲಿದಂತೆ, ದೋಣಿಯಲ್ಲಿ ತೂಗಿದಂ

ಪಯಣ. ಸಂಗೀತ ಹಾಕಿ, 'ಸಂಪೂರ್ಣ ಮಾಲಕಂಸ ರಾಗ. ಕಿಶೋರಿ ಅಮೋನ್‌ಕರ್ ಹಾಡಿದ್ದು' ಅಂದ. ಶರಣ್, ನನ್ನ ಕನಸನ್ನು ಹೇಳುತ್ತಿಲ್ಲಪ್ಪ. ಆ ಪಯಣ, ಆ ಸಂಗೀತ, ನಾಗಲಿಂಗನ ಸಾನಿಧ್ಯ ಕನಸಿಗಿಂತಲೂ ಮಿಗಿಲೇ. ಆದರೆ ಅದನ್ನು ಅನುಭವಿಸುವುದಕ್ಕೆ ನನ್ನಲ್ಲಿ ಒಂದು ಅಂತರ ಇರಲಿಲ್ಲ. ಭಯ, ಬೆರಗು, ಉದ್ವೇಗದಿಂದ ಆತಂಕವೇ ನನ್ನಲ್ಲಿ ಸ್ಥಾಯಿಯಾಗಿತ್ತು. ನಾಗಲಿಂಗ ನನ್ನ ಎದೆಯ ಜ್ವಾಲಾಮುಖಿಯನ್ನು ಬಲ್ಲವನಾಗಿದ್ದನೆ? ನನ್ನ ಉಸಿರಾಟದಲ್ಲಿ ಚಂಡಮಾರುತವನ್ನು ಬಲ್ಲವನಾಗಿದ್ದನೆ? ಅವನ ಅಪಾರ ಮೌನ, ನಿರ್ಲಿಪ್ತತೆಯೇ ನನ್ನ ಈ ಅವಸ್ಥೆಗೆ ಕಾರಣವಾಗಿತ್ತು. ತುಂಗಾನದಿ ದಂಡೆಗೆ ಕಾರು ತಂದು ನಿಲ್ಲಿಸಿದ. ಅಲ್ಲಿ ಎಂಥ ದರ್ಶನ ನನಗಾಗಿ ಕಾದಿದೆಯೋ ಆ ದೇವರೇ ಬಲ್ಲ. ನಾಗಲಿಂಗ ನನ್ನನ್ನು ನೋಡಿ, 'ಅರುಣಾ, ನಿನ್ನ ಕಣ್ಣುರೆಪ್ಪೆಯಿಂದ ಕಿಂಚಿತ್ ಶಬ್ದವೇ ನನಗೆ ಕೇಳಿಸುತ್ತಿಲ್ಲ' ಅಂದ. ಎಲ್ಲಿದೆ ನನ್ನಲ್ಲಿ ಉತ್ತರ? 'ಅರುಣಾ, ಬಾ' ಅಂದ. ನನಗೆ ಅರಿವಿಗೆ ಬಂತು. ಅದೇ ನಾನು ನಾಗಲಿಂಗನಿಂದ ಸಾವಿರ ಮೈಲು ದೂರದಲ್ಲಿದ್ದೇನೆ ಎಂದು. ನನ್ನ ವಿಕಾರವನ್ನು ಅವನು ಸಹಿಸುವುದಿಲ್ಲ ಎಂದು. ಆದರೆ ಅವನು ಅಂದಗೆಡಲಿಲ್ಲ. ಅದು ಅವನ ಪವಾಡ.

ಶರಣ್, ಅವನು ತುಂಗಾ ನದಿಗೆ ಕರೆತಂದಿದ್ದನಷ್ಟೆ. ಅಲ್ಲಿ ನದಿಯಲ್ಲಿ ನೀರು ಕಾಣಲಿಲ್ಲ. ಬರೀ ಕಲ್ಲು ಬಂಡೆಗಳ ಹಾಸುರಾಶಿ. ಅವನು ಆ ಹಾಸುರಾಶಿಯ ಮೇಲೆ ನಡೆದ. ನೀರು ಹರಿದಂತೆ, ನಾನೂ ಸಾಗಿದೆ ಅವನು ತುಳಿದ ಹಾದಿಯಲ್ಲೇ. ಅದು ಕನಸೆಂದರೂ ಸರಿ. ನನಸೆಂದರೂ ಸರಿ. ಶರಣ್, ಈ ಧರೆಯ ಮೇಲೆ ಇಂಥ ಮಾಯಾಲೋಕ ಒಂದಿದೆ ಎಂದು ನೀನು ಬಲ್ಲೆಯಾ? ವಿಸ್ತಾರವಾಗಿ ಹಬ್ಬಿದ ಕಲ್ಲುಬಂಡೆಗಳ ಮೇಲೆ ಕರೆದೊಯ್ದು ಒಂದು ಕಡೆ ಕುಳಿತ. ಅವನ ಮುಖದಲ್ಲಿ ಚೂರು ದಣಿವು ಕಂಡಿತು. ಹಾಸು ಬಂಡೆ-ಕಲ್ಲುಗಳಲ್ಲಿ ನೀರು ಹರಿಯುವ ಕಲಕಲ ಸದ್ದು ಕೇಳಿಸತೊಡಗಿತು. ಗಾಳಿ ಬೀಸುತ್ತಿತ್ತು. ನೀರಿರುವ ನದಿ ನೋಡಿದ್ದೆ. ಮರಳಿರುವ ನದಿ ನೋಡಿದ್ದೆ. ಇಂಥ ನದಿ ನೋಡಿರಲಿಲ್ಲ. 'ಅರುಣಾ, ನಿನಗೆ ದಣಿವಾಯಿತಾ?' ಅಂದ. 'ಇಲ್ಲ' ಎಂಬಂತೆ ನಗು ಕಾಣಿಸಿ ಪ್ರತಿಕ್ರಿಯಿಸಿದೆ. ಅದಕ್ಕೆ ಅವನೇನು ಆಸ್ಫೋಟಿಸುತ್ತಾನೋ ಎಂದು ಮನಸ್ಸು ಕಂಪಿಸಿತು. ಆದರೆ ಅವನು, 'ಅರುಣಾ, ಆ ಮುಂದಿನ ದೊಡ್ಡ ಬಂಡೆ ಏರು. ಅದರ ತುದಿಗೆ ಏರಿದರೆ ಮುಂಚೆ ಸಣ್ಣ ಕಂದರವಿದೆ. ಅದರಲ್ಲಿ ಏನಿದೆ ನೋಡು' ಅಂದ. 'ಸರಿ' ಎಂದು ಮುಂದಿದ್ದ ಬಂಡೆ ಏರಿದೆ. ಅದರ ಕೆಳಗೆ ಕಂದರವಿತ್ತು. ಕಂದರ ಅನ್ನುವುದಕ್ಕಿಂತ ಚಿಕ್ಕ ಕೊಳ ಎಂದರೆ, ಸರಿಯಾದೀತು. ಸುತ್ತಲೂ ಅದೇ ಬಂಡೆಗಳು. ನಡುವೆ ಕೊಳ, ನೀರು ಕಂಡವು. ಬಗ್ಗಿ ನೋಡಿದೆ. ನೋಡುತ್ತಿದ್ದಂತೆ ಒಂದು ದೃಶ್ಯವೇ ಮೂಡಿತು. 'ಹ್ಹೋ!' ಎಂದು ಕುಳಿತೆ. ಒಂದು ಕಡೆ ಉದ್ದನೆಯ ಕಲ್ಲು ನಿಂತಿತ್ತು. ಈ ನದಿ ಹುಟ್ಟಿದಾಗಿನಿಂದಲೇ ಹರಿವ ನೀರಿಗೆ ಆ ಕಲ್ಲು ಸವೆದು ಸವೆದು ಮೂರ್ತಿಯಾಗಿತ್ತು. ಎಂಥ ಮೂರ್ತಿ? ಶರಣ್, ಕೊಳದಲ್ಲಿ ಬೆತ್ತಲೆ ಹೆಣ್ಣು ಸ್ನಾನ ಮಾಡುತ್ತಿದ್ದಾಳೋ ಎಂಬಂತಿತ್ತು! ಕಣ್ಣು ತುಂಬ ನೋಡಿದೆ. ಮನ ದಣಿಯಲಿಲ್ಲ. ಅಂಥ ಅದ್ಭುತ ಚಿತ್ರವನ್ನು ನಾನೆಂದೂ ನೋಡಿಲ್ಲ.




ಯಾವ ಕಲಾವಿದನೂ ಕಲ್ಪಿಸಿಲ್ಲ. ಪ್ರಕೃತಿಯಲ್ಲಿ ಮೈದಳೆದು ನಿಂತಿದೆ. ಈ ಮಾಯಾವಿಗೆ ಕಾಣುವುದೇ ಇಂಥ ಲೋಕ ಮಾತ್ರ. ಬಂಡೆಯ ಮೇಲಿನಿಂದ ನಾಗಲಿಂಗನನ್ನು ನೋಡಿದೆ. ಅವನೂ ಶಿಲೆಯನ್ನು ಮೀರಿಸುವಂತೆ ಕುಳಿತಿದ್ದ. ಇಳಿದು ಬಂದೆ. 'ರಕ್ತ ಮಾಂಸವಿರುವ, ಚಿತ್ತ ವಿಕಾರ ಇರುವ ಲೋಕ ತೋರಿಸು ಎಲೆ ಮಾಯಾವಿ' ಎಂದು ಚೀರಬೇಕೆನಿಸಿತು. ಬಿಗಿದಪ್ಪಿಕೊಂಡು ಆ ಕೊಳಕ್ಕೆ ಜಿಗಿಯಬೇಕೆನಿಸಿತು. 'ನಿನ್ನ ಎದೆ ಬಡಿತದಲ್ಲಿ ಸಂಗೀತವಿಲ್ಲ. ನಿನ್ನ ಕಣ್ಣುಗಳಲ್ಲಿ ಬೆಳದಿಂಗಳಿಲ್ಲ. ನಿನ್ನಲ್ಲಿ ಪ್ರಕೃತಿಯನ್ನು ನಾನು ಅರಸಬೇಕು' ಅಂದು, ಮೆಲ್ಲನೆ ನಡೆಯ ತೊಡಗಿದ. ನಾನು ಹಿಂಬಾಲಿಸಿದೆ. ದುಗುಡ, ಆತಂಕದಿಂದ ಕದಡಿದ್ದೆ. ಬಂಡೆಗಳ ಹಾಸು ರಾಶಿಯ ಮೇಲೆ ನಡೆಯುತ್ತಿದ್ದೆ. ನಾಗಲಿಂಗ ಬಂದ ದಾರಿಗೆ ಬದಲು ಬೇರೆ ದಾರಿ ಹಿಡಿದು, ಚಿತ್ರವಿಚಿತ್ರ, ಕಲ್ಲುಬಂಡೆಗಳ ನಡುವೆ ನಡೆದು ಕೊನೆಗೆ ಕಲ್ಲುಗಳ ರಾಶಿಯ ನಡುವೆ ಕುಳಿತು, 'ಅರುಣಾ, ಬಾ' ಅಂದು, ಕರೆದು ಬಗಲಲ್ಲಿ ಕೂಡಿಸಿಕೊಂಡ. ಉದ್ವೇಗ ಕಮ್ಮಿಯಾದ ಮೇಲೆ, 'ಅರುಣಾ ಎದುರಿನ ಬಂಡೆ ನೋಡು' ಅಂದ. ನೋಡಿದೆ, ನೋಡಿದೆ... 'ಹ್ಹಾ!' ಅಂದು ಮುಖ ತಿರುಗಿಸಿದೆ. ತಡೆಯದೆ ಪುನಃ ನೋಡಿದೆ. ಶರಣ್ ಬಂಡೆಯ ಮೇಲೆ ಕಂಡದ್ದೇನು? ಹೆಣ್ಣಿನ ಮಡಿಲು, ಹರೆಯದ ಹೆಣ್ಣಿನ ಜೀವತುಂಬಿದ ಗರ್ಭಗುಡಿಯ ಬಾಗಿಲು. ಅನುಮಾನ ಬೇಡ... ಬಂಡೆಯಲ್ಲಿ ಮೂಡಿದ್ದ ಚಿತ್ರ ನಿರ್ಜೀವವಾಗಿತ್ತು ಎಂದು ನನಗನಿಸಲಿಲ್ಲ. 'ಎಲೇ ಮಾಯಾವಿ' ಎಂದುಕೊಂಡು ನೋಡಿದೆ. ಅವನು ದಂಡೆಯ ಕಡೆ ನಡೆದಿದ್ದ.

ಶರಣ್, ಅಂದು ಅವನ ಮನೆಗೆ ಹೋದೆ. ಯಾವ ಸಮಯ? ನನಗೇನು ಗೊತ್ತು? ಹಗಲು-ರಾತ್ರಿ, ಕನಸು-ನನಸುಗಳ ಪರಿವೆ ನನ್ನಲ್ಲಿ ಉಳಿದಿರಲಿಲ್ಲ. ಗಂಗಾ ಇರಲಿಲ್ಲ. ಮೇಲಿನ

ಹಾಲಿಗೆ ಏರಿ ಹೋದೆ. ಹೋದೆ ಎಂಬುದ
ಬರೀ ಭ್ರಮೆ. ಯಾವುದೋ ಶಕ್ತಿ ಎ
ದೊಯ್ದಿತು. ಮಾಯಾವಿ ಅದೇ ಶ್ವೇತವ
ಹಾಸಿದ ಮಂಚದ ಮೇಲೆ ತಣ್ಣಗೆ ಒರಗಿದ್ದ
ಸಂಗೀತದ ಹೃದಯದಲ್ಲಿದ್ದಂತೆ ಸಂಗೀತ
ಗುಂಗು ಅಲ್ಲಿತ್ತು. 'ಅರುಣಾ, ನಿನ್ನ ದೇಹ
ಶಬ್ದವನ್ನು ಕಳೆದುಕೊಂಡಿದೆ. ನಿನ್ನ ಕಣ್ಣುರೆ
ಗಳಲ್ಲಿ....' ಸುಮ್ಮನಾದ. ಉತ್ತರ ನನ್ನಲ್ಲಿ
ಮೆಲ್ಲನೆ ಅವನ ಬಳಿ ಹೋಗಿ ಕುಳಿತೆ. ಅವ
ಎದೆಗೆ ತಲೆ ಆನಿಸಿದೆ. ನನ್ನ ಕಣ್ಣುಗಳು ಮು
ದವು. 'ದೇವರೇ, ಇಂಥ ಬೆಂಕಿಯ ಲೋಕವ
ನನ್ನಲ್ಲಿಟ್ಟು ಯಾಕೆ ಅಡಗಿಸಿಟ್ಟಿದ್ದಿ?' ಎಂ
ಕೇಳಿದೆ. ನಾಗಲಿಂಗನಲ್ಲಿದ್ದ ಅಪಾರವಾದ ಮೌ
ಅರಿವಿಗೆ ಬರುವ ಮುನ್ನವೇ ಕರಗತೊಡಗಿತ್ತು
ಅವನ ಎದೆಯಿಂದ ಶಬ್ದ ಮೂಡಿತು. ಕ್ಷಣ ಕ್ಷಣ
ವೇಗ ಹೆಚ್ಚಾಯಿತು. ಅಯ್ಯೋ ತಾಳಲಾರೆ. ನ
ಶಬ್ದಕ್ಕೂ, ಅವನ ಶಬ್ದಕ್ಕೂ ತಾಳ ಕೂಡುತ್ತಿ
ಅಯ್ಯೋ ಆ ನಗಾರಿಯಂಥ ಶಬ್ದವನ್ನು ತಡೆಂ
ಲಾರೆ! ಹೌಹಾರಿದೆ, ಸರಿದು ಅಲ್ಲಿಂ
ಸಿಡಿದುಬಿಟ್ಟೆ.

ಶರಣ್, ಎಚ್ಚರವಾದಾಗ ನಾಗಲಿಂಗನ ಮ
ಯಲ್ಲೇ ಇದ್ದೆ. ಗಂಗಾ ನನ್ನ ಬಳಿಯೇ ಇದ್ದಳ
ಜನ ಒಳಗೂ, ಹೊರಗೂ ತುಂಬಿದ್ದರು. ಅರಿ
ಬಂತು, ನಾಗಲಿಂಗನ ಪಾರ್ಥಿವ ಶರೀರ ಬ
ವಸ್ತ್ರದಲ್ಲಿ ಮಲಗಿತ್ತು. ನಾಗಲಿಂಗನ ಪಾರ್ಥಿ
ಶರೀರ ಮಾತ್ರ ಕಾಣುತ್ತಿತ್ತು. ಸಾವನ್ನು ಜಯಿಸು
ಶಕ್ತಿಯನ್ನು ಯಾಕೆ ಪಡೆಯಲಿಲ್ಲ ಎ
ಮಾಯಾವಿ ಎಂದು ಕೇಳಿದೆ. ಜಗತ್ತಿನ ಚ
ವನ್ನೆಲ್ಲ ಬಲ್ಲ ಮಾಯಾವಿ ನೀನು, ಈಗ ಸಾ
ಚಲುವನ್ನು ಸವಿಯಲು ಧ್ಯಾನಸ್ಥನಾಗಿರುವೆಯ
ಶರಣ್, ಅವನು ಮಾತಾಡುತ್ತಿಲ್ಲ, ಯೊ
ನಿದ್ರೆಯಲ್ಲಿದ್ದಾನೇನು? ಶರಣ್, ನನ್ನ ಹೃದ
ಹಾಡತೊಡಗಿತು:

ಸುರಿವ ಮಳೆ ಹನಿಗಳ ಹಿಡಿದು ಮುತ್ತಿನ ಸರ ಹೆಣೆದು
ನಿನ್ನ ಕೊರಳಿಗೆ ತೊಡಿಸುತ್ತೇನೆ - ಎಂದವನೆ
ಬಾನಿನ ಚುಕ್ಕಿಗಳ ತಂದು ಹೂದಂಡೆ ಕಟ್ಟಿ
ನಿನ್ನ ಮುಡಿಗೆ ಮುಡಿಸುತ್ತೇನೆ - ಎಂದವನೆ
ಓಡುವ ಚಂದ್ರನ ರಮಿಸಿ ಕರೆತಂದು
ನಿನ್ನ ಕೋಣೆಯಲ್ಲಿ ಕೂಡಿಸುತ್ತೇನೆ - ಎಂದವನೆ
ಕವಿಯಾದ ನಿನಗೆ ಇದು ಆಗದೆಂದು ಹೇಗೆ ಹೇಳಲಿ?
ಬೇಲಿಯ ಮೇಲೆ ಅರಳಿದ ಹೂವುಗಳಲ್ಲಿ
ನಿನ್ನ ಮೂಗುತಿಯಿದೆ - ಎಂದು ತೋರಿಸಿದವನೆ
ಬೆಟ್ಟಗುಡ್ಡಗಳ ಏರಿಳಿವಿನಲ್ಲಿ
ನಿನ್ನ ಮೊಲೆ ಮುಡಿಗಳಿವೆ - ಎಂದು ತೋರಿಸಿದವನೆ
ಚಿಗುರುವ ಚಿಗುರಿನಲ್ಲಿ
ನಿನ್ನ ಮರ್ಮಬಿಂದು ಎಂದು ತೋರಿಸಿದವನೆ
ಕಲಾವಿದನಾದ ನಿನಗೆ ಇದು ಕಾಣದೆಂದು ಹೇಗೆ
ಹೇಳಲಿ?
ಮಲಗಿದ ಮಗುವಿನ ಉಸಿರಾಟದ ಲಯದಲ್ಲಿ
ಭೂಪಾಲಿ ರಾಗವಿದೆ - ಎಂದು ಕೇಳಿಸಿದವನೆ
ಹಾರುವ ಹಕ್ಕಿಗಳ ರೆಕ್ಕೆಗಳ ಬೀಸಾಟದಲ್ಲಿ
ಪಹಾಡಿ ರಾಗವಿದೆ - ಎಂದು ಕೇಳಿಸಿದವನೆ
ಇಬ್ಬನಿ ಕರಗುವ ಸದ್ದಿನಲ್ಲಿ
ಭೈರವಿ ರಾಗವಿದೆ - ಎಂದು ಕೇಳಿಸಿದವನೆ
ಸಂಗೀತ ಸಖನಾದ ನಿನಗೆ ಇದು ಕೇಳಿಸದೆಂದು ಹೇಗೆ
ಹೇಳಲಿ?
ಸಾವಿನ ನಿಜಸುಖ ನನಗೆ ಗೊತ್ತೆಂದು
ನೀನು ಹೇಳುತ್ತಿದ್ದಾಗ
ನಾನು ಮೌನ ತಳೆದೆ
ಆದರೆ.... ಆದರೆ ಎಲೇ ಗೆಳೆಯಾ
ಈಗ ಅದುಕೂಡ ನಿನಗೆ ಗೊತ್ತಿಲ್ಲವೆಂದು ಹೇಗೆ
ಹೇಳಲಿ!




ಶರಣ್, ಆಮೇಲೆ ರಾಜೇಶ್ವರಿ ಎಲ್ಲ ಹೇಳಿದಳು. ನಾಗಲಿಂಗನಿಗೆ ಈಗಾಗಲೇ ಎರಡು ಸಲ ಹೃದಯಾಘಾತವಾಗಿ ನಲುಗಿ ಹೋಗಿದ್ದನಂತೆ. ಗಂಗಾ ಅವನನ್ನು ಹೂವಿನಂತೆ ನೋಡಿಕೊಳ್ಳುತ್ತಿದ್ದಳಂತೆ. ಚೂರು ಬೇಸರ ಬರದಂತೆ, ಕಿಂಚಿತ್ ನೋವಾಗದಂತೆ ನೋಡಿಕೊಂಡು ಬಂದಿದ್ದಳಂತೆ. ನನ್ನ ಜತೆ ನಾಗಲಿಂಗ ಸಂತೋಷದಿಂದ ಇರುವುದನ್ನು ಕಂಡು, ಗಂಗಾಳೇ ಇರುವಷ್ಟು ದಿನ ನೆಮ್ಮದಿಯಿಂದ ಇರಲೆಂದು ಆಶಿಸಿದ್ದಳಂತೆ. ರಾಜೇಶ್ವರಿಗೂ ಹೇಳಿದ್ದಳಂತೆ. ಗಂಗಾಳಿಗೆ ನನ್ನ ಎರಡೂ ಕೈ ಮುಗಿದು ನಮಿಸಿದೆ. ಶರಣ್, ಅಂದು ನಾನು ನಾಗಲಿಂಗನ ಎದೆಗೆ ತಲೆ ಆನಿಸದಿದ್ದರೆ ಅವನ ಜತೆ ಇನ್ನೊಂದಷ್ಟು ದಿನ ಮಾಯಾಲೋಕದಲ್ಲಿ ಅಲೆಯುತ್ತಿದ್ದೆನೇನೋ? ಅಂದು ನಾಗಲಿಂಗನಿಗೆ ಮೂರನೆಯ ಸಲ ಹೃದಯಾಘಾತವಾಗಿ ತೀರಿಯೇ ಹೋಗಿದ್ದ. ನಾನು ಬರುವಾಗ ಗಂಗಾಳನ್ನು ಕಂಡು ಬರಲು ಧೈರ್ಯ ಸಾಲಲಿಲ್ಲ. ಹಾಗೇ ಬಂದುಬಿಟ್ಟೆ.

ಶರಣ್, ಮತ್ತೇನು ಹೇಳಲಿ? ನೀನು ತಿಳಿದುಕೊಳ್ಳುವಿ ಅಂದುಕೊಳ್ಳುತ್ತೇನೆ.

ನಿನ್ನ
ಅರುಣಾ




ಪತ್ನಿ ಸವಿತಾ, ಮಗ ಅಮೋಘನೊಂದಿಗೆ ಕಥೆಗಾರ ಅಮರೇಶ್

ನಾಗವೇಣಿ .ಎಚ್

ಬೆಳ್ಳಿಲೋಟ

ಆ ಮಾನಗೇಡಿ ಹೊಳೆಗೆ ಒಂದಿಷ್ಟಾದರೂ ನಾಚಿಕೆಯೆಂಬುದು ಇದ್ದಿದ್ದರೆ, ಒಂದಾ ಆ ಪರಿಯ ಬೈಗಳಿಗೆ ಅದು ತಟ್ಟನೆ ಇಂಗಿಹೋಗುತ್ತಿತ್ತು ಅಥವಾ ಸರ್ರೆಂದು ನುಗ್ಗಿ ಬಂದು ಆಕೆಯನ್ನು ನುಂಗಿಬಿಡುತ್ತಿತ್ತು. ಅದೇಂತದ್ದೂ ಇಲ್ಲದೆ ಅದು ''ಊದು ವಾಸಿಂದು, ನನ್ನ ಜಾಲಕ್ಕೆ ಇನ್ನಷ್ಟು ತಂಬಿ'' ಎಂಬಂತೆ ಕಸಕಡ್ಡಿಗಳನ್ನು ಹೊತ್ತು ಹರಿಯುತ್ತಲೇ ಇತ್ತು-ಅತ್ತ ಕಡಲತ್ತ.


ಮುಂಜಾನೆ ಚಿಕ್ಕಮ್ಮ ಎಂದಿನಂತೆ ಹೊಳೆಯ ನೆರಗಲ್ಲಿ ಮುಸುರೆ ಪಾತ್ರೆಗಳನ್ನು ರಾಶಿ ಹಾಕಿ ಕೂತು, ಪಕ್ಕದಲ್ಲಿ ಬೂದಿಯ ಗೆರಟೆಯನ್ನಿರಿಸಿಕೊಂಡು ಹೊಳೆಯ 'ಗುಣವಾಚನ'ಕ್ಕೆ ತೊಡಗಿದ್ದಳು. ಹೊಳೆಯುವ ಹೊಳೆಯ ಮೈಗೆ ಆ ಪರಿಯ ಬೈಗಳ ಪೆಟ್ಟು ತಗಲುತ್ತಿದ್ದಂತೆ, ಅದರ ದಡದಲ್ಲಿ ನಿಂತು ಮರಿಮೀನುಗಳ ತಮಾಷೆಯಲ್ಲಿದ್ದ ಅಸಂಖ್ಯ ಕೊಕ್ಕರೆ-ಕೊರ್ಗುರ್ಲ-ಮಿಂಚುಳ್ಳಿಗಳೆಲ್ಲ ಆಕೆಯ ಬೈಗಳ ಪಾಲು ತಮಗೆಂದೂ ಬೇಡವೆಂಬಂತೆ ಆಚೆ ದಡಕ್ಕೆ ಹಾರಿ ಹೋದವು.

ಆ ಹೊಳೆಯೇನು ಬೇಕು ಬೇಕೆಂದೇ ಚಿನ್ನಮ್ಮನ ಕುಟುಂಬಕ್ಕೆ ಅಂತಾ ಅಪವಾದವನ್ನು ಎಳೆದುತಂದುಹಾಕಿದೆಯೆ? ಅದಕ್ಕೂ ಚಿನ್ನಮ್ಮನ ಪುಟ್ಟ ಸಂಸಾರದ ಬಗ್ಗೆ ಅದೆಷ್ಟು ಪ್ರೀತಿ-ವಾತ್ಸಲ್ಯ, ಕಾಳಜಿ, ಅನುಕಂಪವಿಲ್ಲ! ಇಲ್ಲದಿದ್ದಲ್ಲಿ ಅದ್ಯಾಕಾಗಿ ಚಿನ್ನಮ್ಮನ ಗಂಡ ಕುದುಪನ ಗಾಳದ ಬಾಯಿಗೆ ಅಂತಾ ಹೊಡೆಯುವ ಮಳೆಗಾಲದಲ್ಲೂ ದಿನಾ ಒಂದಷ್ಟು ತರುಮೀನುಗಳನ್ನು ಸಿಲುಕಿಸುತ್ತಿತ್ತು! ಅದಲ್ಲದೆ, ತಾನು ಹರಿದು ಬರುವಾಗಲೆಲ್ಲಾ ತನ್ನ ಸೆರಗಂಚಿನಲ್ಲಿರುವ ತೋಟಗಳಿಂದ ಆಗ್ಗಾಗ್ಗೆ ಅಷ್ಟಿಷ್ಟು ತೆಂಗಿನಕಾಯಿ-ಸೌದೆ ಕಟ್ಟಿಗೆಗಳನ್ನು ತಂದು ಕುದುಪನ ದಿಟ್ಟಿಗೆ ಬೀಳಿಸುತ್ತಿಲ್ಲವೆ! ಆಟಿ-ಸೋಣ ಕಾಲದ ಮಳೆಗಾಲದಲ್ಲಂತೂ ಕೇಳುದೇ ಬೇಡ. ಅಲ್ಲಿ ಇಲ್ಲಿಂದ ಪಾತ್ರೆ-ಪಗಡಿ, ಸೌದೆ-ಕಟ್ಟಿಗೆ, ಕೋಳಿ-ಕುರಿ, ಏಣಿ-ದೋಣಿ, ರೀಪು-ಪಕ್ಕಾಸುಗಳನ್ನು ಹೊತ್ತು ತಂದು ಚಿನ್ನಮ್ಮ-ಕುದುಪನ ಮಡಿಲಿಗೆ ಸುರಿಯುವುದು ಮಾಮೂಲು. ಇಷ್ಟೆಲ್ಲ ಚಿನ್ನಮ್ಮನ ಕುಟುಂಬದ ಜತೆ ಒಡನಾಟವಿದ್ದರೂ, ಮೊನ್ನೆಯ ಶ್ರಾವಣ ಮಾಸದ ನಾಕರಂದು ಈ ಹೊಳೆ ಆಕೆಯ ಕುಟುಂಬದ ಮೇಲೆ ಅಪವಾದವೊಂದನ್ನು ಹೊರಿಸಿ ಇಡೀಯ ಕುಟುಂಬದ ಉಗ್ರಕೋಪ-ಅಸಹನೆಗೆ ಬಲಿಯಾಗಬೇಕಾಯಿತು.

ಆದದ್ದಿಷ್ಟೆ, ಕಳೆದ ಶ್ರಾವಣ ಮಾಸದ ನಾಕನೇ ದಿನ ಚಿನ್ನಮ್ಮನ ಏಕೈಕ ಮಗ ಗುಡ್ಡ, ಆ ಪರಿಯಲ್ಲಿ ತುಂಬಿ ಹರಿಯುತ್ತಿದ್ದ ಶಾಂಭವಿ ಹೊಳೆಯ ದಡದಲ್ಲಿ ಕೂತು, ಧಣಿ ಮನೆಯ ಮುಸುರೆ ಪಾತ್ರೆ ತಿಕ್ಕುತ್ತಿದ್ದ. ಆಷಾಡ-ಶ್ರಾವಣ-ಭಾದ್ರಪದ ಮಾಸದಲ್ಲಿ ನದಿಯ ಒಡಲೆಂದರೆ ಎಂತಾದ್ದು! ಕಾವಿಗೆ ಕೂತ ಹೇಂಟೆಯಂತೆ-ಒಡಲು ಯಾವತ್ತೂ ವ್ಯಗ್ರ-ಪ್ರಕ್ಷುಬ್ಧ. ಹತ್ತಿರ ಬಂದವರನ್ನು ಕುಕ್ಕಿ ಮುಕ್ಕುವ ಸಿಡುಕು. ಹುಟ್ಟುವ

ಘಟ್ಟದಲ್ಲಿ ದೇಹ-ಒಡಲು ಮನಸ್ಸು ಪ್ರಫುಲ್ಲ, ಶಾಂತ, ನಿರ್ಮಲವಾಗಿದ್ದರೂ ಸಾಗಿ ಬರುವ ದಾರಿಯೇನು ಸುಲಭದ್ದೇ? ಕಡಲ ಸಂಗಮಕ್ಕಾಗಿ ರಭಸದಿಂದ ಹಾತೊರೆದು ಬರುವಾಗ ದಾರಿಯಲ್ಲಿ ತುಂಬಿ ಹರಿವ ಅನೇಕ ಕೆರೆ ತೋಡು ಹಳ್ಳ ಕೊಳಗಳನ್ನು ತನ್ನೊಡಲೊಳಗೆ ಬಾಚಿಕೊಂಡು ಸಾಗಿ ಬರಬೇಕಲ್ಲವೆ! ಇಂತಾ ವಿಕ್ಷಿಪ್ತ ಮನಸ್ಥಿತಿ, ಪರಿಸ್ಥಿತಿಯಲ್ಲಿ ಆ ಶಾಂಭವಿ ಹೊಳೆ ಇರಬೇಕಾದರೆ, ಚಿನ್ನಮ್ಮನ ಮಗ ಎಂಟುವರ್ಷದ ಗುಡ್ಡ, ಧಣಿಗಳ ಮುಸುರೆ ಪಾತ್ರೆಯಲ್ಲಿ ಮರಿ ಮೀನುಗಳನ್ನು ಹಿಡಿಯುವ ಆಟವನ್ನಾಡುತ್ತಾ... ತನ್ನದೇ ಲೋಕದಲ್ಲಿ ವಿಹರಿಸುತ್ತಾ ಪಾತ್ರೆ ಉಜ್ಜುತ್ತಿದ್ದ.।

ನಿಜಕ್ಕೂ ಧಣಿ ವೆಂಕಪ್ಪಯ್ಯನವರ ಮಾತಿನಂತೆ ಹೇಳುವುದಾದರೆ ಗುಡ್ಡ ಪಾತ್ರೆ ಉಜ್ಜುತ್ತಿದ್ದುದು ಹೊಳೆಯ ಸೆರಗಲ್ಲಿ ಅಲ್ಲವೇ ಅಲ್ಲ, ಆತ ಉಜ್ಜುತ್ತಿದ್ದುದು ವೆಂಕಪ್ಪಯ್ಯನವರ ತೆಂಗಿನ ತೋಟದ ಅಂಚಿನಲ್ಲಿ. ಮಳೆಗಾಲದಲ್ಲಿ ಆ ಹೊಳೆ ಆಡಿದ್ದೇ ಆಟ, ಹೂಡಿದ್ದೇ ಹೂಟ. 'ಮಳೆಗಾಲ ಬಂದರೆ ಸಾಕು ಈ ಬಿಕನಾಸಿ ಹೊಳೆ ಊರಿಡೀ ತನ್ನ ಸೆರಗನ್ನೇ ಹಾಸಿಬಿಡುತ್ತದೆ..., ಎಷ್ಟಗಲ ಸೆರಗು ಹಾಸಿದರೂ ಇನ್ನಷ್ಟು ದೂರಕ್ಕೆ ಹಾಸಬೇಕೆಂಬ ಚಟ ಇದಕ್ಕೆ...' ಎಂದು ಧಣಿಗಳು ಯಾವತ್ತೂ ಹೊಳೆಯನ್ನು ಮೂದಲಿಸುವುದು ಇದ್ದೇ ಇದೆ. ಹೊಳೆಗೂ ಬಾಯೇನಾದರೂ ಬರುತ್ತಿದ್ದರೆ 'ಎಲವೋ ಹುಲು ಮಾನವ ವೆಂಕಪ್ಪಯ್ಯ, ಸುತ್ತಲ ನಾಕೂರಿನ ಯಾವನೇ ಶ್ಯಾನಭೋಗ-ಉಗ್ರಾಣಿಯನ್ನಾದರೂ ಕರೆತಂದು ನನ್ನೆದುರು ಸರಪಣಿ ಎಳೆಸು. ಅವೆಲ್ಲವೂ ನನ್ನದಲ್ಲದಿದ್ದರೆ ಕೇಳು ಮತ್ತೆ...' ಎಂದು ಮರು ಉತ್ತರ ಕೊಡುತ್ತಿತ್ತು. ಬಾಯಿ ಇಲ್ಲದಿದ್ದರೇನಂತೆ... ಬರಿ ಕ್ರಿಯೆಯಲ್ಲೇ ತನ್ನ ವ್ಯಾಪ್ತಿ, ತನ್ನ



ಬಲ ಎಷ್ಟೆಂಬುದನ್ನು ಮಳೆಗಾಲ ಬಂದೊಡನೆ ಧಣಿಗಳಿಗೆ ಮನವರಿಕೆ ಮಾಡಿ ಕಿರಿ ಕಿರಿ ಎಬ್ಬಿಸುವುದರಲ್ಲಿ ಹೊಳೆಯೇನು ಹಿಂದೆ ಬಿದ್ದಿಲ್ಲ. ಹೊಳೆಯ ಈ ಉಪಟಳ ತಾಳಲಾರದೆ ಧಣಿಯವರು ಪ್ರತಿ ವರ್ಷವೂ ಹೊಳೆ ಸೊರಗುವ ಕಾಲಕ್ಕೆ ತನ್ನ ಮೇಲುಸ್ತುವಾರಿಯಲ್ಲೇ ಪಾದೆಕಲ್ಲು ಮುರಕಲ್ಲಿನ ಅಡಿಪಂಚಾಂಗ ಹಾಕಿ ನದಿಯ ಸೆರಗಿಗೂ ತೋಟಕ್ಕೂ ನಡುವೆ ಧರೆ ಎಬ್ಬಿಸಿ ಎತ್ತರಿಸುವುದಿದೆ. ಈ ವರ್ಷ ಹೊಳೆಯ ಮೈಯಿಂದ ತೋಟವನ್ನು ನಾಕಡಿ ಎತ್ತರಿಸಿದ್ದರೆ, ಮುಂದಿನ ವರ್ಷ ಐದಡಿ ಎತ್ತರಿಕೆ. ಆ ಬಿರುಬೇಸಿಗೆಯಲ್ಲಿ ನಿತ್ರಾಣ ಸ್ಥಿತಿಯಲ್ಲಿರುವ ಹೊಳೆಯಂತೂ ತನ್ನ ನಿಸ್ತ್ರಕ್ತ ಸ್ಥಿತಿಯಲ್ಲಿ ಆ ಕೃತ್ಯವನ್ನು ಕಂಡೂ ಕಾಣದಂತಿದ್ದು 'ಗದ್ದೆಯಲ್ಲಿ ಬಿತ್ತುವುದನ್ನು ಮರಳ ದಿನ್ನೆ ಮೇಲೆ ಬಿತ್ತಿದೆಯಲ್ಲವ ಮಾರಾಯ?' ಎಂದು ಧಣಿಯವರ ಪೆದ್ದುತನದ ಬಗ್ಗೆ ಮನಸ್ಸಲ್ಲೇ ನಗುತ್ತಾ ಆ ಧರೆಯನ್ನು ಕೆಡವಲು ಹೊಂಚುಹಾಕುತ್ತಿರುತ್ತದೆ. ಅನಾದಿ ಕಾಲ



ದಿಂದಲೂ ಅಲ್ಲೇ ಇರುವ ಹೊಳೆಗೇನು ತಿಳಿದಿಲ್ಲವೆ. ಇಂವ ಧನಿಕ ಮಹಾಶಯ ತನ್ನ ಸೆರಗನ್ನೇ ಒತ್ತರಿಸಿಕೊಂಡು ತೋಟಮಾಡಿದ್ದಾನೆ ಎನ್ನುವ ಸತ್ಯ. ಅಂತು ಮಳೆಗಾಲ ಕಾಲಿಟ್ಟು ಆಟಿ ತಿಂಗಳ ನಾಲ್ಕು ಜಡಿಮಳೆ ಹೊಡೆದರೆ ಸಾಕು ಧರೆ ಬುಡದಿಂದಲೇ ಲಯ. ಹೊಳೆ ತಟ್ಟನೆ ಧಣಿಯವರ ತೋಟದೊಳಗೆ ನುಗ್ಗಿ ಅದನ್ನು ಕಡಲು ಮಾಡಿ ಸೇಡು ತೀರಿಸಿಕೊಳ್ಳುತ್ತದೆ.

ಹೀಗೆ ಧಣಿ ಹಾಗೂ ಹೊಳೆಯ ನಡುವೆ ಇನ್ನೂ ಸಮರ ನಡೆಯುತ್ತಿದ್ದ ಆ ಶ್ರಾವಣ ಮಾಸದ ಮುಂಜಾನೆ, ಬಾಲಕ ಗುಡ್ಡ ತೋಟದ ಅಂಚಲ್ಲಿ ಕೂತು ಬೂದಿಯಿಂದ ತಿಕ್ಕಿದ ಪಾತ್ರೆಗಳನ್ನು ಹೊಳೆಯ ನೀರಲ್ಲಿ ಜಾಲಾಡಿಸುತ್ತಿದ್ದ. ಹೊಳೆಯ ನೀರು ನಿಂತು ನಿಂತು ಧಣಿಗಳ ತೋಟದ ಅಂಚು ತುಳುವ ಹಲಸಿನಂತೆ ಮೆತ್ತಗಾಗಿದೆ ಎಂಬುದು ಆ ಪುಟ್ಟ ಬಾಲಕನಿಗೆ ಅದ್ಹೇಗೆ ತಿಳಿದೀತು? ಹಿಂದಿನ ದಿನ ರಾತ್ರಿ ಊರ ವಿಷ್ಣುಮೂರ್ತಿ ದೇವಳದಲ್ಲಿ ನಡೆದ ಹರಿಕಥಾ ಕಾಲಕ್ಷೇಪದಲ್ಲಿ ಹರಿದಾಸರು ಹೇಳಿರುವ ಉಪಕತೆಗಳನ್ನು ನೆನಪಿಸಿಕೊಂಡೇ ಪಾತ್ರೆ ಬೆಳಗುತ್ತಿದ್ದವಗೆ ಕಾಲಡಿಯ ಮಣ್ಣು ಕುಸಿಯುವ ಪರಿಜ್ಞಾನವೂ ಇಲ್ಲ. ಕಾಲಡಿಯ ಮಣ್ಣು ಕುಸಿದು ಹೊಳೆಗೆ ಜಾರಿತು! ಕ್ಷಣಮಾತ್ರದಲ್ಲಿ ಗುಡ್ಡನ ಜತೆ ಧಣಿಗಳ ಮನೆಯ ಪಾತ್ರೆ, ಕೊಳಗ, ತಪ್ಪಲೆಗಳೆಲ್ಲವೂ ನೀರು ಪಾಲಾದವು. ಗುಡ್ಡನೇನು ಸಾಮಾನ್ಯದವನೇ? ಆತನ ಈಜಿಗೆ ಮೀನುಗಳೇ ನಾಚಬೇಕು. ಈಜಿ ಮೇಲೆ ಬಂದವ ನೇರ ಧಾವಿಸಿದ್ದು ಅಪ್ಪ ಕುದುಪನತ್ತ. ತೆಂಗಿನ ಬುಡ ಬಿಡಿಸುವ ಕಾಯಕದಲ್ಲಿ ಮಗ್ನನಾಗಿದ್ದವಗೆ ಮಗನ ಮಾತು ಕೇಳಿ ಎದೆಬಡಿತ ಸ್ತಬ್ಧಗೊಂಡಂತಾಯಿತು. ಬಂದು ನೋಡುತ್ತಾನೇನು ಮುಸುರೆ ಪಾತ್ರೆಗಳೆಲ್ಲವೂ ಹೊಳೆಯ ಪಾಲಾಗಿದೆ. ಧಣಿಗಳಿಗೇನಾದರೂ ಈ ಸುದ್ದಿ ತಲುಪಿದರೆ, ಸಿಟ್ಟಿನ ಭರದಲ್ಲಿ ತಾವೆಲ್ಲರೂ ಹೊಳೆ ಪಾಲಾಗುವುದು ಖಂಡಿತ ಎಂದು ಆಲೋಚಿಸಿದವನೆ ತಟ್ಟನೆ ಕೋಮಣಾಲಂಕೃತವಾಗಿ ಹೊಳೆಯಲ್ಲಿ ಮುಳುಗಿ ನೆಲಕಚ್ಚಿರುವ ಪಾತ್ರೆಗಳಿಗಾಗಿ ಜಾಲಾಡತೊಡಗಿದ. ಕುಸಿದ ಮಣ್ಣಡಿ ಸಿಗುವಷ್ಟು ಪಾತ್ರೆಗಳು ಸಿಕ್ಕವು. ಇನ್ನೆಷ್ಟು ಪಾತ್ರೆಗಳು ಸಿಗಬೇಕು? ಕುದುಪನಿಗೆ ಅಂದಾಜಿಲ್ಲ. ಮುಸುರೆ ಪಾತ್ರೆಗಳ 'ಒಡೆಯ' ಮಗನನ್ನು ಕೇಳಿದರೆ ಆತ ತೋರು ಬೆರಳನ್ನು ಬಾಯೊಳಗಿರಿಸಿಕೊಂಡು ಮೌನ ಮುದ್ರೆಯಲ್ಲಿದ್ದಾನೆ.

'ಏಯ್ ಮೂರ್ಕಾಸಿನ ಹಡಬೆ... ಇಷ್ಟೇನಾ ಪಾತ್ರೆ... ಇನ್ನ್ಯಾವುದಾದರೂ ಮುಳುಗಿದ್ಯನಾ...?

ಊಹುಂ.... ಮಗ ಗುಡ್ಡನಿಗೆ ಇನ್ಯಾವ ಪಾತ್ರೆಗಳೂ ನೆನಪಿಗೆ ಬರುತ್ತಿಲ್ಲ. ಮಾಮೂಲಾಗಿ ದಿನವೂ ಇರುವ ಎರಡು ಕಂಚಿನ ಕೊಳಗ, ಎರಡು ಹಿತ್ತಾಳೆ ಗಿಂಡೆ, ಹತ್ತು ಹಿತ್ತಾಳೆ ಲೋಟ, ಎರಡು ಚೊಂಬು, ಆರು ಮರದ ಸೌಟು, ಎರಡು ಹಿತ್ತಾಳೆ ಸೌಟು, ಹತ್ತು ಕಂಚಿನ ಬಟ್ಟಲು, ಎಂಟು ಹಿತ್ತಾಳೆ ತಟ್ಟೆ, ಒಂದು ಬಾಣಲೆ... ಇವೆಲ್ಲವೂ ಇವೆ. ಮತ್ತ್ಯಾವುದು ಕಾಣಸುತ್ತಿಲ್ಲ? ಮಗ ಗುಡ್ಡನಿಗೂ ತಿಳಿಯುತ್ತಿಲ್ಲ, ಅಪ್ಪನಿಗೂ ಅಷ್ಟೆ. ಅಪ್ಪ ಮಗನನ್ನು ಅದೆಷ್ಟು ಕಾಡಿದರೂ ಬಾಲಕ ಗುಡ್ಡನಿಗೆ ಉತ್ತರಿಸಲು ಕಿವಿ ಬಾಯಿ ತೋಚುತ್ತಿಲ್ಲ. ಧಣಿಯವರ ಒಡತಿ ಹೊರಗೆ ಸುರಿಯುವ ಮುಸುರೆ ಪಾತ್ರೆಗಳನ್ನು ಹೊತ್ತು ತಂದು ಅದನ್ನು ಉಜ್ಜುದಷ್ಟೆ ಆತನ ಕೆಲಸ. ಎಷ್ಟು ಪಾತ್ರೆ... ಯಾವುದು ಏನು ಎತ್ತ ಎಂದು ವಿಚಾರಿಸಿದರೆ, ಧಣಿಪತ್ನಿ ಮಜ್ಜಿಗೆ ಕಡೆಯುವ ಕಡೆಗೋಲಲ್ಲೆ ತಲೆ ಸೀಳಿಬಿಟ್ಟಾರು!

ಕೊನೆಗೂ ಯೋಚಿಸಿ ಯೋಚಿಸಿ ಹಣ್ಣಾದ ಗುಡ್ಡನಿಗೆ ತಟ್ಟನೆ ನೆನಪಿಗೆ ಬಂದದ್ದು ಆ ಬೆಳ್ಳಿಲೋಟ. ಮುಂಜಾನೆ ರೇಜಿಗೆ ಹಿಡಿಸುವಷ್ಟು ಬಾರಿ ಧಣಿಪತ್ನಿಯವರು 'ಈ ಬೆಳ್ಳಿಲೋಟ ಜಾಗ್ರತೆ ಮಾರಾಯ, ನನ್ನ ಮದುವೆಯಲ್ಲಿ ನನ್ನಪ್ಪ ಕೊಟ್ಟಿದ್ದು...'' ಎಂದು ಹೇಳಿಯೇ ಮುಸುರೆ

ಪಾತ್ರೆಯ ಜತೆಗೆ ಅದನ್ನೂ ಸೇರಿಸಿದ್ದನ್ನು ಗುಡ್ಡ
ನೆನಪಿಸಿಕೊಂಡ. ಆದರೇನು ಆತ ನೆನಪಿಸಿ
ಕೊಂಡದ್ದೇ ಬಂತು. ಕುದುಪ ಅದೆಷ್ಟು ಬಾರಿ
ಹೊಳೆಯೊಳಗೆ ಮುಳುಗಿ ಮೇಲೆದ್ದರೂ ಬೆಳ್ಳಿ
ಲೋಟ ಹೊಳೆಯ ಒಡಲಿಂದ ಹೊರಬರಲಿಲ್ಲ.
ಅಪ್ಪ-ಮಗ ಇಬ್ಬರೂ, ಆಗ ತಾನೆ ಅಲ್ಲಿಗೆ ಬಂದ
ಚೆನ್ನಮ್ಮನ ಜತೆ ಸೇರಿ ಸಾಕಷ್ಟು ಕಣ್ಣೀರನ್ನು
ಹೊಳೆಯ ನೀರಿಗೆ ಸೇರಿಸಿದರೂ ಬಂದ ಉತ್ತರ
ಒಂದೆ-ಬೆಳ್ಳಿಲೋಟ ನಾಪತ್ತೆ. ಭೂಮಿ ಆಕಾಶ
ಒಂದಾಗುವಂತೆ ಮತ್ತೆ ಮಳೆ ಜಡಿಯತೊಡ
ಗಿದಾಗ ಕುದುಪ ಅಸಹಾಯಕನಾಗಿ ಧಣಿಗಳ
ಅಂಗಳಕ್ಕೆ ಬಂದು ಬೆಳ್ಳಿಲೋಟದ ವಿಷಯ
ತಿಳಿಸಿದ್ದ. ಮಳೆಯ ಆರ್ಭಟದ ಜತೆ ಧಣಿಯರ
ಆರ್ಭಟವೂ ಏರಿತು. ಆ ಆರ್ಭಟದ ಜತೆ
ಕುದುಪನ ಕುಟುಂಬವೆ ಬೆಳ್ಳಿಲೋಟವನ್ನು
ಲಪಟಾಯಿಸಿದ್ದು ಎಂಬ ಅಪವಾದವೂ ಬೀಸಿ
ಬಂತು. ಕುದುಪ ದಣಿಗಳ ಕೈ ಕಾಲು ಹಿಡಿದು,
ನಡೆದ ನಿಜಸ್ಥಿತಿ ವಿವರಿಸಿದರೂ ಅವರು ಒಪ್ಪ
ಲೊಲ್ಲರು. ಧಣಿಯವರು ಎಂದಾದರೂ ಒಕ್ಕಲ
ಮಕ್ಕಳನ್ನು ನಂಬಿದ್ದುಂಟೆ?

'ಇದೆಲ್ಲ ಸಾಕು ಮಾರಾಯ, ಯಾವತ್ತೂ
ನಮ್ಮ ಮುಸುರೆ ಪಾತ್ರೆಗಳನ್ನು ನುಂಗದ ಹೊಳೆ
ಇವತ್ತು ಬೆಳ್ಳಿಲೋಟವನ್ನು ನುಂಗಿತನಾ...'
ಎಂದು ಧಣಿಪತ್ನಿಯವರ ಒಗ್ಗರಣೆ ಮಾತು
ಬೇರೆ.


ಧಣಿಗಳು ಗುಡ್ಡನ ಬಾಯಿ ಬಿಡಿಸಲು ಆತನ
ಮೈ ಮೇಲಿನ ಚರ್ಮ ಸುಲಿಯುವುದೊಂದೇ
ಬಾಕಿ. ಅಂಗಳದ ಹೊಂಗಾರೆ ಮರಕ್ಕೆ ಆತನನ್ನು
ಬಿಗಿದು ಆ ಮಳೆಯಲ್ಲೇ ತೆಂಗಿನ ಕೊತ್ತಳಿಗೆಯಲ್ಲಿ
ಬಡಿದೇ ಬಡಿದರು. ಚೆನ್ನಮ್ಮನಿಗೆ ತನ್ನ ಕರುಳ
ಕುಡಿಯ ಚೀರಾಟ ನರಳಾಟ ನೋಡಲಾಗಲಿಲ್ಲ.
ತಟ್ಟನೆ ಧಣಿಗಳ ಕಾಲಿಗಡ್ಡ ಬಿದ್ದು, ತಾನು ಆ
ಬೆಳ್ಳಿಲೋಟದ ಹಣವನ್ನು ವರ್ಷಾನುಗಟ್ಟಲೆ ಪಡಿ
ಯಿಲ್ಲದೆ ದುಡಿದು ತೀರಿಸುವೆನೆಂದು ಅಳುತ್ತಾ

ಬೇಡಿಕೊಂಡಳು. ಧಣಿಗಳ ಕೈಯಿಂದ ಕೊತ್ತಳಿಗೆ
ಕೆಳಗುರುಳಿತು. ಮುಂದಿನ ಮೂರು ಬೇಸಿಗೆ
ವರೆಗೆ ಚೆನ್ನಮ್ಮನ ದುಡಿತಕ್ಕೆ ಪಡಿಯಿಲ್ಲ-ಎಂಬ
ಕರಾರಿನನ್ವಯ ಗುಡ್ಡ ಬಂಧಮುಕ್ತನಾದ.

ಧಣಿಗಳ ಬೆಳ್ಳಿಲೋಟವನ್ನು ಎಂದು ಅ
ಹೊಳೆ ನುಂಗಿತ್ತೋ ಅಂದಿನಿಂದ ಚೆನ್ನಮ್ಮ ಹುಚ್ಚ
ಳಾಗಿದ್ದಾಳೆ. ಆ ಘಟನೆ ನಡೆದು ಇಂದಿಗೆ ನವ
ಮಾಸಗಳು ಉರುಳಿವೆ. ಬೆಂಕಿಯುಗುಳುವ
ವೈಶಾಖ ಮಾಸ ಕಾಲಿಟ್ಟಿದೆ.

ಇಂದು ವೈಶಾಖಮಾಸದ ಮೂರನೇ ದಿನ.
ಮುಂಜಾನೆ ಚೆನ್ನಮ್ಮ ಎಂದಿನಂತೆ ಹೊಳೆಯ
ಅಂಚಿನಲ್ಲಿ ಕೂತು ಪಾತ್ರೆ ತಿಕ್ಕುತ್ತಾ ಹೊಳೆಯ
ಮನೆಹಾಳ ಬುದ್ಧಿಯನ್ನು ನಿಂದಿಸುತ್ತಿದ್ದಾಳೆ. ಅಷ್ಟ
ರಲ್ಲೆ ಧಣಿಗಳು ಕುದುಪನ ಜತೆಗೂಡಿ ಬಂದು ಅ
ದಿನದ ಕೆಲಸ ಕಾರ್ಯಗಳ ಬಗ್ಗೆ ಮಾತೆತ್ತಿದ್ದಾರೆ
ಕುದುಪ ಸೊಂಟದ ಕರಿದಾರಕ್ಕೆ ಕೋಮಣದ
ತುಂಡೊಂದನ್ನು ಸಿಲುಕಿಸಿ, ತಲೆಗೊಂದು ಎಲ
ವಸ್ತ್ರ ಬಿಗಿಯುತ್ತಾ ಧಣಿಗಳಿಂದ ಉದುರುವ
ಮಾತುಗಳನ್ನು ಹೆಕ್ಕಿಕೊಳ್ಳುವ ಭಂಗಿಯಲ್ಲಿ
ನಿಂತಿದ್ದಾನೆ. ಬತ್ತಿರುವ ಹೊಳೆಯಿಂದ ಹೂಳೆತ್ತಿ
ತಂದು ತೆಂಗಿನ ತೋಟಕ್ಕೆ ಹಾಕಬೇಕೆಂದು
ಧಣಿಗಳು ಕುದುಪನಿಗೆ ಸೂಚನೆ ನೀಡುತ್ತಿದ್ದರು.
ಧಣಿಗಳ ಮಾತು ಚೆನ್ನಮ್ಮನ ಕಿವಿಗೂ ತಲುಪು
ತ್ತಿದೆ. ಆದರೆ ಅದು ತನಗಲ್ಲ ತನ್ನ ಕಿವಿ ಬೀಳಿನ
ಬುಗುಡಿಗೆ ಎಂಬಂತೆ ತಾನು ಧಣಿಗಳ ಮನೆಯ
ಮುಸುರೆ ಪಾತ್ರೆ ತಿಕ್ಕುತ್ತಾ ಹೊಳೆಯ ಬಗ್ಗೆ ತಲೆ
ಕೆಡಿಸಿಕೊಳ್ಳುತ್ತಿದ್ದಳು.

ಚೆನ್ನಮ್ಮ ಕೊನೆಗೂ ಮುಸುರೆ ಕೆಲಸವನ್ನೆಲ್ಲ
ಮುಗಿಸಿ ತನ್ನ ಗುಡಿಸಲಲ್ಲಿ ತಂಗಳನ್ನ ಉಂಡು
ಬಂದು ಹೂಳು ಹೊರುವ ಕೆಲಸದಲ್ಲಿ ತೊಡಗಿ
ಕೊಂಡಳು. ತೋಟದ ನೆರಳಲ್ಲಿ ಕುಳಿತು ಧಣಿ
ಯವರು ಕೊಡುವ ಸೂಚನೆಗಳಿಂದ ಚೆನ್ನಮ್ಮನ
ಸಿಟ್ಟಿನುರಿಗೆ ಮತ್ತಷ್ಟು ತುಪ್ಪ ಸುರಿದಂತಾಗುತ್ತಿತ್ತು.
ಚೆನ್ನಮ್ಮ ಅಸಹನೆಯಿಂದ ಕನಲುತ್ತಾ, ನೆತ್ತಿ ಮೇಲ




ಬೆಂಕಿಯುಗುಳುತ್ತಿದ್ದ ಸೂರ್ಯನನ್ನು ಶಪಿಸುತ್ತಾ ಹೂಳು ಹೊರುತ್ತಿದ್ದಳು. ಕುದುಪ ಹೂಳು ತುಂಬಿ ಕೊಡುತ್ತಿದ್ದ, ಚಿನ್ನಮ್ಮ ಅದನ್ನು ಹೊತ್ತು ತಂದು ತೆಂಗಿನ ಬುಡಕ್ಕೆ ಎಸೆಯುತ್ತಿದ್ದಳು.

ಹೂಳೆತ್ತುವ ಕೆಲಸ ಹಾಗೆಯೇ ಮುಂದರಿದಿತ್ತು. ಮೂಳೆ ಮುರಿದು ಹೋಗುವಂತಾ ಕೆಲಸವದು. ಕುದುಪ ಸುಸ್ತಾದ. ಒಂದರೆಕ್ಷಣ ಅಲ್ಲೇ ನೀರೊಳಗೆ ಕುಸಿದು ಕುಳಿತ. ನೆರಳಲ್ಲಿದ್ದ ಧಣಿಗಳಿಗೆ ಸಿಟ್ಟಿನಿಂದ ಪಿತ್ತವೇರಿದಂತಾಯ್ತು. 'ಎದ್ದೇಳೋ ಮೂರ್ಕಾಸಿನವ... ಪಡಿ ಅಳೆಯುವಾಗ ಪಾವಕ್ಕೆ ಕಮ್ಮಿ ಮಾಡಿದರೆ ಸುಮ್ನಿರ್ತಿಯೇನೋ ನೀನು' ಎಂದು ಸಿಡುಕಿದರು. ಚಿನ್ನಮ್ಮನಿಗಂತೂ ಪಡಿಯಿಲ್ಲದ ಈ ದುಡಿತದ ಬಗ್ಗೆ ಇನ್ನಿಲ್ಲದಂತಾ ಅಸಮಾಧಾನವಿದೆ. ಒಂದೆಡೆ ಕಳ್ಳತನದ ಅಪವಾದ, ಮತ್ತೊಂದೆಡೆ ಕಠಿಣ ಶ್ರಮದ ದುಡಿತಕ್ಕೂ ಬೆವರಿಗೂ ಪ್ರತಿಫಲವಿಲ್ಲ. ಚಿನ್ನಮ್ಮ ತನ್ನ ಭಾರದ ಒಡಲನ್ನು ಕಣ್ಣೀರು ಜಿನುಗಿಸಿಕೊಂಡು ಮೆದುಗೊಳಿಸಿಕೊಂಡಳು. ಕುದುಪ ಧಣಿಯವರ ಸಿಡುಕು ಬೈಗಳಿಗೆ ಬೆದರಿ ಎದ್ದುನಿಂತು ಮತ್ತೆ ಕೆಲಸದಲ್ಲಿ ಮಗ್ನನಾದ. ಗಂಡ ಹೆಂಡಿರಿಬ್ಬರೂ ಹೊಳೆಗೆ ಬೆವರಿನ ಮಳೆ ಸುರಿಸಿದರು. ಕುದುಪನಂತೂ ಆ ಬಿರುಬಿಸಿಲಿನ ಝಳಕ್ಕೆ ಕುಸಿಯುವಂತಾದ. ಆದರೂ ಧಣಿಗಳ ಭಯದಿಂದ ಕುಸಿಯದಾದ. ದೇಹದ ಮೂಲೆ ಮೂಲೆಗಳಿಂದ ಒಂದಷ್ಟು ತಾಕತ್ತನ್ನು ಸೋಸಿ ತಂದು ಮತ್ತೆ ಬುಟ್ಟಿಗೆ ಹೂಳು ತುಂಬತೊಡಗಿದ. ಇನ್ನೇನು ಬುಟ್ಟಿಗೆ ಹೂಳು ತುಂಬಿ ಚಿನ್ನಮ್ಮನ ತಲೆಗೇರಿಸಬೇಕೆನ್ನುವಷ್ಟರಲ್ಲಿ ನೋಡುತ್ತಾನೇನು! ಅಂವ ಮೂರ್ಛೆ ಬೀಳುವಂತಾದ.

ನವಮಾಸಗಳ ಕಾಲ ಹೊಳೆಯ ಉದರದಲ್ಲಿ ಅಡಗಿದ್ದ ಧಣಿಗಳ ಬೆಳ್ಳಿಲೋಟದ ಮಂಕು ಮೂತಿ ಕಾಣಿಸುತ್ತಿದೆ! ತಾನೀ ದಂಪತಿಗಳನ್ನು ಅಪವಾದದ ಕುಣಿಕೆಯೊಳಗೆ ಸಿಲುಕಿಸಿ ನದಿಯ ಉದರದಲ್ಲಿ ಅಡಗಿಕೊಂಡೆನಲ್ಲಾ ಎಂಬ ಪಶ್ಚಾತ್ತಾಪದಲ್ಲಿ ಮುಖ ಮರೆಮಾಡಿಕೊಂಡಿದೆಯೇನೋ ಎಂಬಂತೆ ಕೆಸರೊಳಗೆ ದೇಹ ಹುದುಗಿಸಿಕೊಂಡಿದ್ದ ಬೆಳ್ಳಿಲೋಟವನ್ನು ಕುದುಪ ನಿಧಾನಕ್ಕೆ ಹೊರಗೆಳೆದ. ಇನ್ನೂ ಸೂತಕ ಕಳೆಯದ ಹಸಿ ಮಗುವನ್ನು ಮೀಯಿಸುವಂತೆ ನಿಧಾನಕ್ಕೆ ಹೊಳೆಯ ನೀರಲ್ಲಿ ಆ ಬೆಳ್ಳಿಲೋಟವನ್ನು ತೊಳೆಯತೊಡಗಿದ. ಹೊಳೆಯ ಹೂಳೊಳಗೆ ಅವಿತು ತನ್ನ ಬಣ್ಣ-ಗಾಂಭೀರ್ಯ ಕಳೆದುಕೊಂಡಂತಿದ್ದ ಬೆಳ್ಳಿಲೋಟಕ್ಕೆ ಇದೀಗ ಕುದುಪನಿಂದಾಗಿ ಜೀವ ಬಂದಂತಾಯ್ತು.

ತೋಟದಂಚಿನ ನೆರಳಲ್ಲಿ ಕುಳಿತು ಒಕ್ಕಲ ಮಕ್ಕಳ ಬೆವರಧಾರೆಯನ್ನೆ ದಿಟ್ಟಿಸುತ್ತಿದ್ದ ಧಣಿಗಳನ್ನು ಬೆಳ್ಳಿಲೋಟ ಗಮನಿಸಿತು. ಧಣಿಗಳು ಮಾತ್ರ ಆ ಲೋಟವನ್ನು ಗಮನಿಸುವಂತಿರಲಿಲ್ಲ. ಅವರು ಚಿನ್ನಮ್ಮನ ಹಣೆಯಿಂದ ಕುಂಕುಮದೊಂದಿಗೆ ಕೆಳಗಿಳಿಯುತ್ತಿದ್ದ ಬೆವರಿನ ದಾರಿಯನ್ನೆ



ಗಮನಿಸುತ್ತಿದ್ದರು. ಕುದುಪ ಹೂಳು ತುಂಬಿದ ಬುಟ್ಟಿಯನ್ನೆತ್ತಿ ಚಿನ್ನಮ್ಮನ ತಲೆಗೇರಿಸದೆ ನೀರೊಳಗೆ ಇನ್ನೇನೋ ಮಸಲತ್ತು ನಡೆಸುತ್ತಿರುವುದನ್ನು ಕಂಡು ಧಣಿಗಳು ಮತ್ತೆ ಸಿಟ್ಟಾದರು. ಆದರೂ ಇದೇನೊ ಹೊಸ ಮಸಲತ್ತು ಇರಬೇಕೆಂದು ಕಣ್ಣು ಕಿರಿದುಗೊಳಿಸಿ ಆತನತ್ತಲೇ ದಿಟ್ಟಿ ನೆಟ್ಟರು.

ಕುದುಪ ಯಾವುದೋ ಒಂದು ಕುಲಗೆಟ್ಟ ಲೋಟವನ್ನು ನೀರೊಳಗೆ ಅದ್ದಿ ತೆಗೆದು ತನ್ನ ಎಲೆವಸ್ತ್ರದಲ್ಲಿ ಒರಸಿ ಚಿನ್ನಮ್ಮನ ಕೈಗೆ ಕೊಡುವುದನ್ನು ಧಣಿಗಳು ಮೌನವಾಗಿಯೇ ದಿಟ್ಟಿಸಿದರು. ಈ ಹುಟ್ಟು ಹೊಳೆ ಯಾವುದೋ ಮಳೆಗಾಲದಲ್ಲಿ ಯಾರದ್ದೋ ಮನೆ, ಮಠ ಮುಳುಗಿಸಿ ಹೊತ್ತು ತಂದಿರುವ ಲೋಟವಿರಬೇಕೆಂದು ಯೋಚಿಸಿದ ಧಣಿಗಳು, ಆ ಹಾಳು ಲೋಟದ ಜಗತ್ತಲ್ಲೆ ಮುಳುಗಿ ಹೋದ ಗಂಡಹೆಂಡಿರ ಚಲನವಲನವನ್ನು ಕಿರಿದು ಕಣ್ಣಿಂದ ಮತ್ತಷ್ಟು ಗಮನಿಸತೊಡಗಿದರು.

ಧಣಿಗಳು ಹಾಗೇ ಗಮನಿಸುತ್ತಿದ್ದಂತೆ ಅವರ ಎದೆ ಬಡಿತದ ಲಯ ತಪ್ಪತೊಡಗಿತು. ಒಡಲ ಸಮಸ್ತ ವ್ಯವಹಾರಗಳು ಒಂದರೆಗಳಿಗೆ ಸ್ತಬ್ಧಗೊಂಡಂತಾಯ್ತು! ಚಿನ್ನಮ್ಮ ತನ್ನ ಕೈಯಲ್ಲಿದ್ದ ಲೋಟ ತಿರುಗಿಸುತ್ತಿದ್ದಂತೆ ಧಣಿಗಳನ್ನೇ ಆಕೆ ತಿರುಗಿಸಿದಂತಾಯ್ತು! ಕಂಠದಲ್ಲಿ ಬಳ್ಳಿ ಬಿಟ್ಟ ಆ ಬೆಳ್ಳಿಲೋಟ ಧಣಿಯವರಿಗೆ ನಿಧಾನಕ್ಕೆ ತನ್ನ ಪರಿಚಯ ಮಾಡಿಸತೊಡಗಿತ್ತು. ಹೌದು! ಅದೇ ಬೆಳ್ಳಿಲೋಟ. ಅದರ ಕಂಠ ಏಳು ಎಸಳುಗಳ ದೊಡ್ಡ ಹೂವಿನಂತಿದೆ. ಧಣಿಗಳಿಗೆ ಲೋಟದ ಪರಿಚಯ ಪೂರ್ಣವಾಯ್ತು. ಎಷ್ಟೆಂದರೂ ಕಳೆದ ಇಪ್ಪತ್ತು ವಸಂತಗಳಿಂದ ಆ ಬೆಳ್ಳಿಲೋಟ ಧಣಿಗಳ ಒಡನಾಟದಲ್ಲಿರಲಿಲ್ಲವೆ? ಧಣಿಗಳ ದಾಂಪತ್ಯ ಜೀವನದ ಎಲ್ಲ ಹಂತಗಳಲ್ಲೂ ಅದು ಮೂಕಸಾಕ್ಷಿಯಾಗಿರಲಿಲ್ಲವೆ?

ಧಣಿಗಳು ಬೆಳ್ಳಿಲೋಟವನ್ನೇ ದಿಟ್ಟಿಸಿದರು. ಚಿನ್ನಮ್ಮ ಲೋಟವನ್ನು ಹಾಗೇ ತಿರುಗಿಸಿ ನೋಡುತ್ತಲೇ ಅದರ ಪರಿಚಯ ಮಾಡಿಕೊಂಡಳು. ಆಕೆಯೂ ಆ ಬೆಳ್ಳಿಲೋಟವನ್ನು ಅದೆಷ್ಟು ಬಾರಿ ಸೋರೆಕಾಯಿಂದ ಮೀಯಿಸಿಲ್ಲ. ಹಾಗೆ ಮೀಯಿಸುವಾಗಲೆಲ್ಲ ಅದರ ಮೈಮೇಲೆ ಬಿಟ್ಟಿರುವ ಬಳ್ಳಿಯ ಚಂದವನ್ನು ಅದೆಷ್ಟು ಬಾರಿ ಧಣಿಪತ್ನಿಯವರಲ್ಲಿ ಹೊಗಳಿಲ್ಲ. ಹೌದು, ಅದೇ... ಕಂಠದಲ್ಲೆಲ್ಲ ಬಳ್ಳಿ ಬಿಟ್ಟ ಚಂದದ ಲೋಟ! ಚಿನ್ನಮ್ಮನಿಗೆ ಆ ಲೋಟವನ್ನು ಅದೆಷ್ಟು ನೋಡಿದರೂ ಸಾಲದು. ಧಣಿಗಳಿಗೆ ಕಾಣುವಂತೇ ಎತ್ತರಿಸಿ ಹಿಡಿದು ನೋಡಿಯೇ ನೋಡಿದಳು.

ಕುದುಪನೂ ಆ ಬೆಳ್ಳಿಲೋಟವನ್ನೆ ಗಮನಿಸುತ್ತಿದ್ದ. ಆತನಿಗಂತೂ ಆ ಲೋಟದ ದರ್ಶನವಾದೊಡನೆ ಬಿಸಿಲಿಂದ ಜೀವ ಕಳೆದುಕೊಂಡಂತಿದ್ದ ದೇಹಕ್ಕೆ ಹೊಸ ಚೈತನ್ಯ ಬಂದಂತಾಗಿತ್ತು. ನೆತ್ತಿ ಮೇಲೆ ಬಿಸಿಲು ಕಾರುತ್ತಿರುವ ಸೂರ್ಯ ಬೇಕಿದ್ದರೆ ಇನ್ನಷ್ಟು ಕಾರಲಿ... ಎಂಬ ಉಡಾಫೆಯೂ ಆತನಲ್ಲಿ ಮೈತಳೆದು ಬಂದಿತ್ತು. ಆತ ಚಿನ್ನಮ್ಮನ ಕೈಯಲ್ಲಿದ್ದ ಬೆಳ್ಳಿಲೋಟವನ್ನು ಧಣಿಯವರ ಪರಿಧಿಗೆ ಒಪ್ಪಿಸಲು ಕಾತು

ರನಾಗಿ ಆ ಲೋಟ ತನ್ನ ಕೈಗೆ ಹಸ್ತಾಂತರಗೊಳ್ಳುವ ಕ್ಷಣಕ್ಕಾಗಿ ಕಾಯುತ್ತಿದ್ದ. ಕಾಯುವ ಪ್ರತೀಕ್ಷಣವೂ ಆತನಿಗೆ ಅತೀ ದೀರ್ಘವಾಗಿ ಪರಿಣಮಿಸ ತೊಡಗಿತ್ತು. ಕ್ಷಣಕ್ಷಣಕ್ಕೂ ಆತನ ಚಡಪಡಿಕೆ ಏರುತ್ತಿದ್ದರೂ ಆ ಬಗ್ಗೆ ಚಿನ್ನಮ್ಮನಿಗೆ ಲಕ್ಷ್ಯವಿಲ್ಲ. ಲೋಟದ ಚಂದವನ್ನು ಆಕೆ ಮತ್ತೆ ಮತ್ತೆ ತಿರುಗಿಸಿ ನೋಡುತ್ತಿದ್ದಂತೆ... ಆಕೆಯ ಒಡಲಲ್ಲೂ ಅದೆಷ್ಟೊ ಭಾವನೆಗಳು ತಿರುಗತೊಡ ಗಿದ್ದವು. ಇದೇ ಲೋಟವಲ್ಲವೆ... ತನ್ನ ಬೆವರಿನ ಬೆಲೆ ಕಳೆದದ್ದು. ಕಳ್ಳತನದ ಕಿರೀಟವನ್ನು ತನ್ನ ಮುರು ಕಲು ಗುಡಿಸಲ ಚಾವಣಿಗೆ ಜೋಡಿಸಿದ್ದು. ಥೂ! ಬೆಳ್ಳಿಯದ್ದಾದರೇನಂತೆ... ಬುದ್ಧಿ ಮಣ್ಣಿಗಿಂತಲೂ ಬುರ್ನಾಸು! ಪಟ್ಟದ ಮೇಲಿನ ಕತ್ತಿಗೆ ಚಟ್ಟದಲ್ಲಿರು ವವನ ಮೇಲೆ ದಿಟ್ಟ ಸಲ್ಲ. ಜಾತಿಹಾವಿಗ್ಯಾಕೆ ಎರೆಹುಳದಂತೆ ಕೆಸರು ಕೆದಕುವ ಕೆಲಸ! ಈ ಬೆಳ್ಳಿಲೋಟದಿಂದಾಗಿ ತನ್ನ ಕುಟುಂಬ ಇದು ವರೆಗೆ ಉಂಡ ನೋವು, ಅವಮಾನ, ಪಟ್ಟಪಾಡು ಪರಿತಾಪಗಳೆಲ್ಲ ಚಿನ್ನಮ್ಮನ ಚಿತ್ತದಿಂದ ದಿಗಿಣ ತೆಗೆದು ಮೇಲೆದ್ದು ಬಂದು ಆಕೆಯ ಯೋಚನಾ ಶಕ್ತಿಯನ್ನೆ ಕ್ಷಣಕಾಲ ಕಸಿದು ಕೊಂಡವು. ಒಡಲ ಪಿತ್ತ ಕೆರಳಿದಂತಾಯಿತು. ಆ ಸಂಕಟವುಂಡ ಜೀವಕ್ಕೆ ಏನನಿಸಿತೋ ಆ ಕ್ಷಣ! ಚಿನ್ನಮ್ಮ ತಟ್ಟನೆ ಪೂರ್ವಾಭಿ ಮುಖವಾಗಿ ನಡೆದಳು ಆ ಹೊಳೆಯಲ್ಲೆ. ಹತ್ತು ಹೆಜ್ಜೆ ಹಾಕಿ ಹನ್ನೊಂದನೇ ಹೆಜ್ಜೆಯಡಿ ನಿಂತು ಅತ್ತ.....ದೂರದಲ್ಲಿದ್ದ ಹೊಳೆಯ ಮಡುವತ್ತ ಬೆಳ್ಳಿಲೋಟವನ್ನು ಎಸೆದೇ ಬಿಟ್ಟಳು. ಕಂಠದಲ್ಲಿ ಬಳ್ಳಿ ಹೊತ್ತ ಆ ಲೋಟ ತೋಟದಂಚಿನ ನೆರಳಲ್ಲಿ ತನ್ನನ್ನೇ ದಿಟ್ಟಿಸುತ್ತಿದ್ದ ಧಣಿಯವರ ಮೋರೆಯ ಅಸಂಖ್ಯ ಭಾವನೆ ಗಳನ್ನು ಓದುತ್ತಾ, ಆಳದ ಮಡುವಲ್ಲಿ ನಿಧಾನಕ್ಕೆ ಮುಳುಗಿ ಹೋಯ್ತು. ಧಣಿಯವರು ತಾವು ಹೊದ್ದುಕೊಂಡಿದ್ದ ವಲ್ಲಿಯಿಂದ ಮುಖಕ್ಕೆ ಗಾಳಿ ಬೀಸಿಕೊಂಡರು.

ನನ್ನ ಪಾಲಿಗೆ ಕತೆ ಎಂದರೆ ಕತೆಗಾರ ತಾನು ಕಂಡುಂಡು ಅನುಭವಿಸಿದ ಬದುಕ ಸೂಕ್ಷ್ಮಸಂವೇದನೆ, ಸಂಘರ್ಷ, ಸ್ಪಂದನ, ಚಿತ್ರಣಗಳನ್ನು ತನ್ನ ಕಲ್ಪನಾಶಕ್ತಿ, ಕಲಾಪ್ರಜ್ಞೆ, ತಂತ್ರಗಳೊಂದಿಗೆ ಜಾಣ್ಮೆಯಿಂದ ಹೆಣೆದು ಸಮಾಜಕ್ಕೆ ಸಂವಹಿಸುವ ಪ್ರಕ್ರಿಯೆ ಅಥವ ಮಾಧ್ಯಮ.

ನಾಗವೇಣಿ. ಎಚ್



ತೆರೆದ ಅಂಚೆ

ನಾವೆಲ್ಲ 'ಭಾವನಾ'ಳಿಗಾಗಿ ಕಾಯುತ್ತಿದ್ದೇವೆ. ಆಕೆ ಹಾಗಿರಬಹುದೇ, ಹೀಗಿರಬಹುದೇ ಎಂದು ಕಲ್ಪಿಸಬಲ್ಲ ಹರೆಯ ನಮ್ಮೆಲ್ಲರದು. ಹೀಗಿರಲಿ ಎಂದು ಆಶಿಸುವಷ್ಟು ಗೃಹಸ್ಥರಲ್ಲ ನಾವು.

ದಾವಣಗೆರೆ **ಆನಂದ್ ಋಗ್ವೇದಿ**

ನಿಮ್ಮ ಪತ್ರಿಕೆ ಕನ್ನಡಿಗರಲ್ಲಿ ಭಾವನಾತ್ಮಕತೆಯನ್ನು ಚೇತನಗೊಳಿಸುವುದರೊಂದಿಗೆ ಚಿಂತನಶೀಲರನ್ನಾಗಿಯೂ ಮಾಡಲಿ.

ಮುಂಬಯಿ **ರಾಘವೇಂದ್ರ ಎನ್. ಕಲಿಭಟ್ಟ**

ನೀವು 'ಭಾವನಾ'ಕ್ಕೆ ಸಂಪಾದಕರಾದದ್ದರಿಂದ ನನಗೆ ತುಂಬ ಸಂತೋಷವಾಗಿದೆ.

ಮೈಸೂರು **ಎಸ್.ಎಲ್. ಭೈರಪ್ಪ**

ನಿಮ್ಮ ಪತ್ರಿಕೆಗೆ ಶುಭ ಕೋರುತ್ತೇನೆ.

ಉಡುಪಿ **ಜಿ. ರಾಜಶೇಖರ**

'ಭಾವನಾ' ಪ್ರಯೋಗಶೀಲ, ಚಿಕಿತ್ಸಕ ಬುದ್ಧಿ ಮನಸ್ಸುಗಳ ವೇದಿಕೆಯಾಗಬೇಕೆಂದು ನನ್ನ ಆಸೆ.

ಬೆಂಗಳೂರು **ಚಿಂತಾಮಣಿ ಕೊಡ್ಲೆಕೆರೆ**

ನೀವು ಈ ಕಥಾ ಮಾಸಪತ್ರಿಕೆಯನ್ನು ನಿಮ್ಮ ಕನಸುಗಳು- ಯೋಜನೆಗಳಿಗೆ ಅನುಗುಣವಾಗಿ ರೂಪಿಸಬಲ್ಲಿರಿ ಎಂದು ನಂಬಿದ್ದೇನೆ.

ಹುನಗುಂದ **ಮಲ್ಲಿಕಾರ್ಜುನ ಹಿರೇಮ**

ನೀವು 'ಭಾವನಾ'ದ ಸಂಪಾದಕರಾಗಿ ಕೆಲ
ನಿರ್ವಹಿಸಿಕೊಂಡಿರುವುದು ಒಳ್ಳೆಯದ
ಆಯಿತು. ಅದು ನಿರಂತರವಾಗಿ ನಡೆಯುವಂ
ನಿರ್ವಹಿಸುವುದು ಅಷ್ಟೇ ಅಸಾಧಾರ
ಜವಾಬ್ದಾರಿಯ ಕೆಲಸವೂ ಆಗಿದೆ.

ದಾವಣಗೆರೆ **ಶಂಕರ ಪಾಟೀ**

'ಭಾವನಾ' ನಮ್ಮೆಲ್ಲರ ಭಾವನೆಗಳ
ಹೊಸವೇದಿಕೆಯಾದೀತೆಂಬ ನಂಬಿಕೆ ನನಗಿದ
ನೀವು ಅದನ್ನು ಸಾಧಿಸುತ್ತೀರಿ ಕೂಡಾ.

ಕಾಂತಾವರ **ನಾ. ಮೊಗಸಾ**

'ಭಾವನಾ' ಎನ್ನುವ ಹೆಸರು ಕತೆಯ
ಮಾಸಿಕಕ್ಕೆ ಬಹಳಷ್ಟು ಅರ್ಥಪೂರ್ಣವಾ
ಬಹಳಷ್ಟು ಮಾಹಿತಿ ಹುದುಗಿಸಿಕೊಂಡಿರು
ಮತ್ತು ಬಹಳಷ್ಟು ತೆರೆದಿಡುವ ಹೆಸರಾಗಿದೆ.

ಕನ್ನಡ ಓದುಗರ ಲೋಕಕ್ಕೆ 'ಭಾವನಾ
ಒಂದು ವಿಶಿಷ್ಟವಾದ ಪತ್ರಿಕೆಯಾಗಲಿ.

ಧಾರವಾಡ **ಬಸು ಬೇವಿನಗಿಡ**

ನೀವು ಪತ್ರಿಕಾ ರಂಗಕ್ಕೆ ಬಂದಿರುವುದ
ಅಚ್ಚರಿ ಮತ್ತು ಸಂತೋಷ. ಪತ್ರಿಕಾ ರಂಗದ
ಇನ್ನಾದರೂ ಕೊಂಚ ನೀತಿ, ಮಾನವೀಯ

ನಿಮ್ಮಂಥ ಯುವಕರಿಂದ ಅವತರಿಸಲೆಂದು ನನ್ನ ಹಾರೈಕೆ.

ಮೂಡಿಗೆರೆ **ಕೆ.ಪಿ. ಪೂರ್ಣಚಂದ್ರತೇಜಸ್ವಿ**

'ಭಾವನಾ' ಒಳ್ಳೆಯ ಬರವಣಿಗೆಗೆ ಹೆಚ್ಚಿನ ಇಂಬು ಕೊಡಲಿ.

ಧಾರವಾಡ **ಶಾಂತಾದೇವಿ ಕಣವಿ**

ಭಾವನೆಗಳೇ ನಶಿಸುತ್ತಿರುವ ಈ ಕಾಲದಲ್ಲಿ 'ಭಾವನಾ' ಹೆಸರಿನ ಮಾಸಿಕವನ್ನು ಹೊರತರುತ್ತಿರುವುದು ಹೊಸ ಶತಮಾನದ ಬೆಳಗು, ಶುಭ ತರುತ್ತದೆಯೆನ್ನುವುದರ ಮುನ್ಸೂಚನೆಯಾಗಿದೆ.

ಬಳ್ಳಾರಿ **ಡಾ. ರಾಜಶೇಖರ ನೀರಮಾನ್ವಿ**

ಮೊದಲು ನನ್ನ ಅಭಿನಂದನೆಗಳು. ನಿಮಗೆ ಎಲ್ಲ ಯಶಸ್ಸನ್ನು ಮನಃಪೂರ್ವಕ ಕೋರುತ್ತಿದ್ದೇನೆ. ಸಾಹಿತಿಯಾದವರು ಸಂಪಾದಕರೂ ಆದರೆ ಅದೊಂದು ಆಪ್ಯಾಯಮಾನ ಸಂಗತಿ.

ಮಣಿಪಾಲ **ವೈದೇಹಿ**

'ಭಾವನಾ' ಖಂಡಿತ ನಿಮ್ಮ ಮೂಲಕ ಸೂಕ್ಷ್ಮ ಸಂವೇದನೆಗಳ ಸಂಗಮವಾಗುತ್ತದೆಂದು ನಂಬುವೆ. ಭಾವನಾ ತುಂಬ ಉನ್ನತವಾದದ್ದನ್ನು ಕನ್ನಡಿಗರಿಗೆ ನೀಡಲಿ.

ಹಂಪೆ **ಮೊಗಳ್ಳಿ ಗಣೇಶ್**

'ಭಾವನಾ' ಎಂಬ ಮಾಸಪತ್ರಿಕೆ ಪ್ರಾರಂಭವಾಗುತ್ತಿರುವುದು, ಅದಕ್ಕೆ ನೀವು ಸಂಪಾದಕರಾಗಿರುವುದು ಆನಂದದ ಸಂಗತಿ. ನಿಮ್ಮ ಸಂಪಾದಕತ್ವದಲ್ಲಿ 'ಭಾವನಾ' ಅರ್ಥಪೂರ್ಣವಾಗಿ ಮೂಡಿಬರಲಿ.

ಬೆಂಗಳೂರು **ಈಶ್ವರಚಂದ್ರ**

ಸಾಹಿತ್ಯದ ವಿವಿಧ ಪ್ರಕಾರಕ್ಕೆ - ವಿಶೇಷವಾಗಿ ಕಥೆಗಳಿಗೆ - ನಿಮ್ಮ ಸಂಚಿಕೆ ಮೀಸಲಾಗಲೆಂದು ನನ್ನ ಅಪೇಕ್ಷೆ.

ಕುಮಟಾ **ಶ್ರೀಧರ ಬಳಿಗಾರ**

ಕವಿ-ಕತೆಗಾರ ಜಯಂತ್ ಕಾಯ್ಕಿಣಿ ರೂಪಿಸಲಿರುವ ಮಾಸಪತ್ರಿಕೆ ಬಗ್ಗೆ ನನಗೆ ಅತೀವ ಕುತೂಹಲವಿದೆ.

ಬೆಂಗಳೂರು **ಚಂದ್ರಕಾಂತ ವಡ್ಡು**

ನಿಮ್ಮ ಬದುಕನ್ನು ಪ್ರಯೋಗಗಳಿಗೆ ಒಡ್ಡಿಕೊಳ್ಳುತ್ತಿರುವಿರಿ, ಯಶಸ್ಸು ಹಾರೈಸುವೆ. ಭಾವನಾ ಮಾಸಿಕ ನಿಮ್ಮ ನೇತೃತ್ವದಲ್ಲಿ ಜನಪ್ರಿಯವಾಗಲಿ.

ಕರ್ನೂಲ್ **ಕುಂವೀ**

ನಿಮ್ಮ ಮಾರ್ಗದರ್ಶನದಲ್ಲಿ ಪತ್ರಿಕೆ ಹೊಸ ರೂಪ ಪಡೆದು, ಈಗಿರುವ ಮಾಸಿಕಗಳಿಗಿಂತ ಭಿನ್ನವಾಗಿ ಬರಲಿ ಎಂದು ಹಾರೈಸುತ್ತೇನೆ.

ಧಾರವಾಡ **ಗಿರಡ್ಡಿ ಗೋವಿಂದರಾಜ**

ನಿಮ್ಮ ಹೊಸ ಯತ್ನ ಫಲಪ್ರದವಾಗಲಿ.

ಉಡುಪಿ **ಉದ್ಯಾವರ ಮಾಧವ ಆಚಾರ್ಯ**

'ಭಾವನಾ' ನನ್ನ ಮನಸ್ಸಿನ ಭಾವನೆಗಳನ್ನು ಕೆರಳಿಸಿ ಕಥೆ ಬರೆಯಲು ಪ್ರೇರೇಪಿಸುತ್ತಿದೆ.

ಹೈದರಾಬಾದ್ **ಗೋನವಾರ ಕಿಶನ್ ರಾವ್**

'ಭಾವನಾ' ಯಶಸ್ವಿಯಾಗಿ ಜನಾನುರಾಗವನ್ನು ಗಳಿಸಲಿ.


ಬೆಂಗಳೂರು **ರಾಘವೇಂದ್ರ ಖಾಸನೀಸ**

ಮನ ಕೆರಳಿಸುವ ಸಾಹಿತ್ಯಕ್ಕಿಂತ ಮನ ಅರಳಿಸುವ ಸಾಹಿತ್ಯ ಹೆಚ್ಚಾಗಲಿ.

ಗದಗ **ರಾಮಚಂದ್ರ ಭಾವೆ**

ಅಭಿನಂದನೆಗಳು, ಪತ್ರಿಕೆಯ ಸಂಪಾದಕರಾಗಿ ನಿಮಗೆ ಎಲ್ಲ ಯಶಸ್ಸು ಸಿಗಲಿ ಎಂಬ ಶುಭ ಹಾರೈಕೆ.

ಬೆಂಗಳೂರು **ಜಿ. ಎಸ್. ಸದಾಶಿವ**



ಕೊನೇ-ಸಿಪ್

ಚಂದಮಾಮ

ವೈಎನ್ಕೆ, ಲಂಕೇಶ್, ಎಂ.ಎಸ್ಕೆ. ಪ್ರಭು ಇತ್ತೀಚೆಗೆ ನಮ್ಮನ್ನು 'ಅಗಲಿದ' ಲೇಖಕರು.

ಆದರೆ 'ಅಗಲದ ಲೇಖಕರು' ಯಾರು? ಕನ್ನಡ ಲೇಖಕರಾಗಿದ್ದುಕೊಂಡು 'ಅಗಲ'ವಾಗಿ ಯಾರು ತಾನೆ ಇರಲು ಸಾಧ್ಯ? ಹೊಸ ಪತ್ರಿಕೆಗಳು(!), ಪ್ರಕಾಶಕರು ಒಳ್ಳೆಯ ಸಂ'ಭಾವನಾ' ಕೊಟ್ಟರೆ ಅಗಲ ಲೇಖಕರಾಗಬಹುದೇನೋ. ಆದರೇನು ಮಾಡೋಣ, ಜನ ಒಳ್ಳೆಯ sum (ಮೊತ್ತ) ಕೊಡದೇ som ಭಾವನೆ ಕೊಡುವುದರಿಂದಲೇ ಕನ್ನಡ ಸಾಹಿತ್ಯ ''ಅರ್ಥ''ವಿಲ್ಲದ, (ಆದ್ದರಿಂದ) ಸ್ವಾರ್ಥವಿಲ್ಲದ ಬರಿ ಭಾವಗೀತ ಆಗಿದೆ.

'ಆಸ್ಥಾ ಅಪರಾಜಿತಾ', 'ಆಕಾಂಕ್ಷಾ ಅಪರಿಮಿತಾ'- ನನ್ನ ಗೆಳೆಯರೊಬ್ಬರು ತಮ್ಮ ಮಕ್ಕಳಿಗಿಟ್ಟಿರು ಧಾರಾಳ ಹೆಸರು. He has not named them-he has sentenced them-for life! ಅಂ ವೈಎನ್‌ಕೆ ಇದಕ್ಕೆ ಪ್ರತಿಕ್ರಿಯಿಸಿದ್ದರು. ನನ್ನ ಮಗನ ಹೆಸರು 'ಅರ್ಜುನ ಶತೃಂಜಯ'. ಜೀವನದ ದೊಡ್ಡ ಹೆಸರು ಮಾಡಲಾಗದೇ ಇದ್ದರೆ ಅವನು ಬೇಸರ ಪಟ್ಟುಕೊಳ್ಳಬಾರದು, ಅವನಿಗೆ ಹುಟ್ಟಿದಾಕ್ಷ 'ದೊಡ್ಡ' ಹೆಸರು ಸಿಕ್ಕಿಬಿಟ್ಟಿದೆ ಅನ್ನೋದು ನನ್ನ ವಾದ.

ಒನ್‌ಮ್ಯಾನ್ ಆರ್ಮಿಯಂತೆ ತಮ್ಮ ಪತ್ರಿಕೆ ನಡೆಸುತ್ತಿದ್ದ ಲಂಕೇಶ್‌ರ ನಿರ್ಗಮನದ ನಂತರ ಈಗ ಅದನ ಮಗಳು ಗೌರಿ ನಡೆಸುತ್ತಿದ್ದಾರೆ. ಹೀಗಾಗಿ ಪತ್ರಿಕೆಗೆ 'ಲಂಕೇಶ್ ಪುತ್ರಿಕೆ' ಅಂತ ಯಾ ನಾಮಕರಣಮಾಡಬಾರದು ಅಂತ ಗೆಳೆಯ ಕ.ನಂ. ನಾಗರಾಜು ಕೇಳಿದರಂತೆ.

ಹೈದರಾಬಾದಿನ ರಸ್ತೆಗಳಲ್ಲಿ ಉಗುಳಿದರೆ ಫೈನ್, ಕಸ ಹಾಕಿದರೆ ಫೈನ್, ಮೂತ್ರ ಮಾಡಿದರೆ ಫೈನ್ ಅದಕ್ಕೇ ಮತ್ತೆ ''ಹೈದರಾಬಾದ್ ಈಸ್ ಎ ಫೈನ್ ಸಿಟಿ'.

ಕೆಲ 'ಭಾವಾರ್ಥ'ಗಳು

ಸ್ತ್ರೀ ವಾದಿ = ವಾದಿಸುವ ಸ್ತ್ರೀ, ಸ್ಥಾಯಿಭಾವ = ಮಾವನ ಮನೆಯಲ್ಲೇ ಠಿಕಾಣಿ ಹೂಡಿರುವ 'ಅಕ್ಕನ ಗಂಡ', ಸಂಚಾರಿ ಭಾವ = ಸೇಲ್ಸ್ ರೆಪ್ರಸೆಂಟೆಟಿವ್ ಆಗಿರುವ 'ಅಕ್ಕನ ಗಂಡ'.

ಕಚಗುಳಿ

ಕೆಲಸಕ್ಕಾಗಿ ಅರ್ಜಿ ತುಂಬುತ್ತಿದ್ದ ಯುವತಿಯೊಬ್ಬಳು Name, Age ಬರೆದು, ನಂತರ Sex ಬಂದಾಗ ಅತ್ತಿತ್ತ ನೋಡಿ, ನಾಚಿ ಕೆಂಪಾಗಿ, Occasionally ಎಂದು ಬರೆದಳು.

Printed, published and owned by **Vijay Sankeshwar**, Published at 1st Floor, "Giriraj Annexe',
P.W.D. Circuit House Road, HUBLI - 580 029 Karnataka Ph: 253656, 253657, 253658. Fax: 0836-253630
Printed at Anand Printers & Publishers, 6/127, 5th Cross, KPN Extn., Bangalore - 560 002
Editor-in-Chief: **Santoshkumar Gulvady** Editor: **Jayant Kaikini**


BHAVANA-Monthly Apr
KARKAN /11807/10/1